ಇನ್ನೊಂದು ವಿಚಾರ ಎಂದರೆ, ನಾವು ಚೆಕ್ಕನ್ನು ಕೊಟ್ಟರೆ ಕೂಡಲೇ ರಸೀತಿಯನ್ನು ಕೊಡಬೇಕು. ಜನರು ದುಡ್ಡು ಕೊಡುತ್ತೇವೆಂದರೂ ಸಹ ಬಿ. ಡಬ್ಲ್ಯು. ಎಸ್.ಎಸ್.ಬಿ ಯವರು ರಸೀದಿಯನ್ನು ಕೊಡುವುದಕ್ಕೆ ನಮ್ಮಲ್ಲಿ ಸ್ಟಾಫ್ ಇಲ್ಲ ಎಂದು ಹೇಳುವುದನ್ನು ನೋಡಿದರೆ ಒಂದು ರೀತಿಯ ನಾಚಿಕೆಗೇಡಿನ ವಿಷಯವೆಂದು ಹೇಳಬೇಕಾಗುತ್ತದೆ. ನಮ್ಮಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಇಲ್ಲವೆಂದು ಹೇಳುತ್ತೀರಿ. ಜನರು ದುಡ್ಡನ್ನು ಕೊಡುವುದಕ್ಕೆ ಮುಂದೆ ಬಂದರೂ ಅದನ್ನು ತೆಗೆದುಕೊಂಡು ಅವರಿಗೆ ಕೊಡಬೇಕಾದ ರಸೀದಿಯನ್ನು ಕೊಡಿ ಎಂದರೆ ನಮ್ಮ ಆ ವ್ಯವಸ್ಥೆ ಇಲ್ಲ. ಇದಕ್ಕೇನು ಮಾಡಬೇಕು ? ಆದ್ದರಿಂದ ದಯವಿಟ್ಟು ಆದಷ್ಟು ಹೆಚ್ಚಿನ ಕೌಂಟರ್‌ಗಳನ್ನು ಓಪನ್ ಮಾಡಿ ನಾಗರೀಕರಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಸಭಾಧ್ಯಕ್ಷರೆ, ಈ ಬೆಂಗಳೂರು ನಗರದಲ್ಲಿ ನೀರಿನ ಬಿಲ್ಲನ್ನು ಕಟ್ಟಬೇಕಾದರೆ ಚೆಕ್ ಕೊಟ್ಟರೆ ರಸೀದಿ ಕೊಡುವುದಿಲ್ಲ, ನ್ಯಾಷನಲೈಸ್ಡ್ ಬ್ಯಾಂಕ್‌ನವರು ದುಡ್ಡನ್ನು ತೆಗೆದುಕೊಳ್ಳುವುದಕ್ಕೆ ರೆಫ್ಯೂಸ್ ಮಾಡುತ್ತಿದ್ದಾರೆ, ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ಆಫೀಸಿನಲ್ಲಿ ದೊಡ್ಡ ಕ್ಯೂ ನಿಂತು ಹಣವನ್ನು ಕಟ್ಟಬೇಕಾಗುತ್ತಿದೆ. ಈ ರೀತಿ ಕ್ಯೂ ನಿಲ್ಲುವುದನ್ನು ತಪ್ಪಿಸಬೇಕೆಂದು ಮಾನ್ಯ ಸದಸ್ಯರು ಅನೇಕ ಜನ ದೂರುಗಳನ್ನು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ, ನೀರಿನ ಬಿಲ್ಲನ್ನು ಕಟ್ಟುತ್ತೇವೆಂದರೂ ಅದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿಲ್ಲವೆಂದು ಹೇಳುತ್ತಿದ್ದಾರೆ. ನಿಜಕ್ಕೂ ಇದು ಒಂದು ಗಹನವಾದ ವಿಷಯ. ಈ ದಿಸೆಯಲ್ಲಿ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ನೀಡಿದ್ದಾರೆ ಹಾಗೂ ಸುಧಾರಣೆಗಳನ್ನು ಮಾಡಬೇಕೆಂದು ಹೇಳಿದ್ದಾರೆ ಅದೆಲ್ಲವನ್ನು ನಾನು ಸ್ವಾಗತಿಸುತ್ತೇನೆ, ನಾಗರೀಕರಿಗೆ ಆಗಿರುವಂಥ ಅನಾನುಕೂಲಗಳನ್ನು ಗಮನಿಸಿ ಅದಕ್ಕೆ ವ್ಯಾಪಕವಾದ ಸುಧಾರಣೆಯನ್ನು ತಂದು ಯಾವುದೇ ರೀತಿಯಲ್ಲೂ ತೊಂದರೆಯಾಗದಂಥ ನಾಗರೀಕರ ಜೊತೆ ಸಹಕರಿಸುವಂತೆ ಸಂಬಂಧಪಟ್ಟವರ ಜೊತೆ ಮತ್ತೊಮ್ಮೆ ಸಮಾಲೋಚನೆ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಸಮಾಧಾನವನ್ನು ಹೇಳುತ್ತಿದ್ದೇನೆ. ಇದಕ್ಕಿಂತಲೂ ಇನ್ನೂ ಹೆಚ್ಚಿನ ವಿಷಯಗಳೇನಾದರೂ ಇದ್ದರೆ ಮಾನ್ಯ ಸದಸ್ಯರೂ ನನ್ನ ಜೊತೆ ಚರ್ಚೆ ಮಾಡಿದರೆ ಆ ಬಗ್ಗೆ ಕೂಡ ವ್ಯಾಪಕವಾಗಿ ಸುಧಾರಿಸಲು ನಾನು ಪ್ರಯತ್ನ ಮಾಡುತ್ತೇನೆ.

(ಮಾನ್ಯ ಜಿ. ಎಸ್. ಆಚಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ವಿತ್ತೀಯ ಕಾರ್ಯಕಲಾಪಗಳು

1990–91ನೇ ಸಾಲಿನ ಬೇಡಿಕೆಗಳ ಮೇಲಿನ ಸಾಮಾನ್ಯ ಚರ್ಚೆ

ಕಂದಾಯ ಮತ್ತು ಕಾರ್ಮಿಕ ಇಲಾಖೆ ಬೇಡಿಕೆಗಳು

ಬೇಡಿಕೆ ಕ್ರ. ಸಂ. 50,51,52,53 ಮತ್ತು 59.

† ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ):— ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಕೇವಲ ಕಾರ್ಮಿಕ ಇಲಾಖೆಯ ಬೇಡಿಕೆಯ ಬಗ್ಗೆ ಮಾತ್ರ ಕೆಲವು ಸಲಹೆಗಳನ್ನು ಈ ಸದನದ ಮುಂದಿಡುತ್ತೇನೆ. ನಮ್ಮ ನಾಯಕರಾದಂಥ ಮಾನ್ಯ ಚಂದ್ರೇಗೌಡರು ಕಂದಾಯ ಇಲಾಖೆಯ ಬಗ್ಗೆ ಇವೊತ್ತು ಮಾತನಾಡುತ್ತಾರೆ ನಿನ್ನೆಯ ದಿವಸ ನಾನು ಮಾತನಾಡುವಾಗ ಐ.ಟಿ.ಐ. ಬಗ್ಗೆ ಮಾತನಾಡುವುದನ್ನು ಮರೆತಿದ್ದೆ. ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಿಗಳೂ ಕೂಡ ಒಂದು ವಿಚಾರವನ್ನು ರಾಜ್ಯಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕದಲ್ಲಿ ಖಾಸಗಿ ಕ್ಷೇತ್ರದಲ್ಲಿರತಕ್ಕ ಐ.ಟಿ.ಐ ಗಳು ಏನಿವೆ, ಅಲ್ಲಿ ಕೆಲಸಮಾಡತಕ್ಕಂಥ ಸಿಬ್ಬಂದಿವರ್ಗದವರಿಗೆ ಅನುದಾನವನ್ನು ಕೋರಿ ಕರ್ನಾಟಕ ರಾಜ್ಯ ಸರ್ಕಾರ ನಮಗೆ ಯಾವುದೇ ರೀತಿಯ ಪತ್ರವನ್ನೂ ಬರೆದಿಲ್ಲ ಕೇಂದ್ರದಿಂದ ಅನುದಾನವನ್ನು ಪಡೆಯತಕ್ಕ ಪದ್ಧತಿ ಇದೆ. ಈ ಬಗೆ ಅಲ್ಲಿ ಕೆಲಸ ಮಾಡತಕ್ಕ ನೌಕರರು ಮಾನ್ಯ ಮಂತ್ರಿಗಳಿಗೂ ಒಂದು ಮನವಿಯನ್ನು ಕೊಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅದೇ ಮನವಿಯನ್ನು ನಾನು ಮಾನ್ಯ ಮಂತ್ರಿಗಳಿಗೂ ಕೊಡುತ್ತಿದ್ದೇನೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿರತಕ್ಕ ನೌಕರವರ್ಗದವರಿಗೆ ಕೇಂದ್ರ ಸರ್ಕಾರದ ನೆರವನ್ನು ಪಡೆಯಲಿಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಒಂದು ಸಲಹೆಯನ್ನೂ ಕೂಡ ನಾನು ತಮಗೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ತಾವು ಈ ಸಂದರ್ಭದಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವುದು ನನಗೆ ಬಹಳ ಸಹಾಯವಾಗಿದೆ. ಏಕೆಂದರೆ ನಿಮ್ಮ ಜಿಲ್ಲೆಯಲ್ಲಿ ಜ್ವಲಂತವಾಗಿ ಹುಟ್ಟಿರತಕ್ಕ ಸಮಸ್ಯೆ ಬಗ್ಗೆ ಹೇಳಬಯಸುತ್ತೇನೆ

ಮೊಯಿಲಿಯವರು. ಮನೋರಮಾ ಮಧ್ವರಾಜ್ ಅವರು ಏನಿದ್ದಾರೆ, ಅವರು ಹಿಂದುಳಿದ ಜನರಿಗೆ ಬಹಳ ಹತ್ತಿರ ಇರತಕ್ಕ ಜನ. ಅವರ ಬಗ್ಗೆ ಹೋರಾಟ ಮಾಡತಕ್ಕ ಜನ ಇವರು. ಈಗ ಹೆಂಡ ಮಾರಾಟವನ್ನು ನಿಲ್ಲಿಸಿರುವುದರಿಂದ ನಮ್ಮ ಹಿಂದುಳಿದ ವರ್ಗದ ಜನರಿಗೆ ಬಹಳ ತೊಂದರೆಯಾಗಿದೆ. ನಮ್ಮ ರಾಜ್ಯದಲ್ಲಿ ಸುಮಾರು ೨೦ ಸಾವಿರ ಜನ ಕಾರ್ಮಿಕರಿಗೆ ಇದರಿಂದ ಬಹಳ ತೊಂದರೆಯಾಗಿದೆ. ನಮ್ಮ ರಾಜ್ಯದಲ್ಲಿ ೨೦ ಸಾವಿರ ಜನ ಇವತ್ತು ಬೀದಿ ಪಾಲಾಗಿದ್ದಾರೆ. ಹೆಂಡ ಮಾರಾಟ ನಿಲಿಸಿರುವುದನ್ನು ಸ್ವಾಗತಿಸಿದ್ದೇವೆ ಆದರೆ ಈ ವರ್ಗದ ಜನರು ನಿರುದ್ಯೋಗಿಗಳಾಗಿದ್ದಾರೆ ಇವರ ಬಗ್ಗೆ ಏನು ಮಾಡಬೇಕೆಂದು ಯೋಚನೆ ಮಾಡಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಈ ಸರ್ಕಾರದ ಬಹುತೇಕ ತೀರ್ಮಾನಗಳು ಹೀಗೆ ಇವೆ. ನಾವು ವರ್ಷಕ್ಕೆ ೪ ಜಿಲ್ಲೆಗಳಂತೆ ಮಾಡಿಕೊಂಡು ಬಂದಿದ್ದೆವು. ಒಂದೇ ಸಾರಿ ನಿಲ್ಲಿಸುವುದಕ್ಕೆ ಹೋಗಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಡ ಇಳಿಸಿ ನೀರಾ ಮಾಡುವುದಕ್ಕೆ ಅಥವಾ ಬೆಲ್ಲ ಮಾಡುವುದಕ್ಕೋ ಅವಕಾಶ ಕೊಡಬಹುದು. ಬೇರೆ ಜಿಲ್ಲೆಗಳಲ್ಲಿ ಹೆಂಡ ಮಾರತಕ್ಕವರು, ಅಷ್ಟೇ ಅಲ್ಲ. ಹೆಂಡ ಇಳಿಸತಕ್ಕವರು ಅಷ್ಟೇ ಅಲ್ಲ ಇದರ ಮಾರಾಟಕ್ಕೆ ಸಂಬಂಧಪಟ್ಟ ಹಾಗೆ ಒಂದೊಂದು ತಾಲ್ಲೂಕಿನಲ್ಲಿ ೪-೫ ನೂರು ಜನ ನಿರುದ್ಯೋಗಿಗಳಿದ್ದಾರೆ. ಯಾವುದೇ ಹೆಂಡ ಇರಲಿ ನಾನು ಏನು ಹೇಳುತ್ತಿದ್ದೇನೆಂದರೆ, ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ ಆಗಿರತಕ್ಕ ತೊಂದರೆ ಬಗ್ಗೆ ನಾನು ಹೇಳುತ್ತಿದ್ದೇನೆ. ಸುಮಾರು ೨೦ ಸಾವಿರ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಸರ್ಕಾರದಲ್ಲಿ ೩ ಜನ ಮಂತ್ರಿಗಳ ಒಂದು ಸಮಿತಿ ಮಾಡಿದ್ದೇವೆಂದು ನಿನ್ನೆ ಹಣಕಾಸಿನ ಮಂತ್ರಿಗಳು ಹೇಳಿದರು. ಆ ಸಮಿತಿಯಲ್ಲಿ ಬಹುಶಃ ನೀವು ಇಲ್ಲವೆಂದು ಕಾಣುತ್ತದೆ. ನೀವು ಇರಿ, ಬಿಡಿ, ಅದಲ್ಲ. ಅವರ ಹೊಟ್ಟೆಗೆ ಅನ್ನ ಸಂಪಾದನೆ ಮಾಡುವುದಕ್ಕೆ ಈ ಸರ್ಕಾರ ಪರ್ಯಾಯ ಕಾರ್ಯಕ್ರಮವನ್ನು ತಕ್ಷಣ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಬಹಳ ಮುಖ್ಯವಾಗಿರತಕ್ಕದು ಎಂದರೆ ಅಗ್ರಿಕಲ್ಚರಲ್ ವರ್ಕರ್ಸ್ ಸಮಸ್ಯೆ. ನಮ್ಮ ರಾಜ್ಯದ ಜನ ಸಂಖ್ಯೆಯಲ್ಲಿ ಶೇಕಡ ೨೬ ರಷ್ಟು ಜನ ಲ್ಯಾಂಡ್‌ಲೆಸ್ ಅಗ್ರಿಕಲ್ಚರಲ್ ವರ್ಕರ್ಸ್ ಇದ್ದಾರೆ. ಅವರ ಬಗ್ಗೆ ಯಾವುದೇ ಪಕ್ಷಗಳು ಪರಿಣಾಮಕಾರಿಯಾಗಿ ಸಂಘಟನೆ ಮಾಡಿ ಅವರ ಪರವಾಗಿ ಹೋರಾಟ ಮಾಡಿದ್ದಾರೆಂದು ನನಗಾದರೂ ಅನ್ನಿಸುವುದಿಲ್ಲ. ಇವತ್ತು ಆ ಕೆಲಸವನ್ನು ನಾವು ಮಾಡಬೇಕಾಗಿದೆ. ಇವತ್ತು ಪ್ರತಿ ಹಳ್ಳಿಯಲ್ಲಿ ಕೆಲವು ಕಡೆ ಮಿನಿಮಂ ವೇಜಸ್ ಇರಲಿ. ಕೂಲಿಗೆ ಆಳೇ ಸಿಗುವುದಿಲ್ಲವೆಂದು ಹೇಳುತ್ತಾರೆ. ಆದರೂ ಸಹ ಈ ವರ್ಗದ ಜನರನ್ನು ನ್ಯಾಯಬದ್ಧವಾಗಿ ಪ್ರಜಾಪ್ರಭುತ್ವದ ದೇಶದಲ್ಲಿ ಏನೇನು ಸವಲತ್ತುಗಳು ಸಿಗಬೇಕು ಅವೆಲ್ಲವನ್ನು ನಾವು ಒದಗಿಸಿ ಕೊಡಬೇಕಾಗಿದೆ. ಅದು ಹಸಿರು ಕಾರ್ಡ್ ಇರಲಿ, ಆರೋಗ್ಯ ಸೌಲಭ್ಯ ಇರಲಿ. ಶಿಕ್ಷಣ ಸೌಲಭ್ಯ ಇರಲಿ, ಮನೆಗಳನ್ನು ಕಟ್ಟಲಿಕ್ಕೆ ಬೇಕಾದ ನಿವೇಶನ ಇರಲಿ, ಸಾಲ ಇರಲಿ ಮತ್ತೊಂದು ಇರಲಿ ಎಲ್ಲವನ್ನು ನಾವು ಅವರಿಗೆ ಒದಗಿಸಿಕೊಡಬೇಕಾಗಿದೆ. ಹಿಂದೆ ಐ.ಆರ್.ಡಿ.ಪಿ ಗೆ ಮಾಡಿರತಕ್ಕ ಲಿಸ್ಟ್ ಔಟ್ ಡೇಟೆಡ್ ಆಗಿದೆ. ಜೊತೆಗೆ ಅನುಕೂಲ ಇರತಕ್ಕವರು ಆ ಪಟ್ಟಿಯಲ್ಲಿ ಸೇರಿದ್ದಾರೆ. ನಾನಾದರೂ ಮಂತ್ರಿಗಳಿಗೆ ಸಲಹೆ ಮಾಡುವುದು, ಈ ವಿಚಾರದಲ್ಲಿ ಮಾನ್ಯ ಅಜೀಜ್‌ಸೇಟರು ಹಿಂದೆ ಈ ಇಲಾಖೆಯ ಮಂತ್ರಿಗಳಾಗಿದ್ದಾಗ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಈ ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಹೊಸ ಬಿಲ್ಲನ್ನು ಇಂಟ್ರಡ್ಯೂಸ್ ಮಾಡುತ್ತೇವೆ, ಅವರ ವರ್ಕಿಂಗ್ ಅವರ್ಸ್ ಪ್ರಾವಿಡೆಂಟ್ ಫಂಡ್ ಗ್ರಾಚ್ಯುಯಿಟಿ, ಅವರ ಮಕ್ಕಳಿಗೆ ಶಿಕ್ಷಣ ಕೊಡತಕ್ಕದ್ದು, ಹೀಗೆ ಹಲವಾರು ವಿಷಯಗಳ ಬಗ್ಗೆ ಒಂದು ಬಿಲ್ಲನ್ನು ಇಂಟ್ರಡ್ಯೂಸ್ ಮಾಡುತ್ತೇವೆಂದು ಹೇಳಿದ್ದರು. ಆದರೆ ಅದು ಆಗಲಿಲ್ಲ. ಈ ಸದನದಲ್ಲಿ ಈ ಸಂದರ್ಭದಲ್ಲಿ ಮಾನ್ಯ ಎಂ. ಎಸ್. ಕೃಷ್ಣನ್ ಅವರು ಸದಸ್ಯರಾಗಿರಬೇಕಾಗಿತ್ತು. ಅವರು ಈ ಸಾರಿ ಆರಿಸಿ ಬಂದಿಲ್ಲ. ಅವರು ಕಾರ್ಮಿಕ ವರ್ಗದ ಬಗ್ಗೆ ಹೋರಾಟ ಮಾಡಿದವರು.

೨-೪೫ ಪಿ. ಎಂ.

ರಾಜಕೀಯ ವ್ಯವಸ್ಥೆಯಲ್ಲಿ ಗೆಲುವು ಸೋಲು ಆಗುತ್ತದೆ. ಮಾನ್ಯ ಎಂ. ಎಸ್. ಕೃಷ್ಣನ್ ಅವರು ಡ್ರಾಫ್ಟ್ ಬಿಲ್ಲನ್ನು ಇದೇ ವಿಷಯದಲ್ಲಿ ಸಬ್‌ಮಿಟ್ ಮಾಡಿದ್ದರು. ಅದನ್ನು ತೆಗೆದುನೋಡಿ. ಕರ್ನಾಟಕದಲ್ಲಿ ಅದನ್ನು ಜಾರಿಗೆ ತಂದು ಯಶಸ್ವಿಯಾದರೆ ದೊಡ್ಡ ಕೀರ್ತಿ ನಿಮಗೆ ಬರುತ್ತದೆ. ಶೇಕಡ ೨೬ ರಷ್ಟು ನಮ್ಮ ರಾಜ್ಯದ ಜನರಿಗೆ ಉಪಯೋಗವಾಗುವಂಥ ಒಂದು ಕೋಟಿ ಜನಸಂಖ್ಯೆಗೆ ಉಪಯೋಗವಾಗುವ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ನಮ್ಮ ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಲೇಬರ್ ಕೋರ್ಟ್ಸ್ ಬಗ್ಗೆ ಹೇಳುತ್ತೇನೆ. ನನಗೆ ಈ ನ್ಯಾಯಾಂಗದ ಬಗ್ಗೆ, ನ್ಯಾಯಾಲಯಗಳ ಬಗ್ಗೆ ಬಹಳ ಗೌರವ ಇದೆ. ನಾನು ವಕೀಲ ಅಲ್ಲ. ಆದರೆ ನ್ಯಾಯವಾದಿಗಳ ಬಗ್ಗೆ ಮತ್ತು ನ್ಯಾಯಾಲಯಗಳ ಬಗ್ಗೆ ವಿಶ್ವಾಸ ಇದೆ. ಆದರೆ ಲೇಬರ್ ಕೋರ್ಟ್‌ಗಳಲ್ಲಿರತಕ್ಕ ಜಡ್ಜಸ್‌ಗೆ ಒಂದು ಕಮಿಟ್‌ಮೆಂಟ್ ಬೇಕಾಗುತ್ತದೆ. ವರ್ಕರ್ಸ್ ಪರವಾಗಿ ಇದ್ದೇವೆ ಎಂಬ ಭಾವನೆ ಅವರಲ್ಲಿ ಬರಬೇಕಾಗು

ತ್ತದೆ. ಏಕೆಂದರೆ ನಮ್ಮ ಸಮಾಜದಲ್ಲಿ ಪಟ್ಟಭದ್ರಹಿತಾಸಕ್ತಿಗಳು ಬೆಳೆದು ಕುಳಿತಿವೆ. ಇವರು ಅಧಿಕಾರ ಸ್ಥಾನದಲ್ಲಿ ಯಾರು ಇರುತ್ತಾರೆ ಅವರ ಮೇಲೆ ಎಲ್ಲಾ ತರಹದ ಒತ್ತಡ ತರುತ್ತಾರೆ. ಹಿಂದೆ ನನಗೆ ಗೊತ್ತಿರುವ ಹಾಗೆ ಲೇಬರ್ ಕೋರ್ಟ್‌ಗಳಿಗೆ ನ್ಯಾಯಾಧೀಶರನ್ನು ಅಪಾಯಿಂಟ್ ಮಾಡತಕ್ಕ ಅಧಿಕಾರ ಸರ್ಕಾರಕ್ಕಿರುತ್ತಿತ್ತು. ರಾಜ್ಯ ಸರ್ಕಾರದಿಂದ ಹೈಕೋರ್ಟ್‌ಗೆ ಒಂದು ಪ್ಯಾನಲ್ ಅನ್ನು ಕಳುಹಿಸಲಾಗುತ್ತಿತ್ತು ನಂತರ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಅಥವಾ ಮತ್ತೊಬ್ಬರು ಹೆಸರುಗಳನ್ನು ಆಯ್ಕೆ ಮಾಡಿ ನಮಗೆ ವಾಪಸ್ ಕಳುಹಿಸುತ್ತಿದ್ದರು. ಗೋವಿಂದ ಭಟ್ ಅವರು ಮುಖ್ಯ ನ್ಯಾಯಾಧೀಶರಾಗಿದ್ದ ಕಾಲದಲ್ಲಿ ಸಂಪೂರ್ಣವಾಗಿ ಆ ಪದ್ಧತಿಯನ್ನು ಬಿಟ್ಟು ಸರ್ಕಾರದಿಂದ ಸರೆಂಡರ್ ಮಾಡಿಬಿಟ್ಟಿದ್ದೇವೆ. ಲೇಬರ್ ಕೋರ್ಟ್ ಬಹಳ ಮುಖ್ಯವಾದುದು. ಅಲ್ಲಿ ವಿಕ್ಟಿಮೈಸೇಷನ್ ಕೇಸ್‌ಗಳು ಜಾಸ್ತಿ. ಈ ವರದಿ ಪ್ರಕಾರ ೫೦ ಸಾವಿರ ವಿಕ್ಟಿಮೈಸೇಷನ್ ಕೇಸ್‌ಗಳು ಪೆಂಡಿಂಗ್ ಇವೆ. ೧೦ ವರ್ಷದಿಂದ ಪೆಂಡಿಂಗ್ ಇರತಕ್ಕದ್ದು ತಮ್ಮ ಗಮನಕ್ಕೆ ಬರದಿರಬಹುದು. ಆದರಿಂದಾಗಿ ನನಗನ್ನಿಸುತ್ತದೆ ಪ್ಯಾನಲ್ ಆಫ್ ಜಡ್ಜಸ್ ಬಗ್ಗೆ ಹೈಕೋರ್ಟಿಗೆ ಹೋಗಿ ಅದರ ಮೇಲೆ ಸೆಲೆಕ್ಷನ್ ಮಾಡತಕ್ಕ ಪದ್ಧತಿ ಹಿಂದೆ ಏನಿತ್ತು, ಅದನ್ನು ಮಾಡುವುದರಿಂದ ರಾಜ್ಯದ ವರ್ಕಿಂಗ್ ಕ್ಲಾಸ್‌ಗೆ ಬೇಗ ನ್ಯಾಯ ಸಿಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯಿಂದ ಮಾನ್ಯ ಕಾನೂನು ಸಚಿವರು, ವರ್ಕಿಂಗ್ ಕ್ಲಾಸ್ ಬಗ್ಗೆ ಬಹಳ ಕಾಳಜಿ ಇರುವವರು. ಅವರು ಇದರ ಬಗ್ಗೆ ಯೋಚನೆ ಮಾಡುತ್ತಾರೆಂದು ನಂಬಿದ್ದೇನೆ. ಇನ್ನು ಬಾಯ್ಲರ್ಸ್ ಮತ್ತು ಫ್ಯಾಕ್ಟರಿ ಇನ್‌ಸ್ಪೆಕ್ಟರೇಟ್ ಬಗ್ಗೆ ಈ ವರದಿಯಲ್ಲಿ ನೋಡಿದರೆ ಒಬ್ಬ ಅಧಿಕಾರಿ ಒಂದು ದಿವಸದಲ್ಲಿ ೧೦೦ ಕಾರ್ಖಾನೆಗಳನ್ನು ಇನ್‌ಸ್ಪೆಕ್ಟ್ ಮಾಡಬೇಕು. ಒಬ್ಬ ಇನ್‌ಸ್ಪೆಕ್ಟರ್ ಇಷ್ಟು ತನಿಖೆ ಮಾಡುವುದಕ್ಕೆ ಸಾಧ್ಯವೇ? ಪೀಣ್ಯದಲ್ಲಿ, ಜಯನಗರದಲ್ಲಿ ಫ್ಯಾಕ್ಟರಿ ಇರುತ್ತದೆ. ಅವನು ಇನ್‌ಸ್ಪೆಕ್ಷನ್‌ಗೆ ಬಸ್‌ನಲ್ಲಿ ಹೋಗಬೇಕು. ಇನ್‌ಸ್ಪೆಕ್ಟರ್ ಆದಮೇಲೆ ಸೈಕಲ್ ಮೇಲೆ ಹೋಗುವುದಿಲ್ಲ. ಬಸ್‌ನಲ್ಲಿ ಹೋದರೆ ೧೦೦ ಕಾರ್ಖಾನೆಗಳನ್ನು ಇನ್‌ಸ್ಪೆಕ್ಟ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಮಾಲೀಕರು ಕಳುಹಿಸಿಕೊಡತಕ್ಕ ಕಾಂಟೆಸಾ ಕಾರಿನಲ್ಲಿ ಹೋಗುತ್ತಾನೆ. ಹೀಗೆ ಹೋದಮೇಲೆ ಅವನು ಏನು ಟೆಸ್ಟ್ ಮಾಡುತ್ತಾನೆ. ೩೭ ನಿಯಮಗಳಿವೆ ಅದನ್ನೆಲ್ಲಾ ಹೇಗೆ ಇನ್‌ಸ್ಪೆಕ್ಟ್ ಮಾಡುತ್ತಾನೋ ನನಗೆ ಅರ್ಥವಾಗುವುದಿಲ್ಲ. ಕ್ಯಾಂಟೀನ್ ಇದೆಯೋ ಹೆಲ್ತ್ ಸರ್ವೀಸ್ ಇದೆಯೋ, ಓವರ್ ಟೈಂ ಸರಿಯಾಗಿ ಕೊಡುತ್ತಿದ್ದಾರಾ, ವಿಮೆನ್ ಎಂಪ್ಲಾಯೀಸ್‌ಗೆ ಬೆನಿಫಿಟ್ ಸರಿಯಾಗಿ ಸಿಗುತ್ತಿದೆಯೋ ಇದನ್ನೆಲ್ಲಾ ನೋಡಬೇಕು. ಆದರೆ ಇದಾವುದನ್ನೂ ಅವನು ಮಾಡುವುದಕ್ಕಾಗುವುದಿಲ್ಲ ಅಲ್ಲಿ ಹೋಗುತ್ತಾನೆ, ಮಾಲೀಕರು ಹೇಳಿದ್ದನ್ನು ಬರೆದು ಸೈನ್ ಮಾಡಿ ಬರುತ್ತಾನೆ. ಅಲ್ಲಿ ಹೋಗಿ ಸೈನ್ ಮಾಡಿ ಬರುವುದಕ್ಕೂ ಅವರಿಗೆ ಸಾಕಷ್ಟು ಸಮಯ ಇರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದು ನಡೆದುಕೊಂಡು ಬಂದಿರತಕ್ಕ ಪದ್ಧತಿ. ಫ್ಯಾಕ್ಟರಿಗಳು ಬಿಡತಕ್ಕ ಇಂಡಸ್ಟ್ರಿಯಲ್ ವೇಸ್ಟ್‌ನಿಂದ ಕಲುಷಿತ ವಾತಾವರಣ ನಿರ್ಮಾಣವಾಗುತ್ತಿದೆ. ಬೆಂಗಳೂರಿನ ಸುತ್ತಮುತ್ತ ಇರತಕ್ಕ ಅರ್ಕಾವತಿ, ವೃಷಭಾವತಿ ಹೊಳೆಗಳಲ್ಲಿ ಹರಿಯತಕ್ಕ ನೀರನ್ನು ಪ್ರಾಣಿಗಳು ಕುಡಿದು ಸತ್ತುಹೋಗಿವೆ. ಇನ್ನು ಮನುಷ್ಯರು ಕುಡಿದರೆ ಸಾಯುವ ಪರಿಸ್ಥಿತಿ ಇನ್ನು ೫-೧೦ ವರ್ಷಗಳಲ್ಲಿ ಬರಬಹುದು. ಇದನ್ನು ಚೆಕ್ ಮಾಡುವುದಕ್ಕೆ ಇನ್ಸ್‌ಪೆಕ್ಟರ್‌ಗಳ ಕೈಯಲ್ಲಿ ಆಗುತ್ತದೆಯೇ? ನಾವು ಅಧಿಕಾರದಲ್ಲಿದ್ದಾಗ ಏತಕ್ಕೆ ಇದನ್ನು ಮಾಡಲಿಲ್ಲವೆಂದು ನೀವು ಕೇಳಬಹುದು. ದಯವಿಟ್ಟು ನೀವಾದರೂ ಇದನ್ನು ಸರಿಪಡಿಸುವ ಕೆಲಸ ಮಾಡಿ. ಫ್ಯಾಕ್ಟರಿ ಇನ್‌ಸ್ಪೆಕ್ಟರೇಟನ್ನು ಬಲಪಡಿಸುವುದಕ್ಕೆ ತಾವು ವ್ಯವಸ್ಥೆ ಮಾಡಿ. ಹೆಚ್ಚು ರೆಕ್ರೂಟ್‌ಮೆಂಟ್ ಮಾಡಿ ಹೆಚ್ಚಿಗೆ ಇನ್‌ಸ್ಪೆಕ್ಟರಗಳನ್ನು ಹಾಕಿ ಇನ್‌ಸ್ಪೆಕ್ಷನ್‌ಗೆ ಬೇಕಾಗಿರತಕ್ಕ ಸವಲತ್ತುಗಳನ್ನು ಕೂಡ ಒದಗಿಸಬೇಕೆಂದು ಈ ಸಂದರ್ಭದಲ್ಲಿ ತಮಗೆ ಒತ್ತಾಯ ಮಾಡುತ್ತೇನೆ.

ಮತ್ತೆ ಮಿನಿಮಮ್ ವೇಜಸ್ ಈ ಮಿನಿಮಮ್ ವೇಜಸ್ ಅಡ್ವೈಜರಿ ಕಮಿಟಿ ಅನ್ನು ನಾವು ಮಾಡುತ್ತೇವೆ. ಅದರಲ್ಲಿ ಯಾವುದೋ ಒಬ್ಬ ವ್ಯಕ್ತಿಯನ್ನು ನೇಮಕ ಮಾಡಿದ್ದೀರಿ. ಆ ವ್ಯಕ್ತಿಯ ಬಗ್ಗೆ ನನಗೆ ಬಹಳ ಗೌರವ ಇದೆ. ಆದರೆ ತಾವು ಏನು ೫ ಜನ ಸರ್ಕಾರದ ವತಿಯಿಂದ, ೫ ಜನ ಎಂಪ್ಲಾಯರ್ಸ್‌ನಿಂದ, ೫ ಜನ ಎಂಪ್ಲಾಯೀಸ್ ಕಡೆಯಿಂದ ಮತ್ತು ಒಬ್ಬ ಸ್ವತಂತ್ರವಾದ ವ್ಯಕ್ತಿಯನ್ನು ಕೂಡಿದಂತಹ ಮಿನಿಮಮ್ ವೇಜಸ್ ಅಡ್ವೈಜರಿ ಕಮಿಟಿ ಅಂತ ತಾವು ಏನು ಮಾಡಿದ್ದೀರಿ, ಈ ಬಗ್ಗೆ ಕೋರ್ಟಿನಲ್ಲಿ ಛಾಲೆಂಜ್ ಮಾಡುತ್ತಾರೆ. ಇತ್ತೀಚೆಗೆ ನೇಮಕ ಮಾಡಿರುವ ವ್ಯಕ್ತಿಯ ಬಗ್ಗೆ. ಒಂದು ಸಾರಿ ಕೋರ್ಟಿನಲ್ಲಿ ಛಾಲೆಂಜ್ ಮಾಡಿದರೆ ಈ ಮಿನಿಮಮ್ ವೇಜಸ್ ಅಡ್ವೈಜರಿ ಕಮಿಟಿ ಕೊಡತಕ್ಕ ತೀರ್ಮಾನ ಏನಿದೆ, ಅದು ೨-೩ ವರ್ಷಗಳವರೆಗೆ ಪೆಂಡಿಂಗ್‌ನಲ್ಲಿ ಉಳಿಯುತ್ತದೆ. ೨ ವರ್ಷಕ್ಕೊಂದು ಸಾರಿ ಈ ಕಮಿಟಿಯವರು ಮಿನಿಮಮ್ ವೇಜಸ್ಸನ್ನು ನಿಗದಿ ಮಾಡಬೇಕು. ಅದು ಹೇಗೆ ಆಗುತ್ತದೆಂದರೆ, ಈ ಮಿನಿಮಮ್ ವೇಜಸ್ ಅಡ್ವೈಜರಿ ಕಮಿಟಿ ಏನು ಶಿಫಾರಸ್ಸುಗಳನ್ನು ಮಾಡುತ್ತದೆ,

ಅದನ್ನು ಅನೇಕ ಸಂದರ್ಭದಲ್ಲಿ ಸರ್ಕಾರ ಒಪ್ಪುವುದಿಲ್ಲ. ನಾನಾದರೂ ಈ ಸಂದರ್ಭದಲ್ಲಿ ವಿನಂತಿ ಮಾಡಿ ಕೊಳ್ಳುವುದೇನೆಂದರೆ, ಈ ಸಮಿತಿಯು ಕೊಟ್ಟಂತಹ ಶಿಫಾರಸ್ಸುಗಳು ಏನು ಇವೆ, ಅವುಗಳನ್ನು ತಾವು ಒಪ್ಪಿಕೊಳ್ಳಬೇಕು. ಅದನ್ನು ಒಪ್ಪಿಕೊಳ್ಳುವ ಗಡಸುತನ ಬರಬೇಕು ಮತ್ತು ಒಂದು ರಾಜಕೀಯ ಕಮಿಟ್‌ಮೆಂಟ್ ಬೇಕಾಗುತ್ತದೆ. ಅದು ತಮ್ಮಲ್ಲಿ ಇದೆ. ತಾವು ಅದನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಅಡ್ವೈಜರಿ ಕಮಿಟಿ ಅಂಡರ್ ಕಾಂಟ್ರಾಕ್ಟ್ ಲೇಬರರ್ಸ್ ಅಂಡ್ ಅಬಾಲಿಷನ್ ಆಕ್ಟ್ ಏನು ಇದೆ, ಇದಕ್ಕೆ ಈ ಹಿಂದೆ ಲೇಬರರ್ಸ್ ಪರವಾಗಿ ಸರ್ಕಾರದವರು ಮಾಲ್ವಾನಿ ಎಂಬ ವ್ಯಕ್ತಿಯನ್ನು ಒಬ್ಬ ಸದಸ್ಯರನ್ನಾಗಿ ನೇಮಕ ಮಾಡಿದರು. ಅದನ್ನು ಕೋರ್ಟಿನಲ್ಲಿ ಯಾರೋ ಒಬ್ಬರು ಛಾಲೆಂಜ್ ಮಾಡಿದರು. ಯಾರು ಕೇಸ್ ಹಾಕಿದರೋ ಅಥವಾ ಯಾರು ಕೋರ್ಟಿಗೆ ಹೋಗಿದ್ದಾರೋ ಅದು ಬೇರೆ ವಿಚಾರ. ಇಂತಹವರು ಇದ್ದರೆ ಮಿನಿಮಮ್ ವೇಜಸ್ ಆಕ್ಟನ್ನು ಎಷ್ಟು ಅವರು ಶಿಫಾರಸ್ ಮಾಡುತ್ತಾರೆ, ಎಷ್ಟು ಇಂಪ್ಲಿಮೆಂಟ್ ಮಾಡಬಹುದು ಎಂಬುದನ್ನು ತಾವು ವಿಚಾರ ಮಾಡಬೇಕು. ಈ ಸಮಿತಿಗಳಲ್ಲಿ ಕೆಲವು ಸದಸ್ಯರನ್ನು ಏನು ಹಾಕುತ್ತೀರಿ ಅದಕ್ಕೆ ನಿಮ್ಮ ಪಕ್ಷದವರನ್ನೇ ಹಾಕಿ. ಅಥವಾ ನಿಮ್ಮ ಪಕ್ಷಕ್ಕೆ ಬೆಂಬಲ ಕೊಡತಕ್ಕಂತಹ ಸದಸ್ಯರನ್ನೇ ಹಾಕಿ. ಆದರೆ ಆ ವಿಚಾರದಲ್ಲಿ ಕಮಿಟ್‌ಮೆಂಟ್ ಇರತಕ್ಕ ಜನಗಳನ್ನು ಹಾಕಿ ಎಂದು ಮಾತ್ರ ಸಲಹೆ ಮಾಡುತ್ತಿದ್ದೇನೆ. ಅಂತಹ ಜನಗಳನ್ನು ಹಾಕಿದಾಗ ಮಾತ್ರ ಇದರ ಉಪಯೋಗವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ

ಇನ್ನು ಕ್ಲೋಷರ್ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ, ನಮ್ಮ ರಾಷ್ಟ್ರದಲ್ಲಿ ರಿಸರ್ವ್ ಬ್ಯಾಂಕಿನವರು ಒಂದು ಸರ್ವೆ ಮಾಡಿಸಿದ್ದಾರೆ, ಅವರ ಪ್ರಕಾರ ಈ ರಾಷ್ಟ್ರದಲ್ಲಿ ೨,೫೦,೦೦೦ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ಅದರಲ್ಲೂ ನಮ್ಮ ರಾಜ್ಯದಲ್ಲಿ ೬,೦೦೦ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ರೆಕಮೆಂಡ್ ಮಾಡಿರುವುದನ್ನು ನಾನು ನೋಡಿದ್ದೇನೆ. ಅವರು ಅದರಲ್ಲಿ ಏನು ಹೇಳಿದ್ದಾರೆಂದರೆ, ಕ್ಲೋಸರ್ ಮಾಡಿರತಕ್ಕ ಕಾರ್ಖಾನೆಗಳಲ್ಲಿ ಅಲ್ಲಿರುವ ಕಾರ್ಮಿಕರು ಕೆಲಸ ಮಾಡದೇ ಇರುವುದರಿಂದ ಅಲ್ಲ. ಆ ಕಾರ್ಖಾನೆಗಳನ್ನು ಮುಚ್ಚುವುದಕ್ಕೆ ಕಾರಣ ಅಲ್ಲಿರುವ ಮ್ಯಾನೇಜ್‌ಮೆಂಟ್ ಮಿಸ್‌ಮ್ಯಾನೇಜ್‌ಮೆಂಟ್ ಆಗಿರತಕ್ಕಂತಹದ್ದು ಎನ್ನತಕ್ಕ ಮಾತನ್ನು ಆರ್.ಬಿ.ಐ ನವರು ಹೇಳಿದ್ದಾರೆ. ಅದಕ್ಕೆ ಕಾರಣ ಕೂಡ ಹೇಳಿದ್ದಾರೆ ಅಧಿಕಾರದಲ್ಲಿ ಕೂತಾಗ ಅದು ನಮಗೆ ಹಿತವಾಗಿ ಕಾಣುತ್ತದೆ. ಆದರೆ ವಾಸ್ತವಾಂಶವನ್ನೂ ಕೂಡ ನಾವು ನೋಡಬೇಕಾಗುತ್ತದೆ. ಇವರುಗಳು ಕೆ. ಎಸ್. ಎಫ್. ಸಿ. ಯಿಂದ ಹಾಗೂ ಇನ್ನಿತರೆ ಹಣಕಾಸಿನ ಸಂಸ್ಥೆಗಳಿಂದ ಲಕ್ಷಾಂತರ ರೂಪಾಯಿಗಳಲ್ಲ, ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಪಡೆಯುತ್ತಾರೆ. ನಂತರ ತಮ್ಮ ಸಿಸ್ಟರ್ ಕನ್ಸರ್ನ್‌ಗೆ ವರ್ಗಾವಣೆ ಮಾಡುತ್ತಾರೆ ಅದಕ್ಕಾಗಿ ಛಾನಲ್ಸ್ ಇಟ್ಟುಕೊಂಡಿರುತ್ತಾರೆ. ನಂತರ ಸಿಕ್ ಇಂಡಸ್ಟ್ರೀಸ್ ಎಂಬ ಸರ್ಟಿಫಿಕೇಟನ್ನು ತೆಗೆದುಕೊಂಡು ಈ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಬಹಳ ದೊಡ್ಡ ಕೆಟ್ಟ ಪರಿಣಾಮವನ್ನು ಮಾಡುತ್ತಿದ್ದಾರೆ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಮುಚ್ಚಲ್ಪಟ್ಟಿರುವ ಕಾರ್ಖಾನೆಗಳಲ್ಲಿ ತಮಗೆ ಗೊತ್ತಿರುವ ಹಾಗೆ ಎರಡು ತರಹದ್ದು ಇದೆ. ಒಂದು ಟೆಕ್ಸ್‌ಟೈಲ್ ಇಂಡಸ್ಟ್ರೀಸ್. ಅದು ಕೆ ಆರ್. ಮಿಲ್ಸ್ ಇರಬಹುದು, ಅಥವಾ ಬೆಂಗಳೂರಿನಲ್ಲಿರೂ ರಾಜಾ ಮಿಲ್ ಇರಬಹುದು. ಅಥವಾ ದಾವಣಗೆರೆಯಲ್ಲಿರುವ ಮಿಲ್ ಆಗಬಹುದು, ಅಥವಾ ತಮಗೆ ಪ್ರಿಯವಾಗಿರತಕ್ಕ ಬಾಗಲಕೋಟೆ ಮತ್ತು ಬಿಜಾಪುರದಲ್ಲಿರುವ ಸಹಕಾರಿ ಸ್ಪಿನ್ನಿಂಗ್ ಮಿಲ್ಸ್ ಇರಬಹುದು. ಈ ಟೆಕ್ಸ್‌ಟೈಲ್ ಮಿಲ್ಲುಗಳು ಈ ರೀತಿ ಮುಚ್ಚಲ್ಪಟ್ಟಿರುವುದಕ್ಕೆ ಕಾರಣವೇನೆಂಬುದು ತಮಗೆ ಗೊತ್ತಿದೆ ಎಂಬುದಾಗಿ ನಾನು ಭಾವಿಸಿಕೊಳ್ಳುತ್ತೇನೆ. ಇದಕ್ಕೆ ಕಾರಣವೇನೆಂದರೆ, ಕೇಂದ್ರ ಸರ್ಕಾರದ ನೀತಿ ಏನಿದೆ, ಈ ಒಂದು ಸಿಂಥೆಟಿಕ್ ಯಾರ್ನ್ ಅನ್ನು ಮಾಡುವುದಕ್ಕೆ ಅವರಿಗೆ ಸಹಾಯ ಮಾಡುವಂತಹ ಒಂದು ನೀತಿಯಿಂದಾಗಿ ಇವತ್ತು ಇಡೀ ರಾಷ್ಟ್ರ ಹಾಗೂ ರಾಜ್ಯದಲ್ಲಿರತಕ್ಕ ಟೆಕ್ಸ್‌ಟೈಲ್ ಮಿಲ್ಲುಗಳನ್ನು ಕ್ಲೋಸ್ ಮಾಡತಕ್ಕ ಸ್ಥಿತಿಗೆ ಬಂದಿದ್ದೇವೆ. ಕಾರ್ಮಿಕರಿಗೊಬ್ಬರಿಗೇ ಅಲ್ಲ, ಮೂಲಭೂತವಾಗಿ ಈ ರಾಜ್ಯದ ರೈತರಿಗೆ ತೊಂದರೆಯಾಗಿದೆ. ಅದರಲ್ಲೂ ಹತ್ತಿ ಬೆಳೆಯುತ್ತಕ್ಕ ರೈತರು ಯಾರು ಇದ್ದಾರೆ, ಅವರಿಗೆ ತೊಂದರೆಯಾಗಿದೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರೋಣ. ನಾವು ಅಂಬಾನಿಗಳ ಪರವಾಗಿಯೇ ಇರಬೇಕಾಗಿಲ್ಲ. ಅಂಬಾನಿಗಳ ಪರವಾಗಿದ್ದ ಟೆಕ್ಸ್‌ಟೈಲ್ ಪಾಲಿಸಿಯಿಂದಾಗಿ ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ಟೆಕ್ಸ್‌ಟೈಲ್ ಮಿಲ್ಲುಗಳನ್ನು ಮುಚ್ಚತಕ್ಕ ಪರಿಸ್ಥಿತಿಗೆ ಬಂದಿರತಕ್ಕ ವಿಚಾರ ತಮಗೆ ಗೊತ್ತಿರತಕ್ಕ ವಿಚಾರ ಇದರ ಹಿಂದೆ ಏನಾಗಿದೆಯೆಂದರೆ, ಅಧಿಕಾರದಲ್ಲಿದಂತಹ ವಿಶೇಷವಾದ ಕೇಂದ್ರದ ಆಡಳಿತವನ್ನು ನಡೆಸಿದಂಥ ಜನ ಈ ಒಂದು ಟೆಕ್ಸ್‌ಟೈಲ್ ಮಿಲ್ಲುಗಳನ್ನು ಮಾಡ್ರನೈಜೇಷನ್ ಮಾಡಲು ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಏನು ಹಣ ಹೂಡಬೇಕಾಗಿತ್ತೋ, ಅದನ್ನು ಮಾಡಲಿಕ್ಕೆ ಹೋಗಲಿಲ್ಲ, ಅಂಬಾಣಿಯವರಿಗೆ ಸಹಾಯ ಮಾಡೋಣ ಅಥವಾ ಮತ್ತೊಬ್ಬರಿಗೆ ಸಹಾಯ

ಮಾಡಲು ಒಂದು ಪಾಲಿಸಿಯಿಂದ ಈ ನಮ್ಮ ಟೆಕ್ಸ್‌ಟೈಲ್ ಮಿಲ್ಲುಗಳನ್ನು ಮುಚ್ಚುವುದರ ಜೊತೆಗೆ ಅನೇಕ ಜನ ಕಾರ್ಮಿಕರಿಗೆ ಬಹಳ ತೊಂದರೆಯಾಗಿರತಕ್ಕದ್ದು ನಮಗೆ ಗೊತ್ತಿದೆ.

ಇನ್ನು ನಾನ್ ಟೆಕ್ಸ್‌ಟೈಲ್ಸ್ ವಿಚಾರ ತೆಗೆದುಕೊಂಡಾಗ ಈ ನಮ್ಮ ಅಲಂಬಿಕ್ ಗ್ಲಾಸ್ ಫ್ಯಾಕ್ಟರಿ ಬಗ್ಗೆ ಮಾತನಾಡಬೇಕಾಗಿದೆ. ಇದು ತಮ್ಮ ಗಮನಕ್ಕೆ ಬಂದಿದೆ. ಈ ಕಡೆ ತಾವು ಇದ್ದಾಗ, ಇದರ ಮಾಲೀಕರು ಅಮೀನ್ ಎಂಬುವರು ಯಾರಿದ್ದಾರೆ, ಅದರ ಬಗ್ಗೆ ಎಲ್ಲಾ ಮಾತನಾಡಿದ್ದೇವೆ. ಈ ಅಮೀನ್ ಎನ್ನುವವರು ಬರೋಡದಲ್ಲಿ ಇದರ ಒಂದು ಯೂನಿಟ್ ಅನ್ನು ಇಟ್ಟುಕೊಂಡಿದ್ದಾರೆ ಇಲ್ಲಿ ಕೋಟ್ಯಂತರ ರೂಪಾಯಿಗಳ ಆಸ್ತಿಯನ್ನು ಮಾಡಲಿಕ್ಕೆ ಹೊರಟಿದ್ದಾರೆ. ಯಾವುದೋ ರಾಜ್ಯದಿಂದ ಬಂದ ಇಲ್ಲಿಯ ಹಣದಿಂದ ಬರೋಡದಲ್ಲಿರುವ ಅಲೆಂಬಿಕ್ ಫ್ಯಾಕ್ಟರಿಯನ್ನು ಬೆಳೆಸಲು ಪ್ರಯತ್ನ ಮಾಡುತ್ತಿದ್ದಾರೆ.

ಇನ್ನು ಚಾಮುಂಡಿ ಮೋಪೆಡ್ಸ್ ಬಗ್ಗೆ ಹೇಳಬೇಕಾದರೆ, ನಮ್ಮ ರಾಜ್ಯ ಸರ್ಕಾರದಿಂದ ಅದನ್ನು ಮತ್ತೆ ರಿವೈವ್ ಮಾಡುತ್ತೇವೆಂದು ಹೇಳಿ ಹಣಕಾಸಿನ ಸೌಲಭ್ಯಗಳನ್ನು ಪಡೆದರು. ಆದರೆ ಅದನ್ನು ಓಪನ್ ಮಾಡಲಿಲ್ಲ, ಸರ್ಕಾರದಿಂದ ಹಣ ಪಡೆದು ಕಾರ್ಮಿಕರಿಗೆ ಪಂಗನಾಮ ಹಾಕಿ, ಸರ್ಕಾರಕ್ಕೆ ಪಂಗನಾಮ ಹಾಕಿ, ಅದನ್ನು ಮುಚ್ಚಿ ಹೊರಟುಹೋಗಿದ್ದಾರೆ. ಇಂತಹವರನ್ನು ಗಲ್ಲಿಗೆ ಹಾಕಿದರೂ ತಪ್ಪಿಲ್ಲ ಇಂತಹ ಖದೀಮರು ಯಾರಿದ್ದಾರೆ, ಮಫತ್ ಲಾಲ್ ಅಂತಹವರು ಹಿಡಿಯುತ್ತಿದ್ದಾರೆ. ಇವರು ಸಾವಿರಾರು ಜನ ಕಾರ್ಮಿಕರನ್ನು ಸಾಯಿಸುತ್ತಿದ್ದಾರೆ. ಇಂತಹ ಕೆಲವರು ಕಾರ್ಖಾನೆಗಳನ್ನು ತೆಗೆಯಲು ಹಣ ಪಡೆದುಕೊಳ್ಳುವುದು ನಂತರ ಮುಚ್ಚುವುದು ಈ ರೀತಿ ಮಾಡುತ್ತಿದ್ದಾರೆ. ಈ ಬಗ್ಗೆ ಮಾತನಾಡುವುದು ಸುಲಭ. ಆದರೆ ಅವರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಟ್ರೈ ಪಾರ್ಟಿ ಮಾನಿಟರಿ ಸಮಿತಿ ಏನಿದೆ, ಇದು ಬೇಗ ಆಗಬೇಕು. ಇದು ಬಹಳ ಮುಖ್ಯವಾಗಿರುವುದು. ಈ ಸಿಕ್ ಯೂನಿಟ್‌ಗಳು ಏನಿವೆ, ಇವುಗಳ ಬಗ್ಗೆ ಪ್ರತಿಯೊಂದು ಕೇಸ್ ತೆಗೆದುಕೊಂಡು ಇದು ವಯಬಲ್ ಹೌದೋ ಅಥವಾ ಅಲ್ಲವೊ ಎಂಬುದನ್ನು ವಿಚಾರ ಮಾಡಿ ಒಂದು ರಿಪೋರ್ಟ್‌ನ್ನು ಕೊಡಬೇಕಾಗುತ್ತದೆ. ಕನಿಷ್ಠ ಪಕ್ಷ ಯಾವುದನ್ನು ಮತ್ತೆ ತೆರೆಯಲು ಆಗುವುದಿಲ್ಲ ಅಂತಹ ಕಾರ್ಖಾನೆಗಳಲ್ಲಿರತಕ್ಕ ಆಸ್ತಿಯನ್ನು ಮಾರಿ ದುಡ್ಡನ್ನು ಕೊಟ್ಟರೆ ಕಾರ್ಮಿಕರಿಗೆ ಸ್ವಲ್ಪ ಅನುಕೂಲವಾಗುತ್ತದೆಂದು ನಾನು ತಿಳಿದಿದ್ದೇನೆ. ಕೇಂದ್ರ ಸರ್ಕಾರದ ಸಹಾಯ ಬೇಕಾದರೆ ನಾವೂ ಕೇಂದ್ರದ ಮೇಲೆ ಒತ್ತಡವನ್ನು ತರುತ್ತೇವೆ ಅವರನ್ನು ಡಿಫೆಂಡ್ ಮಾಡಬೇಕೆಂದು ನಾವೇನು ಹೇಳುವುದಿಲ್ಲ. ಅವರ ಮೇಲೆ ಒತ್ತಡ ತಂದು ನಮ್ಮ ರಾಜ್ಯದ ಕಾರ್ಮಿಕರಿಗೆ ಉಪಯೋಗವಾಗುವ ದೃಷ್ಟಿಯಿಂದ ನಾವು ಪ್ರಯತ್ನ ಮಾಡೋಣವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬ್ಯೂರೋ ಆಫ್ ಇಂಡಸ್ಟ್ರೀಸ್ ಫೈನಾನ್ಸ್ ಅಂಡ್ ರಿಸ್ಟ್ರಕ್ಚರ್ ಮಾಡತಕ್ಕ ಬಿ. ಎ. ಎಫ್. ಆರ್ ಆರ್ಗನೈಸೇಷನ್ ಏನು ಇದೆ, ಅದರ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. ಇದಕ್ಕೆ ಅವರು ಕರೆದಾಗಲೆಲ್ಲಾ ನಮ್ಮ ರಾಜ್ಯ ಸರ್ಕಾರದ ಸೆಕ್ರೆಟೇರಿಯಟ್‌ಯಿಂದ ಒಬ್ಬ ಅಂಡರ್ ಸೆಕ್ರೆಟರಿಯನ್ನು ಕಳುಹಿಸುತ್ತೇವೆ. ಅವರನ್ನು ಯಾರೂ ಸೀರಿಯಸ್ ಆಗಿ ಅಲ್ಲಿ ತೆಗೆದುಕೊಳ್ಳುವುದಿಲ್ಲ. ಈ ಅಂಡರ್ ಸೆಕ್ರೆಟರಿಯವರನ್ನು ಎಲ್ಲೂ ಮೂಲೆಯಲ್ಲಿ ಹಿಂದುಗಡೆ ಕೂರಿಸುತ್ತಾರೆ. ಇವರಿಗೆ ಪ್ಲೇನ್‌ನಲ್ಲಿ ಹೋಗಲು ಅವಕಾಶವಿಲ್ಲ. ಟ್ರೈನ್‌ನಲ್ಲಿ ಹೋಗಬೇಕು. ಅದಕ್ಕೆ ನಾಲ್ಕು ದಿವಸ ಬೇಕಾಗುತ್ತದೆ. ಅಲ್ಲಿ ಅರ್ಧ ದಿನ ಮೀಟಿಂಗ್ ಮುಗಿಸಿಕೊಂಡು ಅವರು ವಾಪಸ್ಸು ಬರುತ್ತಾರೆ. ಇದುವರೆಗೂ ಒಂದು ಡಿಸ್‌ಪ್ಯೂಟ್‌ನಲ್ಲೂ ನಮ್ಮ ರಾಜ್ಯಕ್ಕೆ ಇದರಿಂದ ನ್ಯಾಯ ಸಿಕ್ಕಿಲ್ಲ. ಆದ್ದರಿಂದ ಕನಿಷ್ಟಪಕ್ಷ ಡೆಪ್ಯೂಟಿ ಸೆಕ್ರೆಟರಿಯವರನ್ನಾದರೂ ಕಳುಹಿಸಬೇಕು. ಕರ್ನಾಟಕ ಭವನದಲ್ಲಿರತಕ್ಕ ಅಧಿಕಾರಿಗಳ ಮೇಲೆ ತಾವು ಒತ್ತಡವನ್ನು ತೆಗೆದುಕೊಂಡು ಬಂದು ನಮ್ಮಲ್ಲಿ ಡಿಸ್‌ಪ್ಯೂಟ್ ಇರತಕ್ಕ ಯಾವ್ಯಾವ ಕೇಸುಗಳು ಇವೆ, ಆ ಕೇಸುಗಳ ಹಿಯರಿಂಗ್ ಬಂದ ಸಂದರ್ಭದಲ್ಲಿ ನಮ್ಮನ್ನು ಕರೆದಾಗ ಅಲ್ಲಿರತಕ್ಕ ಅಧಿಕಾರಿಗಳು ನಮ್ಮ ಸರ್ಕಾರದ ಪರವಾಗಿ ವಾದ ಮಾಡಲು ಅನುಕೂಲವಾಗುತ್ತದೆ. ಇದರಿಂದ ನಮ್ಮ ರಾಜ್ಯದ ಕಾರ್ಮಿಕರಿಗೆ ಬಹಳ ಅನುಕೂಲವಾಗುತ್ತದೆ.

ಇನ್ನು ಕಂದಾಯ ಇಲಾಖೆಯ ಬಗ್ಗೆ ನಮ್ಮ ನಾಯಕರು ಮಾತನಾಡುತ್ತಾರೆ. ಕಾರ್ಮಿಕ ಇಲಾಖೆ ಬಗ್ಗೆ ಮಾತನಾಡುವುದು ಬಹಳ ಇದೆ. ಆದರೆ ಸಮಯದ ಅಭಾವದಿಂದ ಇಷ್ಟು ಹೇಳಿ ನಾನು ಮುಗಿಸುವುದಕ್ಕೆ ಮುಂಚೆ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುವುದೇನೆಂದರೆ ಲ್ಯಾಂಡ್ ಲೆಸ್ ಅಗ್ರಿಕಲ್ಚರಲ್ ಕ್ಲಾಸ್ ಯಾರಿದ್ದಾರೆ, ೮೦ ಲಕ್ಷ ದಿಂದ ಒಂದು ಕೋಟಿ ಜನ ಏನಿದ್ದಾರೆ, ಅವರಿಗೆ ಪ್ರೊಟೆಕ್ಷನ್ ಅನ್ನು ನಮ್ಮ ಸರ್ಕಾರ ಕೊಡಬೇಕು. ಇಲ್ಲದಿದ್ದರೆ ಏನೂ ಉಪಯೋಗವಾಗುವುದಿಲ್ಲ.

ಅವರು ಸಹಿತ ಒಂದು ದೊಡ್ಡ ರಾಜಕೀಯ ಶಕ್ತಿಯಾಗಿ ಬೆಳೆಯಬಲ್ಲರು. ಅವರನ್ನು ನಾವೆಲ್ಲರೂ ಉಪಯೋಗ ಮಾಡಿಕೊಂಡಿದ್ದೇವೆ. ನಾವು ಇಲ್ಲಿ ಬರಲು ಕಾರಣಕರ್ತರಾಗಿದ್ದೇವೆ. ಆದರೆ ಅವರ ಬಗ್ಗೆ ಒಂದು ಕಾನೂನನ್ನು ಇದುವರೆಗೂ ಮಾಡಲು ಆಗಲಿಲ್ಲ. ಅದನ್ನು ತಾವು ಮಾಡಬೇಕೆಂದು ಒತ್ತಾಯ ಮಾಡಿ ನನಗೆ ಇಷ್ಟು ಸಮಯ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ಈ ಇಲಾಖೆಯ ಬೇಡಿಕೆಗಳನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೇ, ಈ ಸಾರಿಯ ಕಂದಾಯ ಇಲಾಖೆಯ ಬೇಡಿಕೆಗಳ ಮೇಲೆ ನನ್ನ ಕೆಲವು ಅನಿಸಿಕೆಗಳನ್ನು, ಕೆಲವು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ತಮ್ಮ ಅನುಮತಿಯನ್ನು ಕೇಳುತ್ತೇನೆ. ನಾನು ಬೇರೆ ವಿವರಗಳಿಗೆ ಹೋಗುವುದಕ್ಕಿಂತ ಮುಂಚೆ ಕಂದಾಯ ಇಲಾಖೆಯ ಆಡಳಿತ ವ್ಯವಸ್ಥೆಯನ್ನು ಬಹಳ ಸ್ಥೂಲವಾಗಿ ನೋಡುವುದು ಅವಶ್ಯಕ ಇದೆ ಎಂದು ಭಾವಿಸುತ್ತೇನೆ. ಕಂದಾಯ ಇಲಾಖೆಯನ್ನು ಎಲ್ಲಾ ಕಾಲಕ್ಕೂ ಮಾತೃ ಸಂಸ್ಥೆ, ತಾಯಿ ಸಂಸ್ಥೆ ಎಂದು ಹೇಳಿ ಕರೆದಿದ್ದೇವೆ. ಈ ಕಾರಣಕ್ಕೆ ಎಂದು ಕಾಣುತ್ತದೆ ೧೯೫೬ ರಿಂದ ಇಲ್ಲಿಯವರೆಗೆ ರಾಜ್ಯದ ಹಿರಿಯರನೇಕರು ಕಂದಾಯ ಇಲಾಖೆಯ ಜವಾಬ್ದಾರಿಯನ್ನು ಹೊತ್ತುಕೊಂಡು ನಿರ್ವಹಿಸಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರಿಂದ ಹಿಡಿದು, ಕೆ. ಹೆಚ್. ಪಾಟೀಲರವರೆಗೆ ಅನೇಕ ಅನುಭವಿಗಳನ್ನು ನಾವು ನೋಡಿದ್ದೇವೆ. ಈ ಸದನದಲ್ಲಿ ಹಿರಿಯ ಸದಸ್ಯರಾಗಿರುವ ಹುಚ್ಚಮಾಸ್ತಿಗೌಡರು ಕಂದಾಯ ಇಲಾಖೆ ಮಂತ್ರಿಗಳಾಗಿದ್ದಾಗ ೧೯೭೩–೭೪ರಲ್ಲಿ ಭೂಶಾಸನ ಮಸೂದೆಯಂತಹ ಕ್ರಾಂತಿಕಾರಕ ಬದಲಾವಣೆಯನ್ನು ತಂದ ನೆನಪು ಕೂಡ ನಮಗೆ ಇದೆ. ಆದರೆ ದುರಾದೃಷ್ಟ ಏನೆಂದರೆ ಇದನ್ನು ತಾಯಿ ಸಂಸ್ಥೆ ಎಂದು ಕರೆಯುವಾಗ, ತಾಯ್ತನ ಇಲ್ಲದ ತಾಯಿ ಸಂಸ್ಥೆ ಎಂದು ವಿಧಿ ಇಲ್ಲದೆ ಹೇಳಬೇಕಾದಂಥ ಸ್ಥಿತಿಗೆ ನಾವು ಬಂದಿದ್ದೇವೆಂದು ಕಳೆದ ೪೦ ವರ್ಷಗಳ ಸ್ವಾತಂತ್ರ್ಯ ನಂತರದ ಅನುಭವದಲ್ಲಿ ಈ ಮಾತನ್ನು ಹೇಳಬೇಕಾಗಿದೆ. ನಿಜ, ಒಂದು ಕಾಲಕ್ಕೆ ಕಂದಾಯ ಮಂತ್ರಿ ಎಂದರೆ ರಾಜ್ಯದಲ್ಲಿಯೇ ಎರಡನೇ ಸ್ಥಾನ. ಮುಖ್ಯಮಂತ್ರಿಗಳಿಗೆ ಮೊದಲನೇ ಸ್ಥಾನ. ಹಾಗೆಯೇ ಇಲಾಖೆಯು ಕೂಡಾ, ಮೇಲಿನಿಂದ ಕೆಳಗಿನವರೆಗೆ ಎಂದರೆ ಮುಖ್ಯ ಕಾರ್ಯದರ್ಶಿಯಿಂದ ಹಿಡಿದು ಕೆಳಗೆ ಕೊನೇ ಹಂತದಲ್ಲಿ ಕೆಲಸ ಮಾಡುವ ಗ್ರಾಮ ಲೆಕ್ಕಿಗ ಎಂದು ಏನು ಕರೆಯುತ್ತೇವೆ, ಅಲ್ಲಿಯವರೆಗೆ ವಿಸ್ತಾರವಾಗಿರತಕ್ಕ ಸಂಸ್ಥೆ ಇದು. ಸ್ವಾತಂತ್ರ್ಯ ಪೂರ್ವ ಅಥವಾ ಸ್ವಾತಂತ್ರ್ಯ ಬಂದ ಕೆಲವು ದಿವಸಗಳಲ್ಲಿ ನಮ್ಮ ಹಳ್ಳಿಗಳಲ್ಲಿ ಕೆಲವು ಪದ್ಧತಿಗಳು ಇದ್ದವು. ಆಗ ಗ್ರಾಮದ ಲೆಕ್ಕಪತ್ರಗಳನ್ನು ಇಡುವುದಕ್ಕೆ ಮತ್ತು ಯಜಮಾನಿಕೆಯನ್ನು ಮಾಡುವುದಕ್ಕೆ ಶಾನುಭೋಗರು ಮತ್ತು ಪಟೇಲರು ಇದ್ದರು. ನಾವು ಈ ಬಗ್ಗೆ ಹಿಂದಕ್ಕೆ ಹೋಗಿ ನೋಡಿದರೆ, ಆ ಕಾಲಕ್ಕೆ ಶಾನುಭೋಗರು ಅಥವಾ ಪಟೇಲರು ಕಂದಾಯ ಇಲಾಖೆಯ ಆ ಗ್ರಾಮದ ವ್ಯಾಪ್ತಿಗೆ ಬರತಕ್ಕ ಒಂದು ಎನ್‌ಸೈಕ್ಲೋಪೀಡಿಯಾ. ಗ್ರಾಮದ ಎಲ್ಲಾ ಪರಿಪೂರ್ಣವಾದಂಥ ಮಾಹಿತಿ ಅವರಲ್ಲಿರುತ್ತಿತ್ತು. ದಿವಾನರು ಅಥವಾ ಮಂತ್ರಿಗಳು ಹೋದರೆ ಅವರಿಗೆ ಆ ಗ್ರಾಮದ ಆಗು ಹೋಗುಗಳು, ಸಾವು ನೋವುಗಳ ಸಂಖ್ಯೆ, ಕೋಳಿ ಕುರಿಗಳು ಎಷ್ಟು, ಜಾನುವಾರುಗಳ ಸಂಖ್ಯೆ ಎಷ್ಟು, ಹಂದಿ ನಾಯಿಗಳ ಸಂಖ್ಯೆ ಎಷ್ಟು ಎಂದು ಲೆಕ್ಕ ಇಟ್ಟು ಹೇಳುತ್ತಿದ್ದರು. ಕೆರೆ ಎಷ್ಟು, ಬಾವಿ ಎಷ್ಟು, ಯಾರಿಗೆ ಯಾವ ಜಮೀನು ಸೇರಿದ್ದು, ಕಲ್ಲುಬಾಂದು ಎಲ್ಲಿದೆ ಎಂಬುದರ ವಿವರಗಳು ಅವರಲ್ಲಿತ್ತು. ನಾನು ವಕೀಲನಾಗಿ ಅಭ್ಯಾಸ ಪ್ರಾರಂಭ ಮಾಡಿದಾಗ ೧೯೭೨–೭೩ರಲ್ಲಿ ಆಗ ನಮ್ಮ ಆಸ್ತಿ ಭಾಗ ಆಯಿತು. ಆಗ ನಮಗೆ ಯಾರಿಗೂ ದಾಖಲೆ ಸಿಗಲಿಲ್ಲ. ವಕೀಲನಾಗಿ ನಾನು ಬಾಂದು ಹುಡುಕುವುದಕ್ಕಾಗಲಿಲ್ಲ. ಆಗ ನಾನು ಶಾನುಭೋಗರ ಮೊರೆ ಹೋಗಬೇಕಾಯಿತು. ನಮ್ಮ ಬಾಂದು ಕಲ್ಲಿನ ಬಗ್ಗೆ ಮೂಡಿಗೆರೆ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಕುಳಿತು ನನಗೆ ಮ್ಯಾಪ್ ತೋರಿಸಿ, ನನ್ನ ಮನೆಯಿಂದ ಬಲಕ್ಕೆ ೨೦ ಗಜ ಹೋಗಿ, ಮೂರಡಿ ಕೆಳಕ್ಕೆ ಇಳಿದರೆ ಬಾಂದುಕಲ್ಲು ಸಿಗುತ್ತದೆಂದು ಹೇಳಿದರು. ನಾವು ಅಲ್ಲಿ ಹೋದಾಗ ಆ ಕಲ್ಲು ಸಿಕ್ಕಿತು. ಇಂತಹ ಒಂದು ವ್ಯವಸ್ಥೆಯನ್ನು ಜನ ನಂಬಿದ್ದರು. ಇಂತಹ ಒಂದು ವ್ಯವಸ್ಥೆಯನ್ನು ಶಾನುಭೋಗದ ಲೆಕ್ಕ, ಪಟೇಲರ ಪುಸ್ತಕ ಈ ಎರಡನ್ನೂ ಸೇರಿಸಿ ಗ್ರಾಮ ಲೆಕ್ಕಿಗ ಎನ್ನುವ ಒಬ್ಬರನ್ನು ನಿರ್ಮಾಣ ಮಾಡಿದ್ದಾರೆ. ಇದು ಮನುಷ್ಯ ಸೃಷ್ಟಿಯಲ್ಲ, ಇದು ಬ್ರಹ್ಮ ಸೃಷ್ಟಿ. ಯಾರ ಲೆಕ್ಕ ಯಾರಿಗೆ ಬರೆಯುತ್ತಾರೋ, ಇವತ್ತು ನಿಮ್ಮ ಆಸ್ತಿ ನನಗಾಗಬಹುದು. ನಾಳೆ ಅದು ಇನ್ನೊಬ್ಬರ ಆಸ್ತಿಆಗಬಹುದು. ಯಾರು ಕೇಳಿದರೂ ಅವರಿಗೇ ಲೆಕ್ಕ ಬರೆದು ಕೊಡುತ್ತಾರೆ. ಇಂತಹ ಒಂದು ವ್ಯವಸ್ಥೆಯನ್ನು ನಾವು ಜಾರಿಗೆ ತಂದಿದ್ದೇವೆ. ಅವರಿಗಿರುವ ಆಸಕ್ತಿಯೆಂದರೆ ತಿಂಗಳಲ್ಲಿ ೩೦ ದಿವಸ ಆದ ತಕ್ಷಣ ಅವರಿಗೆ ಬರುವ ಸಂಬಳದ ಬಗ್ಗೆ. ಇವತ್ತು ಗ್ರಾಮದ ಲೆಕ್ಕವನ್ನು ಯಾರಿಗೆ ಕೇಳುವುದು ? ಇವತ್ತು ಗ್ರಾಮದ ವ್ಯವಹಾರದ ಬಗ್ಗೆ ಯಾರ ಹತ್ತಿರವೂ ವಿವರಗಳು ಸಿಗುವುದಿಲ್ಲ. ಇದಕ್ಕೆ ಜನರಲ್ಲಿ ವಿಶ್ವಾಸ ಬರುವಂತೆ ಇವತ್ತು ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಗ್ರಾಮ ಲೆಕ್ಕಿಗ

ಎಂದು ಹೇಳುವಾಗ, ಇದು ಒಂದು ಬ್ರಹ್ಮ ಸೃಷ್ಟಿ ಎಂದು ಹೇಳುವಾಗ, ತಾಯಿತನ ಇಲ್ಲದೇ ಇರತಕ್ಕ ಒಂದು ತಾಯಿಸಂಸ್ಥೆ ಏನಿದೆ, ಅದರ ಅಡಿಪಾಯ ಏನಿದೆ, ಅದು ಸರಿಹೋಗದ ಹೊರತು ಗ್ರಾಮದಲ್ಲಿನ ಗೊಂದಲಮಯ ಸರಿಹೋಗುವುದಿಲ್ಲ. ಜೊತೆಗೆ ಭೂ ಶಾಸನ ಮತ್ತು ಭೂ ಇತಿಮಿತಿಗಳ ವಿವರಗಳು ಹೊರಗೆ ಬರಲಿಕ್ಕೆ ಸಾಧ್ಯವಿಲ್ಲ. ಇದು ಮೂಲ ಪ್ರಶ್ನೆ. ನಾನು ಹಳೆಯ ಶ್ಯಾನುಭೋಗರು ಮತ್ತು ಪಟೇಲರು ಏನಿದ್ದಾರೆ, ಅವರಿಗೆ ಅಧಿಕಾರವನ್ನು ವಹಿಸಿಕೊಡಿಯೆಂದು ನಾನು ಹೇಳಲಿಲ್ಲ. ಪಟೇಲರು ಊರಿನಲ್ಲಿ ಬಿದ್ದ ಹೆಣವನ್ನು ಕಾಯುತ್ತಿದ್ದರು. ಊರಿನ ಯಜಮಾನಿಕೆಯನ್ನು ಸಹ ಮಾಡುತ್ತಿದ್ದರು. ಈಗಿರುವ ಗ್ರಾಮಲೆಕ್ಕಿಗನಿಗೆ ಹೆಣ ಕಾಯಲಿಕ್ಕೆ ಆಗುವುದಿಲ್ಲ, ಜೊತೆಗೆ ಊರಿನ ಯಜಮಾನಿಕೆಯನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದೊಂದು ಹಂತ. ಇನ್ನು ಎರಡನೇ ಹಂತವೆಂದರೆ, ಇದು ಏತಕ್ಕೋ ಸರಿಹೋಗಲಿಲ್ಲ, ವ್ಯವಹಾರ ಜಾಸ್ತಿ ಆಯಿತು ಎಂದು, ಗ್ರಾಮದ ಜನ ತಾಲ್ಲೂಕು ಕಛೇರಿಗೆ ಬಂದು ತಮ್ಮ ಲೆಕ್ಕಗಳನ್ನು ನೋಡುವುದು ಕಷ್ಟ, ಅದಕ್ಕಾಗಿ ಒಂದು ಹೊಸ ವ್ಯವಸ್ಥೆಯನ್ನು ಮಾಡೋಣವೆಂದು ಮಾಡಿ, ಅದನ್ನು ನಾಡ ಕಛೇರಿಯೆಂದು ಕರೆದರು. ಪ್ರತಿಯೊಂದು ಹೋಬಳಿ ಮಟ್ಟದಲ್ಲಿ ನಾಡ ಕಛೇರಿ ತೆರೆದು, ಅಲ್ಲಿ ಡೆಪ್ಯುಟಿ ತಹಶೀಲ್ದಾರ್ ಎಂಬ ಎತ್ತರದ ಮನುಷ್ಯನನ್ನು ಇಟ್ಟರು. who is devoid of magesterial powers. ಆತನನ್ನು ಅಲ್ಲಿ ಕೂರಿಸಿದರು. ಅಲ್ಲಿ ಮತ್ತೊಂದು ಕಛೇರಿ ಮಾಡಿದ್ದು ತೀರಾ ತಪ್ಪಾಗಿದೆಯೆಂದು ನಾನು ಪ್ರತಿರೋಧ ಮಾಡಬೇಕೆಂದು ಇಲ್ಲಿ ನಿಂತಿಲ್ಲ. ಸ್ವಲ್ಪ ಮಟ್ಟಿಗೆ ಅದರಿಂದ ಸಹಾಯವಾಗಿದೆ. ಆದರೆ ಎಲ್ಲ ಹೋಬಳಿ ಕೇಂದ್ರಗಳಲ್ಲೂ ಈ ನಾಡ ಕಛೇರಿಗಳಿಲ್ಲ. ನಾಡ ಕಛೇರಿಗಳಲ್ಲಿರತಕ್ಕ ಮನುಷ್ಯನ ಕೆಲಸ ಏನೆಂದರೆ, ಮುಖ್ಯವಾಗಿ ವಿಕೇಂದ್ರೀಕರಣದ ವ್ಯವಸ್ಥೆಯನ್ನು ನಾವೇನು ಯೋಚನೆ ಮಾಡುತ್ತಿದ್ದೇವೆ ಆ ರೀತಿಯಲ್ಲಿ ತಾಲ್ಲೂಕು ಕಛೇರಿಗೆ ಬರಲಿಕ್ಕೆ ಯಾರಿಗೆ ಸಾಧ್ಯವಿಲ್ಲ ಅವರು ಈಪ್ರೊಂದು ಕಛೇರಿಯಲ್ಲಿ ತಮ್ಮ ಕೆಲಸ ಮಾಡಿಸಿ ಕೊಳ್ಳುವುದು. ಅಲ್ಲಿರತಕ್ಕವರ ಕೆಲಸ ಏನೆಂದರೆ ಇನ್‌ಕಂ ಡಿಕ್ಲರೇಷನ್ ಮಾಡುವುದು, ಆರ್‌ಟಿಸಿ ಕೊಡುವುದು ಮತ್ತು ಬೇರೆ ಬೇರೆ ವಿಧವಾದ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಂತಹ ಖಾತೆ ಮತ್ತೊಂದು ಮಗದೊಂದು ಪರಿಶೀಲನೆ ಮಾಡತಕ್ಕ ಒಂದು ವ್ಯವಸ್ಥೆ. ಅಲ್ಲಿಂದೀಚೆಗೆ ವಿಭಾಗಾಧಿಕಾರಿ ಗಳು, ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಎಂದು ಮಾಡಿದರು. ಇತ್ತೀಚಿನವರೆಗೆ ಜಿಲ್ಲಾಧಿ ಕಾರಿಗಳು ಅಂದರೆ, ಅವರು ಬಹಳ ಮೇಲಿನವರು ಎಂದು ನಾನು ಹೇಳುವುದಿಲ್ಲ, ಆದರೆ ಜಿಲ್ಲಾ ನಾಯಕರು ಆಗಿದ್ದರು. he is the captain of the entire administrative schemes of district in a democratic set up and he is the represent-ative of the Government at the district level. ಆದ್ದರಿಂದ ಅವರನ್ನು ಜಿಲ್ಲೆಯ ಅಧಿಕಾರಿಯೆಂದು ಕರೆದರು. ಜಿಲ್ಲಾಧಿಕಾರಿಗೆ ಮ್ಯಾಜಿಸ್ಟ್ರೇಟ್ ಪವರ್ಸ್ ಕೊಟ್ಟಿದ್ದೇವೆ. ಅವರಿಗೆ ಎಷ್ಟರಮಟ್ಟಿನ ಅಧಿಕಾರ ಇದೆ ಎಂಬುದರ ಬಗ್ಗೆ ನನಗೆ ಇನ್ನು ಒಂದು ನೆನಪು ಇದೆ. ಈಗಲೂ ಅದು ನನಗೆ ನೆನಪು ಇದೆ. ಒಂದು ಕಾಲಕ್ಕೆ ಮಂಡ್ಯ ಜಿಲ್ಲೆಗೆ ಮಂತ್ರಿಗಳು ಜಿಲ್ಲಾಧಿಕಾರಿಗಳ ಪರವಾನಗಿ ಇಲ್ಲದೆ ಬರುತ್ತಿದ್ದಾರೆಂಬ ಕಾರಣದಿಂದ ಮಂತ್ರಿಗಳು ಮಂಡ್ಯ ಜಿಲ್ಲೆಗೆ ಪ್ರವೇಶ ಮಾಡದಂತಹ ಒಂದು ನಿದರ್ಶನವಿದೆ. ಅದು ಎಷ್ಟು ದೂರ ಅಧಿಕಾರ ಹೋಗಿತ್ತು ಎಂದರೆ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಆದಿಯಾಗಿ ಎಲ್ಲರೂ ಜಿಲ್ಲಾಧಿಕಾರಿಗಳ ಪರವಾನಗಿ ತೆಗೆದುಕೊಂಡು, ಅವರಿಗೆ ತಿಳಿಸಿ ಹೋಗ ಬೇಕಾಗಿತ್ತು. ಇವತ್ತು ಯಾರು ಹೋಗುತ್ತಾರೋ, ಯಾರು ಬರುತ್ತಾರೋ ಗೊತ್ತಿಲ್ಲ. ಇಂದು ಜಿಲ್ಲಾಧಿಕಾರಿಗಳು ರಾಜಕಾರಣಿಗಳಿಗೆ ಫೋನ್‌ಮಾಡಿ ಏನ್ ಚಂದ್ರೇಗೌಡರೇ ಕಂದಾಯಮಂತ್ರಿಗಳು ಜಿಲ್ಲೆಗೆ ಬರುತ್ತಿದ್ದಾರಂತೆ ಹೌದೇ ಎಂದು ಕೇಳುವ ಮಟ್ಟಕ್ಕೆ ಆ ಕಛೇರಿಯನ್ನು ಕೂರಿಸಿದ್ದೇವೆ. ಅವರಿಗೆ ಭೂ ಶಾಸನದ ಮಸೂದೆಯ ಅಡಿಯಲ್ಲಿಯೂ ಇತಿಮಿತಿಯ ಕೆಲಸಗಳಿವೆ. ಜೊತೆಗೆ ಜಿಲ್ಲೆಯ ಎಲೆಕ್ಷನ್ ಆಫೀಸರ್ ಕೂಡ ಅವರೇ ಆಗಿದ್ದಾರೆ ಜಿಲ್ಲೆಯಲ್ಲಿ ನಡೆಯತಕ್ಕ ಎಲ್ಲಾ ವ್ಯವಹಾರಗಳನ್ನು ಅವರು ನೋಡಿಕೊಳ್ಳಬೇಕು. ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅದನ್ನು ಹೇಳಿದರೆ ತಮಗೆಲ್ಲ ಗೊತ್ತಾಗುತ್ತದೆ, ಮೊನ್ನೆ ಈ ತಿಂಗಳ ೧೪ನೇ ತಾರೀಖು ಶಿವಮೊಗ್ಗದ ಜಿಲ್ಲಾಧಿಕಾರಿ ಅವರು ೧೦ ದಿವಸಗಳ ಕಾಲ ರಜ ಹೋಗಿದ್ದಾರೆ. ಇದು ಬಹಳ ಇಂಟರೆಸ್ಟಿಂಗ್ ಕೇಸ್ ಜಿಲ್ಲಾಧಿಕಾರಿ ಏತಕ್ಕೆ ರಜ ಹೋಗಿದ್ದಾರೆ ? ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಎಲ್ಲ ಜಿಲ್ಲಾಧಿಕಾರಿಗಳನ್ನು ಕರೆದು, ಇದೇ ರಾಜ್ಯದ ಆಡಳಿತ ಕೇಂದ್ರವಾದ ಈ ವಿಧಾನಸೌಧದ ಕಟ್ಟಡದಲ್ಲಿ ತಮ್ಮ ನೇತೃತ್ವದಲ್ಲಿ ಅಥವಾ ತಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಇದು ನಡೆದಿದೆಯೋ ನನಗೆ ಗೊತ್ತಿಲ್ಲ.

ಅವರಿಗೆಲ್ಲಾ ಹೇಳಿದ್ದೇನೆಂದರೆ ಆಡಳಿತ ವ್ಯವಸ್ಥೆ ಸರಿಯಿರಬೇಕು, ಜಿಲ್ಲಾಧಿಕಾರಿಗಳು ಹೀಗೆ ನಡೆಯ ಬೇಕು, ಎಲ್ಲಿ ಲೋಪವಾಗಿದ್ದರೆ ಅದನ್ನು ಸರಿಪಡಿಸಬೇಕು. ಯಾರಾದರು ಆಹಾರ ಧಾನ್ಯಗಳನ್ನು ಬಚ್ಚಿಟ್ಟಿದ್ದರೆ ಅದನ್ನು ಹಿಡಿಯಂತಕ್ಕದ್ದು—ಇದೆಲ್ಲ ಆದೇಶಗಳು, ಇವರು ಇದೇ ಆದೇಶ ಶಾಸನ ಎಂದು

ತಿಳಿದುಕೊಂಡರು. ಪಾಪ, ಶಿವಮೊಗ್ಗ ಜಿಲ್ಲಾಧಿಕಾರಿ ನಾಲ್ಕು ಸಾವಿರ ಕ್ವಿಂಟಾಲ್‌ನಷ್ಟು ಭತ್ತ ಹಿಡಿದೇ ಬಿಟ್ಟರು, ಇದು ತಮ್ಮ ಗಮನಕ್ಕೆ ಏನಾದರೂ ಬಂದಿದೆಯೇ ? ಇದು ತನ್ನ ಕರ್ತವ್ಯವೆಂದು ಆತ ಮಾಡಿದರು. He took the decision of the Hon. Chief Minister and the Hon. Revenue Minister in true letter and spirit. ಪಾಪ. ಅವರು ಇಂಪ್ಲಿಮೆಂಟ್ ಮಾಡಿದರು. ಸಂಬಂಧಪಟ್ಟವನು ನಾಲ್ಕು ಸಾವಿರ ಕ್ವಿಂಟಾಲ್ ಭತ್ತ ಶೇಖರಿಸಿ ಇಟ್ಟು ಕೊಳ್ಳುವಂಥ ಒಬ್ಬ ಮನುಷ್ಯ ಸಾಧಾರಣದವನಲ್ಲ. ಎಲ್ಲಾ ರಾಜಕೀಯ ಮುಖಂಡರನ್ನು ಕರೆದು ಕಾಫಿ, ಟೀ ಕೊಟ್ಟು ಸನ್ಮಾನ ಮಾಡುವಷ್ಟು ಗತ್ತು ಅವನಿಗೆ ಇದೆ. ಆ ಸಂಸ್ಥೆಯ ಹೆಸರು ' ರೈತ ಬಂಧು ಗ್ರಾಮೋದ್ಯೋಗ ಸಂಸ್ಥೆ ' ಎಂದು ಇದು ಪತ್ರಿಕೆಯಲ್ಲಿ ದಪ್ಪ ಅಕ್ಷರದಲ್ಲಿ ಬಂತು. ನಮಗೆ ನೋಡಿ ಸಂತೋಷವಾಯಿತು. ನಾವು ಶಿವಮೊಗ್ಗ ಜಿಲ್ಲೆಯ ಪ್ರತಿನಿಧಿಗಳು. ಪರವಾಗಿಲ್ಲ, ಡೆಪ್ಯುಟಿ ಕಮಿಷನರ್ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಸರ್ಕಾರ ಕೂಡ ಇಂತಹ ವಿಚಾರದ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡುತ್ತದೆ ಎಂದು ನಾನು ಆಲೋಚನೆ ಮಾಡಿದ್ದೆ. ಏಕೆಂದರೆ ಜಿಲ್ಲಾಧಿಕಾರಿ ಆತ ಕ್ಯಾಪ್ಟನ್. ಅವರು ಮಾಡಿರತಕ್ಕಂಥ ಕೆಲಸ ಇದು. ಆತ ಹೈಕೋರ್ಟಿಗೆ ಹೋದ. ಕೋರ್ಟಿನಲ್ಲಿ ಕೇಸು ಅವನ ಪರವಾಗಿ ಆಯಿತು. ತತ್‌ಕ್ಷಣ ಆ ಜಿಲ್ಲಾಧಿಕಾರಿ ಬರೆದರು ರಿವಿಜನ್ ಪಿಟಿಶನ್‌ಗೆ ಅಪೀಲ್ ಹೋಗಬೇಕು ಎಂದು ಇವರು ಅಪೀಲ್ ಹಾಕಿದರು. ಆದರೆ ಅಪೀಲು ತೀರ್ಮಾನವಾಗುವ ತನಕ ಕಾಯಲಿಲ್ಲ. ಸರ್ಕಾರದಿಂದ ತಕ್ಷಣ ಆದೇಶ ಹೋಯಿತು, ತತ್‌ಕ್ಷಣ ಬಿಡುಗಡೆ ಮಾಡತಕ್ಕದ್ದು ಎಂದು ನಾನು ಕೇಳುತ್ತೇನೆ...Why did you interfere in the administrative authority of the Deputy Commissioner like this ? ಇದು ಹೋದದ್ದು ಬಹಳ ಚೆನ್ನಾಗಿ ಇದೆ. ಶಿವಮೊಗ್ಗದಲ್ಲಿ ತಂದು ಶೇಖರಿಸಿಟ್ಟುಕೊಂಡಿದ್ದನ್ನು ಜಿಲ್ಲಾಧಿಕಾರಿಗಳ ತಲೆ ಮೇಲೆ ಹೊಡೆದ ಹಾಗೆ ಲಾರಿಗಳ ಮೇಲೆ ಲೋಡ್ ಮಾಡಿಕೊಂಡು ಪ್ರೊಸೆಶನ್ ಹೋಯಿತು ಆನಂದಪುರಕ್ಕೆ. ಆದಾದ ಮೇಲೆ ಮೂರನೆಯ ದಿವಸವೋ, ಆದರ ಮಾರನೆ ದಿವಸವೋ ಒಂದು ಸಾವಿರ, ಎರಡು ಸಾವಿರ ಜನರಿಗೆ ಭೋಜನ ಕೂಟ ಬಿಡುಗಡೆಯಾಯಿತಲ್ಲ ? ಇದಕ್ಕೆ ಯಾರು ಹೊಣೆ ? ಸರ್ಕಾರ ಇಂತಹ ಜವಾಬ್ದಾರಿ ರಹಿತವಾದಂಥ, ಹೊಣೆಗೇಡಿ ರಹಿತವಾದಂಥ, ನ್ಯಾಯಾಲಯದಿಂದ ತೀರ್ಪು. ತೀರ್ಮಾನ ಆಗುವುದಕ್ಕೆ ಮುಂಚೆಯೇ ಬಿಡುಗಡೆ ಮಾಡುವುದಕ್ಕೆ ಪ್ರೇರಣೆ, ಆದೇಶ ಯಾರಿಂದ ಹೋಯಿತು ? ಮಾನ್ಯ ಶ್ರೀ ಕೆ. ಎಚ್. ಪಾಟೀಲರು ತಮ್ಮ ಉತ್ತರದಲ್ಲಿ ಇದನ್ನು ತಿಳಿಸುವುದಕ್ಕೆ, ಸಾಧ್ಯವಾದರೆ ತಮಗೆ ತೊಂದರೆಯಾಗದೇ ಇದ್ದರೆ ದಯವಿಟ್ಟು ತಿಳಿಸಿ.

ಶ್ರೀ ಕೆ. ಎಚ್. ಪಾಟೀಲ್.—ತೊಂದರೆಯಾದರೆ ನಿಮಗೆ ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಆದರೆ ಹೈಕೋರ್ಟ್ ಆದೇಶ ಇತ್ತು ಕೊಟ್ಟೆ ಎಂದು ಹೇಳಬೇಡಿ. ಸಿಂಗಲ್ ಜಡ್ಜ್ ಕೊಟ್ಟಂಥ ತೀರ್ಮಾನಕ್ಕೆ ಡಿವಿಜನ್ ಪಿಟಿಶನ್‌ಗೆ ಅಪೀಲ್ ಹಾಕಿದ್ದೀರಿ. ಎಲೆಕ್ಷನ್ ಜವಾಬ್ದಾರಿ ಸಹ ಡೆಪ್ಯುಟಿ ಕಮಿಷನರ್‌ಗೆ ಇದೆ. ಸೊರಬದಲ್ಲಿ ಮಂಡಲ ಪ್ರಧಾನರ ಚುನಾವಣೆ ಆಯಿತು. ಜಿಲ್ಲಾಧಿಕಾರಿಗಳ ಅಧಿಕಾರ ಎಷ್ಟರ ಮಟ್ಟಿಗೆ ಮೊಟಕು ಆಗುತ್ತದೆಂಬುದಕ್ಕೆ ಇದು ಸೀಮಿತ ವಿಚಾರ. ಸೊರಬದಲ್ಲಿ ಮಂಡಲ ಪ್ರಧಾನರ ಚುನಾವಣೆ ೨೪ನೇ ತಾರೀಖಿಗೆ ಆಯಿತು. ಕಾಂಗ್ರೆಸ್ಸಿಗೆ ೭ ಬಂದಿವೆ, ವಿರೋಧಪಕ್ಷಕ್ಕೆ ೭ ಬಂದಿದೆ. ಜಿಲ್ಲಾ ಪರಿಷತ್ತಿನಲ್ಲಿ ನಾಮಕರಣ ಮಾಡುವುದಕ್ಕೆ ಅಧಿಕಾರ ಇದೆ. ನಾನು ಒಬ್ಬ ಜಿಲ್ಲಾ ಪರಿಷತ್ ಸದಸ್ಯ, ಜವಾಬ್ದಾರಿ ಸದಸ್ಯ. ಚುನಾವಣೆಗೆ ಮೊದಲು ೨೨ಕ್ಕೆ ಇದ್ದುದನ್ನು ಮುಂದಕ್ಕೆ ಹಾಕಬೇಕು ಎಂದು ಪ್ರಯತ್ನ ನಡೆಯಿತು.

೩–೧೫ ಪಿ. ಎಂ.

ಅದು ಹೇಗೋ ಅದಕ್ಕೆ ಜಿಲ್ಲಾಧಿಕಾರಿಗಳು ಬಗ್ಗಲಿಲ್ಲವೆಂದು ಕಾಣುತ್ತದೆ. ಅಂತು ೨೨ಕ್ಕೆ ಚುನಾವಣೆ. ನಾವು ೨೦ನೇ ತಾರೀಖು ಕುಳಿತು. ಮಾನ್ಯ ಕಾಗೋಡು ತಿಮ್ಮಪ್ಪನವರೂ ಇದ್ದರು, ಚುನಾವಣೆ ಆಗಬೇಕು, ನಾಮಿನೇಷನ್ ಹಾಕಬೇಕು, ಜಿಲ್ಲಾಪರಿಷತ್ತಿನಿಂದ ಪರವಾನಗಿ ಪಡೆದ ನಾಮನಿರ್ದೇಶನ ಹೊಂದಿರತಕ್ಕ ಸದಸ್ಯರು ಸೊರಬಾಕ್ಕೆ ವೋಟಿಗೆ ಬಂದರು. ಇವರೆಲ್ಲರೂ ವಾಕ್–ಔಟ್ ಮಾಡಿದರು. ನಾವು ಕುಳಿತು ಏನೋ ಒಂದು ತೀರ್ಮಾನ ಮಾಡಿದೆವು. ಈ ಸಭೆಯಲ್ಲಿ ಇದ್ದ ಹಾಗೆಯೇ, ಅದು ಸ್ವಲ್ಪ ವ್ಯವಸ್ಥೆ ದೃಷ್ಟಿಯಿಂದ. ಶಾಸನ ಬದ್ಧವಾದ ಈ ಶಾಸನ ಸಭೆ, ಶಾಸನದ ಮೂಲಕ ಕೊಟ್ಟಂಥ ಅಧಿಕಾರವನ್ನು ಜಿಲ್ಲಾ ಪರಿಷತ್ತು ಮಾಡುತ್ತದೆ. ಆದರೆ ತತಕ್ಷಣ ಈ ಬಗ್ಗೆ ಜಿಲ್ಲಾಧಿಕಾರಿಗಳು ಮಾಡಿದ ಕೆಲಸ ಎಂದರೆ, ಸೊರಬ ಮಂಡಲಕ್ಕೆ ಎರಡು ಜನ ನಾಮನಿರ್ದೇಶನ ಹೊಂದಿದ ಸದಸ್ಯರು ಇದ್ದಾರೆ, ಅವರಿಗೂ ಮತದಾನದ ಹಕ್ಕು ಕೊಡಿ ಎಂದು. ಈ ಸರ್ಕಾರದಲ್ಲಿ ಈ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಇಲ್ಲ. ಜೂನ್ ೬ನೇ ತಾರೀಖಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ

ಬರೆದಿರುವ ಸ್ವಲ್ಪ ಭಾಗವನ್ನು ಇಲ್ಲಿ ಉಲ್ಲೇಖಿ ಮಾಡುತ್ತೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಆಗಿರತಕ್ಕಂಥ, ಅದರಲ್ಲೂ ಸೊರಬದಲ್ಲಿ ಆಗಿರತಕ್ಕಂತಾದ್ದನ್ನು ಬಹಳ ಬರೆದಿರುತ್ತಾರೆ. ಕೊನೆಗೆ ಒಂದು ಮಾತು ಹೇಳುತ್ತಾರೆ. ಜಿಲ್ಲಾಧಿಕಾರಿಗಳು ಅಬ್ಸೆಂಟ್ ಎಂದು. ಆ ದಿವಸ ನಾನು ಜಿಲ್ಲಾಧಿಕಾರಿಗಳ ಜೊತೆ ಒಂದು ಗಂಟೆ ಕಾಲ ಕುಳಿತು ಮಾತನಾಡಿದ್ದೇನೆ. ಶಿವಮೊಗ್ಗದಲ್ಲಿ ಜಿಲ್ಲಾ ಪರಿಷತ್ ಸಭೆ ಮುಗಿದು, ನಾಮಿನೇಷನ್ ಹಾಕಿದ ಮೇಲೆ ಒಂದು ಗಂಟೆ ಕುಳಿತು ಚರ್ಚೆ ಮಾಡಿದ್ದೇವೆ. ಆ ಮೇಲೆ ನಾನು ರಾತ್ರಿ ವಾಪಸ ಬಂದೆ, ನಾಮಿನೇಷನ್ ಹೋಗಿದೆ, ಕಾಂಗ್ರೆಸ್ 2 ಮಂತನ್ನು ವಿರೋಧಪಕ್ಷದವರು 2 ಪ್ಲಸ್ 2 ಒಟ್ಟು 4 ಆಯಿತು. ಏನೂ ತೊಂದರೆ ಇಲ್ಲ. I am quoting the Indian Express June 6 th, which reads thus.

> " DC s Absence–mysteriously the Deputy Commissioner was absent from District Headquarters "
> The Deputy Commissioner signed the nomination list only on May, 25th after the elections. Regarding his absence on May 23rd, the DC......''

ಶ್ರೀ ಬಿ. ಸ್ವಾಮಿರಾವ್.—ಹೊಸನಗರದಲ್ಲಿ ಚುನಾವಣೆ ಆಗಿದೆ, ಕುಂಶಿಯಲ್ಲೂ ಚುನಾವಣೆ ಆಗಿದೆ, ಸೊರಬಾದಲ್ಲೂ ಚುನಾವಣೆಯಾಗಿದೆ. ಇದರಲ್ಲಿ ವಿಶೇಷ ಏನೂ ಕಾಣುವುದಿಲ್ಲವಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮಗೆ ವಿಶೇಷ ಕಾಣುವುದಿಲ್ಲ, ನನಗೆ ತಿಳಿದಿದ್ದುದನ್ನು ಹೇಳಬೇಕಲ್ಲ ನಿಮಗೆ ಗೊತ್ತಾಗದೇ ಹೋದರೂ ಪರವಾಯಿಲ್ಲ, ಅವರಿಗೆ ತಿಳಿದರೆ ಸಾಕು...

ಶ್ರೀ ಕಾಗೋಡು ತಿಮ್ಮಪ್ಪ.—ಈ ಸದನಕ್ಕೆ ತಿಳಿಯಲಿ ಅಥವಾ ತಿಳಿಯದೇ ಇರಲಿ, ಅವರಿಗೂ ನಿಮಗೂ ತಿಳಿದರೆ ಸಾಕು...

ಶ್ರೀ ಡಿ. ಬಿ. ಚಂದ್ರೇಗೌಡ.—ಸದನಕ್ಕೂ ತಿಳಿಯುತ್ತದೆ. ಮಾನ್ಯ ಸ್ವಾಮಿರಾವ್‌ಗೂ ಇದು ತಿಳಿಯಬೇಕು. ಆದರೆ, ಇದು ಹೇಳಬಾರದಷ್ಟು ಕಠಿಣವಾದುದು. ಆದ್ದರಿಂದ ಅವರಿಗೆ ಕೇಳುವುದು ಕಷ್ಟ.

> " Regarding his absence an 23rd, the Deputy Commissioner told ENS that he had been invited for a discussion in Bangalore on the issue of granting lands for the proposed Agricultural College. "

ಅಗ್ರಿಕಲ್ಚರಲ್ ಕಾಲೇಜಿಗೆ ಭೂಮಿ ಕೊಡುವುದಕ್ಕಾಗಿ, ಅದರ ಚರ್ಚೆಗಾಗಿ ಬೆಂಗಳೂರಿಗೆ ಬರುವ ಅಗತ್ಯ, ಇಲ್ಲಿ ಶಾಸನ ಬದ್ಧವಾಗಿ. ಜಿಲ್ಲಾ ಪರಿಷತ್ತಿಗೆ ಮಾಡಿದ ನಿರ್ಣಯವನ್ನು ಅಲ್ಲಿಗೆ ತಿಳಿಸಬೇಕಾದ ಅಗತ್ಯ ಇಲ್ಲ, ಇಲ್ಲಿಗೆ ಬರಬೇಕಾಗಿದೆ. ಅದಕ್ಕೆ ಅವರು ಏನು ಹೇಳುತ್ತಾರೆಂದರೆ,

> " For the Proposed Agricultural College here, Mr. Bangarappa had told newsmen here only a fortnight ago that issue was at Correspondence level and no final decision has been taken. "

ಇದನ್ನು ಅವರೇ ಹೇಳಿದ್ದಾರೆ. ಇನ್ನೂ ತೀರ್ಮಾನ ಆಗಿಲ್ಲ, ಇದು ಬಹಳ ಕಾಲ ಹಿಡಿಯುತ್ತದೆ ಎಂದು, ಇದರಲ್ಲಿ ಸ್ವಾಮಿರಾವ್ ಅವರ ಕ್ಷೇತ್ರದ್ದೂ ಸಹ ಇದೆ, ಓದಿ ಎಂದರೆ ಓದುತ್ತೇನೆ. ಬೇಡ ಎಂದರೆ ಬಿಟ್ಟು ಬಿಡೋಣ.

> "The Pradhan election in Kumsi Mandal in Hosanagara constituency, which is represented in the Assembly by Mr. B. Sawmy Rao, a close associate of Mr. Bangarappa, was scheduled for May 24th but it was advanced to May, 22nd." who did it and why ?

೨೪ನೇ ತಾರೀಖು ಇದ್ದಂಥ ಚುನಾವಣೆಯನ್ನು ೨೨ನೇ ತಾರೀಖಿಗೆ ಏತಕ್ಕೆ ಮುಂದೂಡಿದಿರಿ. ಇದಕ್ಕೆ ಕಾರಣ ೨೨ನೇ ತಾರೀಖು ಜಿಲ್ಲಾ ಪರಿಷತ್ತಿನ ಸಭೆ ಇದೆ. ಅಲ್ಲಿ ನಾಮಿನೇಷನ್ಸ್ ಬರುತ್ತವೆ. ನಮ್ಮ ಪಾರ್ಟಿಯ ಮಂಡಲ ಪ್ರಧಾನರು ಬರುವುದಕ್ಕೆ ಆಗುವುದಿಲ್ಲ ಎಂಬುದು. To what extent we can tolerate this interference in Magesterial powers of the Deputy Commissioner is my question. The election was advanced to May 22nd in violation of all rules. It is further quoted here,

> "The Congress candidate won by polling 6 of 11 votes as one of the non-Congress (I) members was absent. Had the election been held as scheduled, the Janata Dal would have gained control of the Mandal with the nominated members voting its favour,"

ನಾನು ಸ್ಯಾಂಪಲ್ಸ್ ಕೊಡುತ್ತಿದ್ದೇನೆ. ಪವರ್ಸ್ ಆಫ್ ದಿ ಡೆಪ್ಯೂಟಿ ಕಮಿಷನರ್ ಎಂದರೆ ಏನು ? ಆ ಕಾಲಕ್ಕೆ ರಾಜ್ಯದ ಮುಖ್ಯಮಂತ್ರಿಗಳು ಹೋಗುವಾಗ ಜಿಲ್ಲಾಧಿಕಾರಿಗಳ ಅಪ್ಪಣೆಯನ್ನು ಪಡೆದೇ ಹೋಗುವ ಕಾಲದಿಂದ ಇದ್ದ ಆಡಳಿತವನ್ನು ಇವತ್ತು ಯಾವ ಸ್ಥಿತಿಗೆ ಇಳಿಸಿದ್ದೀರಿ ಎಂದು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಂಡಲ ಪಂಚಾಯತ್ ಪ್ರಧಾನರ ಚುನಾವಣೆ ಹಿಂದಕ್ಕೆ ಹೋಗಿದೆ. ಒಂದು ವೇಳೆ ಚುನಾವಣೆಯನ್ನು ಪ್ರಿಪೋನ್ ಮಾಡುವುದಕ್ಕೆ ಅಧಿಕಾರ ಇದ್ದರೆ ಜಿಲ್ಲಾಧಿಕಾರಿಗಳು ಆ ಅಧಿಕಾರವನ್ನು ಚಲಾಯಿಸಿದ್ದರೆ ಅದರಲ್ಲಿ ತಾವು ಹೇಗೆ ತಪ್ಪು ಕಂಡು ಹಿಡಿಯುತ್ತೀರಿ ?

ಶ್ರೀ ಡಿ.ಬಿ. ಚಂದ್ರೇಗೌಡ.—ನಾನು ಚರ್ಚೆ ಮಾಡುತ್ತಿರುವುದು ಚುನಾವಣೆ ವಿಚಾರ ಅಲ್ಲ. ಚುನಾವಣೆಯ ಲಾಭ ನಷ್ಟ ಅಲ್ಲ. ಕಂದಾಯ ಇಲಾಖೆಗೆ ಸೇರಿದ ಅಧಿಕಾರಿಗಳ ವಿಷಯ.

ಶ್ರೀ ಕಾಗೋಡು ತಿಮ್ಮಪ್ಪ.—ಅದೇ ನಾನು ಹೇಳಿದ್ದುದು. ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಚುನಾವಣೆಯನ್ನು ಪ್ರಿಪೋನ್ ಮಾಡುವ ಅಧಿಕಾರ ಇದ್ದು, ಅವರು ತಮ್ಮ ಅಧಿಕಾರವನ್ನು ಎಕ್ಸರ್‌ಸೈಸ್ ಮಾಡಿ, ಚುನಾವಣೆಯನ್ನು ಪ್ರಿಪೋನ್ ಮಾಡಿದ್ದರೆ ಅದು ಹೇಗೆ ತಪ್ಪಾಗುತ್ತದೆ. ಅದರಲ್ಲಿ ಯಾವ ತಪ್ಪಿದೆ. If the power is conferred on, a Deputy Commissioner, to prepare the calendar of events...

ಶ್ರೀ ಡಿ.ಬಿ, ಚಂದ್ರೇಗೌಡ.—Under what circumstances ? ತಾವೂ, ವಕೀಲರು. ಯಾವ ಇನ್‌ಸ್ಟನ್ಸ್‌ನಲ್ಲಿ ಪ್ರಿಪೋನ್ ಮಾಡಿದರು ಎಂಬುದನ್ನು ಹೇಳಿರಿ.

ಶ್ರೀ ಸಿ. ಬೈರೇಗೌಡ.—ಚುನಾವಣೆ ಮುಂದೂಡುವುದಕ್ಕೆ ಯಾವ ಕಾರಣವೂ ಇಲ್ಲ. ತಿಮ್ಮಪ್ಪನವರು ಗೊತ್ತಿಲ್ಲದ ಹಾಗೆ ಮಾತನಾಡುತ್ತಿದ್ದಾರೆ ಯಾವ ಕಾರಣವೂ ಇಲ್ಲ. ಪೋಸ್ಟ್ ಪೋನ್‌ಮೆಂಟ್‌ಗಾಗಲೀ, ಪ್ರಿಪೋನ್‌ಮೆಂಟ್‌ಗಾಗಲೀ ಯಾವ ಕಾರಣವೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಪ್ರಿಪೋನ್ ಮಾಡಿ ಎಂದು ಹೇಳಿದರೇ ಹೊರತು. ಕಾನೂನನ್ನು ವಯಲೇಟ್ ಮಾಡಿ ಎಂದು ಹೇಳಲಿಲ್ಲ. ಕಾನೂನು ಪ್ರಕಾರ ಅವರಿಗೆ ಅಧಿಕಾರ ಕೊಟ್ಟಿದ್ದೇವೆ. ಅದರ ಪ್ರಕಾರ ಅವರು ಚಲಾವಣೆ ಮಾಡಿದ್ದುದು ತಪ್ಪು ಎಂದು ಏತಕ್ಕೆ ಭಾವಿಸುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾಡಿದ್ದು ತಪ್ಪು ಎಂದು ನಾನು ಹೇಳಲಿಲ್ಲ. ನೀವು ಅವರ ಕೈಯಲ್ಲಿ ಮಾಡಿಸಿದ್ದಿರಿ ಎಂದು ಹೇಳುತ್ತಿದ್ದೇನೆ. ನನ್ನ ಆಪಾದನೆ ಇಷ್ಟೇ. ಅದು ಶಾಸನ ಬದ್ಧವಾಗಿತ್ತೋ ಇಲ್ಲವೋ ಎಂಬುದನ್ನು ಆ ಮೇಲೆ ವಿಚಾರ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಹೋಗುತ್ತಾ ಹೋಗುತ್ತಾ ಇವರು ನನ್ನ ಮೇಲೆ ಆಪಾದನೆ ಮಾಡುತ್ತಿದ್ದಾರೆ. ನಾನು ಏನೂ ಮಾಡಿಸಲಿಲ್ಲ. ನನ್ನ ಮೇಲೆ ಕಲ್ಲು ಬೀರುತ್ತಿದ್ದಾರೆ. ನನ್ನ ಮೇಲೆ ಕಲ್ಲು ಬೀರಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಿವಮೊಗ್ಗ ಜಿಲ್ಲೆಯಲ್ಲಿ ಕಲ್ಲು ಹೊಡೆಯುವವರು ಜಾಸ್ತಿ ಇದ್ದಾರೆ ಎಂದಾಯಿತು.

ಶ್ರೀ ಬಿ, ಸ್ವಾಮಿರಾವ್.—ಅಧ್ಯಕ್ಷರೆ, ೩೦ನೇ ತಾರೀಖಿನ ಒಳಗೆ ಚುನಾವಣೆ ಆಗಬೇಕೆಂದು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದಾರೆ. ಅವರಿಗೆ ಅಧಿಕಾರ ಬಂದ ಮೇಲೆ ಅವರು ಯಾವುದೇ ದಿನ ಮಾಡಬಹುದು. ನೀವು ಸೋತಿದ್ದೀವೆ ಎಂದು ನೀವು ಈ ರೀತಿ ಹೇಳುವುದಾದರೆ ನಾವು ಹೇಳುತ್ತೇವೆ: ನಾಮಿನೇಷನ್ ಮಾಡುವುದನ್ನು ಅಷ್ಟೊಂದು ತುರ್ತಾಗಿ ತಾವು ಏತಕ್ಕೆ ಮಾಡಬೇಕಾಗಿತ್ತು ? ಜಿಲ್ಲಾ ಪರಿಷತ್ತಿನ ಸಭೆಯನ್ನು ೨೨ನೇ ತಾರೀಖೇ ಏತಕ್ಕೆ ಇಟ್ಟುಕೊಂಡಿದ್ದೀರಿ. ನೀವು ರಾಜಕೀಯ ಉದ್ದೇಶ ದಿಂದ ಮಾಡಿದ್ದರೆ, ನಾವು ಅದಷ್ಟು ಮಟ್ಟಿಗೆ ಅದೇ ಉದ್ದೇಶದಿಂದ ಮಾಡಬೇಕಾಗುತ್ತದೆ. ಈಗ ನಮ್ಮ ಸರ್ಕಾರ ಇದೆ ಎಂಬುದು ತಮ್ಮ ಗಮನಕ್ಕೆ ಬರಬೇಕು.

SRI D.B. CHANDRE GOWDA.—Now the cat is out of the bag. ೩೦ನೇ ತಾರೀಖಿನ ಒಳಗೆ ಚುನಾವಣೆ ಮಾಡಬೇಕಾಗಿತ್ತು. ನಿಜ. ಆದರೆ ಹೆಣ್ಣುಮಕ್ಕಳು ಹುಟ್ಟಿದ ಕೂಡಲೇ ಮದುವೆ ಮಾಡಬೇಕೆಂದಿಲ್ಲವಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಇಷ್ಟು. ಆ ಕಡೆಯವ ರಾಗಲೀ, ಈ ಕಡೆಯವರಾಗಲೀ, ಉದ್ವೇಗದಿಂದ ಮಾತನಾಡಿ ಏನಾದರೂ ಹೇಳಿ, ಸರಕಾರವನ್ನು ಪೇಚಿಗೆ ಸಿಕ್ಕಿಸುವ ಪ್ರಯತ್ನ ಮಾಡಬಾರದು ನಾನು ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ, ಅವರು ಅವರ ಅಭಿಪ್ರಾಯ ಹೇಳುತ್ತಿದ್ದಾರೆ. ತಪ್ಪು ಏನಾದರೂ ಇದ್ದರೆ ಅದು ಎಲೆಕ್ಷನ್ ಪರಿಣಾಮದ ಮೇಲೆ ಅಲ್ಲ ಎಲೆಕ್ಷನ್ ಪರಿಣಾಮ ಹೇಗೆ ಇದ್ದರೂ ರೆವಿನ್ಯೂ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳು ಹೇಗೆ ನಡೆಯುತ್ತಿದ್ದಾರೆ ಎಂಬುದರ ಬಗ್ಗೆ ಹೇಳುತ್ತಿದ್ದಾರೆ. ಇದಕ್ಕೆ ನಾನು ಉತ್ತರ ಕೊಡುತ್ತೇನೆ. ನನ್ನ ಉತ್ತರ ಸರಿ ಕಾಣದಿದ್ದರೆ ನನ್ನನ್ನು ಪಾರ್ಟಿ ಮೀಟಿಂಗ್‌ನಲ್ಲಿ ಬೇಕಾದರೆ ತರಾಟೆಗೆ ತೆಗೆದುಕೊಳ್ಳಿ. ಆದರೆ ಅವರು ಹೇಳುವಾಗ ನಡುವೆ ನಡುವೆ ನೀವು ಏನಾದರೂ ಹೇಳಿದರೆ ಅದು ಸರಕಾರವನ್ನು ಪೇಚಿಗೆ ಸಿಕ್ಕಿಸಿದ ಹಾಗೆ ಆಗುತ್ತದೆ. ಆದ್ದರಿಂದ ತಾವು ದಯವಿಟ್ಟು ಆ ರೀತಿ ಮಾಡಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ.—೩೦ನೇ ತಾರೀಖಿನ ಒಳಗಡೆ ಚುನಾವಣೆ ಆಗಬೇಕಾಗಿತ್ತು ಎಂದು ಸ್ವಾಮಿರಾವ್ ಅವರು ಹೇಳಿದರು. ನಮಗೂ ಗೊತ್ತು. ಹೆಣ್ಣು ಮಕ್ಕಳು ವಯಸ್ಸಿಗೆ ಬಂದ ಕೂಡಲೇ ಮದುವೆ ಮಾಡಬೇಕು ಎಂದು, ಆದರೆ ಕನಿಷ್ಟ ೧೮ ವರ್ಷಗಳು ಆದರೂ ದಾಟಬೇಕಲ್ಲ. ಅದಕೆ ಶಾಸನ ಇದೆ. ಗಂಡು ಮಕ್ಕಳಿಗೆ ಮೀಸೆ ಬಂದ ತಕ್ಷಣ ಮದುವೆ ಮಾಡುವುದಕ್ಕೆ ಆಗುವುದಿಲ್ಲ. ೨೧ ವರ್ಷ ದಾಟಬೇಕು. ಅಲ್ಲಿಯವರೆಗೂ ಕಾಯಬೇಕಾಗುತ್ತದೆ. ಇಲ್ಲಿ ಎಲ್ಲಾ ಫಾರ್ಮಾಲಿಟೀಸ್ ಮಾಡಿದ್ದಾರೆ. ಇದು ಒಂದು ಸುಮ್ಮನೆ ಸ್ಯಾಂಪಲ್ ಕೊಟ್ಟಿದ್ದೇನೆ. ಇನ್ನು ಅನೇಕ ವ್ಯವಹಾರ ಗಳನ್ನು ಇಲ್ಲಿ ಕೊಡಬೇಕಾದರೆ ಕೊಡಬಹುದು ಅದಕ್ಕೆ ನಾನು ಹೋಗುವುದಿಲ್ಲ. ನ್ಯಾಯವಾದ ಮತ್ತು ಗೌರವ ಸ್ಥಾನದಲ್ಲಿರುವ ಅಧಿಕಾರಿಯ ಮೇಲೆ ನಾವು ಎಷ್ಟರ ಮಟ್ಟಿಗೆ ಹಲ್ಲೆ ಮಾಡಿದ್ದೇವೆ. ಇದನ್ನು ನನ್ನನ್ನೂ ಸೇರಿಸಿಕೊಂಡು ಹೇಳುತ್ತಿದ್ದೇನೆ. ಹೀಗಾದರೆ, ಅವರಿಗೆ ಗೌರವ ಸ್ಥಾನ ಹೇಗೆ ಬರುತ್ತದೆ. ಅವರು ಹಿಡಿದಿದ್ದ ನಾಲ್ಕು ಸಾವಿರ ಕ್ವಿಂಟಾಲ್ಸ್ ಆಹಾರವನ್ನು ಬಿಟ್ಟು ಬಿಡಿ ಎಂದು ಇಲ್ಲಿಂದ ಆದೇಶ ಕೊಟ್ಟರೆ ಆ ಜಿಲ್ಲೆಯಲ್ಲಿ ಅವರಿಗೆ ಗೌರವ ಎಲ್ಲಿ ಬರುತ್ತದೆ. ಇದರ ರಕ್ಷಣೆ ಜವಾಬ್ದಾರಿ ಯಾರು ಹೊರಬೇಕು ? ಇಲ್ಲದಿದ್ದರೆ ನಿಮಗೆ ಅಧಿಕಾರ ಇಲ್ಲ, ನಾವು ಹೇಳಿದಂತೆ ಕೇಳಿ ಎಂದು ನಿಯಮ ಮಾಡಿಬಿಡಿ. even including the magisterial powers, to what extent we have stopped down. ಇಲ್ಲಿ ಅದನ್ನು ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿಂದ ಆಚೆಗೆ ಡಿವಿಜನಲ್ ಕಮಿಷನರ್ಸ್ ಇದ್ದಾರೆ. ತಾವು ತುಂಬಾ ಅನುಭವವುಳ್ಳವರು. ತಾವು ತಮ್ಮ administrative exigencies- ಗಮದಲ್ಲಿಟ್ಟುಕೊಂಡು ಹೇಗೆ ತೀರ್ಮಾನ ಮಾಡುತ್ತೀರೋ ಮಾಡಿ. ಆದರೆ ನನ್ನ ಮನಸ್ಸಿಗೆ ಅನಿಸಿದ್ದು ಏನೆಂದರೆ ಡಿವಿಜನಲ್ ಕಮಿಷನರ್ ಕಛೇರಿ ಏನಿದೆ ಮೈಸೂರಿನಲ್ಲಿ, ಗುಲ್ಬರ್ಗದಲ್ಲಿ ಅಥವಾ ಬೆಳಗಾಂನಲ್ಲಿ ಈ ೩-೪ ವಿಭಾಗಾಧಿಕಾರಿಗಳು ಏನು ಇದ್ದಾರೆ, ಇವರ ಕಛೇರಿ ಈಗ ಭೂ ಸುಧಾರಣಾ ಮಸೂದೆ ಬಂದ ಮೇಲೆ ಭೂಮಿ ವಿತರಣೆ ಹಾಗೂ ಆ ಬಗ್ಗೆ ಹೆಚ್ಚು ಕೆಲಸ ಏನೂ ಅವರಿಗೆ ಇಲ್ಲ ಮತ್ತು ಕೇಸಸ್ ಸಹ ಇಲ್ಲ ಡಿವಿಜನಲ್ ಕಮಿಷನರ್ ಕಛೇರಿಗೆ ಬರತಕ್ಕಂಥ ಭೂ ವ್ಯವಹಾರಗಳ ಕೇಸಸ್ ಇಲ್ಲ. ಅದು ಒಂದು ರೀತಿ Ornamental Post ಏನೋ, ಒಂದು ರೀತಿ ಬಿಳಿ ಆನೆ ಇದ್ದ ಹಾಗೆ ಎಂದು ನನ್ನ ಮನಸ್ಸಿಗೆ ಬಂದಿದೆ. ಈ ಕಾರಣದಿಂದ ನಾವು ಈ ಕಛೇರಿಯನ್ನು ಇಟ್ಟುಕೊಂಡು ಅವರಿಗೆ ಏನೂ ಕೆಲಸ ಇಲ್ಲದೆ ಅವರು ಯಾವುದೋ ಒಂದು ಕಡೆ ಮಲ ಭೇಟಿ ಮಾಡುವುದೋ ಅಥವಾ ಅಲ್ಲಿ ಇರತಕ್ಕಂಥ ಕಾರ್ಪೊರೇಷನ್‌ಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ವಿಭಾಗಾಧಿಕಾರಿಗಳ ಕಛೇರಿ ಏನು ಇದೆ, ಒಂದು ಕಾಲದಲ್ಲಿ ಇದ್ದಂತಹ ಅವಶ್ಯಕತೆ ಇವತ್ತು ಇಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಈಗಿನ ಆಡಳಿತದಲ್ಲಿ ತಾವು ಸ್ವಲ್ಪಮಟ್ಟಿಗೆ ಸುಧಾರಣೆ ಮಾಡಲು ಯೋಚನೆ ಮಾಡುತ್ತಿದ್ದೀರಿ.

ಆದಷ್ಟೂ ಕಡಿಮೆ ಮಾಡುವುದಕ್ಕೆ ಅಂದರೆ ಮಿತವ್ಯಯ ಮಾಡುವ ಸಲುವಾಗಿ ಇದನ್ನು ಅಬಾಲಿಶ್ ಮಾಡತಕ್ಕಂಥ ಆಲೋಚನೆಯನ್ನು ತಾವು ಮಾಡಬೇಕು, ಅಗತ್ಯ ಇದ್ದರೆ ಇಟ್ಟುಕೊಳ್ಳಿ ನನಗನಿಸಿದ ಮಟ್ಟಿಗೆ ಇದು ಅನಾವಶ್ಯಕ. ಈ ಬಗ್ಗೆ ನಾವು ದೀರ್ಘವಾಗಿ ಚರ್ಚೆ ಬೇಕಾದರೆ ಮಾಡೋಣ. ಇದು ನಮ್ಮ ಆಡಳಿತ ವ್ಯವಸ್ಥೆ. ಅಲ್ಲಿಂದ ಮೇಲೆ ರೆವಿನ್ಯೂ ಕಮಿಷನರ್ ಹುದ್ದೆಗೆ ನಾನು ಬರುವುದಿಲ್ಲ. ರೆವಿನ್ಯೂ ಕಮಿಷನರ್ ವಿಧಾನಸೌಧದಲ್ಲಿ ಇರುತ್ತಾರೆ. ಅವರು ನೇರವಾಗಿ ಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೆ ಅವರ ಟೆಲಿಫೋನ್ ಕೂಗಿಗೆ ಸಿಗುವಂತಹ ಜಾಗದಲ್ಲಿರುತ್ತಾರೆ. ಆದರೆ ಅದೇ ಮಂತ್ರಿಗಳ ಮತ್ತು ಮುಖ್ಯಮಂತ್ರಿಗಳ ಕೂಗಿಗೆ ಸಿಗದೆ ಇರುವಂತಹ ಜಾಗದಲ್ಲಿರುವ ಡೆಪ್ಯುಟಿ ಕಮಿಷನರ್ಸ್ ಅವರಗತಿ ಇದಾದರೆ, ಕೂಗಿಗೆ ಸಿಗುವಷ್ಟು ದೂರದಲ್ಲಿ ಕುಳಿತಿರುವ ರೆವಿನ್ಯೂ ಕಮಿಷನರ್ಸ್ ಸ್ಥಿತಿ ಏನು ಎಂದು ನಾನು ಊಹಿಸಬಲ್ಲೆ ಆದ್ದರಿಂದ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಬಿಟ್ಟುಬಿಡುತ್ತೇನೆ ಒಂದು ಮಾತ್ರ ನಾವೆಲ್ಲ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅಧಿಕಾರ ಇವತ್ತು ಇರುತ್ತದೆ. ನಾಳೆ ಹೋಗುತ್ತದೆ. ಆದರೆ ಆಯಾಯ ವಿಭಾಗ ಮಟ್ಟದಲ್ಲಿ ಇರತಕ್ಕಂಥ ಅಧಿಕಾರಿಗಳು ಏನಿದ್ದಾರೆ ಅವರು ಎಕ್ಸ್ ವೈ ಜಡ, ಅಂತ ಅಲ್ಲ ಅದು ಜಿಲ್ಲಾ ಅಧಿಕಾರಿಗಳ ಕಛೇರಿ ಇರಬಹುದು, ತಹಶೀಲ್ದಾರ್ ಕಛೇರಿ ಇರಬಹುದು, ನಾಡಕಛೇರಿ ಇರಬಹುದು, ಅಥವಾ ಗ್ರಾಮಲೆಕ್ಕಿಗರ ಕಛೇರಿ ಇರಬಹುದು. ವಿಭಾಗ ಮಟ್ಟದ ಕಛೇರಿ ಇರಬಹುದು. ಇವು ಶಾಶ್ವತ ವಾಗಿ ಇರುತ್ತವೆ. ಇಲ್ಲಿ ಕೆಲಸ ಮಾಡುವವರನ್ನು ತೀರಾ ಜನಸಾಮಾನ್ಯರ ಹಿತಕ್ಕೆ ವಿರುದ್ಧವಾಗಿ ಆಳುವ ಪಕ್ಷದ ಕೈ ಗೊಂಬೆಗಳಾಗಿ ಮಾಡಿಕೊಂಡು ಅವರ ಅಂತಸ್ತನ್ನು ಕಳೆದು ಬಿಟ್ಟರೆ ಮುಂದೆ ಈ ಕಛೇರಿಗಳು ಅನುಪಯುಕ್ತವಾಗಬಹುದು. ಇದರ ಪರಿಣಾಮ ಬೇರೆ ರೀತಿ ಆಗಬಹುದೆಂಬ ಮಾತನ್ನು ನಾನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಅದಕ್ಕೆ ಬೇರೆ ಯಾವ ಕಾರಣವೂ ಇಲ್ಲ. ಈಗ ದೇಶದಲ್ಲಿ ಏನಾಗುತ್ತಿದೆ ಎನ್ನುವುದನ್ನು ನಾವೆಲ್ಲ ಯೋಚನೆ ಮಾಡಬೇಕಾಗುತ್ತದೆ. ಇಂದು ಅಸ್ಸಾಂನಲ್ಲಿ ಚಳುವಳಿ ಪಂಜಾಬ್‌ನಲ್ಲಿ ಚಳುವಳಿ ನಡೆಯುತ್ತಿದೆ. ಸ್ವಾತಂತ್ರ್ಯ ಬಂದದ್ದು ಕೇವಲ ಕೆಲವು ರಾಜಕಾರಣಿಗಳಿಗೆ ಮತ್ತು ಕೆಲವು ಅಧಿಕಾರಿಗಳಿಗೆ. ಈ ಅಧಿಕಾರಿಗಳು ಮತ್ತು ರಾಜಕಾರಣಿಗಳು ಸೇರಿ ಈ ದೇಶದ ಒಬ್ಬ ಸಾಮಾನ್ಯ ಪ್ರಜೆಯು, ರೈತರ ಮತ್ತು ಮಧ್ಯಮ ವರ್ಗಗಳ ಹಿತವನ್ನು ಮಾರಾಟ ಮಾಡುತ್ತಿದ್ದಾರೆ. ಆದ್ದರಿಂದ ನಾವು ಈಗ ಏನು ಮಾಡಬೇಕೆಂದರೆ ನಾವು ಸಂಘಟಿತರಾಗಬೇಕು. ನಮ್ಮದೇ ಒಂದು ಗುಂಪು ಕಟ್ಟಬೇಕು. ಇಂತಹ ಪ್ರಚೋದನೆಗೆ ಇವರು ಕಾರಣವಾಗಿದ್ದಾರೆ. ಈ ಪ್ರಚೋದನೆಗೆ ಕಾರಣವಾಗಿ ಬಹುಶಃ ಅಸ್ಸಾಂನ ಯುವಕರು ಎಷ್ಟು ದೂರ ಹೋಗಿದ್ದಾರೆಂದರೆ ಅಸ್ಸಾಂನಲ್ಲಿ ಯುವಕರ ಸಂಘಟನೆ ಮಾಡಿಕೊಂಡು ಏನು ಹೇಳುತ್ತಾರೆಂದರೆ ಹೆಣ್ಣು ಮಕ್ಕಳಿಗೆ ಟೀಚ್ ಮಾಡಬಾರದು ಎಂದು ಹೇಳಿದರೆ ಅವರು ಆ ಮಾತು ಕೇಳುತ್ತಾರೆ. ಆದರೆ ಅವರ ಅಂತಿಮ ಗುರಿ ಬೇರೆ ಇದೆ. ಆ ಸ್ಥಿತಿಗೆ ನಾವು ಹೋಗುತ್ತಿರುವಾಗ ನಾವು ಸ್ವಲ್ಪ ಮಟ್ಟಿಗೆ ಈ ವ್ಯವಸ್ಥೆಯಲ್ಲಿ ವಿಶ್ವಾಸ ಇರತಕ್ಕಂಥ ಗೌರವ ಇರತಕ್ಕಂಥ ಸ್ಥಾನಮಾನಗಳನ್ನು ನಿಮ್ಮ ಕಾಲದಲ್ಲಿ ಕೊಡಬೇಕು, ನಿಮ್ಮ ಕಾಲದಲ್ಲಿ ನಿಮ್ಮ ಅನುಭವದ ಆಧಾರದ ಮೇಲೆ ಕಡಿದಾಳ್ ಮಂಜಪ್ಪನವರಿಂದ ಹಿಡಿದು ಕೆ. ಎಚ್ ಪಾಟೀಲ್‌ರವರ ಕಾಲದವರೆವಿಗೂ ಏನಾದರೂ ಪ್ರಯತ್ನ ಮಾಡಿ ಅಧಿಕಾರದಲ್ಲಿ ಹಸ್ತ ಕ್ಷೇಪ ಮಾಡದಂತೆ ರಕ್ಷಣೆ ಮಾಡಬೇಕು. ಆಡಳಿತಾತ್ಮಕವಾದ ವ್ಯವಸ್ಥೆಗೆ ಇದು ನನ್ನ ಒಂದು ಸ್ಥೂಲವಾದ ಅಭಿಪ್ರಾಯ

ಇನ್ನು ಮುಖ್ಯವಾಗಿ ಇಲಾಖೆಗಳ ಕಾರ್ಯವೈಖರಿ ಬಗ್ಗೆ ಹೇಳುವುದಾದರೆ, ತಹಶೀಲ್ದಾರ್ ಕಛೇರಿಯಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಯಾವ ರೀತಿ ಹಿಂದೆ ಗ್ರಾಮೀಣ ಜನತೆಗೆ ಗೌರವವಾದ ಜಾಗವಾಗಿತ್ತೋ ಆ ಕಛೇರಿಗಳಲ್ಲಿ ಆಗತಕ್ಕಂಥ ದುರ್ವ್ಯವಹಾರಗಳು ನಿತ್ಯ ಜೀವನದಲ್ಲಿ ನಡೆಯುತ್ತಿವೆ. ತಮ್ಮನ್ನು ಇವತ್ತು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ರಿಜಿಸ್ಟ್ರೇಷನ್ ಕಛೇರಿಯೊಳಗೆ ದಸ್ತಾವೇಜು ರಿಜಿಸ್ಟರ್ ಆದರೆ ಅಲ್ಲಿಂದ ಮ್ಯುಟೇಷನ್‌ಗೆ ಹೋದರೆ, ಖಾತೆ ಬದಲಾವಣೆ ಆಗುವುದಕ್ಕೆ ಸಮಯ ಏನಾದರೂ ನಿಗದಿ ಮಾಡಿದ್ದೀರಾ? ರಿಜಿಸ್ಟ್ರೇಷನ್‌ಗೆ ಹೋದಾಗ ಸಬ್‌ರಿಜಿಸ್ಟ್ರಾರ್‌ಗೆ ಸಲ್ಲತಕ್ಕಂಥ ಶೇಕಡಾವಾರು ಪ್ರಮಾಣ ಎಷ್ಟು? ಎಲ್ಲಾ ನಿಗದಿಯಾಗಿದೆ ಸ್ವಾಮಿ. ಮೊದಲು ಕದ್ದೋ ಕಾಣದೆಯೋ ತೆಗೆದುಕೊಳ್ಳುತ್ತಿದ್ದರು. ಈಗ ನಿಗದಿಯಾದ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತಾರೆ. ಬೆಂಗಳೂರು ಉತ್ತರ ಮತ್ತು ದಕ್ಷಿಣದ ಸಬ್‌ರಿಜಿಸ್ಟ್ರಾರ್‌ಗಳ ಕಛೇರಿಗೆ ವರ್ಗಾವಣೆ ಮಾಡಿಸಿಕೊಳ್ಳುವುದಕ್ಕೆ ನಾವು ನೀವು ಜೀವಮಾನದಲ್ಲಿ ಸಂಪಾದನೆ ಮಾಡದಷ್ಟು ಹಣವನ್ನು ಅವರು ಕೊಡುವುದಕ್ಕೆ ಸಿದ್ಧರಿರುತ್ತಾರೆ, ಅಲ್ಲಿ ನಿತ್ಯ ವ್ಯವಹಾರ ಎಷ್ಟಾಗಬಹುದೆಂದು ನೀವೇ ಊಹೆ ಮಾಡಿಕೊಳ್ಳಿ. ಇದೇ ರೀತಿ ಅಬಾಧಿತವಾಗಿ ಬಿಟ್ಟು ಬಿಡುವುದೆ? ಹೌಸಿಂಗ್ ಸೊಸೈಟಿ ರಿಜಿಸ್ಟ್ರೇಷನ್ ಕೇಳಿದರೂ ಮಾಡುತ್ತಾರೆ. ರೆವಿನ್ಯೂ ಜಾಗವನ್ನು ರಿಜಿಸ್ಟ್ರೇಷನ್ ಕೇಳಿದರೂ ಮಾಡುತ್ತಾರೆ. ಸಬ್ ರಿಜಿಸ್ಟ್ರಾರ್‌ಗಳಿಗೆ

ಮಾಡುವುದಕ್ಕೆ ಇಚ್ಛೆ ಇಲ್ಲದಿದ್ದರೆ ನಿಮಗೆ ೧೨ ಸಾವಿರಕ್ಕಿಂತ ಹೆಚ್ಚು ವರಮಾನ ಇದೆ ಎಂದು ಕೊಕ್ಕೆ ಹಾಕುತ್ತಾನೆ. ಭೂ ಶಾಸನ ಕಾನೂನಿನ ಒಳಗೆ ಸೇರಿದೆಯೆಂದು ಮತ್ತೊಂದು ಕೊಕ್ಕೆ ಸ್ಟ್ಯಾಂಪ್ ಡ್ಯೂಟಿ ಕಡಿಮೆಯಾಗಿದೆಯೆಂದು ಮತ್ತೊಂದು ಕೊಕ್ಕೆ ಹಾಕುತ್ತಾನೆ. ಈ ರೀತಿ ಸಬ್ ರಿಜಿಸ್ಟ್ರಾರ್ ಕಛೇರಿಯೊಳಗೆ ದಿನನಿತ್ಯವ್ಯವಹಾರ ನಡೆಯುತ್ತದೆ. ಇಂತಹ ಒಂದು ದುರಂತ ಅಲ್ಲಿ ದಿನನಿತ್ಯ ಏನು ನಡೆಯುತ್ತಿದೆ......

ಶ್ರೀಮತಿ ಮೋಟಮ್ಮ.— ನಾನು ಇದರ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ನಾನೂ ಕೆಲವು ಕಾಲ ಸಬ್‌ರಿಜಿಸ್ಟ್ರಾರ್ ಆಗಿದ್ದೆ. ಸ್ಟ್ಯಾಂಪ್ ಡ್ಯೂಟಿ ಅವರು ಕಡಿಮೆ ಹಾಕುವುದಿಲ್ಲ. ಯಾರು ರಿಜಿಸ್ಟ್ರೇಷನ್‌ಗೆ ಬರುತ್ತಾರೆ, ಅಂದರೆ ೧೦ ಲಕ್ಷ ರೂಪಾಯಿ ಮೌಲ್ಯದ ಆಸ್ತಿ ಇದ್ದರೆ ೫ ಲಕ್ಷ ರೂಪಾಯಿಗೆ ಮಾಡಿಕೊಡಿ ಎಂದು ಈ ಜನರುಗಳೇ ಇನ್‌ಡೈರೆಕ್ಟ್ ಆಗಿ ಅವರಿಗೆ ಎನ್‌ಕರೇಜ್ ಮಾಡುತ್ತಾರೆ ಎಂಬುದು ನನ್ನ ಅಭಿಪ್ರಾಯ.

ಶ್ರೀ ಕರಿಯಣ್ಣ.—ಶ್ರೀಮತಿ ಮೋಟಮ್ಮನವರಿಗೆ ಇದರ ಬಗ್ಗೆ ಚೆನ್ನಾಗಿ ಅನುಭವ ಇರಬಹುದು.

ಶ್ರೀಮತಿ ಮೋಟಮ್ಮ.— ನಾನು ಆ ಮಟ್ಟಕ್ಕೆ ಬಂದಿರಲಿಲ್ಲ. ನಾನು ಪ್ರೊಬೇಷನರಿಯಲ್ಲಿ ಇರುವಾಗಲೇ ಕೆಲಸ ಬಿಟ್ಟುಬಿಟ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ.— ನೀವು ಆ ಸ್ಥಿತಿಗೆ ತಲುಪುವುದಕ್ಕಿಂತ ಮುಂಚೆ ರಾಜಕಾರಣಕ್ಕೆ ಬಂದಿರೆಂದು ಕಾಣುತ್ತದೆ. ನೀವು ಆ ಕಛೇರಿ ಬಿಟ್ಟು ರಾಜಕಾರಣಕ್ಕೆ ಬನ್ನಿ ಎಂದು ನಾನೇ ನಿಮ್ಮನ್ನು ಕರೆದಿದ್ದುದು. ಆಗ ನೀವು ಕಛೇರಿ ಕೆಲಸ ಬಿಟ್ಟು ಬರುವುದಕ್ಕೆ ಕಣ್ಣೀರು ಹಾಕಿದಿರಿ.

ಶ್ರೀಮತಿ ಮೋಟಮ್ಮ.— ಅದೆಲ್ಲಾ ಸುಳ್ಳು ನಾನು ರಾಜಕಾರಣಕ್ಕೆ ಬರುವುದಿಲ್ಲವೆಂದು ಕಣ್ಣೀರು ಹಾಕಿದ್ದೆನೆ ಹೊರತು ಕೆಲಸ ಬಿಡುವುದಕ್ಕಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.— ರಾಜಕಾರಣಕ್ಕೆ ಬನ್ನಿ ಎಂದು ನಿಮ್ಮನು ಕರೆದಿದ್ದು ಉಂಟು. ಆಗ ನೀವು ಈ ಸ್ಥಿತಿಗೆ ಮುಟ್ಟುವುದಕ್ಕಿಂತ ಮುಂಚೆ ಕಛೇರಿ ಬಿಟ್ಟದ್ದರಿಂದ ಈಗ ಏನಾಗಿದ್ದೀರೊ ಗೊತ್ತಿಲ್ಲ. ಈಗ ನೀವು ಜವಾಬ್ದಾರಿ ಶಾಸಕರಾಗಿದ್ದೀರಿ. ಈಗ ಬೆಂಗಳೂರಿನ ಸಬ್‌ರಿಜಿಸ್ಟ್ರಾರ್ ಕಛೇರಿಗಳಿಗೆ ಹೋಗಿ ಒಂದೆರಡು ದಿನ ಕುಳಿತು ನೋಡಿ. ಆಗ ನಿಮ್ಮ ಹಳೆಯ ಅನುಭವ ನೆನಪು ಏನಾದರು ಬರುತ್ತದೋ ನೋಡಿ.

ಶ್ರೀ ಸಿ.ಎಂ. ಲಿಂಗಪ್ಪ.— ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕಿನ ಸಬ್ ರಿಜಿಸ್ಟ್ರಾರ್ ಪೋಸ್ಟ್‌ಗೆ ವರ್ಗ ಮಾಡಿಸಿಕೊಳ್ಳಲು ಬಹಳ ದುಡ್ಡು ಕೊಡುತ್ತಾರೆಂದು ತಾವು ಹೇಳಿದಿರಿ. ಅವರ ದಿನನಿತ್ಯದ ಆದಾಯದ ಬಗ್ಗೆ ತಮಗೆ ಗೊತ್ತಿದ್ದರೆ ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ.— ಅವರ ಆದಾಯ ನನಗೆ ನಿಖರವಾಗಿ ಇಷ್ಟೇ ಎಂದು ಗೊತ್ತಿದ್ದರೆ ನಾನು ಈ ಪ್ರಶ್ನೆಯನ್ನು ಸದನಕ್ಕೆ ಏಕೆ ಹಾಕುತ್ತಿದ್ದೆ. ನನಗೂ ಏನಾದರೂ ಸಿಗುತ್ತದೆಯೇನೋ ಎಂದು ನೋಡುತ್ತಿದ್ದೆ. ನಿಖರವಾಗಿ ನನಗೆ ಗೊತ್ತಿಲ್ಲ. ಈ ಸ್ಥಿತಿಗೆ ನಾವು ಹೋಗಿದ್ದೇವೆ. ಇದಕ್ಕೆ ಪರಿಹಾರ ಮಾಡುವುದು ಹೇಗೆ? ಇದಕ್ಕೆ ಸರ್ಕಾರದವರು ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ರಿಜಿಸ್ಟ್ರೇಷನ್ ಆದ ಮೇಲೆ, ಮ್ಯುಟೇಷನ್‌ಗೆ ಹೋಗಿ ಖಾತೆ ಬದಲಾವಣೆಯಾಗುವುದಕ್ಕೆ ಏನಾದರೂ ಕಾಲ ನಿಗದಿ ಮಾಡಿದ್ದೀರೋ? ನಿಗದಿಯಾದ ಕಾಲದೊಳಗೆ ಸಂಬಂಧಪಟ್ಟ ಅಧಿಕಾರಿ ಅದನ್ನು ಮಾಡದೇ ಇದ್ದರೆ ಅವನ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಕೆಲಸ ಆಗದೇ ಇದ್ದರೆ ಅಪೀಲ್ ಮಾಡುವುದಕ್ಕೆ ಅಪಲೇಟ್ ಅಥಾರಿಟಿ ಇದೆ. ಡಿಸ್ಟ್ರಿಕ್ಟ್ ಆಫೀಸರ್ ಇದ್ದಾರೆ. ಇದುವರೆಗೂ ಯಾವ ಅಪೀಲು ಅವರ ಹತ್ತಿರ ಬಂದಿಲ್ಲ. ಎಲ್ಲಾ ಕೆಳಗಡೆಯೇ ಸೆಟಲ್ ಆಗುತ್ತದೆ. ಇದು ಪ್ರತಿ ತಾಲ್ಲೂಕು ಮತ್ತು ಪ್ರತಿ ಜಿಲ್ಲೆಯಲ್ಲೂ ನಡೆಯುತ್ತಿದೆ. ಸ್ಟ್ಯಾಂಪ್ ಡ್ಯೂಟಿ ಕಡಿಮೆ ಮಾಡಿಸಿಕೊಳ್ಳುವುದಕ್ಕೆ ಜನರೇ ಹಣವನ್ನು ಕೊಡುವುದಕ್ಕೆ ಹೋಗುತ್ತಾರೆಂದು ಶ್ರೀಮತಿ ಮೋಟಮ್ಮನವರು ಹೇಳಿದರು. ನಾನು ಹೇಳುತ್ತೇನೆ, ಇಂತಿಷ್ಟು ಅವಧಿಯೊಳಗೆ ಇಂಥಿಂಥಾ ಭಾಗದಲ್ಲಿ ಯಾವ ಬೆಲೆಗೆ ಆ ಭೂಮಿ ಖರೀದಿಯಾಗಿದೆ ಅನ್ನತಕ್ಕಂತಾದ್ದು ಲೆಕ್ಕ ಇರುತ್ತದೆ. ಆ ಲೆಕ್ಕದಂತೆ ಮಾಡಬಹುದು.

ಆದರೆ ಕೊಟ್ಟವರಿಗೆ ಎರಡು ರೀತಿಯ ಕಷ್ಟ ಇದೆ. ಇಲ್ಲಿ ಕೊಳ್ಳತಕ್ಕಂಥವರು ಕೂಡ ಪೂರ್ತಿಯಾಗಿ ಹೇಳುವುದಿಲ್ಲ. ಕಪ್ಪು ಹಣದ ಚಲಾವಣೆಯ ವ್ಯವಹಾರ ಇಲ್ಲಿ ನಡೆಯುತ್ತದೆ. ಕಾಫಿ ಪ್ಲಾಂಟೇಶನ್‌ನಲ್ಲಿ ಒಂದು ಲಕ್ಷದ ಆಸ್ತಿ ಇದ್ದರೆ ಅದನ್ನು ೨೫ ಸಾವಿರಕ್ಕೆ ರಿಜಿಸ್ಟ್ರೇಶನ್ ಮಾಡಿಸಿಕೊಳ್ಳುತ್ತಾರೆ. ೭೫ ಸಾವಿರಗಳಿಗೆ ಲೆಕ್ಕ ಬರೆಯುವ ಹಾಗಿಲ್ಲ. ಇವರು ಲೆಕ್ಕ ತೆಗೆದುಕೊಂಡು ರಿಜಿಸ್ಟ್ರೇಶನ್ ಮಾಡುವ ಹಾಗಿಲ್ಲ. ಒಟ್ಟಿನಲ್ಲಿ ನಮ್ಮ ವ್ಯವಸ್ಥೆಯು ಗೊಂದಲವಾಗಿದೆ. ಹೀಗಿರುವಾಗ ಆ ಲೆಕ್ಕವೂ ಸಿಗುವುದಿಲ್ಲ.

ತಾವುಗಳು ಒಂದು ಸರ್‌ಪ್ರೈಸ್ ಚೆಕ್ ಮಾಡುವ ಕ್ರಮ ತೆಗೆದುಕೊಳ್ಳಿ. ಆ ಕಛೇರಿಗಳಲ್ಲಿ ಒಂದು ಪೇಪರ್ ಪೆಂಡಿಂಗ್ ಇದ್ದರೂ ಅದಕ್ಕೆ ಕಾರಣ ಕೇಳಿ. ಅವನು ಕಾರಣ ಬರೆಯದೆ ಇಟ್ಟುಕೊಂಡಿರುತ್ತಾನೆ ಅಂದರೆ ಅದಕ್ಕೆ ಕಾರಣ ಕೇಳಿ. ಒಟ್ಟಿನಲ್ಲಿ ಅವರು ತಪ್ಪಿಸಿಕೊಳ್ಳಲಾರದಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಅಂಥ ಒಂದು ಕಾರ್ಯಕ್ರಮವನ್ನು ತಾವುಗಳು ಹಾಕಿಕೊಂಡು ಎಲ್ಲಿ ರೈತರಿಗೆ ಅನ್ಯಾಯವಾಗುತ್ತದೆ ಅದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ ತಾವುಗಳು ಒಬ್ಬ ಸಮರ್ಥರು ಎನ್ನುವ ಕಾರಣಕ್ಕಾಗಿ ಈ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಬೇರೆ ಯಾರಾದರೂ ತಮ್ಮ ಜಾಗದಲ್ಲಿ ಇರುತ್ತಿದ್ದರೆ ಬಹುಶ: ನಾನು ಈ ಮಾತನ್ನು ಹೇಳುತ್ತಿದ್ದೇನೋ ಇಲ್ಲವೋ ಎಂಬುದು ನಾನು ಹೇಳಲಾರೆ. ತಾವುಗಳು ಈ ಒಂದು ಕೆಲಸವನ್ನು ಮಾಡಬಲ್ಲಿರಿ ಎಂಬುದು ನನಗೆ ಗೊತ್ತು. ಹಿಂದೆ ತಹಶೀಲ್ದಾರ್ ಕಚೇರಿ ಯಾವ ಒಂದು ಗೌರವವನ್ನು ಹೊಂದಿತ್ತೋ ಆ ಗೌರವ ಪುನಃ ಬರಬೇಕಾದರೆ ತಹಶೀಲ್ದಾರರು

ಕೂಡ ಆಯಾಯಾ ಹಂತದಲ್ಲಿ ತಮ್ಮ ಕರ್ತವ್ಯವನ್ನು ಜನಮೆಚ್ಚುವಂತೆ ನಿರ್ವಹಿಸಬೇಕಾಗುತ್ತದೆ. ಒಂದು ಉದಾಹರಣೆ ಹೇಳುತ್ತೇನೆ. ನನ್ನ ತಂದೆಯವರು ಊರಿನ ಪಟೇಲರಾಗಿದ್ದರು. ೧೯೩೯-೪೦ರ ವರ್ಷಗಳಲ್ಲಿ ಬ್ರಿಟಿಷರ ಆಡಳಿತದ ಪ್ರಮುಖ ದಿನಗಳಲ್ಲಿ ಅವರು ಮಾಡಿದ ಕೆಲಸವನ್ನು ಹೇಳುತ್ತಿದ್ದೇನೆ. ಇದನ್ನು ಅವರು ಬರೆದಿಟ್ಟ ರೆಕಾರ್ಡ್‌ನ ಆಧಾರದ ಮೇಲೆ ಹೇಳುತ್ತಿದ್ದೇನೆ. ಆಗಿನ ಅಮಲ್ದಾರರು ಏನಯ್ಯ ಪಟೇಲ? ಎಂದು ಏಕವಚನದಲ್ಲಿ ಕರೆದರು ಎನ್ನುವಂಥ ಕಾರಣಕ್ಕಾಗಿ ಕಂದಾಯದ ವಸೂಲಿಯನ್ನು ತಾವೇ ಮಾಡಿಕೊಳ್ಳಿ ಸ್ವಾಮಿ ಎಂದು ಎದುರು ಮಾತನಾಡಿ ಗೌರವ ತೋರಿಸಿಕೊಂಡಿದ್ದರು. ಆ ಪ್ರದೇಶದಲ್ಲಿ ಮೂರು ತಿಂಗಳ ಕಾಲ ಒಂದು ರೂಪಾಯಿ ಕೂಡ ಕಂದಾಯ ವಸೂಲಿಯಾಗಲಿಲ್ಲ. ಆಗ ಜಿಲ್ಲೆಯ ಜಮಾಬಂದಿ ಎಂದು ಆಗುತ್ತಿತ್ತು. ಆ ಸಂದರ್ಭದಲ್ಲಿ ಈ ವಿಷಯ ಹೇಗೋ ಮೇಲಿನವರಿಗೆ ತಿಳಿಯಿತು. ಆಗ ಏಕವಚನದಲ್ಲಿ ಮಾತನಾಡಿದ್ದುದು ತಪ್ಪಾಯಿತು ಎಂದು ಅಮಲ್ದಾರ ಒಪ್ಪಿಕೊಂಡ ಮೇಲೆ ಮೂರೇ ದಿವಸದಲ್ಲಿ ಪೂರ್ಣ ಕಂದಾಯದ ಜಮಾ ಆಯಿತು. ನಾವುಗಳು ಇಂಥ ಒಂದು ಗೌರವಯುತ ಸಂಸ್ಕೃತಿಯಿಂದ ಬಂದಿದ್ದೇವೆ. ಅಂಥ ಒಂದು ಶ್ರದ್ಧೆ, ವಿಶ್ವಾಸ, ಗೌರವಗಳನ್ನು ಇಟ್ಟುಕೊಂಡು ಪಾಲಿಸಿಕೊಂಡು ಬಂದ ನಾವು ಇವೊತ್ತು ಏನು ಮಾಡುತ್ತಿದ್ದೇವೆ? ಇವೊತ್ತು ಒಬ್ಬ ತಹಶೀಲ್ದಾರ ಎಂದರೆ ಲೆಕ್ಕಕ್ಕೆ ಇಲ್ಲ ಅವನು ಮಧ್ಯಾಹ್ನ ಯಾರ ಮನೆಗೆ ಊಟಕ್ಕೆ ಹೋಗುತ್ತಾನೆ, ಸಾಯಂಕಾಲ ಯಾರ ಮನೆಗೆ ಊಟಕ್ಕೆ ಹೋಗುತ್ತಾನೆ ಎಂದೇ ತಿಳಿಯುತ್ತಿಲ್ಲ. ಇಂಥ ಒಂದು ಸ್ಥಿತಿಯನ್ನು ನಾವೆಲ್ಲರೂ ಕೂಡಿ ತಪ್ಪಿಸುವ ಬಗ್ಗೆ ವಿಚಾರ ಮಾಡಬೇಕು. ಈ ಜವಾಬ್ದಾರಿಯು ಆಳುವ ಸರ್ಕಾರಕ್ಕೆ ಮಾತ್ರ ಎಂದು ನಾನು ಹೇಳುವವನು ಅಲ್ಲ. ಇದು ಎಲ್ಲರ ಜವಾಬ್ದಾರಿಯಾಗಿದೆ. ಎಲ್ಲರೂ ಒಟ್ಟಾಗಿ ಈ ಅಶಿಸ್ತನ್ನು ತಪ್ಪಿಸಿ ಜನರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಪ್ರಯತ್ನ ಮಾಡೋಣ. ಈಗ ಎರಡು ಮೂರು ಶಾಸನಗಳ ಬಗ್ಗೆ ಹೇಳಿದ್ದೀರಿ. ಮುಖ್ಯವಾಗಿ ಇರತಕ್ಕಂಥ ವಿಚಾರ ಅಂದರೆ ಭೂ ಅನುದಾನದ ಬಗ್ಗೆ. ಸರಕಾರಿ ಭೂಮಿಯನ್ನು ಕೆಲವರು ಅನಧಿಕೃತವಾಗಿ ಅನುಭವಿಸುತ್ತಾ ಇದ್ದಾರೆ ಎನ್ನುವುದು ನಮಗೆ, ನಿಮಗೆ ಮತ್ತು ಜಗತ್ತಿಗೆಲ್ಲಾ ಗೊತ್ತಿರುವ ವಿಚಾರ. ಮಾನ್ಯ ಬಸವಲಿಂಗಪ್ಪನವರು ಈಗ ಇಲ್ಲಿ ಉಪಸ್ಥಿತರಿಲ್ಲ. ಅವರ ಪ್ರಕಾರ ಈ ಟೆನೆಂಟ್ಸ್ ಎಲ್ಲರೂ ಎಸ್‌ಸಿ ಎಸ್‌ಟಿಯವರು ಎಂಬುದಾಗಿದೆ. ಹಾಗಿದ್ದರೆ ಅದು ತುಂಬಾ ತಪ್ಪು ಎಂದು ಹೇಳಬೇಕಾಗಿದೆ. ಮತ್ತೊಮ್ಮೆ ನಾನು ಅವರಿಗೆ ಹೇಳಿದ್ದೇನೆ. ಹೀಗೆ ಒತ್ತುವರಿ ಮಾಡಿಕೊಂಡು ಬಹಳ ಕಾಲದಿಂದ ಬಂದವರೂ ಕೃಷಿ ಕಾರ್ಮಿಕರು. ಶಿವರಾಮ ಕಾರಂತರ 'ಚೋಮನದುಡಿ' ಕಾದಂಬರಿಯಲ್ಲಿ ಚೋಮನು ಮಾಲೀಕನಾಗುವುದಕ್ಕೆ ಬಯಸಲಿಲ್ಲ. ಅವನು ಗೇಣಿದಾರನಾಗ ಬಯಸಿದ. ಅಂಥ ಒತ್ತುವರಿ ಮಾಡಿಕೊಂಡವರು ಇಂದೂ ಬಡ ಕೃಷಿ ಕಾರ್ಮಿಕರು, ಮಾಲೀಕರು ಅಲ್ಲ. ೫-೧೦ ಪರ್‌ಸೆಂಟ್‌ನಷ್ಟು ಇಲ್ಲವೇ ಅರ್ಧ ಅಥವಾ ಒಂದು ಎಕರೆ ಭೂಮಿಯನ್ನು ಹೊಂದಿದವರಿರಬಹುದು. ಇನ್ನುಳಿದ ಶೇಕಡಾ ೯೦ರಷ್ಟು ಜನರು ಎಲ್ಲಾ ಒತ್ತುವರಿ ಮಾಡಿಕೊಂಡವರು ಮೇಜರ್ ಗುಂಪಿನವರಿದ್ದಾರೆ. ಹಾಗೆ ಒತ್ತುವರಿ ಮಾಡಿಕೊಂಡಿರುವವರು ಭೂಮಿ ಇದ್ದವರು ಮತ್ತು ಒತ್ತುವರಿ ಮಾಡಿಕೊಂಡಿದ್ದನ್ನು ಅರಗಿಸಿಕೊಳ್ಳುವಂಥ ಶಕ್ತಿ ಸಾಮರ್ಥ್ಯ ಇದ್ದವರು. ಅಂಥವರು ಮಾತ್ರ ಈ ಒತ್ತುವರಿ ಮಾಡಿಕೊಂಡಿದ್ದಾರೆ. ಇದರಲ್ಲಿ ಎರಡು ವರ್ಗ, ಒಂದು ವರ್ಗ ಶಾಸನವನ್ನು ತಿಳಿಯದೇ ಮಾಡಿಕೊಳ್ಳುವವರು. ಇನ್ನೊಂದು ವರ್ಗ ಶಾಸನದ ಬಗ್ಗೆ ತಿಳಿದುಕೊಂಡು ಮಾಡಿದ್ದನ್ನು ದಕ್ಕಿಸಿಕೊಳ್ಳಬಹುದಾದ ಶಕ್ತಿವಂಥರದ್ದು. ಮತ್ತೆ ಅಳತೆಯ ವಿಚಾರದಲ್ಲಿ ನಮ್ಮ ಮಲೆನಾಡಿನಲ್ಲಿ ಕೂಗಳತೆಯ ಪದ್ಧತಿ ಇತ್ತು. ಈ ಗುಡ್ಡದ ಮೇಲೆ ಕುಳಿತುಕೊಂಡು ಕೂಗಿದರೆ ಎಷ್ಟು ದೂರ ಕೇಳುತ್ತದೋ ಅದು ಒಂದು ಅಳತೆ.

ಶಾಸನ ಬದ್ಧವಾದ ಆಳತೆ ಆಗಿದ್ದು ೧೯೨೮ರಲ್ಲಿ. ಅದಾದ ನಂತರ ೬೭-೬೮ರಲ್ಲಿ ಒಂದು ರಿವೆಸರ್ವೆ ಮಾಡಿದರು. ಹೇಳುತ್ತಾ ಹೋದರೆ ಇದಕ್ಕೆ ಲೆಕ್ಕ ಸಿಗುವುದಿಲ್ಲ, ಇಂತಹ ಭೂಮಿ ಬಡವರ ಕೈಲಿ ಎಷ್ಟು ಇರುತ್ತದೆ. ಆ ಭೂಮಿಯಲ್ಲೂ ಎರಡು ಭಾಗ. ಒಂದು ಕಮರ್ಶಿಯಲ್ ಕ್ರಾಪ್ಸ್‌ಗೆ ಬಳಸುವ ಭೂಮಿ, ಅಂದರೆ ಕಾಫಿ, ಏಲಕ್ಕಿ, ತೆಂಗು. ಇಂಥಾದ್ದಕ್ಕೆ ಬಳಸಿದ ಭೂಮಿ ಬೇರೆ ಅಗ್ರಿಕಲ್ಚರಲ್ ಲ್ಯಾಂಡ್ ಅಂದರೆ ಬಡ ರೈತರು ಬಳಸುವುದು. ಅದನ್ನು ಎರಡು ಭಾಗ ಮಾಡಿ ಒಂದು ಶಾಶ್ವತವಾದ ಪರಿಹಾರ ಕೊಟ್ಟರು. ೬೧-೬೨ರ ಸುಮಾರಿನಲ್ಲಿ ಮಲೆನಾಡಿನಲ್ಲಿ ಸಾವಿರಾರು ಎಕರೆ ಭೂಮಿಯನ್ನು ಕಂದಾಯ ಇಲಾಖೆಯಿಂದ ಫಾರೆಸ್ಟ್ ಇಲಾಖೆಗೆ ವರ್ಗಾವಣೆ ಮಾಡಿದರು. ಆದರೆ ಫಾರೆಸ್ಟ್ ಇಲಾಖೆಯಿಂದ ಭೂಮಿ ಕಂದಾಯ ಇಲಾಖೆಗೆ ಬರಲಿಲ್ಲ. ಇವತ್ತು ನಮ್ಮ ಮಲೆನಾಡಿನಲ್ಲಿ ಎಲ್ಲಿ ಹೋದರೂ ಹೆಣ ಸುಡುವುದಕ್ಕೆ ಜಾಗವಿಲ್ಲ. ಶಾಲೆ, ಆಸ್ಪತ್ರೆ ಕಟ್ಟುವುದಕ್ಕೆ ಮನೆ ಕಟ್ಟುವುದಕ್ಕೆ ಒಂದು ಚೂರು ಜಾಗವಿಲ್ಲ. ಎಲ್ಲ ಜಾಗ ಮೈನರ್ ಫಾರೆಸ್ಟ್‌ಗೆ ಸೇರಿದೆ. ಯಾರಪ್ಪ ಕೊಟ್ಟಿದ್ದು. ಈ ಮೈನರ್ ಫಾರೆಸ್ಟನ್ನು? ಬೆಂಗಳೂರಿನಲ್ಲಿ ಕೂತು ಒಂದು ಮ್ಯಾಪ್ ನೋಡಿ ಒಂದು ಸರ್ವೆ ನಂಬರ್ ಹಾಕಿ ಫಾರೆಸ್ಟ್ ಜಮೀನು ಎಂದು ಬರೆದರು. ೭೫-೭೬ರಲ್ಲಿ ಕನ್‌ಕರೆಂಟ್ ಲಿಸ್ಟಿಗೆ ಇದು ಹೋದಮೇಲೆ ಆ ಭೂಮಿ ಮೇಲೆ ಒತ್ತಡ ಹೆಚ್ಚು ಬಿದ್ದು, ಜನಸಂಖ್ಯೆ ಜಾಸ್ತಿ ಆದಮೇಲೆ ಗಡಿನಿರ್ಮಾಣ ಮಾಡುವ ಸಂದರ್ಭದಲ್ಲಿ ಕೆಲವು ರಾಜ್ಯ ಸರ್ಕಾರ ತೆಗೆದುಕೊಂಡಂತಹ ತೀರ್ಮಾನಗಳು ಏನಿವೆ, ದಾಲ್ಮಿಯಾ ಅಂತಹವರಿಗೆ ಮರನೆಟ್ಟುಕೊಂಡು ರೇಯಾನ್ ಬಟ್ಟೆ ತಯಾರು ಮಾಡುವವರಿಗೆ ಕೊಟ್ಟರಲ್ಲ, ಆಗ ಗೊತ್ತಾಯಿತು, ಭೂಮಿ ಯಾರದ್ದು ಅಂತ. ಕೆಲವರು ಸರ್ಕಾರಕ್ಕೆ ಅರ್ಜಿ ಬರೆದರು. ಏನೆಂದರೆ, ೨೫ ವರ್ಷದಿಂದ, ೩೦ ವರ್ಷದಿಂದ ಸಾಗುವಳಿ ನಾವು ಮಾಡುತ್ತಿದ್ದೆವು, ಆದರೆ ನಮಗೆ ಭೂಮಿ ಸಿಗುತ್ತಿಲ್ಲ ಎಂದು, ಆದರೆ ಇವತ್ತು ಅದನ್ನು ಕೊಡುವ ಅಧಿಕಾರ ನಮಗೂ ಇಲ್ಲ ನಿಮಗೂ ಇಲ್ಲ, ಕೇಂದ್ರ ಸರ್ಕಾರಕ್ಕೆ ಹೋಗಬೇಕು. ಏಕೆಂದರೆ ಫಾರೆಸ್ಟ್ ಕನ್‌ಕರೆಂಟ್ ಲಿಸ್ಟ್‌ನಲ್ಲಿದೆ. ಹೀಗಾಗಿ ಉಳುಮೆ ಮಾಡುತ್ತಿರುವ ರೈತನ ಭೂಮಿಯ ಮಾಲೀಕತ್ವ ಕಾನೂನು ಪ್ರಕಾರ ಅವನದಲ್ಲ. ಆದ್ದರಿಂದ ತಾವು ದಯವಿಟ್ಟು ಒಂದು ಜನರಲ್ ಸರ್ವೆ ಮಾಡಿಸಿ ಎಷ್ಟು ಭೂಮಿ ಕಂದಾಯ ಇಲಾಖೆಯವರದ್ದು ಅರಣ್ಯ ಇಲಾಖೆಗೆ ವರ್ಗಾವಣೆಯಾಯಿತು, ಅವರಿಗೆ ಕೊಟ್ಟಿದ್ದಕ್ಕೆ ಪ್ರತಿಫಲವಾಗಿ ಅರಣ್ಯ ಇಲಾಖೆಯಿಂದ ಏತಕ್ಕೆ ಮತ್ತೆ ಕಂದಾಯ ಇಲಾಖೆಗೆ ವರ್ಗಾವಣೆ ಆಗಲಿಲ್ಲ ? ಇದಕ್ಕೆ ಪರಿಹಾರ ಏನು ? ಸ್ವಲ್ಪ ಇಲ್ಲ ಇದು, ನನಗೆ ಒಂದು ಕಾಲಕ್ಕೆ ಲೆಕ್ಕ ಸಿಕ್ಕಿದ್ದು, ಕಾಫಿ ಪ್ಲಾಂಟೇಷನ್ ಮಾಡಿರತಕ್ಕದ್ದೇ ೫೭ ಸಾವಿರ ಎಕರೆಗೆ ಮಿಕ್ಕಿದೆ. ಈ ಭೂಮಿ ಅನುಭವಿಸುತ್ತಿರುವವರಿಗೆ ಮಾಲೀಕತ್ವ ಇಲ್ಲ, ನಿಮಗೆ ಕಂದಾಯ ಬರುವುದಿಲ್ಲ, ಅಗ್ರಿಕಲ್ಚರಲ್ ಇನ್‌ಕಮ್‌ಟ್ಯಾಕ್ಸ್ ಬರುವುದಿಲ್ಲ, ಆದರೂ ನೀವು ಅದನ್ನು ಕನ್‌ಫರ್ಮ್ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಎಚ್ ಯಂಕಾನಾಯಕ್.—ಈಗ ತಮ್ಮ ಸರ್ಕಾರವೇ ಕೇಂದ್ರದಲ್ಲಿದೆಯಲ್ಲ, ಅಲ್ಲಿಂದ ಮಾಡಿಸಿ.

೩-೪೫ ಪಿ.ಎಂ,

ಶ್ರೀ ಡಿ.ಬಿ. ಚಂದ್ರೇಗೌಡ.—ಇದನ್ನು ಒಬ್ಬರು ಮಾಡುವುದಲ್ಲ. ನಾವೂ ನೀವೂ ಕೂಡಿ ಮಾಡಬೇಕಾಗುತ್ತದೆ. ಹಿಂದೆ ಬೊಮ್ಮಾಯಿಯವರ ಅಧ್ಯಕ್ಷತೆಯಲ್ಲಿ ಜಂಟಿ ಸಲಹಾ ಸಮಿತಿ ನೇಮಿಸಿ ಮಾಡಿ, ಆ ಸಮಿತಿಯವರೂ ವರದಿ ಕೊಟ್ಟರು. ಅದರ ಆಧಾರದ ಮೇಲೆ ಈಗ ನೀವು ಒಂದು ನಿರ್ಣಯ ಮಾಡಿ ಅಥವಾ ನಾವು ಕೊಡುವುದಿಲ್ಲ ಎಂದು ಹೇಳಿಬಿಡಿ. ಆದರೆ ಅದನ್ನೂ ಮಾಡುವುದಿಲ್ಲ. ಇದು ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎಂಬಂತೆ ಆಗಿದೆ. ಆ ಕಾರಣದಿಂದ ಇದನ್ನು ಸಾಧ್ಯವಾದಷ್ಟು ಬೇಗ ೬೪ನೇ ಭೂ ಕಂದಾಯದ ಅಧಿನಿಯಮ ೯೪ನೇ ವಿಧಿ ಏನಿದೆ, ಅದಕ್ಕೆ ತಿದ್ದುಪಡಿ ಮಾಡಿ ಅರ್ಹ ರೈತರಿಗೆ ಮಾಲೀಕತ್ವವನ್ನು ಕೊಟ್ಟುಬಿಡಿ. ಯಾವುದನ್ನು ಕೊಡುವುದಕ್ಕೂ ಸಾಧ್ಯ ಇಲ್ಲ, ಅದಕ್ಕೆ ಮಾರುಕಟ್ಟೆ ಬೆಲೆ ಹಾಕಿ ಎಂದು ಹೇಳಿ. ಕೊಂಡುಕೊಳ್ಳುವವರು ಕೊಂಡುಕೊಳ್ಳುತ್ತಾರೆ. ಇಲ್ಲದಿದ್ದರೆ ಬಿಡುತ್ತಾರೆ. ಏನಾದರೂ ಒಂದು ಮಾಡಿ, ಇದನ್ನು ನಿಮ್ಮ ಅವಧಿಯಲ್ಲಿ ಪೂರೈಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಆದರೆ ನಿಮ್ಮ ವರದಿಯಲ್ಲಿ ''೮೯-೯೦ನೇ ವರ್ಷದ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅನುದಾನವನ್ನು ಪಡೆದು ಅನಧಿಕೃತ ಪರಭಾರೆ ಮಾಡಿದ್ದು ೨೦೪೬ ಎಕರೆ ವಿಸ್ತೀರ್ಣವುಳ್ಳದ್ದು'' ಎಂದು ಇದೆ. ಹರಿಜನರಿಗೆ ಕೊಡಬೇಕು, ಗಿರಿಜನರಿಗೆ ಕೊಡಬೇಕು ಎಂದು ಕಳಕಳಿಯಿಂದ ಇಲ್ಲಿ ಮಾತನಾಡುವುದು. ನಾನು ಅವಕ್ಕೇ ಹೇಳಿದೆ, ಏನೆಂದರೆ, ಒತ್ತುವರಿ ಮಾಡಿರುವವರು ಅವರಲ್ಲ, ಗೇಣಿದಾರರು ಅವರಲ್ಲ, ಭೂಮಾಲೀಕರು ಅವರಲ್ಲ, ಪಾಪ ಇವರಿಗೆ ಕೊಡಬೇಕು ಎಂದು ಕೊಟ್ಟರು. ಆದರೆ ಅದನ್ನು ತೆಗೆದುಕೊಂಡವರು ಯಾರು? ಆ ಭೂಮಿ

ಯನ್ನು ತೆಗೆದುಕೊಂಡವರು ಯಾರು? ೧೫ ವರ್ಷ ಪರಭಾರೆ ಮಾಡಬಾರದು, ಆದರೆ ನಾವು ಅದನ್ನು ಪುಸ್ತಕದಲ್ಲಿ ಮಾಡುವುದಿಲ್ಲ. ೨೧೪೨ ಎಕರೆ ಪ್ರದೇಶವು ಆಗಲೇ ಬೇರೆಯವರು ತೆಗೆದುಕೊಂಡು ಅನುಭವಿಸಿ ಬಿಟ್ಟಿದ್ದಾರೆ. ಪಾಪ, ಇವರಿಗೆ ಲೆಕ್ಕ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದ್ದರಿಂದ ಅವರಿಗೆ ಒಂದು ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ಭೂಮಿ ವ್ಯವಸಾಯ ಮಾಡುವುದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ಸಾಧನೆಗಳನ್ನು ಕೊಡದಿದ್ದರೆ, ಈ ಭೂಮಿ ಅವರಿಗೆ ಕೊಟ್ಟಿದ್ದು ಕೂಡಾ ವ್ಯರ್ಥವಾಗುತ್ತದೆ. ನಾನು ಇದನ್ನು ಹೆಚ್ಚು ಲಂಬಿಸುವುದಕ್ಕೆ ಹೋಗುವುದಿಲ್ಲ. ಭೂ ಸುಧಾರಣೆ ಬಹಳ ಮುಖ್ಯವಾದ ಕ್ರಾಂತಿಕಾರಿಯಾದಂಥ ಒಂದು ಮಸೂದೆ. ಈ ಮಸೂದೆಯನ್ನು ಕರ್ನಾಟಕ ರಾಜ್ಯದಲ್ಲಿ ಸಕ್ರಿಯವಾಗಿ ಬಳಸಿದ ಕೀರ್ತಿ ದಿವಂಗತ ದೇವರಾಜಅರಸರಿಗೆ ಸಲ್ಲಬೇಕು. ಶಾಸನವನ್ನು ಈ ಸಭೆಯಲ್ಲಿ ಮಂಡಿಸಿದಂಥ ಕೀರ್ತಿ ಸನ್ಮಾನ್ಯ ಹುಚ್ಚಮಾಸ್ತಿಗೌಡರಿಗೆ ಸಲ್ಲಬೇಕು. ಆದರೆ ಅದು ಬಂದು ಎಷ್ಟು ದಿವಸ ಆಯಿತು? ೧೫ ವರ್ಷಗಳು ಕಳೆದು ಹೋಯಿತು. ೭೪ ರಿಂದ ಇಲ್ಲಿಯವರೆಗೂ ಅಂದರೆ ೧೬ ವರ್ಷಗಳು ಕಳೆಯಿತು, ಏನು ಸ್ಥಿತಿ? ಎಂಥ ತೊಂದರೆಯಲ್ಲಿದ್ದೇವೆ ಎಂದು ಗೊತ್ತಾಗುತ್ತದೆ. ನಿಮಗೆ ಒಂದು ಸ್ಯಾಂಪಲ್‌ನ್ನು ಹೇಳುತ್ತೇನೆ, ನಾನು ದೀರ್ಘವಾಗಿ ಹೋಗುವುದಿಲ್ಲ. ಚನ್ನಪಟ್ಟಣದಲ್ಲಿ ಒಂದು ಡಿಸ್‌ಪ್ಯೂಟ್ ಅನ್ನು ಡಿಕ್ಲರೇಷನ್‌ಗೆ ಹಾಕಿದ್ದಾರೆ. ಭೂ ಶಾಸನದ ಮಸೂದೆ ಬಂದ ತಕ್ಷಣ ಸರ್ವೆ ನಂಬರ್ ೧೫ ಮತ್ತು ೧೦೬ ಮಾಲೂರು ವಿಲೇಜ್, ಚನ್ನಪಟ್ಟಣ. ಇವತ್ತಿನವರೆಗೂ ಕೇಸ್ ಏನಾಯಿತು? ಭೂ ಮಾಲೀಕರಿಗೂ ಪರಿಹಾರ ಸಿಕ್ಕಿಲ್ಲ. ಗೇಣಿದಾರರಿಗೂ ನೀವು ಗೇಣಿದಾರರು ಎಂದು ಡಿಕ್ಲೇರ್ ಮಾಡಲಿಲ್ಲ, ಇದು ಒಂದು ಸ್ಪೆಷಲ್ ಕೇಸ್ ಇದೆ, ಇದನ್ನು ಇನ್‌ವೆಸ್ಟಿಗೇಟ್ ಮಾಡಿಸಿ. On the day the law came into force, in the same year, in the year 1974. ಐದು ಜನ ಟೆನೆಂಟ್ಸ್‌ಗಳು ೧೬ ವರ್ಷಗಳ ಹಿಂದೆ ಅರ್ಜಿ ಹಾಕಿದ್ದಾರೆ. ಆದರೆ ಇದುವರೆಗೂ ಕೇಸ್ ತೀರ್ಮಾನವಾಗಿಲ್ಲ. ಎಷ್ಟು ವರ್ಷ ಬೇಕಾಗಬಹುದು? ಇಲ್ಲಿ ಲೆಕ್ಕ ಕೊಡುತ್ತೀರಿ. I am talking about 89-90. ಗೇಣಿದಾರರ ಅರ್ಜಿಗಳು ೬,೧೫,೭೪೮ ಇರುವುದು, ವಿಲೇವಾರಿಯಾಗಿರುವುದು ೬,೧೫,೧೪೮, ಬಾಕಿ ಉಳಿದಿರುವುದು ೬೦೦ ಕೇಸ್‌ಗಳು. ಇದು ೮೯-೯೦ಕ್ಕೆ. ಮತ್ತೆ ಈಗ ಪ್ರತಿ ತಾಲ್ಲೂಕಿನಲ್ಲಿ ಅದಕ್ಕಾಗಿ ಒಂದು ವಿಶೇಷ ಪ್ರಾಧಿಕಾರ ನೇಮಕ ಆಯಿತು. ಈಗ ಪುನಃ ಟ್ರಿಬ್ಯೂನಲ್‌ನ್ನು ರಚನೆ ಮಾಡತಕ್ಕಂಥ ಆಲೋಚನೆ ಆಯಿತು. ಇನ್ನು ಉಳಿದಿರುವುದು ೬೦೦ ಕೇಸ್ ಎಂದು ಲೆಕ್ಕ ಹೇಳುತ್ತೀರಿ ಆದರೆ ಚರ್ಚೆ ಎಲ್ಲಿಗೆ ಬಂದಿದೆ? ಇದು ಹೊರಟು ಹೋಯಿತು. ೬೦೦ ಕೇಸ್ ಉಳಿದಿದೆಯೋ, ೭೦೦ ಕೇಸ್ ಉಳಿದಿದೆಯೋ ನೋಡೋಣ. ಇಲ್ಲಿ ಹೆಚ್ಚಾಗಿ ಉಳಿದಿರುವುದು ಶಿವಮೊಗ್ಗ ಜಿಲ್ಲೆಯಲ್ಲಿ. ಎಲ್ಲಿ ಕೇಸ್ ಹೆಚ್ಚು ಇದೆಯೋ, ಅಲ್ಲಿ ಇದ್ದ ಕಛೇರಿಯನ್ನು ತೆಗೆಯುತ್ತೀರಿ. ಶಿವಮೊಗ್ಗದಲ್ಲಿ ಇದ್ದ ಕಛೇರಿಯನ್ನು ಸೊರಬಕ್ಕೋ ಸಾಗರಕ್ಕೋ ವರ್ಗಾವಣೆ ಮಾಡುತ್ತೀರಿ, ಸಾಗರದಿಂದ ಶಿವಮೊಗ್ಗಕ್ಕೆ, ಶಿವಮೊಗ್ಗದಿಂದ ಸಾಗರಕ್ಕೋ ಈ ರೀತಿ ಎರಡು-ಮೂರು ಸಲ ವರ್ಗಾವಣೆ ಆಗಿದೆ ಯಾರೋ ತೈಮೂರ್‌ಲಂಗ್ ಎನ್ನುವವರು ಮಾಡಿದರಲ್ಲಾ, ದೆಹಲಿಯಿಂದ ದೇವಗಿರಿಗೆ, ದೇವಗಿರಿಯಿಂದ ದೆಹಲಿಗೆ ಆ ರೀತಿ ಆಗಿದೆ ಈ ಸರ್ಕಾರ ಬಂದ ಮೇಲೆ ಟ್ರಾನ್ಸ್‌ಫರ್ ಆಗಿದೆ. ದಯವಿಟ್ಟು ಅದನ್ನು ತೆಗೆಸಿ ನೋಡಿ.

ಈ ಸರ್ಕಾರ ಬಂದಮೇಲೆ ಈಗಾಗಲೇ ಎರಡು ಜನ ಕಂದಾಯ ಮಂತ್ರಿಗಳು ಆಗಿದ್ದಾರೆ. ಆದ್ದರಿಂದ ಯಾರದ್ದು ಹೇಳಬೇಕೋ ಗೊತ್ತಿಲ್ಲ. ಅವರು ಹೇಳಿದ್ದರೋ ಅಥವಾ ಇವರು ಹೇಳಿದ್ದರೋ ಎಂಬುದು ನನಗೆ ಕನ್‌ಫ್ಯೂಷನ್ ಆಗಿದೆ. ಮಾನ್ಯ ಅಜೀಜ್ ಸೇಠ್‌ರವರು ಹೇಳಿರಬಹುದು. ನಾವು ಒಂದು ಮೇಲ್ಮನವಿ ಪ್ರಾಧಿಕಾರ ಎಂದು ಮಾಡಿದ್ದೆವು. ಏನು ಮಹಾ ಅಪರಾಧ ಮಾಡಿದ್ದೆವೆಯೋ ಈ ಪ್ರಾಧಿಕಾರಗಳು ಹೋಗಿ ಬಿಡಬೇಕು ಎಂದು ತಾವು ಸಹ ಹೇಳಿದ್ದೀರಿ. ನಾನು ತಮ್ಮ ಅನುಭವ ತಪ್ಪು ಎಂದು ಹೇಳುವುದಿಲ್ಲ. ಸರಿ ಇರಬಹುದು. ಪ್ರಾಧಿಕಾರ ಈಗ ಹೋಗಿದೆಯೋ? ಮತ್ತು ಪ್ರಾಧಿಕಾರ ಏಕೆ ಬಂತು? ನಮ್ಮ ಸರ್ಕಾರ ಪ್ರಾಧಿಕಾರ ಮಾಡುವುದಕ್ಕೆ ಮುಂಚೆ ಹೈಕೋರ್ಟಿನ ಆದೇಶ ಇತ್ತು. ಪ್ರಾಧಿಕಾರ ಮಾಡಿ ಎಂದು. ಏಕೆ ಅಂದರೆ ಲಕ್ಷಗಟ್ಟಲೆ ಕೇಸಸ್‌ಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇದ್ದವು. ಆ ಕಾರಣ ಏನಾದರೂ ಮಧ್ಯವರ್ತಿ ವ್ಯವಸ್ಥೆ ಮಾಡಿ, ನಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಹೇಳಿದರು ಈ ಪ್ರಾಧಿಕಾರದಿಂದ ಏನೋ ಮಹಾ ಅನ್ಯಾಯ ಆಗಿದೆ ಎಂದು ಹೇಳುತ್ತಿದ್ದಾರೆ. ಬಾರ್ ಅಸೋಸಿಯೇಷನ್ ಆಫ್ ಬೆಂಗಳೂರ್‌ನವರು ಒಂದು ನಿರ್ಣಯವನ್ನು ಪಾಸ್ ಮಾಡಿದ್ದಾರೆ ಮತ್ತು ಅನೇಕ ಕಡೆ ಗುಲ್ಬರ್ಗಾದಲ್ಲಿ ಎಂದು ಕಾಣುತ್ತದೆ, ಅಲ್ಲಿನ ಬಾರ್ ಅಸೋಸಿಯೇಷನ್‌ನವರು ಸಹ ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಎಲ್ಲ ಅಸೋಸಿಯೇಷನ್‌ನವರು ಆ ರೀತಿ ಮಾಡೇ ಮಾಡುತ್ತಾರೆ. ಇಲ್ಲದಿದ್ದರೆ ಅವರಿಗೆ ಕೇಸ್‌ಗಳು ಹೋಗಿ ಬಿಡುತ್ತವೆ. ಅಪೆಲೇಟ್ ಅಥಾರಿಟಿ ಇರುವುದು ಜಿಲ್ಲೆಯಲ್ಲಿ ಆ ಕಾರಣದಿಂದ ಆ ಲಾಯರ್‌ಗಳು ನಿರ್ಣಯ ಪಾಸ್ ಮಾಡುತ್ತಾರೆ.

ಶ್ರೀ ಬಿ. ಚಂದ್ರೇಗೌಡ.—ಬೆಳಗಾಂನವರು ಕೂಡ ಅದನ್ನು ಮಾಡಿದ್ದಾರೆ. ಆದರೆ ಪ್ರಶ್ನೆ ಅದಲ್ಲ. ನಾವುಲ್ಯಾಂಡ್ ಲಾರ್ಡ್ ಅಲ್ಲ ನೀವು ಟೆನೆಂಟ್ ಅಲ್ಲ ಆದರೆ ವಸ್ತು ಸ್ಥಿತಿ ಏನು ಎಂಬುದನ್ನು ಆಲೋಚನೆ ಮಾಡಬೇಕು. ಇಲ್ಲಿ ಈ ಭೂ ಶಾಸನ ಕಾಯಿದೆ ಅನ್ವಯ ೧೯೭೪ನೇ ಇಸವಿಯಲ್ಲಿ ರಚಿಸಲಾದ ಭೂಸುಧಾರಣಾ ಮೇಲ್ಮನವಿ ಪ್ರಾಧಿಕಾರಗಳಲ್ಲಿ ಸ್ವೀಕೃತವಾದ ೨೭ ೮೨೬ ಪ್ರಕರಣಗಳಲ್ಲಿ ೧೨ ೨೪೬ ಪ್ರಕರಣಗಳು ವಿಲೇವಾರಿ ಆಗಿದೆ ಇದರಲ್ಲಿ ಅಪೀಲ್ ಎಷ್ಟು ಹೋಗಿದೆ. ಅಪೀಲ್ ಹೋಗಿದ್ದರಲ್ಲಿ ಎಷ್ಟು ಸಂಖ್ಯೆಯ ಕೇಸ್‌ಗಳು ಬಗೆಹರಿದಿವೆ. ಮಾನ್ಯ ಕಂದಾಯ ಮಂತ್ರಿಗಳು ಅಂದರೆ ನಿಮ್ಮ ಹಿಂದೆ ಇದ್ದವರು, ಏನು ಹೇಳಿದ್ದರು ಅಂದರೆ ಪ್ರಾಧಿಕಾರಗಳು ಚೆನ್ನಾಗಿ ಕೆಲಸ ಮಾಡಿದ್ದಾವೆ ಎಂದು. ಆದಾದ ಮೇಲೆ ತಾವು ಹೇಳಿದಿರಿ. ಇಲ್ಲ, ನಾವು ಪ್ರಾಧಿಕಾರಗಳನ್ನು ವಜಾ ಮಾಡಿದ್ದೇವೆ ಎಂದು. ನಿಮಗೆ ಸರಿ ಎಂದು ಕಂಡು ಬಂದಿರಬಹುದು. ಮತ್ತೆ ಅಲ್ಲಿ ಏನು ಆಗಿದೆ ಎಂಬುದನ್ನು ತಿಳಿಸಿ. ವಜಾ ಆಗಿದ್ದಾವೋ ಅಥವಾ ಇಲ್ಲವೋ, ದಯವಿಟ್ಟು ತಿಳಿಸಿ. ಏಕೆಂದರೆ ಅಲ್ಲಿ ಅಪಾಯಿಂಟ್‌ಮೆಂಟ್‌ಗಳು ಆಗುತ್ತಿವೆ.

ಒಬ್ಬ ಮಾನ್ಯ ಸದಸ್ಯರು.—ಅಪೆಲೆಟ್ಸ್ ಬಗ್ಗೆ ಒಳ್ಳೆಯ ಪ್ರಶ್ನೆಯನ್ನು ತಾವು ಎತ್ತಿದ್ದೀರಿ ಅವು ಕಾರ್ಯ ನಿರ್ವಹಿಸುತ್ತಿವೆ ಎಂಬುದು ನಮ್ಮ ವರ್ತಮಾನ ಮತ್ತು ಏನು ಆಗುತ್ತಿದೆ ಎಂದರೆ ಮಾನ್ಯ ಸಚಿವರು ಗಮನಿಸಬೇಕು, ಹಗಲು ದರೋಡೆ ಪ್ರಾಧಿಕಾರಗಳಲ್ಲಿ ನಡೆಯುತ್ತಿದೆ. ಪ್ರಾಧಿಕಾರ ರದ್ದಾಗಿ ಹೋಗಿದೆ ಎಂದು ತಿಳಿದುಕೊಂಡು ಕಾರ್ಯ ನಿರ್ವಹಿಸಲಿಕ್ಕೆ ಅವರಿಗೆ ಕಾನೂನು ಪ್ರಕಾರ ಅಧಿಕಾರವಿಲ್ಲದಿದ್ದರೂ ಸಹ ಸಿಕ್ಕಾಪಟ್ಟೆ ಕೇಸಸ್‌ಗಳನ್ನು ಕ್ಯಾಬಿನೆಟ್ ತೀರ್ಮಾನ ಆದ ಮೇಲೆ, ದಿನಕ್ಕೆ ಹತ್ತಾರು ಕೇಸ್‌ಗಳಲ್ಲಿ ನೂರಾರು ಕೇಸ್‌ಗಳನ್ನು ಒಂದು ದಿವಸಕ್ಕೆ ೪೦ ಸಾವಿರ. ೫೦ ಸಾವಿರ ಲಕ್ಷ ರೂಪಾಯಿಯಂತೆ ದುಡ್ಡು ತೆಗೆದುಕೊಂಡು ಎಲ್ಲಾ ಭೂ ಮಾಲೀಕರ ಪರವಾಗಿ ತೀರ್ಮಾನ ಆಗುತ್ತಿದೆ. ಎಂದು ನಮಗೆ ಸುದ್ದಿ ಬಂದಿದೆ. ನಾನಾದರೂ ಈ ಬಗ್ಗೆ ಹೇಳುವುದು, ಪ್ರಾಧಿಕಾರ ರದ್ದು ಆಗಿದೆ ಎಂದು ಕ್ಯಾಬಿನೆಟ್ ನಲ್ಲಿ ತೀರ್ಮಾನ ಆಗಿದೆ, ಆದರೆ ಅವರು ಇನ್ನೂ......

ಛೇರ್ಮನ್.—ದಯವಿಟ್ಟು ಮುಗಿಸಿ, ಒಂದು ಗಂಟೆ ಆಯಿತು.

ಶ್ರೀ ಡಿ.ಬಿ. ಚಂದ್ರೇಗೌಡ.—ಏನು ಮಾಡುವುದು ಈ ಕಂದಾಯ ಇಲಾಖೆ ನನಗೆ ಮಾತೃ ಸಂಸ್ಥೆ ಆದ್ದರಿಂದ ನಮ್ಮ ಯಜಮಾನರಿಗೆ ಕೆಲವು ಸಲಹೆಗಳನ್ನು ಕೊಡುತ್ತಿದ್ದೇನೆ. ಈ ಇಲಾಖೆಗೆ ಒಂದು ಸ್ಟೇಟಸ್ ಕೊಡಲಿಕ್ಕೆ ನಾನು ಜಾಸ್ತಿ ಸಮಯ ತೆಗೆದುಕೊಳ್ಳುತ್ತಿದ್ದೇನೆ.

ಛೇರ್ಮನ್.—ಇನ್ನೂ ೩೦ ಜನ ಇದ್ದಾರೆ ಮಾತನಾಡುವವರಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಇದ್ದಾರೆ ಆದರೆ You cannot restrict me. Alright That is a different matter. ಅದಕ್ಕೆ ನಾನು ಹೋಗುವುದಿಲ್ಲ. ತಾವು ದಯಮಾಡಿ ಈ ಪ್ರಾಧಿಕಾರಗಳ ಪರಿಸ್ಥಿತಿ ಏನು ಆಗಿದೆ ಎಂಬ ಬಗ್ಗೆ ಹೇಳಬೇಕು. ಇನ್ನು ನೆರೆ ಹಾವಳಿ ಕಳೆದ ಎರಡು ವರ್ಷಗಳ ಹಿಂದೆ ಹಾಗೂ ಒಂದು ವರ್ಷದ ಹಿಂದೆ ಬಂತು. ಈ ಹಾವಳಿಗಳು ಹೆಚ್ಚಾಗಿ ಬರುವುದು ಮಲೆನಾಡಿಗೆ. ಲಾಭ ಬರುವುದು ಬಯಲು ನಾಡಿಗೆ. ಏಕೆ ಎಂದು ಹೇಳುತ್ತೇನೆ. ಮೊದಲನೆಯ ಸಾರಿ ಶ್ರೀಮಾನ್ ಖರ್ಗೆಯವರ ಜೀವನದಲ್ಲಿ ಅವರ ಜಿಲ್ಲೆಗೆ ನೆರೆ ಹಾವಳಿ ಬಂತು. ಅದನ್ನೇ ಅವರು ದೊಡ್ಡದಾಗಿ ಮಾಡಿಕೊಂಡು ಇಲ್ಲಿ ಮಾತನಾಡಿದರು. ಆದರೆ ನಾವು ಪ್ರತಿ ವರ್ಷವೂ ಇದನ್ನು ಅನುಭವಿಸುತ್ತೇವೆ. ಏನೋ ಮೊದಲನೇ ಸಲ ಅವರ ಜೀವ ಮಾನದಲ್ಲಿ ನೆರೆಹಾವಳಿ ಬಂತು ಅಂದರೆ, ಅದನ್ನು ದೊಡ್ಡದು ಮಾಡಿದಿರಿ. ಪ್ರತಿ ಮಳೆಗಾಲ ಬಂತು ಅಂದರೆ ನೆರೆಹಾವಳಿ ಅನುಭವಿಸುವವರು ಮಲೆನಾಡಿನ ಜನರು. ಒಂದು ಸಲವಾದರೂ ನಮ್ಮ ಪರವಾಗಿ ಈ ರೀತಿ ಮಾತನಾಡಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಪರವಾಗಿ ಕೆಲಸ ಮಾಡಿದ್ದೇವೆ, ಮಾತನಾಡಿದ್ದೇನೆ. ಶಿವಮೊಗ್ಗದಲ್ಲಿ ಆದಾಗ, ನಿಮ್ಮಲ್ಲಿ ಆದಾಗ ಸ್ವಂತವಾಗಿ ಹೋಗಿ ಮೆಮೋರ್ಯಾಂಡಮ್ ಕೊಟ್ಟು, ಹಣ ಕೊಟ್ಟು ಮನೆಗಳನ್ನು ಕೊಟ್ಟು ಕೆಲಸ ಮಾಡಿ ಬಂದಿದ್ದೇವೆ. ಕೆಲಸ ಮಾಡಿಲ್ಲ ಎಂದು ಏತಕ್ಕೆ ಹೇಳುತ್ತೀರಿ.

ಶ್ರೀ ಡಿ ಬಿ. ಚಂದ್ರೇಗೌಡ.—ನಮ್ಮ ಮಲೆನಾಡಿನವರಿಗೆ ಇದು ಒಂದು ಶಾಪ. ಸ್ವಾಮಿ, ತುಂಗ ನದಿಯಲ್ಲಿ ನೀರು ಬಂತು ಅಂದರೆ ತೀರ್ಥಹಳ್ಳಿ ಅರ್ಧನೀರಿನಲ್ಲಿರುತ್ತದೆ. ಈ ಸಾರಿ ಒಂದು ಗಾಳಿ ಬಂದು ಸುಮಾರು ಒಂದು ಕೋಟಿ ರೂಪಾಯಿ ಬೆಲೆ ಬಾಳತಕ್ಕಂಥ ಅಡಿಕೆ ಮರಗಳು ನೆಲಸಮವಾದವು. ಅದಕ್ಕೆ ಏನು ಪರಿಹಾರ ಕೊಡುವುದು. ಪಾಪ, ಒಂದು ಎರಡು ಎಕರೆ ಇರುವವರೆಲ್ಲ ಕೆಳಗೆ ಬಿದ್ದರು. ಅದಕ್ಕೆ ನೀವು ಪರಿಹಾರ ಕೊಡಿರಿ ಅಂದರೆ ೪೮೦೦ ರೂಪಾಯಿಗಿಂತ ಜಾಸ್ತಿ ಆದಾಯ ಇದ್ದವರಿಗೆ ಪರಿಹಾರ ಕೊಡುವುದಿಲ್ಲ ಎಂದು ಹೇಳುತ್ತೀರಿ. ಎರಡು ಎಕರೆ ಹೋಗಿ ಪೂರ್ತಿ ನಾಶವಾಗಿದೆ.

ಹಿಂದಿನ ವರ್ಷದ ಎರಡು ಎಕರೆಯ ಉತ್ಪತ್ತಿ ನೋಡಿ ೪೨೦೦ ರೂಪಾಯಿಗಿಂತ ಜಾಸ್ತಿಯಾಗುತ್ತದೆ, ಪರಿಹಾರ ಕೊಡುವುದಿಲ್ಲ ಅಂದರೆ ಹೇಗೆ ? ಅತನಿಗೆ ಇದ್ದ ಭೂಮಿ ಎಲ್ಲ ಹೋಗಿದೆ, ಭಿಕ್ಷೆ ಬೇಡುವಂಥ ಸ್ಥಿತಿಗೆ ಬಂದಿದ್ದಾನೆ ಅವನಿಗೆ ಪರಿಹಾರ ಕೊಡಿ ಅಂದರೆ ಇಲ್ಲ ಅಂದರೆ ಯಾವರೀತಿ ಇವನ್ನು ನಿರ್ಧಾರ ಮಾಡುವುದು. ದಯಮಾಡಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಮಿತಿ ಹಾಕುವಾಗ ಯಾವುದಕ್ಕೆ ಎಷ್ಟು ಮಿತಿ ಇರಬೇಕು ಎಂದು ನೋಡಿ ಮಾಡಬೇಕು. ಗಂಡಸರಿಗೆ ಮೂಗು ಬಟ್ಟು ಹಾಕಬೇಡಿ ಎಂದು ಹೇಳಿ, ನಾನು ಒಪ್ಪುತ್ತೇನೆ. ಆದರೆ ಹೆಂಗಸರಿಗೂ ಮೂಗುಬಟ್ಟು ಹಾಕ ಬೇಡಿ ಅಂದರೆ ಹೇಗೆ ? ಅವನಿಗೆ ಪೂರ ಎಲ್ಲ ಕಳೆದು ಹೋಗಿದೆ, ಪೂರ ಕೆಳಗೆ ಬಿದ್ದು ಹೋಗಿದ್ದಾನೆ, ಭಸ್ಮವಾಗಿ ಹೋಗಿದ್ದಾನೆ, ನೀರಿನಲ್ಲಿ ಮುಳುಗಿದ್ದಾನೆ, ಅವನಿಗೆ ಪರಿಹಾರ ಕೊಡಿ ಅಂದರೆ ಅವನಿಗೆ ಉತ್ಪತ್ತಿ ಜಾಸ್ತಿ ಎಂದು ಹೇಳುತ್ತೀರಿ. ಇಲ್ಲಿ ಆ ಕೊಂಡಿಯನ್ನು ಹಾಕಬೇಡಿ. ದಯಮಾಡಿ ಇರತಕ್ಕಂಥ ವಸ್ತು ಸ್ಥಿತಿಯನ್ನು ವಿಶ್ಲೇಷಣೆ ಮಾಡಿ ಏನಾದರೂ ಪರಿಹಾರಕೊಡಿ. ೯೧ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಪರಿಹಾರಕ್ಕೆ ವಿಜ್ಞಾಪನೆ ಕಳಿಸಿತ್ತು. ಆದರೆ ಖರ್ಚಾಗಿರುವುದು ೧೧ ಕೋಟಿ. ಮಾನ್ಯ ಅಧ್ಯಕ್ಷರು ಬೆಲ್ ಹೊಡೆಯುತ್ತಾ ಇದ್ದಾರೆ, ಅದು ನನ್ನ ತಲೆಗೆ ಹೋಗಿಬಿಟ್ಟಿದೆ. ಆದುದರಿಂದ ನನ್ನ ಗಾಡಿ ಸ್ವಲ್ಪ ನಿಧಾನವಾಗಿದೆ, ಅದಕ್ಕಾಗಿ ನಾನು ಕ್ಷಮೆ ಕೇಳುತ್ತಾ ಇದ್ದೇನೆ. ಆದುದರಿಂದ ಈ ಪರಿಹಾರ ಕೊಡುವ ವಿಚಾರದಲ್ಲಿ ತಾವು ವಿಶೇಷವಾಗಿ ಮಲೆನಾಡಿಗೆ ಸೀಮಿತವಾದಂಥ ಸದಸ್ಯರ ಸಭೆ ಕರೆಯಬೇಕು, ಅವರ ಜೊತೆಯಲ್ಲಿ ಚರ್ಚೆ ಮಾಡಬೇಕು, ಈ ಸಮಸ್ಯೆ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಬೇಕು ಇವನ್ನು ನಾನು ಏಕೆ ಹೇಳುತ್ತಾ ಇದ್ದೇನೆಂದರೆ ಇಲ್ಲಿ ನಿಮಗೆ ಅನುಭವ ಇಲ್ಲ ಎಂದಲ್ಲ. ಹೊಸದಾಗಿ ಬಂದ ಗುಲ್ಬರ್ಗ ಫ್ಲಡ್ ಮತ್ತು ಬೀದರ್ ಫ್ಲಡ್ ವಿಚಾರ ಜಾಸ್ತಿ ಇಲ್ಲಿ ಚರ್ಚೆ ಆಗಿದ್ದರಿಂದ ಪ್ರತಿ ವರ್ಷ ಬರುವ ನಮ್ಮ ಮಲೆನಾಡಿನ ಫ್ಲಡ್ ವಿಚಾರ ಮರೆತುಹೋಗಿದೆ. ಆದುದ ರಿಂದ ದಯಮಾಡಿ ಅವರನ್ನು ಕರೆಸಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿರೋಧಪಕ್ಷದ ನಾಯಕರು ನಮ್ಮನ್ನೆಲ್ಲಾ ಜೊತೆಗೆ ತೆಗೆದುಕೊಂಡು ಹೋಗುತ್ತಾರೆಂದು ನಾವು ತಿಳಿದುಕೊಂಡರೆ, ತಾವು ಮಲೆನಾಡು, ಬೀದರ್, ಗುಲ್ಬರ್ಗ ಗಳನ್ನು ಏಕೋ ಬೇರೆ ಬೇರೆ ಮಾಡುವ ಹಾಗೆ ಕಾಣುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಅದು ಇಲ್ಲ ಎಂದಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ, ಎಲ್ಲೋ ಒಂದು ಸಲ ಅಪರೂಪಕ್ಕೆ ನೆರೆಹಾವಳಿ ಬಂದರೆ ಅದು ಬಹಳ ದೊಡ್ಡದಾಗಿಬಿಟ್ಟಿದೆ. ನಾವು ಪ್ರತಿವರ್ಷ ಅನುಭವಿಸಿ ಹೋಗಲಿ ಬೇಡ ಕೇಳುವುದೇನು, ಹೇಳುವುದೇನು ಎಂದು ಬಿಟ್ಟುಬಿಟ್ಟಿದ್ದೇವೆ. ಆದುದ ರಿಂದ ಮಾನ್ಯ ಕಂದಾಯ ಮಂತ್ರಿಗಳಿಗೆ ಸ್ವಲ್ಪ ಇದರ ಸೂಕ್ಷ್ಮ ಗೊತ್ತಿದ್ದರೆ ಸಾಕು, ಆಮೇಲೆ ಅವರು ಅದನ್ನು ಎಳೆಯುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವಾಗಲೂ ಬರಗಾಲ ನಮಗೆ ಖಾಯಂ. ಫ್ಲಡ್ ನಿಮಗೆ ಯಾವಾಗಲೂ ಖಾಯಂ ನಮಗೆ ಬರಗಾಲ ಬಂದಾಗ ಯಾವಾಗಲೂ ಬರುತ್ತದೆ ಎಂದು ನೀವು ಹೇಳುತ್ತೀರಿ. ಅದೇ ರೀತಿ ಈಗ ಅಪರೂಪಕ್ಕೆ ನಮ್ಮ ಕಡೆ ಮಳೆ ಬಂದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಮತ್ತೆ ಬೇಸಿಗೆಯಲ್ಲಿ ಅಗ್ನಿ ಅನಾಹುತಗಳಾಗುತ್ತವೆ. ಯಾವಾಗಲೂ ಗುಡಿಸಲುಗಳಿಗೇ ಬೆಂಕಿ ಬೀಳುವುದು. ಹೆಂಚಿನ ಮನೆಗೆ, ತಾರಸಿ ಮನೆಗೆ ಬೆಂಕಿ ಬೀಳುವುದಿಲ್ಲ, ವಿಧಾನಸೌಧಕ್ಕೆ ಬೆಂಕಿ ಬೀಳುವುದಿಲ್ಲ, ಯಾವಾಗಲೂ ಗುಡಿಸಲುಗಳಿಗೇ ಬೆಂಕಿ ಬೀಳುವುದು, ಸುಟ್ಟು ಹೋಗುವುವು ಗುಡಿಸಲುಗಳೇ. ಆದರೆ ಅವರಿಗೆ ಪರಿಹಾರ ಸಿಕ್ಕುವುದಿಲ್ಲ. ಅದಕ್ಕಾಗಿ ಗ್ರಾಮೀಣ ಬಡ ಕುಟುಂಬಗಳ ಗುಡಿಸಲು ಯೋಜನೆ ಎಂಬ ಕಾರ್ಯಕ್ರಮ ಬಂತು. ಅದರಲ್ಲಿ ಒಂದರಲ್ಲಿ ಒಂದು ಸಾವಿರ ಮತ್ತೊಂದರಲ್ಲಿ ೫೦೦ ರೂಪಾಯಿ ಪರಿಹಾರ ಸಿಗುತ್ತದೆ. ಗುಡಿಸಲು ಮತ್ತು ಸಾಮಾನುಗಳ ನಷ್ಟಕ್ಕೆ ಸಿಗುತ್ತದೆ. ಈ ಯೋಜನೆ ಬಂದಿದ್ದರಿಂದ ತಹಶೀಲ್ದಾರರಿಗೆ ೩೦೦ ರೂಪಾಯಿ ಕೊಡತಕ್ಕಂಥ ಅವಕಾಶವಿತ್ತು. ಅವನ್ನು ನೀವು ವಿಮಾ ಯೋಜನೆಗೆ ಅರ್ಜಿ ಹಾಕಿಬಿಟ್ಟಿದ್ದೀರಿ, ನಾನು ಕೊಡುವುದಿಲ್ಲ ಎಂದು ಹೇಳುತ್ತಾನೆ. ಆದ್ದರಿಂದ ದಯಮಾಡಿ ಅದನ್ನು ಇದಕ್ಕೆ ಲಿಂಕ್ ಮಾಡಬೇಡಿ. ಸುಟ್ಟಿರುವುದು ಗುಡಿಸಲು, ಎಷ್ಟು ಪರಿಹಾರ ಅವರಿಗೆ ಸಿಗುತ್ತದೋ ಅಷ್ಟು ಸಿಗಲಿ. ಆದ್ದರಿಂದ ದಯಮಾಡಿ ಸ್ವಲ್ಪ ಈ ವಿಚಾರದಲ್ಲಿ ತಾವು ಲಿಬರಲ್ಲಾಗಿರಬೇಕು ಎಂದು ನಿಮ್ಮನ್ನು ಪ್ರಾರ್ಥನೆ ಮಾಡುತ್ತೇನೆ. ಆಮೇಲೆ ಭೂಸ್ವಾಧೀನ ವಿಚಾರ. ಇದರ ಜೊತೆಗೆ ಸಮುದ್ರ ಕೊರೆತ ವಿಷಯ ಇದೆ. ಮಂಗಳೂರು ಮತ್ತು ನಾರ್ತ್ ಕೆನರಾ ಜಿಲ್ಲೆಗಳಿಗೆ ವಿಶೇಷ ಆಸಕ್ತಿಯನ್ನು ತೋರಿಸುತ್ತಾರೆ. ಈಗ ನದಿಗಳೂ ಕೂಡ ತಮ್ಮ ಪಥ ಬದಲಾವಣೆ ಮಾಡುತ್ತಾ ಇವೆ. ಈಗ ತುಂಗ ನದಿ ಇದೆ. ಗಂಗಾನದಿಯಷ್ಟು ದೊಡ್ಡ ಪ್ರವಾಹದಲ್ಲಿ ಅಲ್ಲದೇ ಇದ್ದರೂ ಈಗ ಮಲೆನಾಡಿನಲ್ಲಿ ನದಿಗಳು ಪಥವನ್ನು ಬದಲಾವಣೆ ಮಾಡುತ್ತಾ

ಇವೆ. ಇದನ್ನೂ ಕೂಡ ಈ ಸಾರಿ ಆದರ ವ್ಯಾಪ್ತಿಯೊಳಗೆ ತರಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನ್ನು ಭೂಸ್ವಾಧೀನ ವಿಚಾರ ಇದೆ. ಇದರಲ್ಲಿ ಏನು ಮಾಡಬೇಕು ಎಂದು ನನಗೆ ಗೊತ್ತಿಲ್ಲ. ಬೆಂಗಳೂರಿನ ಜನರೇ ಮಾತನಾಡಿದರೆ ಒಳ್ಳೆಯದು. ಏಕೆಂದರೆ, ವರದಿಯಲ್ಲಿ ಈ ರೀತಿ ಇದೆ.

> "ಸರ್ಕಾರವು ಬೆಂಗಳೂರು ಮಹಾ ನಗರದಲ್ಲಿಯ ದಿನಾಂಕ ೩೦-೬-೧೯೮೪ರ ಮೊದಲು ನೋಂದಣಿಯಾದ ೯೬ ಗೃಹ ನಿರ್ಮಾಣ ಸಹಕಾರ ಸಂಘಗಳು ೧೨೪ ಯೋಜನೆಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನಪಡಿಸಿಕೊಳ್ಳಲು ಸಹ ತೀರ್ಮಾನಿಸಿದೆ. ಈ ಸಹಕಾರ ಸಂಘಗಳಿಗೆ ಖಚಿತವಾಗಿ ಬೇಕಾಗುವ ಭೂಮಿಯ ಮಿತಿಯನ್ನು ಗುರುತಿಸಲು ಸರ್ಕಾರವು ತ್ರಿಸದಸ್ಯ ಮತ್ತು ರಾಜ್ಯಮಟ್ಟದ ಸಲಹಾ ಸಮಿತಿಗಳನ್ನು ನೇಮಿಸಿದೆ." ಈ ಸಲಹಾ ಸಮಿತಿಗಳು ಏನಾದವು. ಇಲ್ಲಿ ಕಂದಾಯಕೊಡುವ ನಮ್ಮ ಭೂಮಿಯಲ್ಲಿ ಮನೆ ಕಟ್ಟಿ ಬಿಡುತ್ತಾರೆ. ಯಾವ ಆಯಾಮಕ್ಕೂ ಅವು ಸಿಕ್ಕುವುದಿಲ್ಲ.

ಆಮೇಲೆ ಅವು ಖಾಯಂಗೆ ಬರುತ್ತವೆ, ನಿಮ್ಮ ಸಬ್ ರಿಜಿಸ್ಟ್ರಾರರು ರಿಜಿಸ್ಟರ್ ಮಾಡುತ್ತಾರೆ. ಕಂದಾಯ ಇಲಾಖೆ ಬಿ.ಡಿ.ಎ. ನಲ್ಲಿ ನೋಟಿಫೈ ಆಗಿರುತ್ತದೆ, ಆದರೂ ಭೂಮಿ ಕಂದಾಯ ಇಲಾಖೆಗೆ ಸೇರಿದ್ದು ಎಂದು ಸಬ್-ರಿಜಿಸ್ಟ್ರಾರ್ ರಿಜಿಸ್ಟರ್ ಮಾಡುತ್ತಾರೆ. ವಿಧಾನಸೌಧ ರಿಜಿಸ್ಟರ್ ಮಾಡಿಕೊಡಿ ಎಂದು ಕೇಳಿದರೂ ನಿಮ್ಮ ಅಧಿಕಾರಿಗಳು ಮಾಡಿಕೊಡುತ್ತಾರೆ. ಅದರ ವ್ಯಾಪಾರ ನಮಗೆ ತಿಳಿಯುವುದಿಲ್ಲ. ಅದು ನನಗೆ ತಿಳಿಯುವುದು ಬೇಡ. ಆದರೆ ನಿಮಗೆ ತಿಳಿಯಲಿ ಎಂದು ಭಗವಂತನನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತೆ ಧಾರ್ಮಿಕ ದತ್ತಿ ಇಲಾಖೆ ಇದು ಬಹಳ ಮುಖ್ಯವಾದ ಇಲಾಖೆ. ರಾಜ್ಯದಲ್ಲಿ ೪೧,೦೦೦ಕ್ಕೂ ಹೆಚ್ಚು ದೇವಸ್ಥಾನಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಕರ್ನಾಟಕ ರಾಜ್ಯವಾದದ್ದು ೧೯೫೬ನೇ ಇಸವಿಯಲ್ಲಿ. ನಾವು ಪ್ರತಿವರ್ಷ ಕನ್ನಡ ರಾಜ್ಯೋತ್ಸವ ಆಚರಿಸುತ್ತಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಇಲ್ಲಿ ಇದ್ದಾರೆ. ಆದರೆ. ಧಾರ್ಮಿಕ ಇಲಾಖೆಗೆ ಸಂಬಂಧಪಟ್ಟಂತೆ ಶಾಸನಗಳು ಮಾತ್ರ ಒಂದೊಂದು ವಿಭಾಗಕ್ಕೆ ಒಂದೊಂದು ಶಾಸನ, ಒಂದೊಂದು ಭಾಗಕ್ಕೆ ಒಂದೊಂದು ಶಾಸನ ಇದೆ. ಮೈಸೂರು ರಿಲಿಜಿಯಸ್ ಅಂಡ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್ ಆಕ್ಟ್ ೧೯೨೭, ಇದು ಹಳೇ ಮೈಸೂರು ಪ್ರದೇಶಕ್ಕೆ ಅನ್ವಯವಾಗುತ್ತದೆ. ಹಿಂದೂ ರಿಲಿಜಿಯಸ್ ಅಂಡ್ ಚಾರಿಟಬಲ್ ಎಂಡೋಮೆಂಟ್ ಆಕ್ಟ್ ೧೯೫೧, ಇದು ಹಳೇ ಮದ್ರಾಸ್ ಪ್ರದೇಶಕ್ಕೆ ಅನ್ವಯವಾಗುತ್ತದೆ. ಬಾಂಬೇ ಪಬ್ಲಿಕ್ ಟ್ರಸ್ಟ್ ಆಕ್ಟ್ ೧೯೫೦, ಇದು ಹಳೇ ಬೊಂಬಾಯಿ ಪ್ರದೇಶಕ್ಕೆ ಅನ್ವಯವಾಗುತ್ತದೆ. ಹೈದರಾಬಾದ್ ಎಂಡೋಮೆಂಟ್ ರೆಗ್ಯೂಲೇಷನ್ ಆಕ್ಟ್ ೧೯೫೯ ಇದು ಹಳೇ ಹೈದರಾಬಾದ್ ಪ್ರದೇಶಕ್ಕೆ ಅನ್ವಯವಾಗುತ್ತದೆ. ಕೂರ್ಗ್ ಟೆಂಪಲ್ ಫಂಡ್ ಮ್ಯಾನೇಜ್‌ಮೆಂಟ್ ಆಕ್ಟ್ ೧೯೫೬, ಇದು ಕೊಡಗು ಪ್ರದೇಶಕ್ಕೆ ಅನ್ವಯವಾಗುತ್ತದೆ, ಅಂದರೆ ಎಲ್ಲಿ ಕರ್ನಾಟಕ ಒಂದಾಗಿದೆ ಸ್ವಾಮಿ? ನಾವು ಭಾವನಾತ್ಮಕವಾಗಿ ಒಂದಾದಮೇಲೆ ನಮ್ಮ ಭಾಷೆ ಭಾವನೆಗಳ ಜೊತೆಗೆ ಶಾಸನಗಳು ಒಂದಾಗಬೇಕಾದವೇ ಏಕರೂಪದ ಕಾಯಿದೆ ತರುವುದಕ್ಕೆ ನಿಮಗೆ ಇರತಕ್ಕ ತೊಂದರೆಗಳು ಏನು? ನನಗೆ ಗೊತ್ತಿದ್ದ ಹಾಗೆ ಇದಕ್ಕೊಂದು ಸಮಿತಿ ರಚನೆಯಾಯಿತು. ಅದು ವರದಿ ಕೂಡ ಕೊಟ್ಟಿದೆ. ಆ ವರದಿಯ ಆಧಾರದ ಮೇಲೆ ಏಕರೂಪದ ಕಾಯಿದೆಯನ್ನು ತರುವುದಕ್ಕೆ ಹಿಂದೆ ನಿರ್ಣಯವಾಗಿತ್ತು. ದಯಮಾಡಿ ಏಕರೂಪದ ಕಾಯಿದೆ ತನ್ನಿ, ನಾವೆಲ್ಲಾ ಕರ್ನಾಟಕದ ಜನ, ನಮಗೆಲ್ಲಾ ಒಂದು ಶಾಸನ, ಒಂದು ಭೂಮಿ, ಒಂದು ನೆಲ, ಒಂದು ಜಲ ಇದೆ ಎನ್ನುವುದನ್ನು ಮತ್ತು ರಾಜ್ಯದ ದೃಷ್ಟಿಯಿಂದ ಇದರ ಬಗ್ಗೆ ತಾವು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ತಸ್ತೀಕ್ ಭತ್ಯಗಳ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಬಹಳ ಪುರಾತನವಾದಂಥ ದೇವಸ್ಥಾನಗಳು ಇವೆ. ಪೌರಾಣಿಕ ಮತ್ತು ಐತಿಹಾಸಿಕ ದೇವಸ್ಥಾನಗಳು ಮಾತ್ರವಲ್ಲದೆ ಬೇರೆ ಕೆಲವು ದೇವಸ್ಥಾನಗಳು ಸಹ ಇವೆ. ಇವೆಲ್ಲಾ ಏನಾಗಿವೆ ಅಂದರೆ, ಒಂದು ಉದಾಹರಣೆ ಕೊಡುವುದಾದರೆ, ನನಗೆ ಬೇಕಾದಷ್ಟು ಅರ್ಜಿಗಳು ಬಂದಿವೆ. ನನ್ನ ಕ್ಷೇತ್ರದ್ದೇ ಒಂದು ಉದಾಹರಣೆ ಕೊಡುತ್ತೇನೆ. ಮೋಗರಹಳ್ಳಿಯಲ್ಲಿ ಒಂದು ದೇವಸ್ಥಾನ ಇದೆ. ನಾನು ಇದರ ಬಗ್ಗೆ ಪತ್ರ ಕೂಡ ಬರೆದಿದ್ದೇನೆ. ಈ ದೇವಸ್ಥಾನಕ್ಕೆ ಎರಡೂವರೆ ಮತ್ತು ಮೂರು ಲಕ್ಷ ರೂಪಾಯಿ ಅಂದಾಜಾಗಿತ್ತು. ಈ ವರ್ಷ ನಮಗೆ ಸುದ್ದಿ ಏನಾದರೂ ಬಂದರೆ, ದೇವಸ್ಥಾನ ಕುಸಿದು ಬಿದ್ದು ೫೦ ಜನ ಸತ್ತರು ಎಂದು ಸುದ್ದಿ ಬರುತ್ತದೆ. ಅದು ಅಷ್ಟು ಹೀನಾಯ ಸ್ಥಿತಿಯಲ್ಲಿದೆ. ನಾವು ಸ್ವಲ್ಪ ಏನಾದರೂ ಕೊಡುತ್ತೇವೆ. ಸರ್ಕಾರ ಹಣ ಕೊಟ್ಟು ದೇವಸ್ಥಾನದ ಜೀರ್ಣೋದ್ಧಾರ ಕಾರ್ಯವನ್ನು ಮಾಡಿಸಿಕೊಡಿ. ಕೊಡುವುದಕ್ಕಾಗುವುದಿಲ್ಲ ಅಂದರೆ ಅದನ್ನು ಕೆಡಿಸಿ ಮನೆಗೆ ಹೋಗೋಣ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಎಲ್ಲೆಲ್ಲೋ ದೇವಸ್ಥಾನಗಳನ್ನು ಕಟ್ಟಿಸುತ್ತಾರೆ. ಸಾಂಪ್ರದಾಯಿಕವಾದ ಐತಿಹಾಸಿಕವಾದ ದೇವಸ್ಥಾನ

ಗಳು ಇವೆ. ಈ ದೇವಸ್ಥಾನಗಳೊಂದಿಗೆ ಜನಗಳ ಅಟ್ಯಾಚ್‌ಮೆಂಟ್ ಇದೆ, ಹೋಗುತ್ತಾರೆ. ಇದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ದಯಮಾಡಿ ಇಂಥ ಅರ್ಜಿಗಳನ್ನು ಬೇಗ ವಿಲೇವಾರಿ ಮಾಡುವಂತೆ ತಾವು ಧಾರ್ಮಿಕದತ್ತಿ ಅಧಿಕಾರಿಗಳಿಗೆ ಆದೇಶ ನೀಡಬೇಕೆಂದು ಹೇಳುತ್ತೇನೆ. ಆಸಕ್ತಿ ಇರತಕ್ಕ ಅಧಿಕಾರಿಗಳನ್ನು ಈ ಒಂದು ಇಲಾಖೆಗೆ ಹಾಕಿ. ಕನ್ನಡ ಸಂಸ್ಕೃತಿ ಇಲಾಖೆಗೆ ಕನ್ನಡ ಗೊತ್ತಿಲ್ಲದೇ ಇರತಕ್ಕವರನ್ನು ಹಾಕುವುದು. ಕೃಷಿ ಇಲಾಖೆಗೆ, ರೈತರ ಹಿತ ಗೊತ್ತಿಲ್ಲದೇ ಇರತಕ್ಕವರನ್ನು ಹಾಕುವುದು. ರೈತರ ವಿರುದ್ಧವಾಗಿರತಕ್ಕವರನ್ನು ಹಾಕುವುದು ಸರಿಯಲ್ಲ, ಅದರಲ್ಲಿಯೂ ಐ.ಎ.ಎಸ್. ಮತ್ತು ಕೆ.ಎ.ಎಸ್.ನವರು ಇದ್ದಾರಲ್ಲ, ಇವರು ಬ್ರಹ್ಮರು, ಜಗತ್ ಸೃಷ್ಟಿಕರ್ತನಿಗಿಂತಲೂ ದೊಡ್ಡವರು, ಅಂತಹವರನ್ನು ಹಾಕುತ್ತೀರಿ. ಧರ್ಮ ಇತಿಹಾಸ. ಕರ್ನಾಟಕ ರಾಜ್ಯದ ವ್ಯವಹಾರದ ದೃಷ್ಟಿಯಿಂದ ರಾಜ್ಯದ ಜನತೆಯ ಬಯಕೆಗಳನ್ನು, ಅನಿಸಿಕೆಗಳನ್ನು ತಿಳಿದುಕೊಳ್ಳುವಂತಹ ಅಧಿಕಾರಿಗಳನ್ನು ಹಾಕಿ, ಮತ್ತು ಒಂದು ಏಕರೂಪದ ಕಾಯಿದೆಯನ್ನು ಸಾಧ್ಯವಾದಷ್ಟು ಬೇಗ ಸದನದಲ್ಲಿ ಮಂಡನೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇಲ್ಲಿ ಒಂದು ಮಾತು ಹೇಳಬೇಕಾಗಿದೆ, ೧೯೮೯–೯೦ನೇ ಸಾಲಿಗೆ ತಸ್ತೀಕ್ ಭತ್ಯಕ್ಕಾಗಿ ಪಾವತಿ ಮಾಡಿದ ದುಡ್ಡು ಎಷ್ಟಾದರೂ ಇರಲಿ, ಬಿಡುಗಡೆ ಮಾಡಿ ಬಾಕಿ ಉಳಿದ ಹಣವನ್ನು ಶೇಕಡ ೫೦ರಷ್ಟು ಆರ್ಥಿಕ ಮಿತವ್ಯಯ ಹೊಂದುಪಡಿಸಿ, ಜಿಲ್ಲಾಧಿಕಾರಿಗಳಿಗೆ ತಸ್ತೀಕ್ ಭತ್ಯ ಪಾವತಿ ಮಾಡಲು ಬಿಡುಗಡೆ ಮಾಡಲಾಗಿದೆ ಈ ರಾಜ್ಯದಲ್ಲಿ ೩೦,೭೮೯ ತಸ್ತೀಕ್ ಭತ್ಯಗೆ ಅರ್ಹವಿದ್ದು, ೨೮,೯೪೭ ಸಂಸ್ಥೆಗಳಿಗೆ ಮಾತ್ರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನೀವು ಕೊಡುವುದು ಎಷ್ಟು? ಎರಡು ರೂಪಾಯಿಗಳು ಮಾತ್ರ. ಎಣ್ಣೆ ಬತ್ತಿಗೆ ಈ ದುಡ್ಡು ಆಗುವುದಿಲ್ಲ. ಅದನ್ನು ಕೊಡುವುದಕ್ಕೆ ಇನ್ನೂ ಹತ್ತು ಸಾವಿರ ದೇವಸ್ಥಾನಗಳು ಹಾಗೆ ಉಳಿದಿವೆ. ಕೊಡುವುದು ಏತಕ್ಕೆ ನಿಧಾನ ಮಾಡುತ್ತೀರಿ, ಏನು ಕಾರಣ ಇದರ ಬಗ್ಗೆ ದಯಮಾಡಿ ಸ್ವಲ್ಪ ವಿಚಾರ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ ಹೇಳಬೇಕೆಂದರೆ, ಮನೆ ಬಾಡಿಗೆ ನಿಯಂತ್ರಣದ ಒಂದು ಶಾಸನ. ಇದಕ್ಕೂ ಕೂಡ ಒಂದು ಸಮಿತಿ ಆಗಿತ್ತು, ರೆಂಟ್ ಕಂಟ್ರೋಲ್ ಆಕ್ಟ್ ಅಮೆಂಡ್ ಮಾಡಬೇಕು ಎಂದು ಉಳುವವನಿಗೆ ಭೂಮಿ, ಇರುವವನಿಗೆ ಮನೆ ಅಂತ ಹೇಳಬಿಡೋಣ ಇವೊತ್ತು ಮನೆ ಮಾಲೀಕನ ಸ್ಥಿತಿ ಎಷ್ಟು ಕೆಟ್ಟಿದೆಯೋ ಅಲ್ಲಿರುವ ಟೆನೆಂಟ್‌ನದು ಅಷ್ಟೇ ಕೆಟ್ಟಿದೆ. ಆದ್ದರಿಂದ ಈ ಅಪೆಲೆಟ್ ಅಥಾರಿಟಿಗೆ ಅಸಿಸ್ಟೆಂಟ್ ಕಮೀಷನರ್ ಹಾಕುತ್ತೇವೆ, ಅಲ್ಲಿಂದ ಅಪೀಲುಗಳಿಗೆ ಅವಕಾಶವಾಗಿದೆ. ಹೀಗೆ ರೆಂಟ್ ಕಂಟ್ರೋಲ್ ಶಾಸನ ಒಂದು ಅಂತಿಮವಾದಂಥ ಪರೀಕ್ಷೆಯನ್ನು ಯಶಸ್ವಿಯಾಗಿ ಪಾಸು ಮಾಡಿಲ್ಲ. ಅಪೀಲುಗಳು ಇಷ್ಟೊಂದು ಏತಕ್ಕೆ ಹೋಗುತ್ತವೆ, ಏತಕ್ಕೆ ನಿಧಾನವಾಗುತ್ತಿದೆ. ಶ್ರೀಮತಿ ಪ್ರಮಿಳಾ ಅವರ ಅಧ್ಯಕ್ಷತೆಯಲ್ಲಿ ೧೯೮೦ರಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಅದು ೧೯೮೨ರಲ್ಲಿ ವರದಿ ಸಲ್ಲಿಸಿದೆ ಈ ವರದಿಯನ್ನು ಕರ್ನಾಟಕದ ಜಂಟಿ ಸೆಲೆಕ್ಟ್ ಕಮಿಟಿಗೆ ಸಲ್ಲಿಸಲಾಗಿತ್ತು. ಹಿಂದಿನ ವಿಧಾನ ಸಭೆಯ ವಿಸರ್ಜನೆಯ ನಂತರ ವಿಧಾನ ಮಂಡಲದ ಸೆಲೆಕ್ಟ್ ಕಮಿಟಿ ಅಸ್ತಿತ್ವದಲ್ಲಿ ಇರುವುದಿಲ್ಲ. ಆದ್ದರಿಂದ ಏನಾಗಿದೆ, ಅದಕ್ಕೆ ಬೇಕಾಗಿರತಕ್ಕದ್ದನ್ನು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಬಹಳ ದೀರ್ಘವಾಗಿ ಒಂದು ಗಂಟೆಗೂ ಹೆಚ್ಚು ಸಮಯ ಮಾತನಾಡಿದ್ದೇನೆ, ಇಂಥ ಇಲಾಖೆಗೆ

ತಾವು ಒಂದು ಕಾಯಕಲ್ಪವನ್ನು ತಾವು ಮಾಡಬೇಕು, ಆಡಳಿತದಲ್ಲಿ ಸುಧಾರಣೆಯನ್ನು ತರತಕ್ಕಂಥ ಒಂದು ಪ್ರಯತ್ನ ನಡೆಸಬೇಕು ಹಾಗೆ ಎಂದು ಹೇಳಿ, ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ, ಇನ್ನು ಲೇಬರ ಇಲಾಖೆಯ ಬಗ್ಗೆ ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ, ಅದರ ಬಗ್ಗೆ ಹೆಚ್ಚು ಹೇಳುವುದಿಲ್ಲ ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯದು, ಒಂದು ದೊಡ್ಡ ರಾದ್ಧಾಂತ. ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತೊಬ್ಬರು. ಮಗದೊಬ್ಬರು. ಅವರು ಏನಾದರೂ ಮಾಡಿಕೊಂಡು ಹೋಗಲಿ, ಶಾಸನಬದ್ಧವಾಗ ನಮ್ಮ ಲೇಬರ್‌ಲಾ ಪ್ರಕಾರ ನಡೆದುಕೊಳ್ಳತಕ್ಕ ಸೌಜನ್ಯ ಕೂಡ ಅಧಿಕಾರಿಗಳು ತೋರಿಸದೇ ಹೋದರೆ ಹೇಗೆ ? ಯಾರೋ ಕೆಲವರು ಎಂಪ್ಲಾಯಿಸ್, ಒಂದು ಸಂಯುಕ್ತ ಹೋರಾಟ ಸಮಿತಿ ಮಾಡಿಕೊಂಡರು ಎನ್ನುವ ಕಾರಣಕ್ಕಾಗಿ ಅವರನ್ನು ಕರೆಯಿಸಿಬಿಟ್ಟು ನೆಗೋಷಿಯೇಟ್ ಮಾಡುವುದಿಲ್ಲ. ವಿಕ್ಟಿಮೈಜೇಷನ್ ಪ್ರಾರಂಭ ಮಾಡುತ್ತಾರೆ, ಇಲ್ಲೀಗಲ್ ಲಾಕ್‌ಔಟ್ ಮಾಡುತ್ತಾರೆ. ಅವರನ್ನು ಹೊರಗೆ ನಿಲ್ಲಿಸುತ್ತಾರೆ. ಆದರೆ, ಅಧಿಕಾರಿಗಳ ಬಗ್ಗೆ ಏನಾದರೂ ಹೇಳಿದರೆ ಅದನ್ನು ವಿಚಾರಣೆ ಮಾಡಬೇಕು. ನಾನು ಇದನ್ನು ಇಂಡಸ್ಟ್ರಿಯಲ್ ಬೇಡಿಕೆ ಬಂದಾಗ ದೀರ್ಘವಾಗಿ ಚರ್ಚೆ ಮಾಡುತ್ತೇನೆ. ಆದರೆ ಈ ಒಂದು ಕಾರಣಕ್ಕಾಗಿ, ಈ ಎಂ.ಪಿ.ಎಂ. ಸಂಯುಕ್ತ ಹೋರಾಟ ರಂಗ ಮಾಡಿಕೊಂಡರು ಎನ್ನುವ ಕಾರಣಕ್ಕಾಗಿ ಅದನ್ನು ಲಾಕ್‌ಔಟ್ ಮಾಡಿದರಲ್ಲ. ಇದು ಏತಕ್ಕೆ ಆಯಿತು. ಇದರ ಬಗ್ಗೆ ತಾವು ಜೆನ್ಯುಯಿನ್ ಆಗಿ ವಿಚಾರ ಮಾಡಬೇಕು. ಲಾಕ್‌ಔಟ್ ಕಾನೂನು ಬದ್ಧವಾಗಿ ಆಯಿತೇ. ಹಾಗೆ ಆಗದೇ ಇದ್ದರೆ, ಇದಕ್ಕೆ ಹೊಣೆ ಯಾರು? ಮತ್ತು ಅಲ್ಲಿಂತಕ್ಕ ಸಣ್ಣಪುಟ್ಟ ಎರಡು ಮೂರು ಕಾರಣಕ್ಕಾಗಿ ಅಧಿಕಾರಿಗಳಿಗೆ ಏನು ವಜಾ ಮಾಡಿದ್ದಾರೆ, ಅವರನ್ನು ನೀವು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ನಾನು ಅದರ ಬಗ್ಗೆ ಹೆಚ್ಚು ಹೇಳುವುದಿಲ್ಲ. ಮತ್ತೊಂದು

ಬಹಳ ಮುಖ್ಯವಾದುದು ಏನೆಂದರೆ ಹಟ್ಟಿ ಗೋಲ್ಡ್ ಮೈನ್ಸ್‌ನಲ್ಲಿ ನಾಲ್ಕೂವರೆ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ, ನನ್ನ ಹತ್ತಿರ ಅವರ ಪ್ರತಿನಿಧಿಗಳು ಬಂದಿದ್ದರು, ಅವರು ರಿಲೈ ಹಂಗರ್ ಸ್ಟ್ರೈಕ್ ಮಾಡುತ್ತಿದ್ದಾರೆ. ನಾನು ಅವರಿಗೆ ಹೇಳಿದೆ, ನಿಮಗೆ ಇದಕ್ಕೆ ಕಾರಣ ಇಲ್ಲ, ನಿಮಗೆ ವಯಸ್ಸಿನಲ್ಲಿ, ಅನುಭವದಲ್ಲಿ ಎರಡರಲ್ಲೂ ತಂದೆಯಾಗಿರತಕ್ಕ ಶ್ರೀಮಾನ್ ಪಾಟೀಲರು ಇದ್ದಾರೆ. ನೀವು ಅವರ ಹತ್ತಿರ ಹೋಗಿ ನೋಡಿ, ನಿಮಗ ಪರಿಹಾರ ಸಿಕ್ಕುತ್ತದೆ ಎಂದು ಹೇಳಿ ಕಳುಹಿಸಿದೆ. ಅವರ ಡಿಮ್ಯಾಂಡ್ಸ್ ಏನು? ಈಗ ಹಟ್ಟಿ ಗೋಲ್ಡ್ ಮೈನ್ಸ್‌ನಲ್ಲಿ ಚಿನ್ನ ತೆಗೆಯುತಕ್ಕ ಕೆಲಸ ಮಾಡತಕ್ಕವರು ನಾಲ್ಕೂವರೆ ಸಾವಿರ ಜನರು ಇದ್ದಾರೆ. ಐದು ಸಾವಿರಕ್ಕೆ ಏರಿಸಿದರೆ, ಈಗ ತಾವು ಎಷ್ಟು ಸ್ಪೆಸಿಫಿಕೇಷನ್‌ನಲ್ಲಿ ತೆಗೆಯಬೇಕೆಂದು ಹೇಳಿದ್ದೀರೋ, ಅಷ್ಟು ತೆಗೆಯಲಿಕ್ಕೆ ಸಾಧ್ಯ ಆಗುತ್ತದೆ. ಆದ್ದರಿಂದ ಹೆಚ್ಚಿನವರನ್ನು ನೌಕರರಿಗೆ ತೆಗೆದುಕೊಳ್ಳಿ, ನೀವು ೧೦ಲಕ್ಷ, ೧೧ಲಕ್ಷ ಓವರ್‌ಪೇಮೆಂಟ್ ಕೊಡುತ್ತಿದ್ದೀರಿ, ಅದಕ್ಕೆ ಬದಲು ಶಾಶ್ವತವಾಗಿ ಒಂದೂವರೆ ಸಾವಿರ ಜನರಿಗ ಕೆಲಸ ಕೊಡಲಿಕ್ಕೆ ಸಾಧ್ಯ ಇದ್ದರೆ ಕೊಡಿ.

ಮತ್ತೆ ಅಲ್ಲಿಯ ನೌಕರರು ಇದಕ್ಕಾಗಿ ಆಮರಣಾಂತ ಉಪವಾಸ ಮಾಡುತ್ತೇವೆಂದು ಹೇಳಿದ್ದಾರೆ. ದಯಮಾಡಿ ಈ ಆಮರಣಾಂತ ಉಪವಾಸವನ್ನು ಮಾಡುವುದಕ್ಕೆ ಅವಕಾಶ ಕೊಡಬೇಡಿ, ಅವರನ್ನು ಕರೆಸಿ ಮಾತನಾಡಿ ಪರಿಹಾರವನ್ನು ಒದಗಿಸಿ ಕೊಡಿ. ಇನ್ನು ಹಾಸನದಲ್ಲಿ ಮೈಸೂರು ಕಿರ್ಲೋಸ್ಕರ್ ಸಂಸ್ಥೆ ಇದೆ. ಅದು ಒಂದು ಕಾಲಕ್ಕೆ ರೈತರಿಗೆ ಬೇಕಾದಂತಹ ಸಣ್ಣ ಪುಟ್ಟ ಉಪಕರಣಗಳನ್ನು ತಯಾರು ಮಾಡುವಂತಹ ಒಂದು ಸಂಸ್ಥೆಯಾಗಿತ್ತು. ಈಗ ಅದು ಸಂಪೂರ್ಣವಾಗಿ ಮುಚ್ಚತಕ್ಕಂತಹ ಒಂದು ಸ್ಥಿತಿಗೆ ಬಂದಿದೆ ಅದನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿಸಬೇಕೆಂಬ ಬಹುದಿನದ ಬೇಡಿಕೆ ಇದೆ ಅದನ್ನು ತಾವು ಪರಿಶೀಲಿಸಬೇಕು. ಈ ಬೇಡಿಕೆಯ ಮೇಲೆ ನನ್ನ ಕೆಲವು ಅನಿಸಿಕೆಗಳನ್ನು ಕಂದಾಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ ಅವರು ಈಗಾಗಲೇ ವಿನೇ ಕಂದಾಯ ಮಂತ್ರಿಗಳು ಅದರ ಕಾರ್ಯ ಯಶಸ್ವಿಯಾಗಲೀ, ಯಶಸ್ವಿಯಾಗದೇ ಇದ್ದರೆ, ನಾನೇ ಅದನ್ನು ವಿರೋಧ ಮಾಡತಕ್ಕಂತಹ ಪ್ರಸಂಗ ಬರಬಹುದು ಅದಕ್ಕೆ ನನಗೆ ಅವಕಾಶ ದೊರೆಯದೇ ಇರಲಿ ಎಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್‌ಮನ್.—ಈಗಾಗಲೇ ಸಾಕಷ್ಟು ಸಮಯವಾಗಿದೆ. ಇವತ್ತು ಬೇಡಿಕೆಯ ಬಗ್ಗೆ ಚರ್ಚೆಯನ್ನು ಮುಗಿಸಬೇಕೆಂದು ಕಾಣುತ್ತದೆ. ಇನ್ನೂ ಬಹಳ ಜನ ಭಾಷಣ ಮಾಡುವವರು ಇದ್ದಾರೆ. ದಯಮಾಡಿ ಎಲ್ಲರೂ ೧೦ ನಿಮಿಷಕ್ಕೆ ತಮ್ಮ ಭಾಷಣವನ್ನು ಸೀಮಿತಗೊಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಂದಾಯ, ಕಾರ್ಮಿಕ ಮತ್ತು ಉದ್ಯೋಗ ಇಲಾಖೆಗಳ ಬೇಡಿಕೆಗಳಿವೆ. ಆದ್ದರಿಂದ ಮಾತನಾಡಲು ಸ್ವಲ್ಪ ಹೆಚ್ಚು ಸಮಯವನ್ನು ತಾವು ಕೊಡಬೇಕು.

† ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಇಟ್ಟಿರತಕ್ಕಂತಹ ಬೇಡಿಕೆಗಳನ್ನು ತುಂಬು ಹೃದಯದಿಂದ ಸ್ವಾಗತ ಮಾಡುತ್ತಾ ನನ್ನ ಕೆಲವಾರು ಅನಿಸಿಕೆಗಳನ್ನು ಸಭೆಯ ಮೂಲಕ ಅವರಿಗೆ ಮನವರಿಕೆ ಮಾಡಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ವಿರೋಧ ಪಕ್ಷದವರು ಇದು ಮಾತ್ರ ಇಲಾಖೆ ಎಂದು ಹೇಳಿದರು. ಹಳೇ ಕರ್ನಾಟಕದಲ್ಲಿ ಹಣಕ್ಕಾಗಿ ಕ್ರೋಢೀಕರಿಸಲಿಕ್ಕೆ ಈ ಒಂದು ಇಲಾಖೆ ಮಾತ್ರ ಇತ್ತು. ನಾನು ತಿಳಿದಂತೆ ಮೊದಲು ಅಠಾರ ಕಛೇರಿ ಎಂದು ಹಿಂದೆ ಇತ್ತು ಈಗ ಆ ಕಚೇರಿಗಳನ್ನು ಯಾವ ಕಚೇರಿಗಳೆಂದು ಕರೆಯಬೇಕೋ ಗೊತ್ತಾಗಲಿಲ್ಲ, ಮೊದಲು ಈ ಇಲಾಖೆಯಲ್ಲಿ ೧೨ ತರಹದ ಗ್ರಾಮ ಸೇವಕರು ಇದ್ದರು. ಆಮೇಲೆ ಅದು ಆರು ಆಯಿತು. ಈಗ ಒಂದು ಆಗಿದೆ. ಅಂದರೆ ಪಟೇಲ, ಶ್ಯಾನಭೋಗ, ತೋಟಿ, ತಳವಾರ ನೀರುಗಂಟಿ ಎಂದು ಇದ್ದವರನ್ನು ತೆಗೆದು ಈಗಆಧುನಿಕ ಬ್ರಹ್ಮರನ್ನು ಸೃಷ್ಟಿ ಮಾಡಿದ್ದೇವೆ ಅವರನ್ನು ವಿಲೇಜ್ ಅಕೌಂಟೆಂಟ್ ಎಂದು ಕರೆಯುತ್ತಿದ್ದೇವೆ ಇವರು ಮೇಲ್ವಿಚಾರಕರಾದ ಮೇಲೆ ಹಳ್ಳಿಗಳಲ್ಲಿ ಇವತ್ತಿನ ದಿವಸ ಸರಕಾರ ಇಲ್ಲ ಎನ್ನುವ ಮಟ್ಟಕ್ಕೆ ನಾವು ಬಂದಿದ್ದೇವೆ ಆ ಊರಿನಲ್ಲಿರತಕ್ಕಂತಹ ಬಲಾಢ್ಯರು ಸಾರ್ವಜನಿಕ ರಸ್ತೆಯನ್ನು ಅಡ್ಡಗಟ್ಟಿ ಬಡವರಿಗೆ ತೊಂದರೆ ಕೊಟ್ಟರೆ, ಸರ್ಕಾರದ ಮರಕಡಿದರೆ ಅಲ್ಲಿರತಕ್ಕಂತಹ ಪಟೇಲರು ಮತ್ತು ಶಾನುಭೋಗರು ಕೂಡಲೇ ಟಿ.ಟಿ. ಕಳಿಸುತ್ತಿದ್ದರು ಮತ್ತು ರಿಪೋರ್ಟ್ ಕಳುಹಿಸುತ್ತಿದ್ದರು. ಯಾರಾದರು ಬಂದರೆ ಏಕೆ ಬಂದಿದ್ದೀರಿ, ಇಲ್ಲಿ ನಿಮ್ಮ ಸಂಬಂಧದವರು ಯಾರಿದ್ದಾರೆಂದು ಕೇಳುತ್ತಿದ್ದರು, ಅವರು ಸರಿಯಾಗಿ ಹೇಳದಿದ್ದರೆ ಚಾವಡಿಯಲ್ಲಿ ಅವರನ್ನು ಕೂರಿಸಿ ಊರಿನ ಜನರನ್ನು ಕರೆಸಿ ವಿಚಾರಣೆ ಮಾಡುತ್ತಿದ್ದರು. ಸರ್ಕಾರಿ ಗುಂಡು ತೋಪುಗಳ ಬಗ್ಗೆ ಯಾರೂ ಸಹ ಒಂದು ವರದಿ ಕೊಟ್ಟಿಲ್ಲ, ಇವತ್ತು ಗೋಮಾಳವನ್ನು ಪೂರ್ಣವಾಗಿ ಆಕ್ರಮಿಸಿಕೊಂಡಿದ್ದಾರೆ. ಎಲ್ಲೂ ಕೂಡ ಗೋಮಾಳವಿಲ್ಲದ ಹಾಗೆ ಮಾಡಿದ್ದಾರೆ. ಇವತ್ತು ಕುರಿಗಳನ್ನು ಸಾಕಿದವರೆ ಅವುಗಳ ಮೇವಿಗೆ ಏನು ಮಾಡಬೇಕೆಂಬ ಪ್ರಶ್ನೆ ಬಂದಿದೆ,

೪–೧೫ ಪಿ. ಎಂ.

ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಹಳ್ಳಿಗಳಲ್ಲಿ ಖಂಡಿತವಾಗಿಯೂ ಸರ್ಕಾರದ ಯಾವುದೇ ರೀತಿಯ ಕಾರ್ಯಾಚರಣೆಯು ನಡೆಯುತ್ತಿಲ್ಲ ಹಳ್ಳಿಗಳಲ್ಲಿ ಬೇಜವಾಬ್ದಾರಿ ಬರಲಿಕ್ಕೆ, ಈ ರೀತಿ ಕಾನೂನನ್ನು ಕೈಗೆ ತೆಗೆದುಕೊಳ್ಳಲಿಕ್ಕೆ ಕಾರಣ ಹಿಂದೆ ಇದ್ದಂಥ ಕ್ರಮ ತಪ್ಪಿ ಹೊಸ ಕ್ರಮ ಬಂದಿದ್ದರಿಂದ ವಿಲೇಜ್ ಅಕೌಂಟೆಂಟ್‌ಗಳ ಬಗ್ಗೆ ನಾನು ಹೇಳುವುದಾದರೆ, ಒಂದೊಂದು ಹಳ್ಳಿಯ ಪಂಚಾಯಿತ್ತಿಗೆ ಒಬ್ಬೊಬ್ಬರನ್ನು ವಿಲೇಜ್ ಅಕೌಂಟೆಂಟ್‌ಗಳನ್ನು ನೇಮಕ ಮಾಡಿದ್ದೀರಿ. ಆತ ಎಂದೂ ಕೂಡ ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರುವುದಿಲ್ಲ, ಅವರು ಏನಿದ್ದರೂ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಅಥವಾ ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ವಾಸಮಾಡಿಕೊಂಡು ತಮ್ಮ ಕಾರ್ಯಾಚರಣೆಯನ್ನು ಮಾಡುತ್ತಿದ್ದಾರೆ ಯಾರಾದರೂ ಒಬ್ಬ ರೈತ ತನ್ನ ಮಗನನ್ನು ಶಾಲೆಗೆ ಸೇರಿಸಬೇಕಾದರೆ, ಇನ್‌ಕಂ ಸರ್ಟಿಫಿಕೇಟ್ ಬೇಕು ಎಂದರೆ ಇವರನ್ನು ಇಡೀ ತಾಲ್ಲೂಕ್‌ನಲ್ಲಿ ಹುಡುಕಬೇಕಾಗುತ್ತದೆ. ಇವರೇನಾದರೂ ತಾಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿದ್ದರೆ ಯಾವುದಾದರು ಕ್ಲಬ್, ಹೋಟೆಲ್, ಅಥವಾ ಬಾರ್‌ನಲ್ಲಿ ಹುಡುಕಿದರೆ ಮಾತ್ರ ಸಿಕ್ಕುತ್ತಾರೆ ಇಲ್ಲದಿದ್ದರೆ ಬೇರೆಕಡೆ ಸಿಕ್ಕುವುದಿಲ್ಲ. ಈ ರೀತಿ ಇರುವಾಗ ನಮ್ಮ ಸರ್ಕಾರದ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದಕ್ಕೆ ನಾವು ಏನು ಮಾಡಬೇಕು ? ಈ ಮಾತನ್ನು ನಾನು ವಿಧಿ ಇಲ್ಲದೆ ಹೇಳಬೇಕಾಗಿದೆ. ಇವತ್ತು ನನ್ನ ಹೆಸರಿನಲ್ಲಿ ಪಹಣಿ ಇದ್ದರೆ ನಾಳೆ ಸತ್ತು ಹೋಗಿರತಕ್ಕ ನನ್ನ ಅಪ್ಪನ ಹೆಸರನ್ನು ಯಾರಾದರು ಹೇಳಿದರೆ ಅವರ ಹೆಸರಿಗೆ ಪಹಣಿ ಬರೆಯುತ್ತಾರೆ ದುಡ್ಡು ಕೊಟ್ಟರೆ ಯಾರದ್ದು ಯಾರಿಗೆ ಬೇಕಾದರೂ ಬರೆಯುತ್ತಾರೆ ಇಲ್ಲದಿದ್ದರೆ ರೆಕಾರ್ಡ್‌ಗಳನ್ನು ಹತ್ತಾರುವರ್ಷಗಳಾದರೂ ನೋಡುವುದಿಲ್ಲ ಅನೇಕ ಪಹಣಿಗಳು ಹೀಗೇ ಮುಂದುವರಿದುಕೊಂಡು ಬರುತ್ತಿವೆ. ಅವುಗಳನ್ನು ಸರಿಪಡಿಸುವುದಕ್ಕೆ ಹೋಗಿಲ್ಲ ಯಾರ್‍ಯಾರ ಜಮೀನು ಯಾರ್‍ಯಾರಿಗೆ ಸೇರಿದೆ, ಯಾವ ಯಾವ ಸರ್ವೆ ನಂಬರ್‌ಗಳು ಯಾರ್‍ಯಾರಿಗೆ ಸೇರಿವೆ ಎಂಬುದು ಅವರಿಗೆ ಗೊತ್ತಿಲ್ಲ ಆಫೀಸ್‌ನಲ್ಲಿ ಕುಳಿತು ಹಿಂದೆ ಯಾರು ಏನು ಬರೆದಿರುತ್ತಾರೋ ಅದನ್ನೇ ನೋಡಿ ಕಾಪಿ ಮಾಡಿಕೊಂಡು ಹೋಗುತ್ತಿದ್ದಾರೆ ಇಂಥ ಸಾವಿರಾರು ಕೇಸುಗಳು ಇವೆ. ಅನೇಕ ಹೊಸ ಕೇಸುಗಳು ಸೃಷ್ಟಿಯಾಗಿವೆ. ಅವೆಲ್ಲವೂ ಇವತ್ತು ಕೋರ್ಟಿನಲ್ಲಿ ಬಿದ್ದಿವೆ ಇದಕ್ಕೆ ಕಾರಣ ವಿಲೇಜ್ ಅಕೌಂಟೆಂಟ್ ಅವನು ಮಾಡಿರತಕ್ಕ ತಪ್ಪಿನಿಂದಾಗಿ ಈ ರೀತಿ ಆಗಿದೆ. ಯಾರಾದರೂ ಹೋಗಿ ನನ್ನ ಖಾತೆಯನ್ನು ಬದಲಾವಣೆ ಮಾಡಿಕೊಡಬೇಕೆಂದು ಕೇಳಿದರೆ ೨ ಸಾವಿರ, ೩ ಸಾವಿರ ಹೇಳುತ್ತಾರೆ. ಪಹಣಿ ಬದಲಾವಣೆಗೆ ೨೫೦ ರಿಂದ ೩೦೦ ರೂಪಾಯಿವರೆಗೆ ಕೊಡಬೇಕು. ಈ ಲಂಚ ಎಂಬುದು ಇವತ್ತೇ ಪ್ರಾರಂಭವಾದುದಲ್ಲ. ಇದು ಬಹಳ ಪುರಾತನ ಕಾಲದಿಂದಲೂ ಬಂದಿರತಕ್ಕದ್ದು. ಹಿಂದೆ ತಾಲೂಕುಗಳಿಗೆ ಯಾರಾದರೂ ತಹಸೀಲ್ದಾರ್ ಬಂದರೆ ಅವನಿಗೆ ಒಳ್ಳೆಯ ಹಾಲನ್ನು ಕರೆಯುತಕ್ಕ ಹಸುವನ್ನು ಕೊಟ್ಟರೆ, ಅವನು ಸಂತೃಪ್ತನಾಗಿ ಏನು ಕೆಲಸವನ್ನು ಬೇಕಾದರೂ ಮಾಡಿ ಕೊಡುತ್ತಿದ್ದ ಇದೂ ಒಂದು ರೀತಿಯ ಲಂಚ ಶ್ಯಾನುಭೋಗನಿಗೆ ತರಕಾರಿ ಕಂಡರೆ ಇಷ್ಟ ಕುಂಬಳಕಾಯಿ, ಬೂದುಕುಂಬಳಕಾಯಿ, ಬದನೇಕಾಯಿ, ಮುಂತಾದ ತರಕಾರಿ ಕೊಟ್ಟರೆ ಅವನಿಗೆ ಸಂತೃಪ್ತಿಯಾಗುತ್ತಿತ್ತು. ಆದರೆ ಇವತ್ತು ಈ ವಿಲೇಜ್ ಅಕೌಂಟೆಂಟ್‌ಗಳಿಗೆ ೨ ಸಾವಿರ, ೩ ಸಾವಿರ ರೂಪಾಯಿ ಕೊಟ್ಟರೂ ಸಂತೃಪ್ತಿಯಾಗುವುದಿಲ್ಲ. ಇವತ್ತು ನಾನು ೨೫೦ ರೂಪಾಯಿ ಕೊಟ್ಟು ನನ್ನ ಹೆಸರಿಗೆ ಒಂದು ಪಹಣಿಯನ್ನು ಬರೆಸಿಕೊಂಡರೆ, ನಾಳೆ ಬೆಳಿಗ್ಗೆ ಇನ್ಯಾರಾದರೂ ಬಂದು ೩೦೦ ರೂಪಾಯಿ ಕೊಟ್ಟರೆ ಅವನ ಹೆಸರಿಗೆ ಬರೆದಿರುತ್ತಾನೆ ಇಂಥ ಪರಿಸ್ಥಿತಿಯಲ್ಲಿ ಈ ವಿಲೇಜ್ ಅಕೌಂಟೆಂಟ್‌ಗಳ ಮಧ್ಯೆ ನಾವು ಸಿಕ್ಕಿಕೊಂಡಿದ್ದೇವೆ. ನಾನು ಹಿಂದೆ ತುರುವೇಕೆರೆ ತಾಲೂಕಿನ ದಂಡಿನಶಿವರದಲ್ಲಿ ಓದುತ್ತಿದ್ದೆ. ತುರುವೇಕೆರೆ ತಾಲೂಕಿನಲ್ಲಿ ಜೋಡಿ ಹುಣಸಂದ್ರ ಎಂದು ಇದೆ. ಅಲ್ಲಿ ಒಬ್ಬರು ಜೋಡಿದಾರರಾದ ಬ್ರಾಹ್ಮಣರಿದ್ದರು. ಅವರು ಆ ಕಾಲದಲ್ಲಿ ಮಹಾರಾಜರಿಗೆ ಒಂದು ಜ್ಯೋತಿಷ್ಯವನ್ನು ಹೇಳಿದ್ದು ನಿಜವಾಯಿತಂತೆ. ಆದಕ್ಕಾಗಿ ಆ ಮಹಾರಾಜರು ಖುಷಿಯಾಗಿ ಆ ಬ್ರಾಹ್ಮಣನಿಗೆ ಹೇಳಿದಂತೆ, ನಿನಗೆ ದುಂಡ ದಂಡಿನಶಿವರ ಉಳಿಯಿತು. ಜೋಡಿ ನಾನು ಕೊಡುತ್ತೇನೆ ಹುಣಸಂದ್ರ ಅಂತ ಆದೇಶ ಮಾಡಿದರು ಕೂಡಲೇ ಕರಣಿಕನನ್ನು ಕರೆದು ಆದೇಶ ಮಾಡಿ ಈ ಬ್ರಾಹ್ಮಣನಿಗೆ ಸನದ್‌ನ್ನು ಕೊಟ್ಟುಬಿಡು ಎಂತೆ ಹೇಳಿದರಂತೆ ಆ ಬ್ರಾಹ್ಮಣನಿಗೆ ಬಹಳ ಖುಷಿಯಾಯಿತಂತೆ. ಕಾರಣ ನಾಳೆ ನನಗೆ ದುಂಡ ದಂಡಿನ ಶಿವರ ಜೋಡಿ ಹುಣಸಂದ್ರ ಬರುತ್ತದೆ ಅಂತ ಮಾರನೇ ದಿನ ಆ ಬ್ರಾಹ್ಮಣ ಬಹಳ ಠೀವಿಯಿಂದ ಬಂದು ಸನದ್‌ನ್ನು ಕೇಳಿದನಂತೆ ನಾಳೆ ಬಾ ಎಂದು ಹೇಳಿದನಂತೆ

ನಾಡಿದ್ದು ಹೋದ ಮಹಾರಾಜರಿಗೆ ಹೇಳುತ್ತೇನೆ ಅಂದ. ಆಗ ಅವನು ಕುತ್ತಿಗೆಗೆ ಬಂತು ಎಂದು ಸನ್ನದ್ದು ಕೊಟ್ಟ. ಮನೆಯಲ್ಲಿ ಹೋಗಿ ನೋಡುತ್ತಾನೆ. ದುಂಡಿನ ದಂಡಿನ ಶಿವರ ಉಳಿಯಿತು, ಹುಣಸಂದ್ರ ಮಹಾರಾಜನ ಹತ್ತಿರ ತೆಗೆದುಕೊಂಡು ಹೋದ ಇದು ನಡೆದಿರತಕ್ಕ ಕಥೆ ಹೀಗೆ ಮಾಡಿದ್ದಾರೆ ನಿಮ್ಮ ಕರಣಿಕರು ಅಂದ ಏನೇನು ನಡೆಯಿತು ಅಂದರು ಮಹಾರಾಜರು ಎರಡು ದಿವಸ

ಹೋದೆ, ಮೂರನೇ ದಿವಸ ನಿಮಗೆ ಹೇಳುತ್ತೇನೆಂದ ಮೇಲೆ ಈ ಸನ್ನದು ಕೊಟ್ಟ ಅಂದ ಏನು ಕೇಳಿದ ಅಂದರು. ಏನೂ ಕೇಳಲಿಲ್ಲ, ೫ ರೂಪಾಯಿ ಕೇಳಿದ, ನಾನು ಕೊಡಲಿಲ್ಲ ಅಂದ. ಅಯ್ಯಾ ದಡ್ಡ, ೨-೩ ಸಾವಿರ ಎಕರೆ ಜಮೀನು ದಾನ ಮಾಡಿದ್ದರೂ ೫ ರೂಪಾಯಿ ಕೊಡಲಿಲ್ಲವಲ್ಲ, ನಿನ್ನ ಅದೃಷ್ಟ ಇಷ್ಟೇ ಹೋಗು ಅಂದರು ಮಹಾರಾಜರು ಕೂಡ ಈ ಲಂಚಕ್ಕೆ ಬೆಂಬಲ ಕೊಟ್ಟಿದ್ದರು ಎಂಬುದು ಇದರಿಂದ ಸಾಬೀತಾಗಿದೆ. ಅಂದರೆ ಲಂಚ ಎಂಬುದು ಹೊಸದಲ್ಲ. ಆದರೆ ಇಷ್ಟು ಜಾಸ್ತಿ ಈ ಪ್ರಮಾಣದಲ್ಲಿ ಬೆಳೆದದ್ದನ್ನು ನಾವು ಕಂಡಿರಲಿಲ್ಲ. ಇವತ್ತಿನ ದಿವಸ ಯಾವ ಸರ್ಕಾರ ಇರಲಿ, ಅವರು ನಡೆಸಿಗಲಿ, ಇವರು ನಡೆಸಿರಲಿ, ಹೇಳಿ ಕೊಳ್ಳಲಿಕ್ಕೆ ನಾಚಿಕೆಯಾಗುತ್ತದೆ. ಇದನ್ನು ತಪ್ಪಿಸುವುದಕ್ಕಾಗುವುದಿಲ್ಲವೇ?

ಶ್ರೀ ಶ್ರೀರಂಗದೇವರಾಯಲು.—ಮಹಾರಾಜರ ವಿಷಯವನ್ನು ಲಂಚದಲ್ಲಿ ತಂದದ್ದು ನನ್ನ ಮನಸ್ಸಿಗೆ ಬೇಸರವಾಗುತ್ತದೆ. ಬೇರೆ ಏನಾದರೂ ಹೇಳಿ.

(ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಜಿ. ಎಸ್. ಶಿವನಂಜಪ್ಪ.—ನಾನು ಯಾರ ಮನಸ್ಸಿಗೂ ಬೇಜಾರಾಗಬೇಕೆಂದು ಹೇಳಲಿಲ್ಲ. ಈ ಲಂಚದ ದೃಷ್ಟಿ ಇವತ್ತಿನದಲ್ಲ, ಬಹಳ ದಿನಗಳಿಂದ ಇದೆ ಎಂಬುದಕ್ಕೆ ಹೇಳಿದೆ ಇವತ್ತಿನ ದಿವಸ ಬಹಳ ಜಾಸ್ತಿಯಾಗಿದೆ. ಇದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ಬಹಳ ಕಿರುಕುಳವಾಗಿದೆ, ಇದನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಈ ಉದಾಹರಣೆಗೆ ಕೊಟ್ಟಿದ್ದೇ ಹೊರತು ಬೇರೆ ಉದ್ದೇಶದಿಂದ ಅಲ್ಲ. ಇವತ್ತಿನ ದಿವಸ ವಿಲೇಜ್ ಅಕೌಂಟೆಂಟನ್ನು ಎಲ್ಲಾ ರೀತಿಯಿಂದ ಬಳಸಿಕೊಳ್ಳುತ್ತಿದ್ದೇವೆ. ನಾವೇನು ಹೆರಿಡಿಟರಿ ರೈಟ್ಸನ್ನು ವಜಾ ಮಾಡಿ, ಅದು ಕಾನೂನಿಗೆ ವಿರುದ್ಧವಾಗಿದೆ, ಹೆರಿಡಿಟರಿ ರೈಟ್ಸನ್ನು ರೆಕಗ್ನೈಸ್ ಮಾಡುವುದಕ್ಕಾಗುವುದಿಲ್ಲವೆಂಬ ಕಾರಣದಿಂದ ಹೊಸ ವ್ಯವಸ್ಥೆ ಮಾಡಬೇಕೆಂದು ಏನು ಹೊಸ ವ್ಯವಸ್ಥೆ ಮಾಡಿದ್ದೇವೆ ಇದರಿಂದ ಸರ್ಕಾರಕ್ಕೇನು ಒಳ್ಳೆಯ ಹೆಸರು ಬರುತ್ತಿಲ್ಲ ಸಾರ್ವಜನಿಕರಿಗೂ ಇದರಿಂದ ಯಾವುದೇ ಉಪಯೋಗವಾಗುತ್ತಿಲ್ಲ. ಇದು ಅನಿವಾರ್ಯ. ವಿಲೇಜ್ ಅಕೌಂಟೆಂಟನ್ನು ಬೈದರೂ ಕೂಡ ನಾಳೆ ದಿವಸ ವಿಲೇಜ್ ಅಕೌಂಟೆಂಟ್ ಹತ್ತಿರ ಹೋಗಬೇಕು. ಇನ್‌ಕಂ ಸರ್ಟಿಫಿಕೇಟ್ ಪಾಣಿ, ವೆಲ್ ಓನರ್‌ಷಿಪ್, ಖಾತೆ ಬದಲಾವಣೆ ಇದಕ್ಕೆಲ್ಲ ಬೇರೆ ಮಾರ್ಗವೇ ಇಲ್ಲ. ಇದರ ಜೊತೆಗೆ ನಮಗೆ ಎಲ್ಲಾ ರೀತಿಯ ಸರ್ಟಿಫಿಕೇಟ್‌ಗಳನ್ನು ಕೊಡುವುದಕ್ಕೆ ವಿಲೇಜ್ ಅಕೌಂಟೆಂಟ್ ಬೇಕು. ಅವನಿಗೆ ನಾವು ಹೆಚ್ಚಿನ ಹೊರೆಯನ್ನು ಹಾಕಿದ್ದೇವೆ. ಲಂಚವನ್ನು ಯಾವ ರೀತಿ ಕಡಿಮೆ ಮಾಡಬೇಕೆಂಬುದರಲ್ಲಿ ನಾನು ಒಂದು ವಿಷಯವನ್ನು ಈ ಮನೆಗೆ ತಿಳಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ವಿಧಾನ ಸೌಧದಲ್ಲಿ ಉನ್ನತ ಸ್ಥಾನದಲ್ಲಿರತಕ್ಕ ನಾವೆಲ್ಲ ಸೇರಿ ಆನೆಸ್ಟ್ ಆಗಿದ್ದು ಕೆಳಗಡೆಯಿಂದ ಎಫಿಷಿಯನ್ಸಿಯನ್ನು ಎಕ್ಸ್‌ಪೆಕ್ಟ್ ಮಾಡಿದರೆ ಇದನ್ನು ಹತೋಟಿಗೆ ತರಬಹುದೆಂದು ನನಗನ್ನಿಸುತ್ತದೆ. ನಾವೇ ಲಂಚಕೋರರಾದರೆ ಕೆಳಗಿನವರು ಇದ್ದುದ್ದೂ ಲಂಚಕೋರರಾಗುವುದಕ್ಕೆ ಅವಕಾಶ ಇದೆ. ಆದುದರಿಂದ ಯಾರು ಸರ್ಕಾರ ನಡೆಸುತ್ತಾರೆ, ಯಾರು ಆಡಳಿತ ನಡೆಸುತ್ತಾರೆ ಅವರು ಮೊದಲು ಬಹಳ ಆನೆಸ್ಟ್ ಆಗಿರಬೇಕಾಗುತ್ತದೆ. ಅದನ್ನು ಕಟ್ಟುನಿಟ್ಟಾಗಿ ಪರಿಪಾಲನೆ ಮಾಡಬೇಕಾಗುತ್ತದೆ. ಆಗ ಮಾತ್ರ ನಾವು ಕೆಳಗಡೆ ಇರತಕ್ಕ ನೌಕರರನ್ನು ಲಂಚ ತೆಗೆದುಕೊಳ್ಳಬೇಡಿ ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ನಾವು ಯಾವ ಬಾಯಿಂದ ಹೇಳುವುದಕ್ಕೆ ಸಾಧ್ಯ ? ವಿಧಾನ ಸೌಧದಲ್ಲಿ, ಮಲ್ಟಿ ಸ್ಟೋರೀಡ್ ಬಿಲ್ಡಿಂಗ್‌ನಲ್ಲಿ ಒಂದು ಲಕ್ಷ ೨ ಲಕ್ಷ, ೫ ಲಕ್ಷದವರೆಗೆ ಸಬ್‌ರಿಜಿಸ್ಟ್ರಾರ್ ಅವರನ್ನು ವರ್ಗ ಮಾಡಲು ಲಂಚ ತೆಗೆದು ಕೊಳ್ಳುತ್ತಾರೆಂದು ಚಂದ್ರೇಗೌಡರು ಹೇಳಿದರು. ಹೀಗಿರುವಾಗ ತಹಶೀಲ್ದಾರರನ್ನು ನೂರು ರೂಪಾಯಿ ಲಂಚ ತೆಗೆದುಕೊಳ್ಳಬೇಡಿ ಎಂದು ಯಾವ ಬಾಯಿಂದ ಹೇಳಲು ಸಾಧ್ಯ ? ವಿಲೇಜ್ ಅಕೌಂಟೆಂಟ್‌ಗೆ ೫೦ ರೂಪಾಯಿ ತೆಗೆದುಕೊಳ್ಳಬೇಡ ಎಂದು ಹೇಗೆ ಹೇಳುವುದಕ್ಕಾಗುತ್ತದೆ ? ಆದ್ದರಿಂದ ವಿಧಾನ ಸೌಧ ಮತ್ತು ಮಲ್ಟಿ ಸ್ಟೋರೀಡ್ ಬಿಲ್ಡಿಂಗ್‌ನಲ್ಲಿ ಏನು ಕೆಲಸ ನಡೆಯುತ್ತಿದೆ ಇಲ್ಲಿ ಆನೆಸ್ಟ್ ಬರಬೇಕಾಗುತ್ತದೆ ಉದಾಹರಣೆಗೆ ಹೇಳುತ್ತೇನೆ, ಹಿಂದೆ ಕೆಂಗಲ್ ಹನುಮಂತಯ್ಯನವರು ತುಮಕೂರಿಗೆ ಬರುತ್ತಾರೆಂದರೆ ಕುಣಿಗಲ್ ಮಾರ್ಗ, ಮಧುಗಿರಿ ಮಾರ್ಗ, ಮತ್ತು ನೇರವಾಗಿ ತುಮಕೂರಿಗೆ ಬರುವ ಮಾರ್ಗದಲ್ಲಿ ಹೀಗೆ ಮೂರು ಕಡೆಯ ಅಧಿಕಾರಿಗಳು ಕಾಯುತ್ತಿದ್ದರು. ತುಮಕೂರಿಗೆ ಹೋಗಲು ೩ ಕಡೆ ದಾರಿ ಇದೆ. ಮಧುಗಿರಿ, ಕುಣಿಗಲ್ ಮತ್ತು ನೇರವಾಗಿ ಹೋಗಬಹುದು. ಅವರು ತುಮಕೂರಿಗೆ ಬರುತ್ತೇನೆಂದು ಪ್ರೋಗ್ರಾಂ ಕೊಟ್ಟರೆ ಮಧುಗಿರಿ ಮಾರ್ಗವಾಗಿಯೂ ಬರುತ್ತಿದ್ದರು, ಕುಣಿಗಲ್ ಮಾರ್ಗವಾಗಿಯೂ ಬರುತ್ತಿದ್ದರು ಮತ್ತು ಕೆಲವೊಮ್ಮೆ ನೇರವಾಗಿಯೂ ಬರುತ್ತಿದ್ದರು. ಮೂರೂ ಕಡೆಯ ಅಧಿಕಾರಿಗಳು ಎಲ್ಲರೂ ಎಚ್ಚರಿಕೆಯಿಂದ ತಮ್ಮ ಕಚೇರಿಗಳನ್ನು ಮತ್ತು ರಸ್ತೆಗಳನ್ನು ಚೆನ್ನಾಗಿ ಇಟ್ಟುಕೊಂಡಿರುತ್ತಿದ್ದರು ಇವತ್ತು ಯಾವ ಮಂತ್ರಿಗಳು ಎಲ್ಲಿ ಹೋಗುತ್ತಾರೆಂದು ೮ ದಿನಸ ಮೊದಲೇ ಕಾರ್ಯಕ್ರಮ ಕೊಟ್ಟು ಹೋಗಿರುತ್ತಾರೆ. ಆದರೆ ಇವರನ್ನು ಯಾರೂ ಸಹ ''ಕೇರ್'' ಮಾಡುವುದಿಲ್ಲ. ಇಂಥ ಒಂದು ಸ್ಥಿತಿಗೆ ಬಂದು ನಾವು ತಲುಪಿದ್ದೇವೆ. ಇಂಥ ಶೋಚನೀಯ ಸ್ಥಿತಿ ಕೊನೆಗಾಣಬೇಕಾಗುತ್ತದೆ. ಇಲ್ಲವೇ

ನಿರ್ಧಾಕ್ಷಿಣ್ಯವಾಗಿ ನಮಗೆ ಗೊತ್ತಾಗತಕ್ಕ ಲಂಚಕೋರ ಅಧಿಕಾರಿಗಳನ್ನು ಬಲಿ ಹಾಕಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಕೆ. ಎಚ್. ಪಾಟೀಲರನ್ನು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಅವರಿಗೆ ಆ ತಾಕತ್ತು ಇದೆ ಎಂದು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಅವರು ಮಂತ್ರಿಯಾಗಿ ಬಂದ ಎಂಟು ದಿವಸಗಳಲ್ಲೇ ಚುರುಕು ಮುಟ್ಟಿಸಿದ್ದಾರೆ. ನಾಲ್ಕೈದು ಜನ ಸಬ್-ರಿಜಿಸ್ಟ್ರಾರ್‌ಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಇನ್ನೂ ಮೂರು ನಾಲ್ಕು ಜನರನ್ನು ಸಸ್ಪೆಂಡ್ ಮಾಡುತ್ತೇನೆಂದು ಹೇಳಿದ್ದಾರೆ. ಇನ್ನು ಕೆಲವು ತಹಸೀಲ್ದಾರರ ಕೆಲಸ ಕಾರ್ಯಗಳ ಬಗ್ಗೆ ವರದಿ ತರಿಸಿದ್ದೇವೆಂದು ಹೇಳುತ್ತಿದ್ದಾರೆ. ಬಹುಶ: ಪಾಟೀಲರ ನೇತೃತ್ವದಲ್ಲಿ ಈ ಇಲಾಖೆಗೆ ಕಾಯಕಲ್ಪ ಬರುತ್ತದೆಂಬ ಆತ್ಮವಿಶ್ವಾಸ ನನಗಿದೆ. ವಿಲೇಜ್ ಅಕೌಂಟೆಂಟನ್ನು ಕೇವಲ ಬೈಯ್ದರೆ ಸಾಲದು. ಅವನಿಗೆ ಕೊಡಬೇಕಾದ ಅಗತ್ಯ ಸೌಲಭ್ಯಗಳನ್ನು ಕೊಡಬೇಕು. ಈಗ ಅದನ್ನು ಕೊಡುತ್ತಿಲ್ಲ. ಹರಿಜನ ವಿಲೇಜ್ ಅಕೌಂಟೆಂಟ್ ಯಾವುದೇ ಊರಿಗೆ ಹೋದರೂ ಮನೆ ಕೊಡುವುದಿಲ್ಲ. ಆತ ಹರಿಜನ ಕೇರಿಗೆ ಹೋಗಬೇಕು. ಆದರೆ ಅಲ್ಲಿ ಅವರಿಗೇ ಮನೆ ಸಾಲದು ಆದ್ದರಿಂದ ಪಟ್ಟಣದಲ್ಲಿ ಇರತಕ್ಕ ಮನೆ ಹುಡುಕಬೇಕಾಗುತ್ತದೆ. ಅಲ್ಲಿ ಕಾರ್ಯ ಮಾಡುತ್ತಾನೆ. ಆದ್ದರಿಂದ ಅವನಿಗೆ ಕಚೇರಿ ಎಲ್ಲಿರುತ್ತದೋ ಅಲ್ಲೇ ವಾಸ ಸ್ಥಳವನ್ನು ಕಟ್ಟಿಸಿ ಕೊಡತಕ್ಕ ಕೆಲಸವನ್ನು ಮಾಡಬೇಕು. ಇದನ್ನು ಮೊದಲು ಮಾಡಬೇಕು. ಮೊದಲು ಪಹಣಿ ಫಾರಮ್‌ಗಳು ೧ ರಿಂದ ೨೪ರವರೆಗೆ ಇತ್ತು ಈಗ ಅದೆಲ್ಲಾ ತೆಗೆದುಹಾಕಿ ಆರ್.ಟಿ.ಸಿ. ಫಾರಂ ನಂಬರ್ ೧ ಎಂದು ಮಾಡಿ ಅದರಲ್ಲಿ ಎಲ್ಲಾ ಬರೆದಿದ್ದಾರೆ. ಇವರನ್ನು ಆಧುನಿಕ ಬ್ರಹ್ಮ ಎಂದು ಏತಕ್ಕೆ ಕರೆದೆ ಎಂದರೆ. ಜಮೀನಿನ ಹಿಸ್ಟರಿ ಹಿಂದೆ ಇದ್ದ ಫಾರಂನಲ್ಲಿ ಇರುತ್ತಿತ್ತು. ಈಗಿನ ವ್ಯವಸ್ಥೆಯಲ್ಲಿ ಇರುವುದಿಲ್ಲ ಶಿವಮ್ಮಪ್ಪನ ಖಾತೆಯಲ್ಲಿ ಬೊಮ್ಮಪ್ಪನ ಖಾತೆ ಎಂದು ಬರೆದು ಕೊಟ್ಟರೂ ಕೋರ್ಟಿನಲ್ಲಿ ಅಪ್‌ಹೆಲ್ಡ್ ಆಗುತ್ತದೆ. ಒಂದೇ ಒಂದು ಉದಾಹರಣೆ ಹೇಳುತ್ತೇನೆ. ತುಮಕೂರಿನ ಕಸಬಾ ಸರ್ವೆ ನಂಬರ್ ೩೨ ಇತ್ತು. ಇದು ಯಾರೋ ಒಬ್ಬ ಶಾನುಭೋಗರ ಹಕ್ಕಿಗೆ ಸೇರಿರತಕ್ಕದ್ದು. ಅದು ೮ ಎಕರೆ ವಿಸ್ತೀರ್ಣ ಇತ್ತು. ಯಾರೋ ಒಬ್ಬ ಬಂದ ಹುಚ್ಚಪ್ಪ ೨ ಎಕರೆ ಎಂದು ಬರೆದ ಅದು ಮುನ್ಸೀಫ್ ಕೋರ್ಟಿನಲ್ಲಿ ಡಿಕ್ರಿ ಆಗಿದೆ, ಹುಚ್ಚಪ್ಪ ಎಂದು ಬರೆದ ಹುಚ್ಚ ಯಾರು ಎಂದು ನೋಡಲಿಲ್ಲ. ಹುಚ್ಚಪ್ಪನ ಹೆಸರು ಪಹಣಿ ಮೇಲೆ ಅಥವಾ ರೆಕಾರ್ಡ್ ಆಫ್ ರೈಟ್ಸ್ ಮೇಲೆ ಎರಡು ಎಕರೆ ಜಮೀನಿಗೆ ಬಂದಿದೆ. ಒಂದು ಎಕರೆಗೆ ಒಂದು ಕೋಟಿ ಅಥವಾ ಎರಡು ಕೋಟಿ ಬೆಲೆ ಕೊಟ್ಟರೂ ಸಾಲದು. ಅಂಥ ಬೆಲೆ ಬಾಳುತ್ತದೆ. ಕೇವಲ ಹುಚ್ಚಪ್ಪ ಎಂದು ಆರ್. ಆರ್. ಟಿ. ಸಿ. ಯಲ್ಲಿ ಬರೆದ ತಕ್ಷಣ ಅವನಿಗೆ ರೈಟ್ಸ್ ಬರುವುದಾದರೆ ವಿಲೇಜ್ ಅಕೌಂಟೆಂಟಿನ ಪಾತ್ರ ಎಷ್ಟು, ವಿಲೇಜ್ ಅಕೌಂಟೆಂಟನ ಬೆಲೆ ಎಷ್ಟು ಎಂಬುದನ್ನು ಯೋಚನೆ ಮಾಡಬೇಕು. ಹಿಂದೆ ಇದ್ದ ೨೪ ಫಾರಂಗಳಲ್ಲಿ ಹೀಗೆ ಬರೆಯುವುದಕ್ಕೆ ಆಗುತ್ತಾ ಇರಲಿಲ್ಲ. ಆರ್.ಆರ್ ೫-೬ರಲ್ಲಿ ಜಮೀನಿನ ಎಲ್ಲಾ ಹಕ್ಕುಬಾಧ್ಯತೆಗಳು, ಜಮೀನಿನ ವಿಸ್ತೀರ್ಣ ಎಲ್ಲಾ ವಿವರಗಳು ಬರುತ್ತಿತ್ತು ಹೊಸ ಫಾರಂಗಳನ್ನು ಈಗ ಇಂಟ್ರೊಡ್ಯೂಸ್ ಮಾಡಿದ್ದಾರೆ. ಆದರೆ ಆ ಫಾರಂಗಳನ್ನು ಕೂಡ ಕೊಡುವುದಕ್ಕೆ ಯೋಗ್ಯತೆ ಇಲ್ಲದ ಸ್ಥಿತಿಗೆ ನಾವು ಬಂದಿದ್ದೇವೆ. ಕಳೆದ ೭-೮ ವರ್ಷಗಳಿಂದ ಫಾರಂ ನಂಬರ್ ೧ ಕೊಡುತ್ತಾರೆ. ಫಾರಂ ನಂಬರ್ ಎರಡನ್ನು ಪದಪತ್ರಿಕೆಗೆ ಕೊಡುತ್ತಾರೆ. ಫಾರಂ ನಂಬರ್ ೩ ನ್ನು ಆರ್. ಟಿ. ಸಿ. ಗೆ ಕೊಡುತ್ತಾರೆ. ಫಾರಂ ನಂಬರ್ ೪,೫,೬,೭,೮,೯,೧೦,೧೧,೧೨,೧೩ ೧೪, ಒಂದೂ ಕೂಡ ಪ್ರಿಂಟ್ ಮಾಡಿ ಕೊಡುವುದಿಲ್ಲ. ಆದರೆ ಅಧಿಕಾರಿಗಳು ಫಾರಂ ಭರ್ತಿ ಮಾಡಬೇಕು ಎಂದು ಹೇಳುತ್ತಾರೆ, ಇಷ್ಟೊಂದು ಫಾರಂಗಳನ್ನು ವಿಲೇಜ್ ಅಕೌಂಟೆಂಟ್ ಕೊಂಡುಕೊಂಡು ಬರಬೇಕಾದರೆ ಒಂದೂವರೆ ಸಾವಿರ ರೂಪಾಯಿನಿಂದ ಎರಡೂವರೆ ಸಾವಿರ ರೂಪಾಯಿವರೆಗೆ ಆಗುತ್ತದೆ. ವಿಲೇಜ್ ಅಕೌಂಟೆಂಟ್ ಹಣ ಎಲ್ಲಿಂದ ತರುತ್ತಾನೆ ? ಅವನು ರೈತನ ಮೇಲೆ ಬೀಳುತ್ತಾನೆ. ನನಗೆ ಖಾತೆ ಮಾಡುವುದಕ್ಕೆ ೩ ಸಾವಿರ ರೂಪಾಯಿ ಕೊಡು ಎಂದು ಹೇಳುತ್ತಾನೆ. ಫಾರಂಗಳನ್ನು ಏಳೆಂಟು ವರ್ಷಗಳಿಂದ ಪ್ರಿಂಟ್ ಮಾಡಿಕೊಟ್ಟಿಲ್ಲ. ಇನ್ನೊಂದು ಕಡೆ ೧೦ ರೂಪಾಯಿ ಲಂಚ ತೆಗೆದುಕೊಳ್ಳಬೇಡ ಎಂದು ಹೇಳುತ್ತಿದ್ದೇವೆ. ಫಾರಂ ಭರ್ತಿ ಮಾಡಿಕೊಡಿ ಎಂದು ಈ ಕಾನೂನನ್ನು ಹೇರುತ್ತಿದ್ದೇವೆ. ಅದಕ್ಕಾಗಿ ಲಂಚದ ಹಾವಳಿ ಹೆಚ್ಚಾಗಿದೆಯೆಂದು ಹೇಳದೇ ವಿಧಿಯಿಲ್ಲ. ಸರ್ಕಾರಿ ಅಧಿಕಾರಿಗಳು ಬಹಳ ಜನ ಇದ್ದಾರೆ. ಈ ಫಾರಂಗಳನ್ನು ಏತಕ್ಕೆ ಪ್ರಿಂಟ್ ಮಾಡಿ ಕೊಟ್ಟಿಲ್ಲ ಎಂದು ಯಾವ ಅಧಿಕಾರಿಗಳೂ ವಿಚಾರ ಮಾಡಿಲ್ಲ.

ಆ ಫಾರಂಗಳನ್ನು ಪ್ರಿಂಟ್ ಮಾಡಿಸಿ ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಮತ್ತು ಅಧಿಕಾರಿಗಳಲ್ಲಿ ಕೇಳಿಕೊಳ್ಳುತ್ತೇನೆ. ವಿಲೇಜ್ ಅಕೌಂಟೆಂಟ್ ವಿಚಾರ ಹೇಳಿದ ಮೇಲೆ ರೆವಿನ್ಯೂ ಇನ್ಸ್‌ಪೆಕ್ಟರ್ ಬರುತ್ತಾರೆ. ಅವರ ಕಥೆ ನಮಗೂ ನಿಮಗೂ ಚೆನ್ನಾಗಿ ಗೊತ್ತಿದೆ. ಇದು ಆದ ಮೇಲೆ ಹೊಸದಾಗಿ ಸೃಷ್ಟಿ ಮಾಡತಕ್ಕ ಉಪ ತಹಸೀಲ್ದಾರ್ ಅವರು ನಾಡ ಕಛೇರಿಗಳನ್ನು ನೋಡಿಕೊಳ್ಳುತ್ತಾರೆ. ಆ ಮೇಲೆ ತಾಲ್ಲೂಕು ಆಫೀಸು. ನಾವೆಲ್ಲ ಸೇರಿಕೊಂಡು

ಅಧಿಕಾರ ವಿಕೇಂದ್ರೀಕರಣ ಆಗಬೇಕು. ಹಳ್ಳಿಗಳಲ್ಲಿರತಕ್ಕ ರೈತರಿಗೆ ಅಲ್ಲಲ್ಲೇ ಸಹಾಯ ಆಗಬೇಕೆಂಬ ಸದುದ್ದೇಶದಿಂದ ಇದನ್ನು ಮಾಡಿದ್ದು. ಆದರೆ ಅಧಿಕಾರ ವಿಕೇಂದ್ರೀಕರಣವಾಗದೆ, ಭ್ರಷ್ಟಾಚಾರ ವಿಕೇಂದ್ರೀಕರಣವಾಗಿದೆ. ಲಂಚವನ್ನು ಮೊದಲು ತಾಲ್ಲೂಕು ಆಫೀಸಿಗೆ ಕೊಟ್ಟು ಅವರ ಕೆಲಸವನ್ನು ಮಾಡಿಸಿಕೊಂಡು ಹೋಗುತ್ತಿದ್ದರು. ಈಗ ಅವರು ಹೋಬಳಿ ಮಟ್ಟಕ್ಕೆ ಬಂದು ಲಂಚ ಕೊಟ್ಟು ಅವರ ಕೆಲಸ ಮಾಡಿಸಿಕೊಂಡು ಹೋಗುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಮಾಶಾಸನವನ್ನು ಮಂಜೂರು ಮಾಡುವಂತಹ ಅಧಿಕಾರವನ್ನು ಸಹ ಅವರಿಗೇ ಕೊಟ್ಟಿದ್ದೇವೆ. ೧೦೦ರೂ. ಕೊಟ್ಟರೆ ಮಾಶಾಸನ ಮಂಜೂರಾಗುತ್ತದೆ. ಇಲ್ಲದಿದ್ದರೆ ಅರ್ಹತೆ ಇದ್ದರೂ ಮಂಜೂರು ಆಗುವುದಿಲ್ಲ. ಒಂದು ಕಡೆ ಏನಾಗಿದೆ ಎಂದರೆ, ಅವರಿಗೆ ೪ ಜನ ಗಂಡು ಮಕ್ಕಳು ಇದ್ದಾರೆ. ೫ ಎಕರೆ ಭೂಮಿ ಇದೆ. ವಿಲೇಜ್ ಅಕೌಂಟೆಂಟ್ ಇವರಿಗೆ ಮಾಶಾಸನವನ್ನು ಕೊಡಬಾರದೆಂದು ಸರ್ಟಿಫಿಕೇಟ್ ಕೊಟ್ಟಿದ್ದರೂ ಸಹ ೨೦೦ ರೂ. ಲಂಚ ಕೊಟ್ಟು ತಕ್ಷಣ ಅವರಿಗೆ ಮಾಶಾಸನ ಮಂಜೂರಾಗುತ್ತದೆ. ಈ ರೀತಿಯ ಅಕ್ರಮಗಳು, ಅವ್ಯವಹಾರಗಳು ಕೆಲವೆ ಕಡೆಗಳಲ್ಲಿ ನಡೆಯುತ್ತಿದ್ದವು. ಆದರೆ ಈಗ ತೀರ ಹದಗೆಟ್ಟು ಹೋಗಿದೆ. ಮಾನ್ಯ ಪಾಟೀಲ್‌ರವರ ಕಾಲವಲ್ಲಾದರೂ ಇದನ್ನು ಸರಿಪಡಿವುತಕ್ಕ ಕೆಲಸವನ್ನು ಮಾಡಬೇಕು. ರಾಜ್ಯದ್ಯಂತ ಶಾಲಾ ಕಾಲೇಜುಗಳು ಪ್ರಾರಂಭವಾಗಿವೆ. ಶಾಲಾ ಮಕ್ಕಳಿಗೆ ಸರ್ಟಿಫಿಕೇಟ್ ಕೊಡಲು ಒಬ್ಬನೇ ಒಬ್ಬ ವಿಲೇಜ್ ಅಕೌಂಟೆಂಟ್ ಅವರ ಕೇಂದ್ರ ಸ್ಥಳದಲ್ಲಿಲ್ಲ. ಹಳ್ಳಿಯ ಜನರೂ ಇದನ್ನು ನೋಡಿ ಸಾಕಾಗಿ ಅಲೆದಾಡಿ ಸಾಕಾಗಿ ಈ ವರ್ಷ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದೇ ಬೇಡ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಇದರಿಂದ ನಮಗೆ ತೊಂದರೆಯಾಗಿದೆ. ಇದನ್ನು ಸರಿಪಡಿಸಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ಈ ವ್ಯವಸ್ಥೆ ಸರಿಹೋಗಬೇಕು. ಮತ್ತೆ ತಹಸೀಲ್ದಾರ್‌ರವರಿಗೆ ಡಿಸ್‌ಪ್ಯೂಟೆಡ್ ಕೇಸುಗಳು ಬರುತ್ತವೆ. ಅಲ್ಲಿ ಯಾವ ರೀತಿ ಕೆಲಸ ನಡೆಯುತ್ತದೆ ಎಂಬುದನ್ನು ಹೇಳುವುದಕ್ಕೇ ಸಾಧ್ಯವಿಲ್ಲ. ಎಲ್ಲಾ ಅಧಿಕಾರಿಗಳೂ ಇದೇ ರೀತಿ ಇದ್ದಾರೆಂದು ನಾನು ಭಾವಿಸುವುದಿಲ್ಲ. ಒಳ್ಳೆಯ ಅಧಿಕಾರಿಗಳೂ ಸಹ ಇದ್ದಾರೆ. ರೆವಿನ್ಯೂ ಸೆಕ್ರೆಟರಿಯವರು ಇದ್ದಾರೆ. ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಇನ್ನೊಬ್ಬರು ಶ್ರೀ ನರಸಿಂಹಯ್ಯ ಅಂತಹ ಅಧೀನ ಕಾರ್ಯದರ್ಶಿಯವರು ಇದ್ದಾರೆ. ಅವರೂ ಕೂಡ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಮ್ಮ ತುಮಕೂರಿಗೆ ಒಳ್ಳೆಯ ಡಿ.ಸಿ.ಗಳು ಬಂದಿದ್ದರು. ಒಳ್ಳೆಯ ಕೆಲಸ ಮಾಡಿದವರೂ ಇದ್ದಾರೆ. ಹಿಂದೆ ಶ್ರೀಮಾನ್ ಅರಸ್ಮಗಂರವರು ಈ ಸದನದಲ್ಲಿ ಒಂದು ಪ್ರಶ್ನೆ ಮಾಡುತ್ತಿದ್ದರು. ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಅವರು "They are worst people on earth'' ಎಂದು ಹೇಳುತ್ತಿದ್ದರು. ಆಗ ನಾನು ಈ ಅಧಿಕಾರಿಗಳನ್ನು ಡಿಫೆಂಡ್ ಮಾಡಿಕೊಂಡಿದ್ದೆ. ಈ ರಾಜ್ಯಕ್ಕೆ ಐ.ಎ.ಎಸ್. ಅಧಿಕಾರಿಗಳು ಬೇಡ ಎಂಬಂದಾಗಿ ಅವರು ಹೇಳುತ್ತಿದ್ದರು. ಅದಕ್ಕೆ ನಾನು ಇಲ್ಲ ಈ ಸರ್ಕಾರದ ಕೆಲಸ ಕಾರ್ಯಗಳನ್ನು ಮಾಡಿಕೊಂಡಿರುವವರು ಹೋಗುವವರು ಅವರೇ, ಆದ್ದರಿಂದ ಅವರನ್ನು ತೆಗಳುವುದು ಸರಿಯಲ್ಲ. There will be one or two black sheep. ಅಂತಹವರನ್ನು ಗುರುತಿಸೋಣ ಎಂದು ಹೇಳುತ್ತಿದ್ದೆ. ಈ ಹಿಂದಿನ ೨೦ ವರ್ಷಗಳಲ್ಲಿ ಐ.ಎ.ಎಸ್. ಅಧಿಕಾರಿಗಳಲ್ಲಿ ಕೆಟ್ಟವರು, ಲಂಚಕೋರರು ಯಾರು ಇದ್ದಾರೆ ಎಂಬುದನ್ನು ಹುಡುಕಬೇಕಾಗಿತ್ತು. ಆದರೆ ಈಗ ಐ.ಎ.ಎಸ್. ಅಧಿಕಾರಿಗಳಲ್ಲಿ ಯಾರು ಪ್ರಾಮಾಣಿಕರು ಇದ್ದಾರೆಂಬುದನ್ನು ಹುಡುಕಬೇಕಾದ ಸಮಯ ಬಂದಿದೆ. ಇವತ್ತಿನ ದಿವಸ ಕರ್ನಾಟಕ ರಾಜ್ಯವನ್ನು ಅವರು ಆಳುತ್ತಿದ್ದಾರೆ. ಅವರ ಬಗ್ಗೆ ಕೂಲಂಕುಷವಾಗಿ ವಿಮರ್ಶೆ ಮಾಡಿ, ಯಾರು ತಪ್ಪು ಮಾಡಿದ್ದಾರೆ, ಯಾರು ಲಂಚಕೋರರು ಇದ್ದಾರೆ, ಅವರನ್ನು ಹಿಡಿದು ಬಲಿಯಹಾಕತಕ್ಕ ವ್ಯವಸ್ಥೆಯನ್ನು ನಾವು ಮಾಡದಿದ್ದರೆ, ನಾವೂ ನೀವೂ ಅರಣ್ಯ ರೋಧನ ಮಾಡಿದ ಹಾಗೆ ಆಗುತ್ತದೆ. ಈ ಸಭೆಯಲ್ಲಿ ಏನೋ ಶಿವನಂಜಪ್ಪ ಹೇಳುತ್ತಾನೆ. ನೋಡಿಕೊಳ್ಳೋಣ ಎಂಬ ಭಾವನೆ ಅವರಿಗೆ ಬಂದರೆ ಬಹಳ ಕಷ್ಟವಾಗುತ್ತದೆ. ಸರ್ಕಾರ ಯಾವುದೇ ಇರಲಿ ನಿಮ್ಮ ಪಕ್ಷದ್ದೇ ಇರಲಿ, ನಮ್ಮ ಪಕ್ಷದ್ದೇ ಇರಲಿ, ಅಧಿಕಾರಿಗಳ ಮನೋಭಾವ ಬದಲಾವಣೆಯಾಗದಿದ್ದರೆ ಬಹಳ ಕಷ್ಟವಾಗುತ್ತದೆ. ನಾವು ಎಷ್ಟೇ ಬಡಿದುಕೊಂಡರೂ ಅದು ಬರೀ ಅರಣ್ಯ ರೋಧನವಾದಂತಾಗುತ್ತದೆ. ಅದಕ್ಕೋಸ್ಕರ ಆ ದಿಕ್ಕಿನಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕು. ಅದಕ್ಕೋಸ್ಕರ ನಾವು ನಮ್ಮ ಪಾಟೀಲ್‌ರನ್ನು ಏನು ಕೇಳುತ್ತಿದ್ದೇವೆಂದರೆ, ಇಂತಹ ಐ.ಎ.ಎಸ್. ಅಧಿಕಾರಿಗಳು ಯಾರು ಯಾರು ಇದ್ದಾಗೆ, ದಯಮಾಡಿ ಮೊದಲು ಅವರನ್ನು ಬುಕ್ ಮಾಡಿ ಸಸ್ಪೆಂಡ್ ಮಾಡಿ ಎಂದು ಕೇಂದ್ರದವರಿಗೆ ಹೇಳಿ, ಅವರ ಸೇವೆ ನಮಗೆ ಬೇಡ ಎಂದು ಹೇಳತಕ್ಕ ದೊಡ್ಡ ನಿಲುವನ್ನು ಸನ್ಮಾನ್ಯ ಮಂತ್ರಿಗಳು ತೆಗೆದುಕೊಳ್ಳಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ಅದಕ್ಕೆ ಒಕ್ಕೊರಲಿನಿಂದ ಈ ಸಭೆಯು ಸಪೋರ್ಟ್ ಮಾಡುತ್ತದೆ ಎಂಬ ವಿಚಾರವನ್ನು ತಮ್ಮ ಮೂಲಕ ಅವರಿಗೆ ನಿವೇದನೆ ಮಾಡಿಕೊಳ್ಳುತ್ತೇನೆ. ಈಗ ಹಳ್ಳಿಗಾಡಿನಲ್ಲಿ ಭೂಮಿ ಮೇಲೆ ಜೀವನ ಮಾಡತಕ್ಕ ರೈತನ ಪರಿಸ್ಥಿತಿ ಬಹಳ ಕಷ್ಟವಾಗಿದೆ. ಪಕ್ಕದಲ್ಲೇ

೧೦ ಗುಂಟೆ ಜಮೀನನ್ನು ಉಸ್ತುವರಿ ಮಾಡಿಕೊಂಡಿರುತ್ತಾರೆ. ಆದರೆ ೧೨೦ ವರ್ಷಗಳಿಂದ ಪಹಣಿ ರೇಕಾರ್ಡ್ಸ್, ಟಿ.ಟಿ. ಇವೆಲ್ಲ ಬೇರೆಯವರ ಹೆಸರಿನಲ್ಲಿ ಇದೆ. ಇನ್ನು ಗೋಮಾಳ ಊರುಗಳಲ್ಲಿ ಒಂದು ಇಂಚ್ ಇಲ್ಲದ ಹಾಗೆ ಆಗಿದೆ. ಸರ್ಕಾರಿ ಖರಾಬ್ ಇಲ್ಲ, ಸರ್ಕಾರದವರು ಕೂಡಲೆ ಏನು ಒತ್ತುವರಿ ಮಾಡಿದಂತಹ ಜಮೀನು ಇದೆ, ಬಗರ್ ಹುಕುಂ ಮಾಡಿದಂತಹ ಜಮೀನುಗಳು ಯಾವುದು ಇದೆ, ಅವರಿಗೆ ಕೂಡಲೆ ಜಮೀನು ಮಂಜೂರು ಮಾಡುವಂತಹ ವ್ಯವಸ್ಥೆ ಆಗಬೇಕು. ಇದಕ್ಕೆ ಕಾನೂನನ್ನು ಬದಲಾವಣೆ ಮಾಡಬೇಕಾದರೆ ಮಾಡಿ. ಹರಿಜನ, ಗಿರಿಜನರಿಗೆ, ನಿರ್ಗತಿಕರಿಗೆ ಹೀಗೆ ಎಲ್ಲಾ ವರ್ಗದ ಜನತೆಗೆ ಆದ್ಯತೆ ಕೊಡಬೇಕೆಂದು ಕಳಕಳಿಯಿಂದ ಶ್ರೀ ಪಾಟೀಲ್‌ರವರನ್ನು ಹಾಗೂ ಈ ಸರ್ಕಾರವನ್ನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಅಸಿಸ್ಟೆಂಟ್ ಕಮೀಷನರ್‌ರವರ ಬಗ್ಗೆ ಹೇಳಬೇಕಾದರೆ, ಇವರ ಒಂದು ಕೆಲಸವೂ ಕೂಡ ನಮ್ಮ ಚಂದ್ರೇಗೌಡರು ಹೇಳಿದಹಾಗೆ, ಡಿವಿಜನಲ್ ಕಮೀಷನರ್ ಪೋಸ್ಟ್ ಹೇಗೆ ಇದೆ, ಅದೇರೀತಿ ಇದು ಇದೆ. ಡೆಪ್ಯೂಟಿ ಕಮೀಷನರ್ ಮತ್ತು ತಹಶೀಲ್ದಾರ್‌ರವರ ಮಧ್ಯೆ ಈ ಅಸಿಸ್ಟೆಂಟ್ ಕಮೀಷನರ್ ಪೋಸ್ಟ್ ಆಫೀಸ್ ಕೆಲಸ ಮಾಡುತ್ತಿದ್ದಾರೆ. ಯಾವುದೇ ರೀತಿಯ ಜವಾಬ್ದಾರಿಯುತ ವಾದಂತಹ ಕೆಲಸವು ಅವರಿಗೆ ಇಲ್ಲ. ಅವರು ಇಲ್ಲದೇ ಇದ್ದರು ಕೂಡ ಸರ್ಕಾರದ ಕೆಲಸ ನಡೆಯುತ ದೆ ಆದ್ದರಿಂದ ದಯಮಾಡಿ ಅಸಿಸ್ಟೆಂಟ್ ಕಮೀಷನರ್ ಹುದ್ದೆಯನ್ನು ಅಬಾಲಿಷ್ ಮಾಡಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ ಎಂದು ಹೇಳಬೇಕಾಗುತ್ತದೆ.

ಇನ್ನು ಡೆಪ್ಯೂಟಿ ಕಮೀಷನರ್ಸ್ ಬಗ್ಗೆ ಮಾನ್ಯ ಚಂದ್ರೇಗೌಡರು ಬಹಳ ಸ್ವಾರಸ್ಯವಾಗಿ ಒಂದು ಚುನಾವಣೆ ಬಗ್ಗೆ ಹೇಳಿದರು. ನಿಮ್ಮ ಸರ್ಕಾರ ಇದ್ದಾಗ ನೀವು ಹೇಳಿದ ರೀತಿಯಲ್ಲಿ ಇವರು ಕೇಳಿದರು. ಇವರು ಮಂಡಲ್ ಪಂಚಾಯತಿಯ ಚುನಾವಣೆಯನ್ನು ಮಾಡಿದರು. ಒಂದು ಮಂಡಲ್ ಅಲ್ಲ, ಇಡೀ ಕರ್ನಾಟಕ ರಾಜ್ಯದಲ್ಲಿ ಮಂಡಲ್ ಪಂಚಾಯತಿಗಳ ಚುನಾವಣೆ ಏನು ನಡೆಯಿತು, ಆಗ ಪ್ರಧಾನರ ಹಾಗೂ ಉಪಪ್ರಧಾನರ ಚುನಾವಣೆಗಳನ್ನು ೧೫-೨೦ ದಿವಸ ಮುಂದೂಡಿದರು. ಏತಕ್ಕೆಂದರೆ ನಾಮಕರಣದ ಲಿಸ್ಟ್ ಬಂದಿರಲಿಲ್ಲ. ಇದು ಚಂದ್ರೇಗೌಡರಿಗೆ ಗೊತ್ತೇ ಆಗಲಿಲ್ಲ. ಈಗ ನೀವು ಒಂದು ಮಂಡಲ್ ಪಂಚಾಯತಿಗೆ ತೊಂದರೆಯಾಯಿತೆಂದು ಹೊಟ್ಟೆಯುರಿಗೆ ಹೇಳುತ್ತಿದ್ದೀರಿ, ಆದರೆ ನಿಮ್ಮ ಕಾಲದಲ್ಲಿ ಇಡೀ ಕರ್ನಾಟಕ ರಾಜ್ಯದ ಎಲ್ಲ ಮಂಡಲ್ ಪಂಚಾಯಿತಿಗಳ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದಿರಿ; ಆಗ ನಿಮಗೆ ಜ್ಞಾನೋದಯವಾಗಿರಲಿಲ್ಲ. ಈಗ ಬುದ್ಧಿ ಬಂತು; ಆದರೂ ಜಿಲ್ಲಾಧಿ ಕಾರಿಯವರು ಸಮರ್ಪಕವಾಗಿ ಕೆಲಸ ಮಾಡುವಂತ ವ್ಯವಸ್ಥೆ ಆಗದೇ ಇರಲು ಹಲವಾರು ಕಾರಣಗಳಿವೆ. ಮೊದಲು ಜಮಾಬಂದಿ ಎಂದು ಮಾಡುತ್ತಿದ್ದರು. ಹೋಬಳಿಯಲ್ಲಿ ಒಂದು ಅಥವಾ ಎರಡು ಕಡೆ ಮಾಡುತ್ತಿದ್ದರು. ೨೦ ಹಳ್ಳಿಗಳನ್ನು ಸೇರಿಸಿ ಜಮಾಬಂದಿ ಮಾಡುತಿದ್ದರು. ಆಗ ೨೦ ಹಳ್ಳಿಯ ರೈತರು ಅಲ್ಲಿಗೆ ಬರುತ್ತಿದ್ದರು. ಅಲ್ಲಿ ಊರಿಗೆ ಪಹಣಿ ಖಾತೆ ಎಲ್ಲವನ್ನು ಬರೆದುಕೊಡುತ್ತಿದ್ದರು. ಕಂದಾಯ ಕಟ್ಟಿಸಿಕೊಳ್ಳುತ್ತಿದ್ದರು. ಈಗ ಯಾರು ಜಮಾಬಂದಿ ಮಾಡುತ್ತಿಲ್ಲ, ಯಾವುದೇ ಆಫೀಸರ್‌ಗೆ ಫೋನ್ ಮಾಡಿದರೂ ಮೀಟಿಂಗ್‌ಗೆ ಹೋಗಿದ್ದಾರೆಂದು ಹೇಳುತ್ತಾರೆ. ತಿಂಗಳಿಗೆ ೧೫ ದಿವಸ ಮೀಟಿಂಗ್‌ನಲ್ಲೇ ಕಾಲ ಕಳೆಯುತ್ತಾರೆ. ಏತಕ್ಕೆ ಬೇಕು ಈ ಮೀಟಿಂಗ್‌ಗಳು. ೨೦ ಅಂಶಗಳ ಕಾರ್ಯಕ್ರಮಗಳ ಒಂದು ಮೀಟಿಂಗನ್ನು ಮಾಡುತ್ತಾರೆ. ಅದನ್ನು ಮಾಡಲಿ ಸಂತೋಷ ; ಆದರೆ ಪ್ರತಿ ತಿಂಗಳು ಮೀಟಿಂಗ್ ಮೀಟಿಂಗ್ ಎಂದು ಟೈಮ್ ವೇಸ್ಟ್ ಮಾಡುತ್ತಿದ್ದಾರೆ. ಇದು ಬಿಟ್ಟರೆ ಬೇರೆ ಏನೂ ಕೆಲಸವಿಲ್ಲ. ಇನ್ನೂ ಏನಾದರೂ ಜೋರಾಗಿ ಕೇಳಿದರೆ ಬಾತ್‌ರೂಮ್‌ನಲ್ಲಿ ಇದ್ದಾರೆಂದು ಹೇಳುತ್ತಾರೆ. ಇದು ನಮಗೆ ಫೋನ್ ಮೂಲಕ ಬಂದಿರತಕ್ಕ ಉತ್ತರಗಳು. ಈ ತರಹ ಅಧಿಕಾರಿಗಳು ಕೆಲಸ ಮಾಡಿದರೆ ಆಡಳಿತ ನಡೆಸುವುದು ಕಷ್ಟವಾಗುತ್ತದೆ. ತಾವು ಈ ತರಹ ಮೀಟಿಂಗ್ ಮಾಡು ವುದನ್ನು ತಪ್ಪಿಸಬೇಕು ಹಳ್ಳಿಮಟ್ಟದಲ್ಲಿ ಮೊದಲು ಏನು ಅಧಿಕಾರಿಗಳು ಹೋಗಿ ಜನ ಸಂಪರ್ಕ ಮಾಡುತ್ತಿದ್ದರು. ಈಗ ಅದು ಮಾಡುತ್ತಿಲ್ಲ; ಅವರ ಕಷ್ಟ ಸುಖಗಳನ್ನು ಯಾರು ವಿಚಾರ ಮಾಡುತ್ತಿಲ್ಲ. ಅಧಿಕಾರಿಗಳು ಹಳ್ಳಿಗಳಿಗೆ ಹೋಗಿ ಕಷ್ಟ ಸುಖಗಳನ್ನು ವಿಚಾರ ಮಾಡುವಂತ ಕೆಲಸ ಆಗಬೇಕು.

ಉಪಾಧ್ಯಕ್ಷರು.—ಇನ್ನು ೨೬ ಜನರು ಮಾತನಾಡುವವರು ಇದ್ದಾರೆ.

ಶ್ರೀ ಜಿ. ಎಸ್. ಶಿವನಂಜಪ್ಪ.— ನೀವು ಗಂಟೆಯೊಡದರೆ ಕಷ್ಟವಾಗುತ್ತದೆ. ನಾನು ಇನ್ನೂ ಅರ್ಧವನ್ನು ಪೂರೈಸಿಲ್ಲ, ಇನ್ನು ಮುಜರಾಯಿ ಇದೆ, ಅದರ ಬಗ್ಗೆ ಮಾತನಾಡಬೇಕು. ಆದರೆ ಲೇಬರ್ ಮೇಲೆ ನಾನು ಮಾತನಾಡುವುದಿಲ್ಲ. ಇನ್ನು ೧೦ ನಿಮಿಷ ಮಾತನಾಡಲು ನನಗೆ ಅವಕಾಶ ಮಾಡಿಕೊಡಿ. ಈ ರೆವಿನ್ಯೂ ಇಲಾಖೆಗೂ ಈ ಮುಜರಾಯಿ ಇಲಾಖೆಗೂ ಗಂಟು ಹಾಕಿದ್ದೀರಿ.

ಈ ಇಲಾಖೆ ಬಗ್ಗೆ ವರದಿ ನಮಗೆ ಬಂದಿಲ್ಲ, ನಿಮಗೇನಾದರೂ ಕೊಟ್ಟಿದ್ದಾರೊ ಏನೋ ಗೊತ್ತಿಲ್ಲ. ಈ ಸದನಲ್ಲಿ ಯಾರಿಗೂ ಕೊಟ್ಟಿಲ್ಲ. ಏತಕ್ಕೆ ಈ ಇಲಾಖೆಯ ಮೇಲೆ ಏಕೆ ಇಷ್ಟು ಉದಾಸೀನತೆ ಎಂಬ ಪ್ರಶ್ನೆಯನ್ನು ಕೇಳಬೇಕಾಗುತ್ತದೆ.

ಶ್ರೀ ಬಿ. ಹೆಚ್. ಬನ್ನೀಕೋಡ್.—ಎರಡು ಪೇಜ್ ಬಿಟ್ಟರೆ ಮತ್ತೇನೂ ಇಲ್ಲ. ಕೇವಲ ಎರಡು ಪೇಜ್ ಬಂದಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಮ್ಮದೇ ಅಲ್ಲ ಆವರ ಸರ್ಕಾರದಲ್ಲೂ ಇದು ಇತ್ತು. ಅವರು ಸರ್ಕಾರ ನಡೆಸಿದಾಗ ಮಾಡಿದ್ದಾರೆ, ಈ ಸರ್ಕಾರ ಕೂಡಾ ಇದೇ ಮಾಡಿದೆ. ಅಧ್ಯಕ್ಷಿಣಿಯವರೇ, ದೇವಸ್ಥಾನಗಳ ತಂಟೆಗೆ ಹೋಗುವುದಕ್ಕೆ ಬ್ರಿಟೀಷರು ಬಹಳ ಹೆದರಿದ್ದರು. ದೇವಸ್ಥಾನಗಳಲ್ಲಿ ಭಂಡಾರವೇ ಇದೆ ಲೂಟಿ ಮಾಡಬಹುದು ಎಂದು ಅವರಿಗೆ ಗೊತ್ತಿತ್ತು. ಆದರೂ ಅವರು ದೇವಸ್ಥಾನಗಳ ಬಗ್ಗೆ ತಮ್ಮ ಕೈ ಹಾಕಿರಲಿಲ್ಲ. ಆದರೆ ಈಗ ಏಕಾ ಏಕಿ ನಮ್ಮ ದುರಾದೃಷ್ಟ ಎಂದು ನಾನು ಭಾವಿಸುತ್ತೇನೆ. ದೇವರಲ್ಲಿ ನಂಬಿಕೆ ಇರುವವರಲ್ಲಿ ನಾನೂ ಒಬ್ಬ. ದೇವರಿದ್ದಾನೆ ಆದರೆ ಆಕಾರ ಗೀಕಾರ ನಾನು ಕಾಣಲಿಲ್ಲ. ಸೂಪರ್ ಹ್ಯೂಮನ್ ಮನುಷ್ಯನಿಗೇ ಮಿಗಿಲಾದ ಒಂದು ಶಕ್ತಿ ಇದೆ. ಅದನ್ನು ನಾನು ದೇವರು ಎಂದು ಹೇಳುತ್ತೇನೆ. ಇನ್ನೊಬ್ಬ ಬಸವಣ್ಣ ಎಂದು ಕರೆಯ ಬಹುದು, ರಾಮ ಎಂದು ಕರೆಯುಬಹುದು. ಮುಸ್ಲಿಮರು 'ಅಲ್ಲಾ' ಎಂದು ಹೇಳುತ್ತಾರೆ. ಆದರೆ ಇವತ್ತಿನ ದಿವಸ ಹಿಂದೂ ದೇವಸ್ಥಾನಗಳ ಬಗ್ಗೆ ಈ ಒಂದು ಅನಾದರಣೆಯನ್ನು ಏಕೆ ಮಾಡಿದ್ದೇವೆಂದು ನಾನು ಪ್ರಶ್ನೆ ಹಾಕುತ್ತೇನೆ. ಇವತ್ತಿನ ದಿವಸ ಹಳ್ಳಿಗುಡಿನಲ್ಲಿ ಏನಾದರೂ ಅಧರ್ಮ, ಅನೀತಿ ಏನಾದರೂ ಆಗಿದ್ದರೆ ಅದು ನಮ್ಮಿಂದಲೇ ಪ್ರಾರಂಭ. ದೇವರನ್ನು ನಾವು ನೆಗ್ಲೆಟ್ ಮಾಡಿದ್ದೇವೆ. ದೇವಸ್ಥಾನಗಳಿಗೆ ಬೀಗ ಹಾಕಿದ್ದೇವೆ. ಇವತ್ತು ದೇವಸ್ಥಾನಕ್ಕೆ ಕತ್ತೆಗಳೂ ಕೂಡ ಹೋಗುವುದಕ್ಕೆ ಪ್ರೊಟೆಸ್ಟ್ ಮಾಡುತ್ತಿವೆ. ಕತ್ತೆಗಳೂ ಇವತ್ತು ಅಲ್ಲಿ ನಿಲ್ಲುವುದಕ್ಕೆ ಅಂಜಿಕೆ ಪಡುತ್ತವೆ. ಅಂತಹ ಸ್ಥಿತಿಗೆ ಹೋಗಿದ್ದೇವೆ. ಯಾರಿಗೆ ದೇವರಲ್ಲಿ ನಂಬಿಕೆ ಇಲ್ಲ, ಅವರನ್ನೂ ನಾವು ನೋಡಿದ್ದೇವೆ. ದೇವರಿಲ್ಲ ಎಂದು ಮನೆಗೆ ಹೋಗಿ ಪೂಜೆ ಮಾಡುತ್ತಾರೆ. ಅವರು ಈ ಸದನದಲ್ಲಿ ಇದ್ದಾರೆ. ಆದರೆ ಮನೆಯಲ್ಲಿ ಹೋಗಿ ಪೂಜೆ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೌದು ಇದ್ದಾರೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಖರ್ಗೆಯವರು ಅಂತಹವರು ಇಲ್ಲಿ ಇದ್ದಾರೆ, ಎಂದು ಹೇಳುತ್ತಿದ್ದಾರೆ. ದೇವರನ್ನು ಕಂಡವರ್ಯಾರು ? ಕಾಣದ ದೇವರಿಗೆ, ಕಾಣದೇ ಇರುವ ಕಲ್ಲಿಗೆ ಏಕೆ ಕೈಮುಗಿಯುತ್ತಿದ್ದೀರಿ ಎಂದು ಹೇಳುವವರು ವಿಧಾನಸೌಧದಲ್ಲಿದ್ದಾರೆ. ಇವರೇ ಮೊದಲು ಮನೆಗೆ ಹೋಗಿ ದೇವರ ಪೂಜೆ ಮಾಡುತ್ತಾರೆ

ಶ್ರೀ ಬಿ. ಹೆಚ್. ಬನ್ನೀಕೋಡ್.—ಅಂತಹವರು ನಿಮ್ಮ ಕಡೆ ಇರೋದು.

ಶ್ರೀ ಜಿ. ಎಸ್. ಶಿವನಂಜಪ್ಪ.—ಎಲ್ಲರ ಕಡೆಗೂ ಇದ್ದಾರೆ ಸ್ವಾಮಿ, ನಾನು ಆ ಕಡೆಗೂ ಇದ್ದೆ. ಮಾನ್ಯ ಪಾಟೀಲರನ್ನು ನಾನು ಕೇಳುತ್ತಿದ್ದೇನೆ. ಈ ಇಲಾಖೆಯ ಬಗ್ಗೆ ಅನಾದರಣೆ, ನಿರ್ಲಕ್ಷ್ಯ ಏಕೆ ? ಎಷ್ಟು ದೇವಸ್ಥಾನಗಳು ಇವೆ, ಎಷ್ಟು ಆಭರಣ ಇದೆ, ಎಷ್ಟು ಆದಾಯ ಇದೆ, ಎಷ್ಟು ಖರ್ಚು ಆಗುತ್ತಿದೆ ಎನ್ನುವ ಬಗ್ಗೆ ವರದಿಯನ್ನು ಕೊಟ್ಟಿಲ್ಲ. ಮಾನ್ಯ ಪಾಟೀಲರು ಈ ಖಾತೆ ವಹಿಸಿಕೊಂಡು ಇನ್ನೂ ೨ ತಿಂಗಳು ಆಗಿಲ್ಲ. ಆದರೂ ಪಾಟೀಲರು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬಹುದಾಗಿತ್ತು. ಎಷ್ಟು ದೇವಸ್ಥಾನಗಳು ಇವೆ. ಅಲ್ಲಿ ಎಷ್ಟು ಆಭರಣ ಇದೆ, ಅದರ ಬೆಲೆ ಎಷ್ಟು ಎಂಬುದರ ವರದಿ ಇರಬೇಕಾಗಿತ್ತು. ಈ ದೇವಸ್ಥಾನಗಳಿಗೆ ಏನಾದರೂ ಕಾಯಕಲ್ಪ ಮಾಡಬೇಕಾಗಿತ್ತು. ಮಾನ್ಯ ಚಂದ್ರೇಗೌಡರು ಮಾತನಾಡುವಾಗ ಒಂದೊಂದು ಭಾಗದಲ್ಲಿ ಒಂದೊಂದು ಆಕ್ಟ್ ಇದೆ ಎಂದು ಹೇಳಿದರು. ಅದು ನಿಜ. ಇದನ್ನೆಲ್ಲಾ ಕನ್‌ಸಾಲಿಡೇಟ್ ಮಾಡಿ ವಕ್ಫ್ ಬೋರ್ಡ್ ರೀತಿಯಲ್ಲಿ ಏಕೆ ಮಾಡಬಾರದು ? ೧೯೭೭-೭೮ರಿಂದ ನಾನು ಆ ಕಡೆ ನಿಂತು ಹೇಳುತ್ತಿದ್ದೆ, ಈಗ ಈ ಕಡೆ ನಿಂತು ಹೇಳುತ್ತಿದ್ದೇನೆ. ಈಗ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಈ ಇಲಾಖೆಯಲ್ಲಿ ಆದಾಯ ಏನೂ ಇಲ್ಲ ಎಂದು ಇದು ಅವರಿಗೆ ಬೇಕಾಗಿಲ್ಲವೇ ? ಈ ಬಗ್ಗೆ ಪಾಟೀಲರು ಒಬ್ಬರೇ ತಲೆಗಿಟ್ಟು ಕೊಂಡರೆ ಸಾಲದು. ನಮ್ಮ ಎಡಗಡೆ ಇರುವ ಅಧಿಕಾರಿ ಬಾಂಧವರೂ ಕೂಡಾ ಇದರ ಬಗ್ಗೆ ದೀರ್ಘವಾದ ಚಿಂತನೆಯನ್ನು ಮಾಡಬೇಕೆಂದು ಮಾನ್ಯ ಪಾಟೀಲರ ಮೂಲಕ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಧ್ಯಕ್ಷರೇ, ಕ್ರಿಶ್ಚಿಯನ್ನರು ವಾರಕ್ಕೊಂದು ಸಾರಿ ಚರ್ಚ್‌ಗೆ ಹೋಗುತ್ತಾರೆ. ಮುಸ್ಲೀಮರು ದಿನಕ್ಕೆ ಮೂರು ಸಲ ಪ್ರಾರ್ಥನೆ ಮಾಡಿ, ವರ್ಷಕ್ಕೆ ಒಂದು ಸಾರಿ ಅಕೌಂಟ್

ಮಾಡುತ್ತಾರೆ. ನನ್ನ ಈ ವರ್ಷದ ಜೀವನದಲ್ಲಿ ಎಷ್ಟು ತಪ್ಪು ಮಾಡಿದ್ದೇನೆಂದು ರಂಜಾನ್ ಕಾಲದಲ್ಲಿ ಲೆಕ್ಕ ಹಾಕುತ್ತಾರೆ. ನಮ್ಮಲ್ಲೂ ಹಿಂದಿನಿಂದಲೂ ಪ್ರತಿಯೊಂದು ಊರಿನ ಮುಂದೆ ಹನುಮಂತರಾಯನ ದೇವಸ್ಥಾನ ಇರುತ್ತದೆ, ಇಲ್ಲವೇ ಬಸವಣ್ಣನ ದೇವಸ್ಥಾನ ಇರುತ್ತದೆ, ಇಲ್ಲವೇ ಗಣಪತಿ ದೇವಸ್ಥಾನ ಇರುತ್ತದೆ. ಹಳ್ಳಿ ರೈತ ಬೆಳಿಗ್ಗೆ ನೇಗಿಲು ಕಟ್ಟಿಕೊಂಡು ಎತ್ತು ಹೊರಡಿಸಿಕೊಂಡು ಬಂದು ಊರ ಮುಂದಿನ ದೇವಸ್ಥಾನದಲ್ಲಿ ಕೈಮುಗಿದು ಇವತ್ತು ನಾನು ಒಳ್ಳೆಯ ಕೆಲಸ ಮಾಡುತ್ತೇನೆ. ದೇವರು ನನಗೆ ಒಳ್ಳೆಯ ಬೆಳೆ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತಾನೆ. ಮತ್ತೆ ಸಂಜೆ ವಾಪಸ್ ಬಂದಾಗ ನಾನು ಇವತ್ತು ಒಳ್ಳೆಯ ಬಿತ್ತನೆ ಮಾಡಿ ಬಂದಿದ್ದೇನೆ, ನಾನು ಯಾವುದೇ ತಪ್ಪು ಮಾಡಿಲ್ಲ. ನನಗೆ ಒಳ್ಳೆಯ ಬೆಳೆ ಕೊಡಲು ಮಳೆ ಬರಲಿ ಎಂದು ದೇವರಲ್ಲಿ ಕೇಳಿಕೊಳ್ಳುತ್ತಾನೆ. ಇಂತಹ ಒಂದು ಸಂಸ್ಕೃತಿ ಇರತಕ್ಕ ಹಳ್ಳಿ ದೇವರಿಗೆ ಏನಾಗಿದೆ ಅಧ್ಯಕ್ಷರೇ ? ಎಲ್ಲಾ ಹಾಳುಗಟ್ಟಿದೆ. ಇವತ್ತು ದೇವಸ್ಥಾನದ ಜಮೀನನ್ನು ಟೆನೆನ್ಸಿ ಮೂಲಕ ಕಿತ್ತುಕೊಂಡಿದ್ದಾರೆ. ಪೂಜೆಗೆ ಇವತ್ತು ತಸ್ತಿಕ್ ಎಂದು ೨ ರಿಂದ ೧೦ ರೂಪಾಯಿ ಕೊಡುತ್ತೀರಿ. ಇದರಿಂದ ಪೂಜೆ ಮಾಡಲು ಸಾಧ್ಯವೇ ? ಇವತ್ತು ಪೂಜೆ ಮಾಡುವಾತ ಸ್ನಾನ ಮಾಡಿರುತ್ತಾನೋ ಇಲ್ಲವೋ ಗೊತ್ತಿಲ್ಲ. ಅರ್ಚಕರು ತನ್ನ ಮಗನನ್ನೋ ಅಥವಾ ಯಾರನ್ನೋ ಬಿಟ್ಟು ಪೂಜೆ ಮಾಡಿಸುತ್ತಿರುತ್ತಾನೆ. ಇಂತಹ ಒಂದು ಸ್ಥಿತಿಗೆ ಬಂದರೆ ಬಹುಶಃ ನಮಗೂ ಕ್ಷೇಮವಲ್ಲ; ನಮ್ಮ ರಾಜ್ಯಕ್ಕೂ ಕ್ಷೇಮ ಅಲ್ಲ. ಇದು ಎಲ್ಲರದ್ದೂ ಎಂದು ವಿಧಿ ಇಲ್ಲದೇ ಹೇಳಬೇಕಾಗುತ್ತದೆ. ಆದುದರಿಂದ ಪಾಟೀಲರೇ ದಯಮಾಡಿ ದೇವಸ್ಥಾನಗಳ ಬಗ್ಗೆ ನೀವು ಆಸ್ಥೆ ವಹಿಸಬೇಕು.

೪.೪೫ ಪಿ. ಎಂ.

ನೀವು ಆಸ್ಥೆ ವಹಿಸಬೇಕು. ನಿಮಗೆ ಸರಿಮಾಡಲಿಕ್ಕೆ ಶಕ್ತಿಯಿದೆ. ದೇವಾಲಯಗಳ ಜಮೀನನ್ನು ಟೆನೆಂಟ್ ಆಕ್ಟ್ ಪ್ರಕಾರ ಕೊಟ್ಟಿದ್ದೀರಿ, ಅದನ್ನು ವಾಪಸ್ಸು ಪಡೆದರೂ ಕೂಡ ತಪ್ಪಾಗುವುದಿಲ್ಲ. ದೇವಾಲಯಗಳನ್ನು ಉಳಿಸಿ. ವಕ್ಫ್ ಬೋರ್ಡ್ ಮಾದರಿಯಲ್ಲಿ ಒಂದು ಆಕ್ಟ್ ಮಾಡಿ ಕನ್‌ಸಾಲಿಡೇಟ್ ಆಕ್ಟನ್ನು ತಂದು ಎಲ್ಲಾ ವಿಚಾರಗಳನ್ನು ಅದರಲ್ಲಿ ಅಳವಡಿಸಿ ಅದರ ಮುಖಾಂತರ ನೇರವಾಗಿ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿ ಮತ್ತು ಅವುಗಳನ್ನು ಉಳಿಸತಕ್ಕ ಕೆಲಸವನ್ನು ಮಾಡಬೇಕು. ಒಂದು ಉದಾಹರಣೆಗೆ ಹೇಳುತ್ತೇನೆ. ಮಲೆಮಹದೇಶ್ವರ ದೇವಾಲಯಕ್ಕೆ ಹೋಗಲಿಕ್ಕೆ ಎಷ್ಟು ಸೌಕರ್ಯಗಳನ್ನು ಮಾಡುತ್ತೇವೆ, ಅಷ್ಟು ಆದಾಯ ನಮ್ಮ ರಾಜ್ಯಕ್ಕೆ ಇದೆ. ಶಿವಗಂಗೆ ಬೆಟ್ಟಕ್ಕೆ ಸಾವಿರಾರು ಜನ ಭಕ್ತರು ಹೋಗುತ್ತಿರುತ್ತಾರೆ. ಅದೇರೀತಿ ಸಿದ್ಧಗಂಗೆ ಬೆಟ್ಟಕ್ಕೂ ನೂರಾರು ಮೈಲಿಗಳಿಂದ ಜನರು ಗಂಗೆ ಪೂಜೆ ಮಾಡಲಿಕ್ಕೆ ಬರುತ್ತಾರೆ. ಅಲ್ಲಿ ಗಂಗೆ ಉದ್ಭವವಾಗುತ್ತದೆ. ಅದನ್ನು ಪೂಜೆ ಮಾಡಲಿಕ್ಕೆ ಜನರು ಬರುತ್ತಾರೆ. ಅವರಿಗೆ ಬಸ್ ಸೌಕರ್ಯಗಳನ್ನು ಒದಗಿಸಿಕೊಟ್ಟರೆ ನಮ್ಮ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಬಹಳಷ್ಟು ಹಣ ಬರುತ್ತದೆ. ಅಲ್ಲಿಗೆ ಬರತಕ್ಕ ಜನರಿಗೆ ಒಂದು ರೂಪಾಯಿಯಂತೆ ಶುಲ್ಕ ವಿಧಿಸಿದರೆ ಲಕ್ಷಾಂತರ ರೂಪಾಯಿಗಳ ಹಣ ನಮ್ಮ ರಾಜ್ಯದ ಖಜಾನೆಗೆ ಬರುತ್ತದೆ. ತಿರುಪತಿ ದೇವಾಲಯದಲ್ಲಿ ನಮ್ಮ ಪಾಲು ದೊಡ್ಡದಿದೆ. ನಾವು ಅಲ್ಲಿ ಛತ್ರಗಳನ್ನು ಕಟ್ಟಿಸಿದ್ದೇವೆ. ಸ್ಪೆಷಲ್ ಪೂಜೆಗೋಸ್ಕರ ಬೇಕಾದಷ್ಟು ಹಣವನ್ನು ಕೊಟ್ಟಿದ್ದೇವೆ. ನಮ್ಮ ಪಾಲು ಅಲ್ಲಿದೆ. ಆದರೆ ಅಲ್ಲಿನ ದೇವಾಲಯದ ಅಡ್ಮಿನಿಸ್ಟ್ರೇಟಿವ್ ಕಮಿಟಿಯಲ್ಲಿ ಕರ್ನಾಟಕದ ಪರವಾಗಿ ನಮ್ಮವರು ಒಬ್ಬರು ಅಲ್ಲಿರುವ ಹಾಗೆ ಮಾಡಬೇಕು. ಮಾನ್ಯ ಕೆ. ಹೆಚ್. ಪಾಟೀಲ್‌ರವರು ಆ ಕೆಲಸ ಮಾಡಬೇಕು. ನಮ್ಮ ರಾಜ್ಯದಲ್ಲಿ ಅನೇಕ ಪ್ರಸಿದ್ಧವಾದ ಬೆಟ್ಟಗಳಿವೆ. ಕೊರಟಗೆರೆ ತಾಲ್ಲೂಕಿನ ಸಿದ್ಧರಬೆಟ್ಟ ಇದೆ. ಅಲ್ಲಿಗೆ ಹೋದವರಿಗೆ ಯಾವುದೇ ಕಾಯಿಲೆ ಇದ್ದರೂ ಅದು ವಾಸಿಯಾಗುತ್ತದೆ. ಹಲವಾರು ವರ್ಷಗಳಿಂದ ಇರತಕ್ಕ ಕಾಯಿಲೆಯಿಂದ ಉಳಿಯುವುದಿಲ್ಲ ಸಾಯುತ್ತೇನೆ ಎಂಬುವವರು ಆ ಬೆಟ್ಟಕ್ಕೆ ಹೋಗಿ ಅಲ್ಲಿರತಕ್ಕ ವಿಧ ವಿಧವಾದ ಸೊಪ್ಪನ್ನು ೮-೧೦ ದಿವಸಗಳ ಕಾಲ ತಿಂದರೆ ಯಾವ ರೋಗವಿದ್ದರೂ ವಾಸಿಯಾಗುತ್ತದೆ ಎಂಬುದು ಎಲ್ಲರಿಗೂ ತಿಳಿದಿದೆ. ಅಲ್ಲಿಗೆ ಬಹಳಷ್ಟು ಜನ ಹೋಗಿದ್ದಾರೆ. ದಿವಂಗತರುಗಳಾದ ಕೆ. ಟಿ. ಭಾಷ್ಯಂರವರು, ದೇವರಾಜ ಅರಸ್‌ರವರು, ಸಿದ್ಧಲಿಂಗಯ್ಯನವರು ಮತ್ತು ಹನುಮಂತಯ್ಯನವರು ಅಲ್ಲಿಗೆ ಹೋಗಿದ್ದರು. ಅದು ಸ್ವತಃ ಎಲ್ಲರಿಗೂ ಅನುಭವವಾಗಿರತಕ್ಕ ವಿಷಯ. ಅಲ್ಲಿಗೆ ನಮ್ಮ ರಸ್ತೆ ಸಾರಿಗೆ ಸಂಸ್ಥೆಯವರು ಏತಕ್ಕೆ ಬಸ್ಸಿನ ಸೌಕರ್ಯಗಳ ವ್ಯವಸ್ಥೆ ಮಾಡಬಾರದು ? ಅದನ್ನು ಏತಕ್ಕೆ ಅಭಿವೃದ್ಧಿ ಪಡಿಸಬಾರದು. ? ಮಾನ್ಯ ಅಜೀಜ್‌ಸೇಠ್‌ರವರು ಬಹಳ ಖುಷಿಪಡುತ್ತಿದ್ದಾರೆ. ಏಕೆಂದರೆ ಅವರು ತಮ್ಮ ಮಸೀದಿಗಳನ್ನು ಚೆನ್ನಾಗಿ ಇಟ್ಟುಕೊಂಡಿದ್ದಾರೆ. ಏಕೆಂದರೆ

ನಮ್ಮ ದೇವಾಲಯಗಳು ಹಾಳಾಗಿವೆ. ನಾನು ಅವರ ಮಸೀದಿಗಳು ಸಹ ಕೆಟ್ಟುಹೋಗಲಿಯೆಂದು ಹೇಳುತ್ತಿಲ್ಲ. ನೀವು ನಿಮ್ಮ ಮಸೀದಿಗಳನ್ನು ಚೆನ್ನಾಗಿ ಇಟ್ಟುಕೊಂಡಿರುತ್ತೀರಿ. ನಮ್ಮ ದೇವಾಲಯಗಳು ಹಾಳಾಗಿವೆ. ನಾನು ಈ ಮಾತನ್ನು ಯಾವುದೇ ಕೆಟ್ಟ ಉದ್ದೇಶದಿಂದ ತಮಗೆ ಹೇಳುತ್ತಿಲ್ಲ. ನಮ್ಮ ದೇವಾಲಯಗಳ ಪರಿಸ್ಥಿತಿ ಹಾಗೆ ಇದೆ.

ಶ್ರೀ ಬಿ. ಎಂ. ಇದಿನಬ್ಬ.— ಮುಸಲ್ಮಾನರು ಮಸೀದಿಗೆ ಹೋಗಬೇಕಾದರೆ ಕೈಕಾಲು ಮುಖ ತೊಳೆದುಕೊಂಡು ಬಹಳ ಶುಚಿಯಾಗಿ ಹೋಗಬೇಕು. ಆದ್ದರಿಂದ ಮಸೀದಿಗಳು ಚೆನ್ನಾಗಿವೆ. ಕೈಕಾಲು ಮುಖ ತೊಳೆಯದೆ ನಾವು ಮಸೀದಿಗಳಿಗೆ ಹೋಗುವ ಹಾಗೆ ಇಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ನೀವು ಚೆನ್ನಾಗಿ ಇಟ್ಟುಕೊಂಡಿರುತ್ತೀರಿ. ನಿಮಗೆ ಸಾಕಷ್ಟು ಹಣವನ್ನು ಕೊಡುತ್ತಾರೆ. ನಮ್ಮ ದೇವಾಲಯಗಳಿಗೆ ಕತ್ತೆಗಳು ಸಹ ಹೋಗುವುದಿಲ್ಲ. ಅನೇಕ ದೇವಾಲಯಗಳು ಹಾಗೆ ಇವೆ. ಮಾನ್ಯ ಕೆ. ಹೆಚ್. ಪಾಟೀಲ್‌ರವರಲ್ಲಿ ಕೈಮುಗಿದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ವಿಚಾರದ ಬಗ್ಗೆ ತಾವು ಗಮನವನ್ನು ಹರಿಸಬೇಕು. ನಮ್ಮಲ್ಲಿ ಎಷ್ಟು ದೇವಾಲಯಗಳಿವೆ ? ಮೇಜರ್ ದೇವಾಲಯಗಳು ಎಷ್ಟು ? ಮೈನರ್ ದೇವಾಲಯಗಳು ಎಷ್ಟು ? ಹಳ್ಳಿಗಳಲ್ಲಿರತಕ್ಕ ದೇವಾಲಯಗಳ ಸಂಖ್ಯೆ ಎಷ್ಟು ? ಇವುಗಳ ಲೆಕ್ಕ ತರಿಸಿ ಅವುಗಳಲ್ಲಿರತಕ್ಕ ಆದಾಯವನ್ನು ತಿಳಿದು, ಎಲ್ಲದರ ಆದಾಯವನ್ನು ಕನ್‌ಸಾಲಿಡೇಟೆಡ್ ಮಾಡಿ ಇಡೀ ರಾಜ್ಯಕ್ಕೆ ಅನ್ವಯವಾಗತಕ್ಕ ಒಂದು ಆಕ್ಟನ್ನು ತಂದು ದೇವಾಲಯಗಳ ಸ್ಥಿತಿಗತಿಗಳನ್ನು ಸುಧಾರಣೆ ಮಾಡಬೇಕು. ಆ ರೀತಿ ಮಾಡಿದರೆ ತಮಗೆ ಮೋಕ್ಷ ಸಿಗುತ್ತದೆಂಬ ಆಶಯವನ್ನು ನಾನು ವ್ಯಕ್ತ ಮಾಡುತ್ತೇನೆ.

ಇನ್ನು ಸರ್ವೆ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, ದೇವರೇ ಗತಿ. ಕರ್ನಾಟಕ ರಾಜ್ಯದಲ್ಲಿ ಸರ್ವೆ ಆಗಿದ್ದು ೧೯೫೭ರಲ್ಲಿ ಅವೊತ್ತಿನಿಂದ ಮತ್ತೆ ಸರ್ವೆ ಕೆಲಸ ಆಗಿಲ್ಲ, ಇದರಿಂದ ಯಾವುದಕ್ಕೆ ಎಷ್ಟೆಷ್ಟು ಕಂದಾಯ ಫಿಕ್ಸ್ ಮಾಡಬೇಕೆನ್ನುವ ತೊಂದರೆಯಿದೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಗೇಣಿದಾರರಿಗೆ ೧ ಎಕರೆ, ಅರ್ಧ ಎಕರೆ ಭೂಮಿ ಸಿಕ್ಕಿದೆ. ಜಮೀನ್ದಾರರ ಭೂಮಿಯ ಮೇಲುಗಡೆ ಆ ಭೂಮಿ ಇರುತ್ತದೆ. ಆ ಭೂಮಿಗೆ ಗೇಣಿದಾರರು ಹೋಗಬೇಕಾದರೆ ನಿಮಗೆ ದಾರಿಯಿಲ್ಲವೆಂದು ಅಡ್ಡಗಟ್ಟುತ್ತಾರೆ. ಹಾಗೆ ಮಾಡಿದರೆ ಗೇಣಿದಾರರ ಗತಿಯೇನು ? ಅವರು ಖಂಡಿತವಾಗಿಯೂ ಪಡಬಾರದ ಪಾಡು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಈ ಭೂಮಿಯನ್ನು ಮಾರಿ ಬೇರೆ ಕಡೆ ಹೋಗೋಣ ನಮಗೆ ಏನೂ ಬೇಡವೆನ್ನುವ ಸ್ಥಿತಿಗೆ ಬಂದಿದ್ದಾರೆ. ಆದ್ದರಿಂದ ಸಮಗ್ರವಾಗಿ ಇದನ್ನೆಲ್ಲ ಸರ್ವೆ ಮಾಡಿಸುವಂತಹ ಕೆಲಸವನ್ನು ತಕ್ಷಣ ಮಾನ್ಯ ಪಾಟೀಲ್‌ರವರು ಮಾಡಿಸಬೇಕು ಅವರಿಗೆ ಒಂದು ದಾರಿಯನ್ನು ಮತ್ತು ಚಾನಲ್‌ನ್ನು ತೋರಿಸಿಕೊಡಬೇಕು. ಈ ಬಗ್ಗೆ ಕಾರ್ಯಕ್ರಮವನ್ನು ಕೂಡಲೇ ಮಾಡಬೇಕಾಗಿದೆ. ಈಗ ೫೦–೬೦ ವರ್ಷಗಳ ಹಿಂದೆ ಮಾಡಿರತಕ್ಕ ವ್ಯವಸ್ಥೆ ನಮ್ಮಲ್ಲಿದೆ. ಸರ್ವೆ ಆಫೀಸಿನಲ್ಲಿ ಯಾವುದಾದರೂ ಟಿಪ್ಪಣಿ ಕೊಡಿ ಅಂದರೆ ಅದನ್ನು ತೆಗೆದರೆ ಅದು ಪುಡಿ ಪುಡಿಯಾಗಿ ಉದುರುತ್ತದೆ. ಅದು ಕೈಗೆ ಸಿಗುವುದಿಲ್ಲ ಅದು ಹಿಂದಿನ ಕಾಲದಲ್ಲಿ ಬರೆದಿರುವುದು. ಉರ್ದು ಭಾಷೆಯಲ್ಲಿ ಅಥವಾ ಹಳಗನ್ನಡದಲ್ಲಿ ಬರೆದಿರತಕ್ಕ ಕಾಗದಗಳು. ಅವುಗಳನ್ನು ಮುಟ್ಟಿದರೆ ಪುಡಿ ಪುಡಿಯಾಗಿ ಉದುರುತ್ತವೆ. ಅವುಗಳಿಗೆ ನವೀಕರಣ ಮಾಡಬೇಕಾಗುತ್ತದೆ.

ಈಗ ನೀವು ಡಿವಿಜನ್‌ಗೆ ಒಂದು ಆಫೀಸ್ ಅಂತ ಓಪನ್ ಮಾಡಿಸಿದ್ದೀರಿ. ತುಮಕೂರಿನಿಂದ ಮಧುಗಿರಿಗೆ ಆಫೀಸ್ ಶಿಫ್ಟ್ ಆಯಿತು. ಕೆಲವು ದಾಖಲೆಗಳು ಮಧುಗಿರಿಗೆ ಹೋದವು. ಮಧುಗಿರಿಯ ಕೆಲವು ದಾಖಲೆಗಳನ್ನು ತಿಪಟೂರಿಗೆ ಕಳಿಸಬೇಕಾಗಿದ್ದರೂ ಹಾಗೆ ಮಾಡದೆ ಸೀದಾ ಶಿವಮೊಗ್ಗ ಆಫೀಸಿಗೆ ಕಳಿಸಿಕೊಟ್ಟಿದ್ದಾರೆ. ಇವತ್ತು ಬೇಕಾದಷ್ಟು ದಾಖಲೆಗಳು ಮಧುಗಿರಿಯಲ್ಲಿ ಸಿಗುತ್ತಿಲ್ಲ, ತಿಪಟೂರಿನಲ್ಲಿ ಸಿಗುತ್ತಿಲ್ಲ. ಅವು ಶಿವಮೊಗ್ಗದಲ್ಲಿವೆ. ಅವುಗಳನ್ನು ಕೊಡಲಿಕ್ಕೆ ತಮಗೆ ಅಧಿಕಾರ ಇಲ್ಲವೆಂದು ಅವರು ಹೇಳುತ್ತಾರೆ. ಈ ರೀತಿಯಾಗಿ ಬಹಳ ತೊಂದರೆಯಾಗಿದೆ. ದಯವಿಟ್ಟು ಇದನ್ನು ಕ್ರೋಢೀಕರಿಸಬೇಕು ಮತ್ತು ದಾಖಲೆಗಳನ್ನು ಪೂರ್ಣವಾಗಿ ಕೊಡತಕ್ಕಂಥ ಕೆಲಸ ಮಾಡಬೇಕು. ಓ ಡಿ. ಕೆಲಸ ಪೂರ್ತಿಯಾಗಿ ನಿಂತುಹೋಗಿವೆ. ಒಂದು ತಾಲ್ಲೂಕಿಗೆ ಒಬ್ಬರು, ಇಬ್ಬರು ಸರ್ವೆಯರ್‌ಗಳನ್ನು ಅಪಾಯಿಂಟ್ ಮಾಡಿದ್ದೀರಿ ಅವರು ವಾರದಲ್ಲಿ ಎರಡು ದಿವಸ ಮಾತ್ರ ಬರುತ್ತಾರೆ. ಮೂರು ದಿವಸ ಟೂರು ಹಾಕಿಕೊಂಡಿರುತ್ತಾರೆ. ಅಥವಾ ಮನೆಯಲ್ಲಿ ಕುಳಿತುಕೊಳ್ಳುತ್ತಾರೆ. ಇಂತಹ ವ್ಯವಸ್ಥೆ ಸರ್ವೆ ಡಿಪಾರ್ಟ್‌ಮೆಂಟ್‌ನಲ್ಲಿ ಬಂದಿದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು, ಇದನ್ನು ಸರಿಪಡಿಸಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇನ್ನು ರಿಜಿಸ್ಟ್ರೇಶನ್. ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದರು, ಈ ಟ್ರಾನ್ಸ್‌ಫರ್‌ಗಳು ಒಂದು ಇಂಡಸ್ಟ್ರಿಯಾಗಿಬಿಟ್ಟಿವೆ ಎಂದು ಇವತ್ತು ಬಹಳ ದೊಡ್ಡ ದೊಡ್ಡ ಇಂಡಸ್ಟ್ರಿಗಳು. ಈ ಸಬ್‌ರಿಜಿಸ್ಟ್ರಾರ್ ಆಫೀಸರ್‌ಗಳ ಟ್ರಾನ್ಸ್‌ಫರ್‌ಗಳು ಏಕೆ ಹೀಗೆ ಆಗುತ್ತಿದೆ ಎಂದು ನಾನು ಶ್ರೀ ಪಾಟೀಲರಿಗೆ ಹೇಳುತ್ತಾ ಇದ್ದೆ.

ಬೆಂಗಳೂರಿನಲ್ಲಿ ಇರತಕ್ಕಂಥ ಜಮೀನನ್ನು ಮದ್ರಾಸಿಗೆ ಹೋಗಿ ರಿಜಿಸ್ಟ್ರೇಶನ್ ಮಾಡಿಸಿಕೊಂಡು ಬಂದಿದ್ದಾರೆ. ಈಗ ಹದಿನಾರು ವರ್ಷಗಳಿಂದ ಯಾವ್ಯಾವುದು ಮದ್ರಾಸಿನಲ್ಲಿ ರಿಜಿಸ್ಟ್ರೇಶನ್ ಆಗಿವೆ, ಅದು ಕ್ರಮಬದ್ಧವಾಗಿಲ್ಲ. ಅವುಗಳನ್ನು ವಿಚಾರಣೆ ಮಾಡಿಸತಕ್ಕಂಥ ತೀರ್ಮಾನವನ್ನು ತಾವು ಮಾಡಬೇಕು. ನಮ್ಮ ರಾಜ್ಯಕ್ಕೆ ಬರಬೇಕಾದಂಥ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಹಣ ಇವತ್ತು ಲೂಟಿಯಾಗಿದೆ. ಇದುವರೆಗೆ ಎಲ್ಲೆಲ್ಲಿ ಈ ರೀತಿ ಯಾಗಿದೆ, ಇಂತಹ ಜಮೀನುಗಳ ರಿಜಿಸ್ಟ್ರೇಶನ್ ಆಗಿರುವುದನ್ನು ವಿಚಾರಮಾಡಿ ಇದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ. ಇದಕ್ಕೆ ಏನಾದರೂ ಕಾನೂನು ತಿದ್ದುಪಡಿ ಮಾಡುವುದಾದರೆ ನಾವು ಅದಕ್ಕೆ ಬೆಂಬಲ ಮಾಡುವುದಕ್ಕೆ ತಯಾರಿದ್ದೇವೆ ಎಂದು ಕಳಕಳಿಯಿಂದ ತಮಗೆ ಹೇಳುತ್ತಾ, ಇವತ್ತಿನ ದಿವಸ ಅಲ್ಲಿ ನಡೆಯುತಕ್ಕಂಥ ಅಕ್ರಮಗಳನ್ನು ತಡೆಯಲಿಕ್ಕೆ ಆಗುವುದಿಲ್ಲವೆ ? ಶ್ರೀ ಪಾಟೀಲರು ಪ್ರಯತ್ನ ಮಾಡಿದರೆ ಆಗುತ್ತದೆ. ಇವತ್ತು ರಿಜಿಸ್ಟ್ರೇಶನ್‌ಗೆ ನಾವು ಹೋಗುತ್ತೇವೆ. ನಾವು ಕಳಿಸುತ್ತೇವೆ ನೀವು ಹೋಗಿ ಎಂದು ಹೇಳುತ್ತಾರೆ. ಮಾರನೆಯ ದಿವಸ ಹೋದರೆ ಲ್ಯಾಂಡ್ ರಿಫಾರ್ಮ್ಸ್‌ದಿಂದ ಒಂದು ಸರ್ಟಿಫಿಕೇಟ್ ತೆಗೆದುಕೊಂಡು ಬನ್ನಿ, ಟೆನೆನ್ಸಿಗೆ ಒಳಗಾಗಿದೆಯೋ ಇಲ್ಲವೋ ಎಂದು ನೋಡಬೇಕು ಎಂದು ಹೇಳುತ್ತಾರೆ ಅದನ್ನು ಕೊಟ್ಟರೆ ವೆಲ್ಯುಯೇಶನ್ ನೋಡಬೇಕು ಎನ್ನುತ್ತಾರೆ. ಹೀಗೆ ೧೫—೨೦ ದಿವಸ ಸುತ್ತಾಡಿ ಬೇಸತ್ತು ಕೊನೆಗೆ 'ಸಾಕಪ್ಪ, ಏನು ಕೊಡಲಪ್ಪ ನಿನಗೆ ?' ಎಂದು ಕೇಳಿದರೆ ಐದು ಸಾವಿರ ಕೊಟ್ಟು ತೆಗೆದುಕೊಂಡುಹೋಗು ಅನ್ನುತ್ತಾನೆ. ಹೀಗೆ ಒಬ್ಬರು ಬಾಂಬೆಯಿಂದ ಬಂದಿದ್ದರು ರಿಜಿಸ್ಟ್ರೇಶನ್ ಮಾಡಿಸಿಕೊಳ್ಳುವುದಕ್ಕೆ. ಈ ಹಂತಕ್ಕೆ ನಾವು ಬಂದಿದ್ದೇವೆ. ತಾವು ಬಂದು ಎರಡು ತಿಂಗಳಾಗಿದೆ, ತಮಗೆ ಈ ಇಲಾಖೆಯ ಪೂರ್ಣ ಮಾಹಿತಿ ಸಿಕ್ಕಿದೆ. ನೀವು ಬರೀ ಎರಡು—ಮೂರು ಜನರನ್ನು ಸಸ್ಪೆಂಡ್ ಮಾಡಿದ್ದೀರಿ. ಬರೀ ಸಸ್ಪೆಂಡ್ ಮಾಡಿದರೆ ಸಾಲದು ; ಬೇಗ ಅವರನ್ನು ಡಿಸ್‌ಮಿಸ್ ಮಾಡುವ ಕ್ರಮ ತೆಗೆದುಕೊಳ್ಳಬೇಕು. ಇದೇರೀತಿ ಇದಕ್ಕೆ ಒಂದು ಕಾಯಕಲ್ಪ ಕೊಡಬೇಕು ಎಂದು............

ಉಪಾಧ್ಯಕ್ಷರು :—ಬೇಗ ಮುಗಿಸಿ.

ಶ್ರೀ ಜಿ. ಶಿವನಂಜಪ್ಪ :—ಆಯಿತು, ಪೂರೈಸುತ್ತಿದ್ದೇನೆ. ಇವೊತ್ತು ಬಹಳ ವ್ಯಾಪಕವಾಗಿ ಲಂಚಾವತಾರ ಬೆಳೆದಿದೆ. ಇದನ್ನು ಏನಾದರೂ ಮಾಡಿ ನಿಮ್ಮ ಕಾಲದಲ್ಲಿ ಅಳಿಸಲು ಪ್ರಯತ್ನ ಮಾಡಬೇಕು. ಖಂಡಿತವಾಗಿ ಮಾಡುವುದಕ್ಕೆ ಅವಕಾಶ ಇದೆ. ನಿಮಗೆ ಆ ಶಕ್ತಿ ಇದೆ. ಎಲ್ಲಿ ಯಾವ ಭಾಗದಲ್ಲಿ ಹಿಸುಕಿದರೆ ಸಾಯುತ್ತಾರೆ ಎಂಬುದು ತಮಗೆ ಗೊತ್ತು.

ಆ ರೀತಿ ನೀವು ಕಾರ್ಯಕ್ರಮ ತೆಗೆದುಕೊಂಡು, ನಮ್ಮ ಇಡಿ ಕರ್ನಾಟಕ ಜನತೆಗೆ 'ಈಗ ಲಂಚ ಇಲ್ಲಪ್ಪ ಪಾಟೀಲರ ಕಾಲದಲ್ಲಿ ಕಡಿಮೆಯಾಗಿದೆ' ಎಂದು ಹೇಳುವಂತಾದರೆ ಸಾಕು. ಪೂರ್ತಿಯಾಗಿ ತೆಗೆದುಹಾಕುವುದಕ್ಕೆ ಸಾಧ್ಯವಿಲ್ಲವೆಂದು ಕಾಣುತ್ತದೆ. ಆದರೆ ಇದು ಕಡಿಮೆಯಾಯಿತು, ತಾಲ್ಲೂಕು ಆಫೀಸಿಗೆ ಹೋದರೆ ಪಹಣಿ ಸಿಗುತ್ತದೆ, ವಿಲೇಜ್ ಅಕೌಂಟೆಂಟ್ ಹತ್ತಿರ ಹೋದರೆ ಎಲ್ಲಾ ದಾಖಲೆಗಳು ಸಿಗುತ್ತವೆ ಎನ್ನತಕ್ಕಂಥ ಮನಸ್ಸು ಜನರಿಗೆ ಬರುವ ರೀತಿಯಲ್ಲಿ ನೀವು ಕೆಲಸ ಮಾಡಬೇಕೆಂದು ನಿಮ್ಮನ್ನು ಕಳಕಳಿಯಿಂದ ಕೇಳಿಕೊಂಡು ಇಷ್ಟು ಹೊತ್ತು ಮಾತನಾಡುವುದಕ್ಕೆ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ, ಜೈಹಿಂದ್.

ಶ್ರೀ ಎ ಕೆ. ಅನಂತಕೃಷ್ಣ (ಶಿವಾಜಿನಗರ). - ಮಾನ್ಯ ಸಭಾಧ್ಯಕ್ಷಿಣಿಯವರೇ, ಇವತ್ತಿನದಿವಸ ಇಟ್ಟಿರತಕ್ಕ ಡಿಮ್ಯಾಂಡ್‌ಗಳ ವಿಷಯದಲ್ಲಿ ಮಾತನಾಡುತ್ತಾ ನಾನು ಮುಖ್ಯವಾಗಿ ಕಾರ್ಮಿಕರ ವಿಷಯದಲ್ಲಿ ಮಾತ್ರ, ಅವರಿಗೆ ಸೀಮಿತವಾದ ವಿಷಯಗಳನ್ನು ಮಾತ್ರ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ತಮಗೆಲ್ಲಾ ಗೊತ್ತಿರುವಹಾಗೆ, ಕಾರ್ಮಿಕರು ನಮ್ಮ ಸಮಾಜದಲ್ಲಿ ಆರ್ಥಿಕ ಉತ್ಪತ್ತಿಗೆ ಒಂದು ಆಧಾರಸ್ತಂಭ ಇದ್ದಂತೆ ಎಂದು ಹೇಳಬಹುದು. ಸಮಾಜದ ಶಕ್ತಿಶಾಲಿ ಒಡಪಾಯಿ ಎಂದರೆ ಈ ಕಾರ್ಮಿಕ. ಇಂತಹ ಒಂದು ಕಾರ್ಮಿಕರ ವಿಷಯವನ್ನು ಚರ್ಚೆ ಮಾಡಬೇಕಾಗಿದ್ದರೆ, ಅವರ ಹಿತ ದೃಷ್ಟಿಗೆ ಹೆಚ್ಚು ತೀವ್ರತೆಯಿಂದ ಗಮನಕೊಡಬೇಕಾಗುತ್ತದೆಂದು ನಾನು ಭಾವಿಸುತ್ತೇನೆ. ಅದರಲ್ಲೂ ನನಗೆ ಮುಂಚೆ ಮಾತನಾಡಿದ ಮಾನ್ಯ ಸಿಂಧ್ಯರವರು, ತಮ್ಮ ಸದನದಲ್ಲಿ ಕಾರ್ಮಿಕರ ಹಿತದೃಷ್ಟಿಯಿಂದ ತೀವ್ರವಾಗಿ ಅವರ ಪರವಾಗಿ ವಕಾಲತ್ತನ್ನು ವಹಿಸಿ ಮಾತನಾಡುವಂತಹ ಅನುಭವಸ್ಥ ಸದಸ್ಯರು ಬಹಳ ಕಡಿಮೆ ಇದ್ದಾರೆ. ಅದರಲ್ಲೂ ಬಹಳ ತೀವ್ರತೆಯಿಂದ ಕಾರ್ಮಿಕ ಕ್ಷೇತ್ರಗಳಲ್ಲಿ ಹತ್ತಾರು ವರ್ಷಗಳಿಂದ ದುಡಿದು. ಅವರ ಹಿತರಕ್ಷಣೆಯಲ್ಲಿ ತಮ್ಮ ಜೀವನವನ್ನು ಕಳೆದಂಥವರು ಇವತ್ತು ನಮ್ಮ ಸದನದಲ್ಲಿ ಸದಸ್ಯರಾಗಿಲ್ಲ, ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಕಾರ್ಮಿಕರ ಪರವಾಗಿ, ಅವರ ಪ್ರತಿನಿಧಿಗಳು ಇಲ್ಲದಿರುವಂಥ ಸಂದರ್ಭದಲ್ಲಿ, ನಮ್ಮ ಸದನದಲ್ಲಿರುವ ನಮ್ಮ ಸದಸ್ಯರ ಮೇಲೆ ಹೆಚ್ಚಿನ ಜವಾಬ್ದಾರಿ

ಬಿದ್ದಿದೆ ಎಂದು ನಾನು ಭಾವಿಸುತ್ತೇನೆ. ಈ ಒಂದು ಮೂಲಭೂತ ಅಭಿಪ್ರಾಯದ ಮೇಲೆ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಕಾರ್ಮಿಕ ಕ್ಷೇತ್ರದಲ್ಲಿ ಒಂದು ಸಂಘಟಿತ ಕ್ಷೇತ್ರ ಮತ್ತು ಇನ್ನೊಂದು ಅಸಂಘಟಿತ ಕ್ಷೇತ್ರ. ಈ ಎರಡು ಕ್ಷೇತ್ರಗಳಲ್ಲಿ ನಾವು ಎರಡು ವಿಭಾಗದಿಂದ ಯೋಚನೆ ಮಾಡಬೇಕಾದ್ದು ನಮ್ಮ ಮೂಲಭೂತ ಕರ್ತವ್ಯವಾಗಿದೆ. ಈ ಆರ್ಗನೈಸ್ಡ್ ಸೆಕ್ಟರ್ ಎಂದು ಏನು ಹೇಳುತ್ತೇವೆ, ಅವರು ಕಳೆದ ೫೦–೬೦ ವರ್ಷಗಳ ಕಾಲದಿಂದ ಸತತವಾಗಿ ಸಂಘಟಿತರಾಗಿ ಹೋರಾಟ ಮಾಡಿ, ಅವರದೇ ಆದ ಆರ್ಥಿಕ ಸಾಮಾಜಿಕ ಸ್ಥಾನವನ್ನು ಬಹುಮಟ್ಟಿಗೆ ಸುಭದ್ರವಾದ ಒಂದು ಸ್ಥಾನಮಾನವನ್ನು ಗಳಿಸಿಕೊಂಡಿದ್ದಾರೆ. ಆದರೆ ಇನ್ನೊಂದು ಅಸಂಘಟಿತ ವಿಭಾಗ ಏನಿದೆ, ಇವರ ಕಷ್ಟಗಳನ್ನು ಅರ್ಥಮಾಡಿಕೊಂಡಿರುವವರು ಇಲ್ಲ. ಅವರ ಕಡೆ ಯಾವುದೇ ಸರ್ಕಾರ ತೀವ್ರತೆಯಿಂದ ಅನುಕೂಲವನ್ನು ಮಾಡಿಕೊಡುವಂತಹ ಕೆಲಸವನ್ನು ಮಾಡಿಲ್ಲ. ಆದ್ದರಿಂದ ನಮ್ಮ ಸರ್ಕಾರ ಶ್ರೀಮಾನ್ ಪಾಟೀಲ್‌ರವರ ನೇತೃತ್ವದಲ್ಲಿ ಹಾಗೂ ನಾಯಕತ್ವದಲ್ಲಿ ಅವರು ಈ ಖಾತೆಯನ್ನು ತೆಗೆದುಕೊಂಡಿದ್ದಾರೆ, ಅವರು, ಇವರ ಬಗ್ಗೆ ಒಳ್ಳೆಯ ಕೆಲಸ ಮಾಡಿಕೊಡಬೇಕೆಂದು ಹೇಳಿ, ನಾನು ಅವರ ಗಮನವನ್ನು ಸೆಳೆಯಬಯಸುತ್ತೇನೆ. ಅನ್ ಆರ್ಗನೈಸ್ಡ್ ಸೆಕ್ಟರ್ ಎಂದು ಹೇಳಿದರೆ, ಈ ರಿಪೋರ್ಟ್‌ನಲ್ಲಿ ಕೆಲವು ವಿಭಾಗಗಳ ಬಗ್ಗೆ ಮಾತ್ರ ಹೇಳಿದ್ದಾರೆ. ಆರ್ಗನೈಸ್ಡ್ ಸೆಕ್ಟರ್‌ನಲ್ಲಿ ಎಷ್ಟು ಬೇಕಾದರೂ ಹೇಳುವುದಕ್ಕೆ ಸಾಧ್ಯವಿದೆ. ಆದರೆ ಇದು ಬಹಳ ಕಡಿಮೆ ಇದೆ. ಆದರೆ ಅನ್ ಆರ್ಗನೈಸ್ಡ್ ಸೆಕ್ಟರನ್ನು ವಿಶ್ಲೇಷಣೆ ಮಾಡುವುದು ಬಹಳ ಕಷ್ಟ. ಏಕೆಂದರೆ, ಇದು ಬಹಳ ಅಸಾಧಾರಣವಾದ ರೀತಿಯಲ್ಲಿ ಬೆಳೆದು ಬಂದಿದ್ದು ಬಹಳ ಕಾಲದಿಂದ ಹಾಗೆಯೇ ಉಳಿದುಕೊಂಡು ಬಂದು, ಕಷ್ಟಕಾರ್ಪಣ್ಯದಿಂದ ಬಂದ ವಿಭಾಗ. ಈ ಒಂದು ಅನ್ ಆರ್ಗನೈಸ್ಡ್ ಸೆಕ್ಟರ್‌ನಲ್ಲಿ ಯಾವುದೇ ರೀತಿಯಾದ ಎಂಪ್ಲಾಯ್‌ಮೆಂಟ್ ಸೆಕ್ಯೂರಿಟಿಯಾಗಲೀ ವರ್ಕಿಂಗ್ ಅಂಡ್ ಲೀವಿಂಗ್ ಕಂಡೀಷನ್ ಆಗಲೀ ಯಾವುದೇ ರೀತಿಯಿಂದ ಹಾಗೂ ಯಾವುದೇ ದೃಷ್ಟಿಯಲ್ಲಿ ಅನುಕೂಲವಾಗಿಲ್ಲ. ಈ ಒಂದು ಆರ್ಗನೈಸ್ಡ್ ಸೆಕ್ಟರ್‌ನಲ್ಲಿ ಸ್ಟ್ಯಾಚುಟರಿ ಸ್ಯಾಂಕ್ಷನ್ ಏನಿದೆ, ಕಾನೂನುಬದ್ಧವಾಗಿ, ಪ್ರಾವಿಡೆಂಟ್ ಫಂಡ್ ಆಗಲೀ, ಗ್ರ್ಯಾಜುಯಿಟಿ ಆಗಲೀ, ಇ.ಎಸ್.ಐ. ಆಗಿರಲಿ, ಯಾವುದೇ ಒಂದು ರೀತಿಯಲ್ಲಿ, ಏನೇನು ಅನುಕೂಲತೆಗಳು ಆರ್ಥಿಕವಾಗಿ, ಸಾಮಾಜಿಕವಾಗಿ ದೊರಕಬೇಕಾಗಿತ್ತೋ, ಅವು ಯಾವುದೇ ರೀತಿಯಿಂದ ಇಲ್ಲ.

ಉದಾಹರಣೆಗಾಗಿ ಈ ಮನೆಗಳಲ್ಲಿ ಕೆಲಸ ಮಾಡುವಂತಹ, ಅಂಗಡಿಗಳಲ್ಲಿ ಕೆಲಸ ಮಾಡುವಂತಹ, ಸಣ್ಣಪುಟ್ಟ ವರ್ಕ್‌ಷಾಪ್‌ಗಳಲ್ಲಿ ಕೆಲಸ ಮಾಡುವಂತಹ ಕಾರ್ಮಿಕರು ಇದ್ದಾರೆ. ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟವರಿಗಾಗಲೀ, ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟವರಿಗಾಗಲೀ, ಯಾವುದೇ ಸರಕಾರಿ ಇಲಾಖೆಯವರಿಗಾಗಲೀ, ಗುರುತು ಸಿಗದೇ, ಅವರ ದೃಷ್ಟಿಗೆ ಬೀಳದೇ ಕಣ್ಣಿಗೆ ಕಾಣದೇ ಇರುವ ರೀತಿಯಲ್ಲಿ ಲಕ್ಷೋಪಲಕ್ಷ ಜನ ಹೆಣ್ಣುಮಕ್ಕಳು ಮತ್ತು ಚಿಕ್ಕಮಕ್ಕಳು ಕೂಡಾ ಕೆಲಸವನ್ನು ಮಾಡುತ್ತಿದ್ದಾರೆ. ಅವರ ಗತಿ ಯಾವರೀತಿ ಇದೆ ಎಂಬುದು ಚೆನ್ನಾಗಿ ಅರ್ಥ ಮಾಡಿಕೊಂಡವರಿಗೆ ಮಾತ್ರ ಗೊತ್ತಾಗುತ್ತದೆ. ಆದುದರಿಂದ ಇವರ ವಿಷಯವನ್ನು ನಾವು ತೀವ್ರ ರೀತಿಯಿಂದ ಗಮನಿಸುವುದಲ್ಲದೆ. ಹೆಚ್ಚು ಅನುಕಂಪವನ್ನು ತೋರಿಸಬೇಕು. ಅತೀ ಶೀಘ್ರವಾಗಿ ಅದಕ್ಕೆ ಸಂಬಂದಪಟ್ಟ ಒಂದು ಕಾನೂನನ್ನು ತಂದು ಅವರ ರಕ್ಷಣೆಗೆ ಮುಂದಾಗಿ ಬರಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಬೇಡಿಕೊಳ್ಳುತ್ತಿದ್ದೇನೆ. ಈಗ ಆರ್ಗನೈಸ್ಡ್ ಸೆಕ್ಟರ್‌ಗಳಲ್ಲಿ ಇರತಕ್ಕಂಥ ಕಾರ್ಮಿಕರಿಗೆ ಸಾಕಷ್ಟು ಹೌಸಿಂಗ್ ಸೊಸೈಟಿಗಳನ್ನು ಮಾಡಿಕೊಳ್ಳುವುದಕ್ಕೆ ಅನುಕೂಲಗಳು ಇವೆ. ಅವರ ಮ್ಯಾನೇಜ್‌ಮೆಂಟ್ ಕಡೆಯಿಂದಲೂ ಅನುಕೂಲ ಇದೆ. ಸರಕಾರದ ಕಡೆಯಿಂದ ಅನುಕೂಲ ಇದೆ. ಪ್ರತಿಯೊಂದು ಸರಕಾರದ ಕಡೆಯಿಂದಲೂ ಇದೆ. ಆದರೆ ಅಸಂಘಟಿತ ಕಾರ್ಮಿಕರು ಯಾರಿದ್ದಾರೆ ಅವರ್ಯಾರಿಗೂ ಈ ಅನುಕೂಲ ಇಲ್ಲ. ರಜದ ವಿಷಯದಲ್ಲೂ ಇವರಿಗೆ ಅನುಕೂಲ ಇಲ್ಲ. ಹೆಣ್ಣುಮಕ್ಕಳ ಮೆಟರ್ನಿಟಿ ಲೀವ್ ಬೆನಿಫಿಟ್ ಇವರಿಗೆ ಇಲ್ಲ. ಮತ್ತು ಅವರಿಗೆ ಸೆಕ್ಯೂರಿಟಿ ಆಫ್ ಎಂಪ್ಲಾಯ್‌ಮೆಂಟ್ ಕೂಡಾ ಇವರಿಗೆ ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಇವರು ಅಗೌರವದಿಂದ ಜೀವನ ನಡೆಸುವಂತಹದನ್ನು ನಾವು ನೋಡುತ್ತಿದ್ದೇವೆ. ಆರ್ಗನೈಸ್ಡ್ ಸೆಕ್ಟರ್‌ನಲ್ಲಿ, ಮಾಲೀಕನಾಗಲೀ, ಮಾಲೀಕನ ಕಡೆಯವರಾಗಲೀ, ಏನಾದರೂ ಅವಾಚ್ಯ ಶಬ್ದದಿಂದ ಮಾತನಾಡಿದರೆ ಇಡೀ ಕಾರ್ಮಿಕ ಸಂಘ ಎದ್ದು ಮೇಲೆ ಬೀಳುತ್ತದೆ. ಹೋರಾಟಕ್ಕೆ ನಿಲ್ಲುತ್ತದೆ. ಸಂಘಟಿತ ಹೋರಾಟ ಮಾಡುತ್ತದೆ. ಆದರೆ ಅಸಂಘಟಿತ ಕಾರ್ಮಿಕರು ಯಾರಿದ್ದಾರೆ, ಅವರನ್ನು ಯಾವ ಮಾಲೀಕ ಯಾವರೀತಿ ಬೇಕಾದರೂ ಅಸಭ್ಯತನದ ನಡವಳಿಕೆಯಿಂದ ನಡೆಸಿಕೊಂಡು ಹೋಗಬಹುದು. ಆದುದರಿಂದ ಅಂತಹವರಿಗೆ ಹೆಚ್ಚಿನ ಒಂದು ರಕ್ಷಣೆ ಕೊಡಬೇಕಾದುದು ನಮ್ಮ ಸರಕಾರದ ಆದ್ಯ ಕರ್ತವ್ಯವಾಗಿದೆ ಎಂದು ಹೇಳಬಯಸುತ್ತೇನೆ ಚೈಲ್ಡ್ ಲೇಬರ್ ಪ್ರೊಹಿಬಿಷನ್ ಬಗ್ಗೆ ಬಹಳ ಕಾಲದಿಂದಲೂ ಕೇಳುತ್ತಿದ್ದೇವೆ. ಅದು ಕಾನೂನಿನಲ್ಲೂ ಬಂದಿದೆ. ಆದರೆ ನಮ್ಮ ಕ್ಯಾಂಟೀನ್‌ನಲ್ಲೇ ಸಣ್ಣ ವಯಸ್ಸಿನ ಮಕ್ಕಳನ್ನು ಉಪಯೋಗಿಸುವುದನ್ನು

ನಾವು ನೋಡಬಹುದು. ಪ್ರತಿಯೊಂದು ಕ್ಷೇತ್ರದಲ್ಲೂ ಉಪಯೋಗಿಸುತ್ತಾರೆ. ಇದಕ್ಕೆ ಅರ್ಥ ಇದೆಯೇ ? ನಮ್ಮ ಒಂದು ಸಾಮಾಜಿಕ ಆರ್ಥಿಕ ಹಾಗೂ ಬಡತನದ ಪರಿಸ್ಥಿತಿ ಒಂದು ಏನಿದೆ ಅದರ ಒಂದು ಒತ್ತಡದಿಂದ ಅವರ ತಂದೆತಾಯಿಗಳು ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸಿಕೊಡುತ್ತಾರೆ. ಅವರನ್ನು ಕೆಲಸಕ್ಕೆ ಕಳುಹಿಸಿಕೊಡುವುದರಿಂದ ಅಷ್ಟರಮಟ್ಟಿಗೆ ಅವರ ಆರ್ಥಿಕ ಪರಿಸ್ಥಿತಿ ಉತ್ತಮ ಗೊಳ್ಳುತ್ತದೆ ಎಂದು ಅವರನ್ನು ಕೆಲಸಕ್ಕೆ ಕಳುಹಿಸಿಕೊಡುತ್ತಾರೆ. ಈ ಒಂದು ಒತ್ತಡ ಅಥವಾ ಕಂಪಲ್‌ಷನ್‌ನಿಂದ ಕಳುಹಿಸಿಕೊಡುತ್ತಾರೆಂದು ಹೇಳಿ, ಅವರನ್ನು ಕೆಲಸದಿಂದ ಬಿಡಿಸಿದರೆ ಅನಾನುಕೂಲವಾಗುತ್ತದೆ ಎಂದು ನೋಡಿದರೆ ಅದು ಒಂದು ಶಾರ್ಟ್‌ಸೈಟೆಡ್ ಮೆಥಡ್ ಅಥವಾ ಶಾರ್ಟ್‌ಸೈಟೆಡ್ ಅಪ್ರೋಚ್ ಸರಕಾರದ್ದಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಸಮಾಜದ ಒಂದು ಪ್ರಗತಿಗೆ ಮತ್ತು ಕಲ್ಯಾಣಕ್ಕೆ ಕೆಲಸ ಮಾಡುವಾಗ, ಸಮಾಜದ ಯಾವುದೇ ಒಂದು ವಿಭಾಗಕ್ಕೆ ಅಥವಾ ಯಾವುದೇ ಒಂದು ವ್ಯಕ್ತಿಗೆ ತಾತ್ಕಾಲಿಕವಾಗಿ ಏನು ತೊಂದರೆಯಾಗುತ್ತದೆ ಎಂಬುದನ್ನು ಗಮನಿಸ ಬಾರದು. ಅಂತಿಮವಾಗಿ ಯಾವುದೇ ಕಾಲಕ್ಕೂ ಸಮಾಜದ ಪ್ರಗತಿ ಸಾಧಿಸುವುದಕ್ಕೆ ಆಗುತ್ತದೆ ಎಂಬುದನ್ನು ನೋಡಿ ಯೋಚನೆಮಾಡಿ ಸಮಗ್ರವಾದ ದೃಷ್ಟಿಯಲ್ಲಿ, ಸಮಗ್ರವಾದ ಒಂದು ಪ್ರಗತಿ ಶೀಲವಾದ ಒಂದು ಕಾರ್ಯಕ್ರಮವನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಕಾನೂನನ್ನು ಮಾಡ ಬೇಕಾಗುತ್ತದೆ. ಅಂತಹ ಒಂದು ಕೆಲಸವನ್ನು ನಾವು ಮಾಡಬೇಕಾಗಿದೆ. ಚಿಕ್ಕಮಕ್ಕಳನ್ನು ಕೆಲಸಕ್ಕೆ ಕಳುಹಿಸದೇ ಹೋದರೆ ಮನೆತನಕ್ಕೆ ತೊಂದರೆಯಾಗುತ್ತದೆಂದು ಯಾರು ಹೇಳುತ್ತಾರೆ, ಅಂತಹವರನ್ನು ಸರಕಾರದವರು ಬಹಳ ಬೇಗ ಗುರುತಿಸಿ, ಆ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಲ್ಲದೆ, ಅವರಿಗೆ ಕೊಡಬೇಕಾದ ಸ್ಕಾಲರ್‌ಶಿಪ್‌ನ್ನು ಕೊಟ್ಟು, ತಂದೆ ತಾಯಿಗಳಿಗೆ ಸಹಾಯ ಮಾಡುವಂತಹ ಒಂದು ಕೆಲಸ ಮಾಡಿದರೆ, ಯಾವ ತಂದೆ ತಾಯಿಗಳು ತಾನೆ ತಮ್ಮ ಮಕ್ಕಳು ವಿದ್ಯಾವಂತರಾಗಬಾರದು ಒಳ್ಳೆಯ ಪ್ರಗತಿಶೀಲರಾಗಬಾರದು, ಒಳ್ಳೆಯ ಉದ್ಯೋಗ ಸಂಪಾದಿಸಬಾರದು ಎಂದು ಯಾರೂ ಯೋಚನೆ ಮಾಡುವುದಿಲ್ಲ. ಆರ್ಥಿಕ ಸಾಮಾಜಿಕವಾಗಿ ಬಹುತೇಕ ಹಿಂದುಳಿದ ಜನರ ಅಭಿವೃದ್ಧಿಗಾಗಿ ನಾವು ಸಾಕಷ್ಟು ಭಾಷಣ ಮಾಡುತ್ತೇವೆ, ಸಾಕಷ್ಟು ಕಾನೂನು ಮಾಡುತ್ತೇವೆ, ಆದರೆ ಪ್ರಗತಿಶೀಲವಾದ ಕಾರ್ಯಕ್ರಮ ಹಾಕಿ ಅದನ್ನು ಕಾರ್ಯಗತ ಮಾಡುವ ರೀತಿಯಲ್ಲಿ ನಾವು ಪ್ರಯತ್ನ ಮಾಡುತ್ತಿಲ್ಲ. ನಾವು ರಾಜಕಾರಣಿಗಳಾಗಿ, ಒಂದು ರಾಜಕೀಯ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡುವ ಒಂದು ಪೊಲಿಟಿಕಲ್ ವಿಲ್ ಕೂಡಾ ಇವತ್ತು ನಮ್ಮಲ್ಲಿ ಇಲ್ಲ.

ಯಾರದೇ ಸರ್ಕಾರ ಇರಬಹುದು, ಯಾವುದೇ ಪಕ್ಷದ ಸರ್ಕಾರ ಇರಬಹುದು, ಪಕ್ಷ ಯಾವುದೇ ಸರ್ಕಾರದಿಂದ ಹೋಗಬಹುದು ; ಆದರೆ ಆಡಳಿತ ವರ್ಗ ಏನು ಇದೆ, ಅದು ಎಲ್ಲ ಕಾಲಕ್ಕೂ ಇರುವ ಒಂದು ಆಡಳಿತ ವರ್ಗ. ಈ ಆಡಳಿತ ವರ್ಗ ಇವರಿಗೆ ಎಲ್ಲಿಯವರೆಗೂ ಪುರೋಗಾಮಿಯಾಗಿ ಇರುವುದಿಲ್ಲ, ಪ್ರಗತಿಶೀಲವಾಗಿ ಕಾರ್ಯಶೀಲರಾಗಿ ಸಾಕಷ್ಟು ಕೆಲಸ ಮಾಡುವುದಕ್ಕೆ ಆಡಳಿತ ವರ್ಗದವರು ಒಂದು ಕ್ರಿಯೇಟೀವ್ ಇಂಟಲಿಜೆನ್ಸ್ ಇಟ್ಟುಕೊಂಡು ಕೆಲಸವನ್ನು ಪ್ರಗತಿಶೀಲವಾಗಿ ಇರತಕ್ಕಂಥ ಒಂದು ಕಾರ್ಯಕ್ರಮವನ್ನು ರಾಜಕಾರಣಿ ಯಂತ್ರಗಳಿಗೆ ಕೊಡುವುದಿಲ್ಲವೋ ಅಲ್ಲಿಯವರೆವಿಗೆ ಈ ಸಮಾಜ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಚುನಾಯಿತ ಸದಸ್ಯರಾದಂಥ ನಾವು ಮತ್ತು ನಮ್ಮ ಕಡೆಯಿಂದ ಬಂದಂತಹ ಮಂತ್ರಿವರ್ಯರು ಅವರಾದರೂ ಒಂದು ಕ್ರಿಯೇಟಿವ್ ಅಪ್ರೋಚ್ ಇಟ್ಟುಕೊಂಡು ಪ್ರಗತಿಶೀಲವಾದ ಕೆಲಸ ಮಾಡಬೇಕು. ಅವರು ಮಾಡುವುದಕ್ಕೆ ಸಮಯ ಇಲ್ಲದಿದ್ದರೆ, ಅವರ ಒಂದು ಟೀಮ್ ಏನು ಇದೆ, ಅವರ ಜೊತೆಯಲ್ಲಿರತಕ್ಕ ಅವರ ಜೊತೆ ಕೆಲಸ ಮಾಡತಕ್ಕ ಬ್ಯೂರೋಕ್ರಸಿ, ಅವರ ಕೈಯಲ್ಲಿ ಆದರೂ ಕೆಲಸ ಮಾಡಿಸಬೇಕು, ಇಲ್ಲದಿದ್ದರೆ ನಮ್ಮ ಸಮಾಜದಲ್ಲಿ ಪ್ರಗತಿ ಶೀಲ ಸುಧಾರಣೆಯನ್ನು ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. ನಾವು ಕೇವಲ ಮೊಸಳೆ ಕಣ್ಣೀರು ಸುರಿಸಿದಂತೆ ಆಗುತ್ತದೆ, ಇಲ್ಲವೇ ಇಲ್ಲಾ ಲಿಪ್ ಸಿಂಪತಿಯನ್ನು ತೋರಿಸಿ ದಂತಾಗುತ್ತದೆ, ಅದು ಇನ್ನು ಮೇಲೆ ಆಗಬಾರದು. ಎಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಈಗ ಮಕ್ಕಳು ಕೆಲಸ ಮಾಡುವುದನ್ನು ಪ್ರಾಹಿಬೀಟ್ ಮಾಡಬೇಕೆಂದು ಹೇಳುತ್ತೇನೆ ಮತ್ತು ಈ ಬಗ್ಗೆ ಕಾರ್ಯಗತವಾಗುವಂತಹ ಕೆಲಸ ಆಗಬೇಕು. ನಮ್ಮ ಚೀಫ್ ಇನ್ಸ್‌ಪೆಕ್ಟರ್ ಆಫ್ ಬಾಯಿಲರ್‍ಸ್ ಅಂಡ್ ಫ್ಯಾಕ್ಟರೀಸ್ ಬಗ್ಗೆ ಇಲ್ಲಿ ಒಂದು ಮಾತು ಹೇಳಿದ್ದಾರೆ. ನಾನಾದರೂ ಆ ಬಗ್ಗೆ ಒಂದು ಸಣ್ಣ ಮಾತು ಹೇಳುತ್ತೇನೆ. ಈ ಚೀಫ್ ಇನ್ಸ್‌ಪೆಕ್ಟರ್‍ಸ್ ಆಫ್ ಫ್ಯಾಕ್ಟರೀಸ್ ಅಂಡ್ ಬಾಯಿಲರ್‍ಸ್ ಎಂದು ಕಾನೂನು ಪ್ರಕಾರ ಏತಕ್ಕೆ ನೇಮಕ ಮಾಡಿದ್ದೇವೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಯಾವುದೇ ಒಬ್ಬ ನಾಗರೀಕ ತಾನು ಕಾರ್ಖಾನೆಯನ್ನು ತೆರೆಯಲು ಚೀಫ್ ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್ ಅಂಡ್ ಬಾಯಿಲರ್‍ಸ್‌ರವರು ಒಂದು ಲೈಸೆನ್ಸ್ ಕೊಡ ಬೇಕಾಗುತ್ತದೆ. ಈ ಚೀಫ್ ಇನ್ಸ್‌ಪೆಕ್ಟರ್‍ಸ್ ಆಫ್ ಫ್ಯಾಕ್ಟರೀಸ್ ಅಂಡ್ ಬಾಯಿಲರ್‍ಸ್‌ರವರ ಸಿಬ್ಬಂದಿ

ಯಾರು ಇದ್ದಾರೆ, ಅವರು ಯಾರು ಕಾರ್ಖಾನೆ ತೆಗೆಯಲು ಮುಂದೆ ಬರುತ್ತಾರೋ ಅವರಿಗೆ ತಕ್ಷಣ ಲೈಸೆನ್ಸ್ ಕೊಟ್ಟು ಅವರ ಬೆಂಬಲವಾಗಿ ನಿಲ್ಲಲು ಸಹಾನುಭೂತಿ ತೋರಿಸಬೇಕು ಅವನಿಗೆ ಎಲ್ಲಾ ರೀತಿಯಿಂದಲೂ ಸಹಾಯ ಮಾಡಲು ಮುಂದೆ ಬರಬೇಕು. ಆದರೆ ಯಾರು ಕಾನೂನು ಬದ್ಧವಾಗಿ ಯಾವುದೇ ಕಾರ್ಖಾನೆಯನ್ನು ತೆರೆಯಲು ಯಾರೇ ಉದ್ಯಮಿ ಮುಂದೆ ಬಂದರೆ ಅವರು ಚೀಫ್ ಇನ್ಸ್‌ಪೆಕ್ಟರ್ಸ್ ಆಫ್ ಫ್ಯಾಕ್ಟರೀಸ್ ಅವರಿಗೆ ಸಾಕಷ್ಟು ಲಂಚ ಕೊಡದಿದ್ದರೆ ಅವರು ಲೈಸೆನ್ಸ್ ಕೊಡುವುದೇ ಇಲ್ಲ. ಈ ರೀತಿಯಲ್ಲಿ ನಡೆದುಕೊಂಡು ಬರುತ್ತಿದೆ. ಇದನ್ನು ತಾವು ತೀವ್ರವಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಈ ಒಂದು ಡಿಪಾರ್ಟ್‌ಮೆಂಟ್‌ನಿಂದ ಯಾರೇ ಒಬ್ಬ ಎಂಟರ್‌ಪ್ರೈನರ್ಸ್ ಯಾವುದೇ ಕೆಲಸ ಮಾಡಲು ಮುಂದೆ ಬಂದಾಗ ಅವನಿಗೆ ಪ್ರಥಮತಃ ಸಾಕಷ್ಟು ಅಡಚಣೆಗಳು ಈಗಿನ ಕಾನೂನಿನಿಂದ ಬರುತ್ತವೆ. ಇದರಿಂದ ನಮ್ಮ ಯುವ ಎಂಟರ್‌ಪ್ರೈನರ್ಸ್‌ಗೆ ತೊಂದರೆ ಆಗುತ್ತದೆ. ಇದನ್ನು ನಾನು ಸ್ವತಃ ನನ್ನ ಅನುಭವದಿಂದ ಒಂದು ಮಾತನ್ನು ಹೇಳುತ್ತೇನೆ. ಈಗ ಇಲ್ಲಿ ತಾವು ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಚೀಫ್ ಇನ್ಸ್‌ಪೆಕ್ಟರ್ಸ್ ಆಫ್ ಫ್ಯಾಕ್ಟರೀಸ್ ಅಂಡ್ ಬಾಯಿಲರ್ಸ್ ಅವರ ರೆಕಾರ್ಡ್ ಪ್ರಕಾರ ೧೨,೬೮೭ ಫ್ಯಾಕ್ಟರೀಸ್ ಇವೆ ೨೦೪೨ ಬಾಯಿಲರ್ಸ್ ಇವೆ. ದಿನಾಂಕ ೩೧-೧೨-೧೯೮೭ಕ್ಕೆ. ಇಲ್ಲಿ ಸುಮಾರು ೮ ರಿಂದ ೧೫ ಲಕ್ಷ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದೀರಿ. ಈ ಫಿಗರ್ಸ್ ಒಬ್ಬ ಸಣ್ಣ ಅಧಿಕಾರಿ ರೆಕಾರ್ಡ್ ಮಾಡಿ ತೆಗೆದುಕೊಂಡು ಬಂದು ಇಲ್ಲಿ ಕೊಟ್ಟಿದ್ದಾರೆಂದು ಕಾಣುತ್ತದೆ ಇವು ಸರಿಯಾದ ಅಂಕಿಅಂಶಗಳು ಅಲ್ಲ. ಇದು ಆಕ್ಚುಯಲ್ ಆಗಿ ಇಲ್ಲ ಎಂದು ನಾನು ಘಂಟಾಘೋಷವಾಗಿ ಹೇಳಬಯಸುತ್ತೇನೆ. ಕಾರ್ಖಾನೆಗಳು ಬೆಂಗಳೂರಿನಲ್ಲಿರುವುದನ್ನು ಮಾತ್ರ ತೆಗೆದುಕೊಂಡರೆ ಗಲ್ಲಿ ಗಲ್ಲಿಗಳಲ್ಲಿ ಸಾಕಷ್ಟು ಕಾರ್ಖಾನೆಗಳು ಇವೆ. ಒಂದೊಂದು ಕಡೆ ೨೦ ರಿಂದ ೫೦ ಜನ ಕಾರ್ಮಿಕರು ಕೆಲಸ ಮಾಡುವಂತಹ ಕಾರ್ಖಾನೆಗಳು ಇವೆ. ಅವು ವರ್ಕ್‌ಶಾಪ್ಸ್ ಇರಬಹುದು ಮೆಷಿನರಿ ಶಾಪ್ಸ್ ಇರಬಹುದು ವೆಲ್ಡರ್ ಶಾಪ್ಸ್ ಇರಬಹುದು ಅಥವಾ ಬೇರೆ ಯಾವುದೇ ಇರಬಹುದು; ಇಂತಹ ಪ್ರತಿಯೊಂದು ಕಡೆಯೂ ಕಾರ್ಮಿಕರು ಬಹಳ ಯಾಚಾರ್ ಸರ್ಕಮ್‌ಸ್ಟೆನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಫ್ಯಾಕ್ಟರಿಗಳಿಗೆ ಲೈಸೆನ್ಸ್ ಪಡೆದಿರುವುದಿಲ್ಲ. ಬೇಕಾದರೆ ಮಾನ್ಯ ಸಚಿವರು ನನ್ನ ಜೊತೆ ಸರ್‌ಪ್ರೈಜ್ ವಿಜಿಟ್ ಬರಲಿ, ನಾನು ಅವರಿಗೆ ತೋರಿಸಿ ಕೊಡುತ್ತೇವೆ. ಅಂತಹ ಕಾರ್ಖಾನೆಗಳಲ್ಲಿ ಕೇವಲ ಮಾಮೂಲಿ ತೆಗೆದುಕೊಂಡು ಅವರನ್ನು ಬಿಟ್ಟುಬಿಡುತ್ತಿದ್ದಾರೆ. ಎಷ್ಟೋ ಆಕ್ಸಿಡೆಂಟ್ಸ್ ಆಗಿವೆ. ಅದು ಪೋಲೀಸಿನವರ ಗಮನಕ್ಕೂ ಬರುವುದಿಲ್ಲ. ಆಸ್ಪತ್ರೆಗಳ ಗಮನಕ್ಕೂ ಬರುವುದಿಲ್ಲ ಎಲ್ಲೂ ಬರುವುದಿಲ್ಲ ಇಂತಹ ಕೆಲಸಗಳು ನಮ್ಮ ಕಣ್ಣು ಮುಂದೆ ನಡೆಯುತ್ತಿರುತ್ತವೆ. ನಾನು ಸ್ವತಃ ನೋಡಿದ್ದೇನೆ ಒಬ್ಬ ೧೪ ವರ್ಷದ ಹುಡುಗ ಕೆಲಸ ಮಾಡುತ್ತಿರುವಂತಹ ಸಂದರ್ಭದಲ್ಲಿ ಅಕಸ್ಮಾತ್ ಆಗಿ ಒಂದು ರಾಡ್ ಕಟ್ ಮಾಡುವಂತಹ ಸಂದರ್ಭದಲ್ಲಿ, ಅದು ಅಕಸ್ಮಾತ್ ಅವನ ಹೊಟ್ಟೆ ಒಳಗೆ ಹೋಗಿ ಹೊರಗೆ ಬಂತು ಆ ಹುಡುಗ ಸತ್ತು ಹೋದ. ಅದನ್ನು ಹಾಗೆಯೇ ಮುಚ್ಚಿಬಿಟ್ಟರು. ಆದರೆ ಇಂಥಾದ್ದು ಎಷ್ಟು ಆಗುತ್ತದೆ ಎನ್ನುವುದನ್ನು ತೀವ್ರವಾಗಿ ಅರ್ಥಮಾಡಿಕೊಳ್ಳಬೇಕು ನಮ್ಮ ಸಮಾಜದಲ್ಲಿರುವ ಬಡಪಾಯಿ ಕಾರ್ಮಿಕರಿಗೆ ಸರಿಯಾದ ರಕ್ಷಣೆ ಕೊಡಬೇಕು, ಅವರಿಗೆ ಪ್ರಗತಿಶೀಲವಾದ ರೀತಿಯಲ್ಲಿ ಮಾನವನ ಹಕ್ಕುಗಳು ಸಿಗುವಂತೆ ಮಾಡಬೇಕು. ಅದಕ್ಕಾಗಿ ರಾಜ್ಯಮಟ್ಟದಲ್ಲಿರುವ ಒಂದು ಕಾನೂನಿನಲ್ಲಿ ಇವರಿಗೆ ಸರಿಯಾದ ರೀತಿಯಲ್ಲಿ ಅನುಕೂಲ ಆಗಬೇಕು ಎನ್ನುವುದಾದರೆ ಈ ಒಂದು ಫ್ಯಾಕ್ಟರಿ ಇನ್ಸ್‌ಪೆಕ್ಟರುಗಳು ಯಾರಿದ್ದಾರೆ, ಅವರುಗಳು ಯೋಗ್ಯವಾದ ರೀತಿಯಲ್ಲಿ ನಡೆದುಕೊಳ್ಳದಿದ್ದರೆ ಕಾರ್ಖಾನೆಗಳಲ್ಲಿ ಏನೇನು ಅನ್ಯಾಯ ನಡೆಯುತ್ತದೆ, ಅಕ್ರಮಗಳು ಆಗುತ್ತಿವೆಯೋ, ಹೆಸಾರ್ಡ್ ನಡೆಯುತ್ತಿವೆಯೋ ಅವೆಲ್ಲಾ ಹಾಗೆ ನಡೆಯುತ್ತಾ ಹೋಗುತ್ತವೆನ್ನುವ ಮಾತನ್ನು ಹೇಳಬೇಕಾಗುತ್ತದೆ. ಅವರ ಪರ್ಸನಲ್ ಲೈಫ್ ಮತ್ತು ಅವರ ಕೆಲಸಕ್ಕೂ ಅಪಾಯ ಇದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಆಮೇಲೆ ಗ್ರೂಪ್ ಇನ್‌ಶೂರೆನ್ಸ್ ಪಾಲಿಸಿಯ ಬಗ್ಗೆ ಒಂದು ಮಾತನ್ನು ನಮ್ಮ ಸಿಂಧ್ಯಾರವರು ಹೇಳಿದರು. ಅದರ ಬಗ್ಗೆ ನಾನೂ ಸಹ ಹೇಳಬಯಸುತ್ತೇನೆ. ಆಶಾಕಿರಣ ಎನ್ನುವ ಪಾಲಿಸಿಯ ಬಗ್ಗೆ ನಮ್ಮ ಸರ್ಕಾರದವರು ಯಾವ ಕಾಲದಲ್ಲಿ ತೀರ್ಮಾನ ತೆಗೆದುಕೊಂಡಿದ್ದರೋ, ಈಗ ಅದು ಯಾವ ಪರಿಸ್ಥಿತಿಯಲ್ಲಿ ಇದೆಯೊ, ನನಗೆ ಗೊತ್ತಿಲ್ಲ. ಆದರೆ ನಮ್ಮ ಅನ್ ಆರ್ಗನೈಸ್ಡ್ ಸೆಕ್ಟರ್ ವರ್ಕಿಂಗ್ ಕ್ಲಾಸ್ ಯಾರಿದ್ದಾರೇ ಇನ್‌ಕ್ಲೂಡಿಂಗ್ ಅಗ್ರಿಕಲ್ಚರಲ್ ವರ್ಕ್‌ರ್ಸ್ ಯಾರಿದ್ದಾರೆ, ಈ ಬಡಪಾಯಿಗಳಿಗೆ ಅನ್ ಎಂಪ್ಲಾಯ್ ಆಗಿರಲಿ ಅಥವಾ ಅಂಡರ್ ಎಂಪ್ಲಾಯ್ಡ್ ಆಗಿರಲಿ, ಯಾರೇ ಆಗಿರಲಿ, ಈ ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಬಹಳ ಹಿಂದುಳಿದಂತಹವರು. ಯಾವುದೋ ಒಂದು ಆಕಸ್ಮಿಕ ಸಂದರ್ಭದಲ್ಲಿ ಒಂದು ದುರ್ಘಟನೆಗೆ ಈಡಾಗಿ ಅವರು ಪ್ರಾಣ ಕಳೆದುಕೊಂಡಾಗಿರಲಿ, ಇಲ್ಲ ಇಂಜುರ್ಯಿ ಆಗಿರಲಿ, ಅವರಿಗೆ ಪೆಟ್ಟೇ ಆಗಿರಲಿ, ಅವರ ಡಿಪೆಂಡೆಂಟ್ ಗೆ ಆಗಿರಲಿ ಅಥವಾ ಅವರಿಗೇ ಆಗಿರಲಿ, ಆ ಕಷ್ಟದ ಪರಿಸ್ಥಿತಿಯನ್ನು

ಎದುರಿಸುವ ಶಕ್ತಿ ಇರುವುದಿಲ್ಲ. ಅಂಥವರು ಯಾವುದೋ ರೀತಿಯ ವಿಮೆಯನ್ನು ತೆಗೆದುಕೊಳ್ಳುವುದಕ್ಕೆ ಕೂಡ ಅವರಲ್ಲಿ ಶಕ್ತಿ ಇರುವುದಿಲ್ಲ. ಸಮಾಜದಲ್ಲಿ ಕೂಡ ಅವರುಗಳಿಗೆ ಅನುಕೂಲ ಇರುವುದಿಲ್ಲ. ಅಂಥಾ ಸಂದರ್ಭದಲ್ಲಿ ನಾವು ನಮ್ಮದು ಸಮಾಜವಾದಿ ರಾಜ್ಯ ಎಂದು ಹೇಳಿಕೊಳ್ಳುವ ಕಾಲದಲ್ಲಿ, ಸಮಾಜವಾದವೇ ನಮ್ಮ ಗುರಿ ಅನ್ನುವ ಕಾಲದಲ್ಲಿ ಈ ಸಮಾಜದಲ್ಲಿ ಅದರಲ್ಲೂ ನೆಗ್ಲೆಟೆಡ್ ಸೆಕ್ಷನ್ ಆಫ್ ಸೊಸೈಟಿ ಏನಿದೆ permanently exploited sections ಅವರ ವಿಷಯದಲ್ಲಿ ಹೆಚ್ಚಿನ ಒಂದು ಕರುಣೆ ತೋರಿಸುವುದಕ್ಕೆ, ಅನುಕಂಪ ತೋರಿಸುವುದಕ್ಕೆ ನಮ್ಮ ಜವಾಬ್ದಾರಿಯುತವಾದ ಗಮನವನ್ನು ಅತ್ತ ಕಡೆ ಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

We have to concede their legitimate right, whatever legitimate right due to them, rather than to show our sympathy, charity or compassion towards them. ಎನ್ನುವುದು ನನ್ನ ಅಭಿಪ್ರಾಯ. ಏತಕ್ಕೆಂದರೆ, ಯಾವುದೋ ಒಂದು ಪ್ರಗತಿಶೀಲವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದ್ದರೆ ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳನ್ನು ನಾವು ನೇರವಾಗಿ ಗಮನಿಸಿ, ಗುರ್ತಿಸಿ ಅವರಿಗೆ ಆರ್ಥಿಕ ಮತ್ತು ಸಾಮಾಜಿಕ ಒಂದು ರಕ್ಷಣೆಯನ್ನು ಕೊಡದಿದ್ದರೆ ನಮ್ಮ ಜವಾಬ್ದಾರಿಯಲ್ಲಿ ನಾವು ವಿಫಲರಾಗುತ್ತೇವೆನ್ನುವ ಮಾತನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ೪ ಕೋಟಿ ಜನ ಸಂಖ್ಯೆ ಏನಿದೆ, ಅದರಲ್ಲಿ ೮೦ ಲಕ್ಷ ಸಂಸಾರಗಳು ಇದ್ದು, ಅದರಲ್ಲಿ ಸುಮಾರು ೨೦ ಭಾಗದಷ್ಟು ಕಾರ್ಮಿಕರಿದ್ದಾರೆ. ಇವರು ಇಂತಹ ದುರ್ಘಟನೆಗಳಿಗೆ ಈಡಾಗುವಂಥ ಪರಿಸ್ಥಿತಿ ಬಂದರೆ ಅವರಿಗೆ ನೇರವಾಗಿ ರಾಜ್ಯ ಸರ್ಕಾರದ ಬೊಕ್ಕಸದಿಂದ ಮತ್ತು ಬೇರೆ ಸಂಬಂಧಪಟ್ಟ ಇಲಾಖೆಗಳಿಂದ ಸಹಾಯವನ್ನು ಮಾಡಬೇಕು. ಇವರಿಗೆ ಕಾಂಪ್ರಹೆನ್ಸೀವ್ ಗ್ರೂಪ್ ಇನ್‌ಶೂರೆನ್ಸ್, ಪರ್ಸನಲ್ ಆಕ್ಸಿಡೆಂಟ್ ಇನ್‌ಶೂರೆನ್ಸ್ ಪಾಲಿಸಿ ತೆಗೆದರೆ ಒಳ್ಳೆಯದು. ಇವತ್ತಂತೂ ಆಧುನಿಕವಾದ ವಿಮೆಗಳನ್ನು ಜನರಲ್ ಇನ್‌ಶೂರೆನ್ಸ್ ಕಾರ್ಪೋರೇಷನ್‌ನವರು, ಲೈಫ್ ಇನ್‌ಶೂರೆನ್ಸ್ ಕಾರ್ಪೋರೇಷನ್‌ನವರು ಕೊಡುವುದಕ್ಕೆ ತಯಾರಾಗಿದ್ದಾರೆ. ಯಾವ ಯಾವ ಡಿ ವರ್ಗದವರಿಗೆ ಸಹಾಯ ಸಿಗುವುದಿಲ್ಲವೋ ಅಂಥವರುಗಳಿಗೆ ಸಹಾಯ ಮಾಡುವಂಥ ಹೊಸ ಹೊಸ ಪಾಲಿಸಿಗಳನ್ನು ಕ್ರಿಯೇಟಿವ್ ಅಪ್ರೋಚ್ ಏನು ಪಬ್ಲಿಕ್ ಸೆಕ್ಟರ್‌ನಲ್ಲಿದೆ ಎಂದರೆ ಅದು ವಿಮಾ ಕಂಪನಿಗಳಲ್ಲಿ ಇದೆ. ಆದ್ದರಿಂದ ಇವತ್ತಿನ ದಿನ ಅವರುಗಳನ್ನು ಕರೆಸಿ ಅವರಲ್ಲಿ ಸಾಕಷ್ಟು ಚರ್ಚೆ ಮಾಡಿ ಈ ಒಂದು ರಾಜ್ಯ ಮಟ್ಟದಲ್ಲಿರುವ ಸುಮಾರು ೬೦–೭೦ ಲಕ್ಷ ಜನ ಆರ್ಥಿಕವಾಗಿ ಸಾಮಾಜಿಕವಾಗಿ ಏನು ಹಿಂದುಳಿದಿದ್ದಾರೆ, ಅವರುಗಳಿಗೆ ಯಾವುದೇ ರೀತಿಯಲ್ಲಿ ಅವರು ದುರ್ಘಟನೆಗೆ ಈಡಾದಾಗ ಅದನ್ನು ಎದುರಿಸುವ ಶಕ್ತಿ ಇರುವುದಿಲ್ಲ. ಅಂಥವರುಗಳಿಗೆ ಶಕ್ತಿ ತುಂಬುವ ಮತ್ತು ರಕ್ಷಣೆ ಕೊಡುವಂಥ ರೀತಿಯಲ್ಲಿ ಒಂದು ದೊಡ್ಡ ಗ್ರೂಪ್ ಇನ್‌ಶೂರೆನ್ಸ್ ಪಾಲಿಸಿ ತೆಗೆದುಕೊಂಡರೆ ಅವರ ಕಷ್ಟ ಕಾಲದಲ್ಲಿ ಅನುಕೂಲವಾಗುತ್ತದೆ. ಅದಕ್ಕೆ ರಾಜ್ಯ ಸರ್ಕಾರದಿಂದ ಹಣವನ್ನು ಕೊಡುವುದಕ್ಕೆ ಸಿದ್ಧವಿಲ್ಲವೆಂದರೆ, ನಮ್ಮಲ್ಲಿ ಇಂಡಸ್ಟ್ರಿಯಲ್ ಆರ್ಗನೈಸೇಷನ್ಸ್ ಇವೆ, ಈ ಇಂಡಸ್ಟ್ರಿಯಲ್ ಆರ್ಗನೈಸೇಷನ್ ಜೊತೆಗೆ ಜಿಲ್ಲಾ ಪರಿಷತ್ತಿನವರು ಕೂಡ ಒಂದು ಎಕನಾಮೈಸ್ ಮಾಡಿಕೊಂಡು ಅವರೂ ಒಂದು ಎಷ್ಟು ಹಣ ಕೊಟ್ಟರೆ, ಹಾಗೂ ನಗರ ಸಭೆಗಳಿಂದ, ನಗರ ಪಾಲಿಕೆಗಳಿಂದ ಮತ್ತು ಎಲ್ಲಾ ಕಡೆಯಿಂದ ಹಣವನ್ನು ಕೊಟ್ಟದ್ದೇ ಆದರೆ ಈ ಕೆಲಸವನ್ನು ಮಾಡುವುದಕ್ಕಾಗುತ್ತದೆ. ಆಮೇಲೆ ಯಾವುದೇ ರೀತಿಯಲ್ಲಿ ಎಕ್ಸೈಸ್ ಮೂಲಕವಾಗಲೀ ಸೆಸ್ ಮೂಲಕವಾಗಲೀ ಇದಕ್ಕಾಗಿ ಸೆಸ್ ಮೂಲಕ ಹಣವನ್ನು ಸಂಗ್ರಹ ಮಾಡುವುದಾದರೆ, ಕೋಟ್ಯಾಂತರ ರೂಪಾಯಿಗಳು ನಮಗೆ ಬರುತ್ತದೆ. ಈ ಹಣದಿಂದ ಪ್ರೀಮಿಯಂ ಕೊಡುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಬಹು ಸಂಖ್ಯೆಯಲ್ಲಿ ಬಡವರಿಗೆ ಅನುಕೂಲ ಮಾಡುವುದಕ್ಕಾಗುತ್ತದೆ ಹಾಗೂ ಕಾರ್ಮಿಕರಿಗೆ ಅನುಕೂಲ ಮಾಡಿಕೊಟ್ಟ ಹಾಗಾಗುತ್ತದೆಂದು ಹೇಳುತ್ತೇನೆ. ಮತ್ತೆ ಈ ಲೇಬರ್ ಟ್ರಿಬ್ಯೂನಲ್‌ನಲ್ಲಿ ಲೇಬರ್ ಡಿಸ್ಪ್ಯೂಟ್ ಏನಿದೆ, ಅದು ಬಹಳ ಕಾಲದವರೆಗೆ ಎಳೆಯುತ್ತದೆ. ಲೇಬರ್ ಕಮಿಷನರ್ ಕೋರ್ಟ್ ಇರಬಹುದು, ಬೇರೆ ಯಾವುದೇ ಕೋರ್ಟ್ ಇರಬಹುದು, ಯಾವುದೇ ಇಂಡಿವಿಜುವಲ್ ಕೇಸ್ ಆಗಿರಬಹುದು; ಮಾಲೀಕನ ಕಡೆಯಿಂದ ಒಂದು ಇಂಡಿವಿಜುಯಲ್ ಕೇಸ್ ಆಗಿರಬಹುದು; ಇಲ್ಲ ಯೂನಿಯನ್ ಕಡೆಯಿಂದ ಆಗಿರಬಹುದು, ಆದರೆ ಇದು ತೀರ್ಮಾನವಾಗುವುದು ಬಹಳ ಕಾಲವಾಗುತ್ತದೆ. ತಮಗೆಲ್ಲಾ ಗೊತ್ತಿರುವ ಹಾಗೆ ಜಸ್ಟೀಸ್ ಡಿಲೇಡ್ ಜಸ್ಟೀಸ್ ಡಿನೈಡ್ ಎಂದು ಹೇಳುವ ರೀತಿಯಲ್ಲಿ ಈಗ ಆಗುತ್ತಿದೆ. ಟರ್ಮಿನೇಟ್ ಆಗಿರುವ ಕಾರ್ಮಿಕ ಕೋರ್ಟಿಗೆ ಹೋದರೆ ಹತ್ತಾರು ವರ್ಷಗಳ ಕಾಲ ಆತನಿಗೆ ಯಾವ ರೀತಿಯಾದ ಅನುಕೂಲವೂ ಆಗುವುದಿಲ್ಲ. ಆಪನು ಬೇರೆ ಕಡೆ ಕೆಲಸಕ್ಕೂ ಹೋಗುವ ಹಾಗಿಲ್ಲ, ಬೇರೆ ಕಡೆ ಕೆಲಸಕ್ಕೆ ಹೋದರೆ ಅದು ಈ ಕೆಲಸಕ್ಕೆ ವಿರುದ್ಧವಾಗುತ್ತದೆ.

೫.೧೫ ಪಿ.ಎಂ.

ಈ ರೀತಿಯಾಗಿ ಕಾರ್ಮಿಕರಿಗೆ ಪ್ರತಿಯೊಂದು ಹಂತದಲ್ಲಿಯೂ ಕೂಡ ಈ ಕೋರ್ಟ್‌ನಲ್ಲಿ ನ್ಯಾಯ ದೊರಕುತ್ತಾ ಇಲ್ಲ. ಸರಿಯಾದ ಸಮಯದಲ್ಲಿ ಅವರಿಗೆ ನ್ಯಾಯ ದೊರಕುತ್ತಾ ಇಲ್ಲ. ಆದುದರಿಂದ ಈ ಕೋರ್ಟ್‌ಗಳಲ್ಲಿ ಯಾವಾಗ ಎಷ್ಟು ವೇಗದಲ್ಲಿ ಈ ಕೇಸ್‌ಗಳನ್ನು ನಿರ್ಧಾರ ಮಾಡಬೇಕೆಂಬುದನ್ನು ತೀರ್ಮಾನ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳ ವಿಚಾರದಲ್ಲಿ ಬಹಳ ಕಾಲದಿಂದಲೂ ಎಲ್ಲರಿಗೂ ಗೊತ್ತಿದೆ. ಈ ಹೆಸರು ಆ ವಿಭಾಗಕ್ಕೆ ಏತಕ್ಕಾಗಿ ಬಂತು ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಈ ಕೇಂದ್ರಗಳಲ್ಲಿ ರಿಜಿಸ್ಟರ್ಡ್ ಆಗಿರುವ ಸಂಖ್ಯೆಗಳನ್ನು ನಮ್ಮಲ್ಲಿ ಹೇಳುತ್ತಾ ಇದ್ದಾರೆ. ಇದರಲ್ಲಿ ಎಷ್ಟು ಜನರಿಗೆ ಸರಿಯಾದ ಕೆಲಸ ಸಿಗುತ್ತದೆ? ಇಲ್ಲಿ ರಿಜಿಸ್ಟರ್ಡ್ ಆದವರು ಎಷ್ಟು? ಎಂಬ ವಿಚಾರದಲ್ಲಿ ಹೇಳಬೇಕಾಗುತ್ತದೆ. ನಾವು ಬೆಂಗಳೂರು ನಗರವಾಸಿಗಳ ಬಗ್ಗೆ ಹೇಳಬೇಕಾದರೆ, ಈ ಬೆಂಗಳೂರು ವಾಸಿಗಳು ಬಹಳ ಹಳೆಯ ಕಾಲದಿಂದಲೂ ಇದ್ದಂಥವರು ಮತ್ತು ಕನ್ನಡಿಗರು ರಿಜಿಸ್ಟರ್ಡ್ ಮಾಡಿಕೊಂಡರೆ, ಅವರಿಗೆ ಎಷ್ಟು ಬೇಗ ಈ ರೆಫರೆನ್ಸ್‌ನ್ನು ಬೇರೆ ಬೇರೆ ಕಾರ್ಖಾನೆಗಳಿಗೆ ಮತ್ತು ಪಬ್ಲಿಕ್ ಸೆಕ್ಟರ್‌ಗಳಿಗೆ ಕಳುಹಿಸಬೇಕಾಗಿದೆ ಆ ರೀತಿಯಲ್ಲಿ ಕಳುಹಿಸಿಕೊಡುವುದಿಲ್ಲ. ಯಾರು ಅಲ್ಲಿ ಲಂಚ ಕೊಡುತ್ತಾರೆ, ಪ್ರಭಾವವನ್ನು ತರುತ್ತಾರೆ, ಅಂಥವರ ಹೆಸರನ್ನು ಮಾತ್ರ ಕಳುಹಿಸಿಕೊಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಯಾವುದಾದರೂ ಪಬ್ಲಿಕ್ ಸೆಕ್ಟರ್ ಡಿಪಾರ್ಟ್‌ಮೆಂಟ್‌ನಲ್ಲಿ, ಇನ್‌ಶೂರೆನ್ಸ್ ಸಂಸ್ಥೆಗಳಲ್ಲಿ, ಏಲ್ಲಿ ಈ ಪರಿಶಿಷ್ಟ ಜಾತಿ ಜನಾಂಗದವರಿಗೆ ಮೀಸಲಾತಿಯನ್ನು ಇಟ್ಟಿರುತ್ತಾರೆ ಅಂಥವರ ಹೆಸರನ್ನು ಕಳುಹಿಸಿಕೊಡಿ ಎಂದು ಹೇಳಿದರೆ. ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನವರು ಅಂತಹವರ ಹೆಸರನ್ನು ಕಳುಹಿಸಿಕೊಡುವುದಕ್ಕೆ ಹಿಂದೇಟು ಹಾಕುತ್ತಾರೆ. ನಮ್ಮಲ್ಲಿ ನೀವು ಕೇಳುವ ಎಕ್ಸ್‌ಪೀರಿಯನ್ಸ್ಡ್ ಮತ್ತು ಕ್ವಾಲಿಫೈಡ್ ಹ್ಯಾಂಡ್ಸ್ ಇಲ್ಲ ಎಂದು ಬರೆದು ಕಳುಹಿಸುತ್ತಾರೆ. ಉದ್ಯೋಗದಾರರು ಈ ವರ್ಗದ ಅಪ್ಲಿಕೇಶನ್ಸ್ ನಮಗೆ ಬಂದಿಲ್ಲ ಮತ್ತು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನವರು ಹೆಸರು ಕಳುಹಿಸಿಕೊಟ್ಟಿಲ್ಲ ಎಂದು ಹೇಳಿ ಕಾರಣ ತೋರಿಸಿ ತಮಗೆ ಬೇಕಾದಂಥವರನ್ನು ತುಂಬಿಸಿಕೊಳ್ಳುತ್ತಾರೆ. ಹೀಗೆ ಮಾಡುವುದರಿಂದ ಪರಿಶಿಷ್ಟರಿಗೆ ನಾವು ಇಟ್ಟಂಥ ಮೀಸಲಾತಿಯನ್ನು ಡಿಲೇ ಮಾಡಿದಂತಾಗುತ್ತದೆ. ಆದುದರಿಂದ ಪ್ರತಿಯೊಂದು ಹಂತದಲ್ಲಿಯೂ ಕೂಡ neither the services are free, fair, voluntary nor equitious. It is all based on influence or on extraneous influence ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ವಿಷಯದಲ್ಲಿ ಯಾರು ಉಸ್ತುವಾರಿ ನೋಡುತ್ತಾರೆ ಅದು ಎಷ್ಟರಮಟ್ಟಿಗೆ ಆಗುತ್ತಾ ಇದೆ, ಪಿರಿಯಾಡಿಕಲ್ ಇನ್ಸ್‌ಪೆಕ್ಷನ್‌ನನ್ನು ಅಲ್ಲಿ ಯಾರು ಮಾಡುತ್ತಾ ಇದ್ದಾರೆ, ಮಾಡದಿದ್ದರೆ ಏತಕ್ಕಾಗಿ ಮಾಡುತ್ತಾ ಇಲ್ಲ, ಮಾಡುವುದರಲ್ಲಿ ಏನೊಂದು ತಪ್ಪು ದಾರಿಯಲ್ಲಿ ಹೋಗುತ್ತಿದ್ದಾರೆ. ಯಾವ ರೀತಿಯಲ್ಲಿ ಲೋಪದೋಷಗಳು ಈ ದಿಶೆಯಲ್ಲಿ ಇವೆ ಎಂಬಿತ್ಯಾದಿಗಳನ್ನು ಗುರುತಿಸಿದ್ದಾರೆಯೇ ಎಂಬುದು ಮುಖ್ಯ. ಮತ್ತು ಇಂಥ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಯಾವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಎಂಬುದು ಈ ವರದಿಯಲ್ಲಿ ಇಲ್ಲ. ಈ ವಿಷಯಗಳ ಬಗ್ಗೆ ಮಾನ್ಯ ಸಚಿವರು ತೀವ್ರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತಾ, ಅಲ್ಲಿಗೆ ಮಾನ್ಯ ಮಂತ್ರಿಗಳು ಸಹ ಸರ್‌ಪ್ರೈಸ್ ವಿಸಿಟ್‌ನ್ನು ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ. ಇನ್ನು ಐಟಿಐ ಟ್ರೈನಿಂಗ್ ಸೆಂಟರ್‌ಗಳನ್ನು ನಮ್ಮ ರಾಜ್ಯದಲ್ಲಿ ಸರಕಾರದ ವತಿಯಿಂದ ೩೪ ಕಡೆಗಳಲ್ಲಿ ಪ್ರಾರಂಭಿಸಿದ್ದಾರೆ. ಖಾಸಗಿಯವರು ೧೩೬ ಕಡೆಗಳಲ್ಲಿ ತೆರೆದಿದ್ದಾರೆ. ಸೀಟಿಂಗ್ ಕೆಪಾಸಿಟಿ ೮,೦೧೨. ಇನ್‌ಟೇಕ್, ಕೆಪಾಸಿಟಿ, ೩,೪೨೦ ಎಂದು ಹೇಳುತ್ತಾರೆ. ಇಷ್ಟೊಂದು ಪ್ರಮಾಣವಾದಂಥ ನಮ್ಮ ಜನಸಂಖ್ಯೆಯಲ್ಲಿ ಬಡತನ ಮತ್ತು ನಿರುದ್ಯೋಗವನ್ನು ನಿವಾರಣೆ ಮಾಡಬೇಕು. ಯಾರಿಗೆ ಉದ್ಯೋಗವಿಲ್ಲ ಅವರಿಗೆ ಉದ್ಯೋಗವನ್ನು ದೊರಕಿಸಿಕೊಡಬೇಕು. ಅವರಿಗೆ ಸರಿಯಾದ ಒಂದು ತರಬೇತಿಯನ್ನು ಕೊಡಿಸಬೇಕು, ಅವರು ಸ್ಕಿಲ್ಡ್ ವರ್ಕರ್ಸ್ ಆಗಬೇಕೆಂದು ಹೇಳುವಂಥ ಕಾಲದಲ್ಲಿ ನಾವುಗಳು ಇಷ್ಟೊಂದು ಸಣ್ಣ ಸಂಖ್ಯೆಯಲ್ಲಿ ಯುವಕರನ್ನು ತಯಾರು ಮಾಡುತ್ತಿದ್ದೇವೆ ಅಂದರೆ, ಯಾವ ಕಾಲಕ್ಕೆ ನಮ್ಮ ಇಷ್ಟೊಂದು ದೊಡ್ಡ ಜನಸಂಖ್ಯೆಗೆ ಇಷ್ಟೊಂದು ಬಹುಸಂಖ್ಯಾತರಿಗೆ ವಿದ್ಯೆ ಮತ್ತು ತರಬೇತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ? ಅವರಿಗೆ ಈ ಅನುಕೂಲತೆಗಳನ್ನು ಯಾವಾಗ ಕೊಡಲು ಸಾಧ್ಯವಾದೀತು? ಈ ವಿಚಾರಗಳ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕು. ಬಹುಸಂಖ್ಯಾತ ಕಾರ್ಮಿಕ ವರ್ಗದವರು ಕೆಲಸವನ್ನು ಹುಡುಕುತ್ತಾ ಹೋಗಬೇಕಾದಂಥ ಸಂದರ್ಭದಲ್ಲಿ ಎಷ್ಟೇ ಅನ್‌ಸ್ಕಿಲ್ಡ್ ವರ್ಕರ್ಸ್ ಆಗಿದ್ದರೂ ಕೂಡ ಪ್ರತಿಯೊಂದು ಕಾರ್ಖಾನೆಯಲ್ಲಿಯೂ ಆತ ಬಂದು ಪ್ರೊಬೇಶನರ್ ಆಗಿ, ಲರ್ನರ್ ಆಗಿ, ಕೆಲಸಕ್ಕೆ ಸೇರುವಂಥ ಒಂದು ವಾತಾವರಣ ನಿರ್ಮಾಣವಾದರೆ,

ಆತನು ಒಂದೆರಡು ವರ್ಷಗಳಲ್ಲಿ ಒಳ್ಳೆಯ ಸ್ಕಿಲ್ಡ್ ವರ್ಕರ್ ಆಗುತ್ತಾನೆ. ಇದು ನನ್ನ ಅನುಭವದ ಮಾತು. ಬೆಂಗಳೂರು ನಗರದಲ್ಲಿ ಮತ್ತು ರಾಜ್ಯಮಟ್ಟದ ಎಲ್ಲಾ ಕಾರ್ಖಾನೆಗಳಲ್ಲಿ ಕೂಡ ಸರಕಾರ ಯಾವುದಾದರೂ ಒಂದು ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡು ಈ ಕಾರ್ಖಾನೆಗಳವರಿಗೆ ಒಂದು ಸಹಾನುಭೂತಿಯನ್ನು ತೋರಿಸಿ, ಆರ್ಥಿಕ ಮತ್ತಿತರ ವಿಚಾರಗಳಲ್ಲಿ ಪೂರ್ಣ ಸಹಾಯವನ್ನು ಮಾಡಿ ಈ ಒಂದು ವಿಚಾರದಲ್ಲಿ ಅವರ ಸಹಕಾರವನ್ನು ಪಡೆದರೆ ಪ್ರತಿಯೊಂದು ಇಂಡಸ್ಟ್ರೀಯೂ ಕೂಡ ಒಂದು ಐಟಿಐ, ಆಗಬಹುದಾಗಿದೆ. ಹೀಗೆ ಮಾಡಿದರೆ ಸಣ್ಣಪುಟ್ಟ ಇಂಡಸ್ಟ್ರಿಯಲ್ ಎಸ್ಟೇಟ್ ಕೂಡ ಒಂದು ಐಟಿಐ ಆಗಬಹುದು. ಇದಕ್ಕೆ ಸೂಕ್ತ ಅನುಕೂಲವನ್ನು ಮಾಡಿಕೊಡಬೇಕು. ಒಂದು ವೇಳೆ ಸಣ್ಣಪುಟ್ಟ ಇಂಡಸ್ಟ್ರೀಯವರಿಗೆ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಅಂದರೆ group of small and medium industries ಮಾಡಿದ್ರೆ ಆದರೆ ಸಾಕಷ್ಟು ಯುವಕರನ್ನು ಸ್ಕಿಲ್ಡ್ ವರ್ಕರ್ಸ್‌ನ್ನಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಇದರಿಂದ ವರ್ಷ ವರ್ಷವೂ ಅವರು ಹೆಚ್ಚಿನ ಸಂಖ್ಯೆಯಲ್ಲಿ ತಯಾರಾಗುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಏಕೆಂದರೆ ದೊಡ್ಡ ಕಾರ್ಖಾನೆಗಳಾದ ಹೆಚ್‌ಎಂಟಿ ಹೆಚ್‌ಎಎಲ್ ಬಿಇಎಲ್ ಐಎಲ್‌ಗಳು ಅವರದೇ ಆದ ಪಾಲಿಟೆಕ್ನಿಕನ್ನು ಇಟ್ಟುಕೊಂಡಿದ್ದಾರೆ. ಅಲ್ಲೆಲ್ಲಾ ಆ ರೀತಿ ಇರಬೇಕಾದರೆ ಇದೇ ನಿದರ್ಶನ ಇಟ್ಟುಕೊಂಡು ಪಾಲಿಟೆಕ್ನಿಕ್‌ಗಳನ್ನು ಓಪನ್ ಮಾಡಲು ನಮ್ಮ ಫ್ಯಾಕ್ಟರಿಗಳಿಗೂ ಅವಕಾಶ ಕೊಟ್ಟರೆ ಲಕ್ಷೋಪಲಕ್ಷ ಯುವಕರನ್ನು ತಯಾರ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಲ್ಲದೆ ಕ್ವಾಲಿಟಿ ಪ್ರೊಡಕ್ಷನ್‌ಗೂ ಅನುಕೂಲವಾಗುತ್ತದೆಂದು ಹೇಳುತ್ತೇನೆ ಮತ್ತೆ ನಮ್ಮ ಕಾರ್ಮಿಕ ಇಲಾಖೆಯಲ್ಲಿ ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ವಿಂಗ್‌ಗಳನ್ನು, ತೆರೆದು ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೆ ಹೆಚ್ಚು ಹೆಚ್ಚು ಪ್ರಾಶಸ್ತ್ಯ ಮತ್ತು ಪ್ರೋತ್ಸಾಹ ಕೊಟ್ಟರೆ, ಕ್ವಾಲಿಟಿ ಮೆಟೀರಿಯಲ್ಸ್ ನಮ್ಮಲ್ಲಿ ಪ್ರೊಡ್ಯೂಸ್ ಆಗುತ್ತವೆ. ಜೊತೆಗೆ ಸರಿಯಾದ ಪದಾರ್ಥವನ್ನು ಗಿರಾಕಿಗಳಿಗೆ ಒದಗಿಸಿದಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಈಗಿರುವ ಟ್ರೈನಿಂಗ್ ಕ್ಲಾಸಸ್‌ಗಳಲ್ಲಿ ಸಂಜೆ ಕ್ಲಾಸಸ್‌ನ್ನು ಮಾಡಲಾಗಿದೆ, ಬೆಂಗಳೂರಿನಲ್ಲಿ ೮೦ ಜನಕ್ಕೆ ಟ್ರೈನಿಂಗ್ ಕೊಡುತ್ತಿದ್ದೇವೆಂದು ಇಲ್ಲಿ ಹೇಳಿದ್ದಾರೆ. ಹಾಲಿ ರಾಜ್ಯದ ಪ್ರತಿ ಕಾಲೇಜಲ್ಲೂ, ಕಂಪ್ಯೂಟರ್ ಸೈನ್ಸ್ ಇನ್‌ಸ್ಟಿಟ್ಯೂಷನ್‌ನಲ್ಲೂ ಇವಿನಿಂಗ್ ಕ್ಲಾಸಸ್ ನಡೆಸುತ್ತಿದ್ದಾರೆ. ಆದರೆ ನಮ್ಮ ಸರ್ಕಾರದ ಐಟಿಐಗಳಲ್ಲಿ ಸಂಜೆ ತರಗತಿಗಳನ್ನು ನಡೆಸುತ್ತಿಲ್ಲ. ಇಲ್ಲೂ ನಡೆಸಲು ಅವಕಾಶ ಕೊಟ್ಟರೆ ಹೆಚ್ಚಿನ ಯುವಕರು ತರಬೇತಿ ಪಡೆಯುತ್ತಾರೆ. ಈ ರಿಪೋರ್ಟ್‌ನಲ್ಲಿ ಒಂದು ಅಂಕಿ ಅಂಶ ನೋಡಿದರೆ, ಅಪ್ರೆಂಟಿಸ್ ಟ್ರೈನಿಂಗ್ ಸ್ಕೀಮ್‌ನಲ್ಲಿ Number of training places located 8009; Number filled 5,287; number of minority trainees 15 and number of minority and weaker sections 1175. ಇದು ಏನೋ ಎಂಬುದು ನನಗೆ ಅರ್ಥವಾಗಲಿಲ್ಲ. ಮೈನಾರಿಟೀಸ್ ಅಂಡ್ ವೀಕರ್ ಸೆಕ್ಷನ್ಸ್ ೧೧೭೫ ಎಂದು ಇದೆ. ಅಂದರೆ ಈ ವರ್ಗಗಳಿಗೆ ಟ್ರೈನಿಂಗ್ ಕೊಡುತ್ತಿರುವುದು ಕೇವಲ ೩೦ ಪರ್ಸೆಂಟ್ ಮಾತ್ರ. ಈ ರೀತಿ ಹೋದರೆ ಇನ್ನೂ ಯಾವ ಕಾಲಕ್ಕೆ ನಾವು ಪ್ರಗತಿ ಸಾಧಿಸುವುದು? ಆ ಸಮಾಜದ ಜನರು ಯಾವತ್ತು ಪ್ರಗತಿಯಾಗುತ್ತಾರೆ? ಈ ರೀತಿ ಆದರೆ ಇಂಟರ್‌ಸ್ಟೇಟ್ ಮಟ್ಟದಲ್ಲಿ ನಾವು ಈ ಸ್ಕಿಲ್ಡ್ ವರ್ಕರ್ಸ್ ಅನ್ನು ಎಷ್ಟರ ಮಟ್ಟಿಗೆ ತಯಾರು ಮಾಡುವುದಕ್ಕೆ ಸಾಧ್ಯ ಎಂದು ನಾವು ಯೋಚಿಸಬೇಕು. ಆದ್ದರಿಂದ ಟ್ರೈನಿಂಗ್‌ನಲ್ಲಿ ಇವರ ಪ್ರಮಾಣ ಶೇಕಡಾ ೩೦ ಇನಿದೆ ಅದನ್ನು ಶೇಕಡಾ ೬೦ ಇಲ್ಲವೇ ೭೦ಕ್ಕೆ ಜಾಸ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮ ಐಟಿಐಗಳಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಕೇವಲ ಥಿಯರಿಟಿಕಲ್ ಆಗಿ, ಅಕೆಡೆಮಿಕ್ ಆಗಿ ಕಲಿಸುವ ಸಂದರ್ಭದಲ್ಲಿ ಪ್ರಾಕ್ಟಿಕಲ್ ಎಕ್ಸ್‌ಪಿರಿಯನ್ಸ್ ಸಹ ಬರುವ ಸಲುವಾಗಿ ಯಾವ್ಯಾವ ಟ್ರೇಡ್‌ನಲ್ಲಿ ಅವರು ತರಬೇತಿ ಪಡೆದಿದ್ದಾರೋ ಅಂಥ ಟ್ರೇಡ್‌ಗಳ ಯೋಗ್ಯ ಇಂಡಸ್ಟ್ರಿಯಲ್ ಆರ್ಗನೈಜೇಷನ್ಸ್‌ಗಳಿಗೆ ಅವು ಪಬ್ಲಿಕ್ ಸೆಕ್ಟರ್ ಆಗಿರಲಿ ಅಥವಾ ಪ್ರೈವೇಟ್ ಸೆಕ್ಟರ್ ಆಗಿರಲಿ, ಅಂತಹ ಕಡೆ ಅಡಾಪ್ಟ್ ಮಾಡಿ ಕೊಡುವ ರೀತಿಯಲ್ಲಿ ಅನುಕೂಲ ಮಾಡಿಕೊಟ್ಟರೆ ತರಬೇತಿ ಪಡೆಯುವ ವಿದ್ಯಾರ್ಥಿಗಳು ಪ್ರಕ್ಟಿಕಲ್ ಆಗಿ ಸಹ ಅನುಭವ ಪಡೆದು ಮುಂದೆ ಒಳ್ಳೆಯ ಸ್ಕಿಲ್ಡ್ ವರ್ಕರ್ಸ್ ಆಗುವುದಕ್ಕೆ ಮತ್ತು ಅವರ ಮುಂದಿನ ಭವಿಷ್ಯವನ್ನು ನಿರ್ಧಾರ ಮಾಡಿಕೊಳ್ಳಲು ಅನುಕೂಲವಾಗುವುದರಿಂದ, ಇದನ್ನು ಮಾನ್ಯ ಮಂತ್ರಿಗಳು ತೀವ್ರವಾಗಿ ಗಮನಿಸಬೇಕೆಂದು ಹೇಳುತ್ತೇನೆ.

ಈ ಒಂದು ತರಹ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರನ್ನು ಖಾಸಗಿ ಕಾರ್ಖಾನೆಗಳ ಮೂಲಕ ಮಾಡಿಸುವಂಥ ಕಾಲದಲ್ಲಿ ನನ್ನ ಭಾವನೆಯಲ್ಲಿ ರಾಜ್ಯಮಟ್ಟದಲ್ಲಿ ಮಾತ್ರವೇ ಅಲ್ಲ, ಕೇಂದ್ರ ಸರ್ಕಾರದಿಂದ

ಸಾಕಷ್ಟು ಹಣ ಸಹಾಯ ಪಡೆಯುವುದಕ್ಕೆ ಅವಕಾಶಗಳು ಇದೆ. ಅದನ್ನು ಕೂಡಾ ತೀವ್ರವಾಗಿ ತಾವು ಯೋಚನೆ ಮಾಡಬೇಕು. ಇನ್ನು ಮೋಟಾರ್ ಡ್ರೈವಿಂಗ್ ಸ್ಕೂಲ್ ಎಂದು ಹೇಳುತ್ತಾರೆ. ಮೋಟಾರ್ ಡ್ರೈವಿಂಗ್ ಸ್ಕೂಲ್ ಟ್ರೈನಿಂಗ್ ಬಹಳ ಮುಖ್ಯವಾದುದು ಎಂದು ನಾನು ಭಾವಿಸುತ್ತೇನೆ. ಅದರಲ್ಲಿಯೂ ವಾಹನ ಚಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲಾ ಕಡೆಗೂ ಬೇಕಾಗಿರತಕ್ಕಂಥ ಕಾಲದಲ್ಲಿ ನಮಗೆ ಮೋಟಾರ್ ಡ್ರೈವಿಂಗ್‌ನ್ನು ಕಲಿತಕ್ಕಂಥವರು ಸ್ಕಿಲ್ಡ್ ಆಗಿ ಕಲಿತಕ್ಕಂಥವರು, ಬಹಳ ಯೋಗ್ಯ ಮಟ್ಟದಲ್ಲಿ ಕಲಿಯುವಂಥವರು ಬೇಕಾಗಿದೆ. ಅದಕ್ಕೆ ಒಂದು ಸಾಕಷ್ಟು ಕೆಲಸ ಸಿಗುವುದಕ್ಕೆ ಅದರಲ್ಲಿ ಹೆಚ್ಚು ಹೆಚ್ಚು ಅನುಕೂಲಗಳಿವೆ. ಪ್ರಾಸ್‌ಪೆಕ್ಟ್ಸ್ ಕೂಡಾ ಚೆನ್ನಾಗಿರುವ ಕಾರಣದಿಂದ ಮೋಟಾರ್ ಡ್ರೈವಿಂಗ್ ಸ್ಕೂಲ್‌ಗಳು ಇವೆ. ಇವತ್ತು ೮೦ ಜನರ ಒಂದು ಸ್ಟ್ರೆಂಥ್‌ನ್ನು ಇಟ್ಟುಕೊಂಡು ಈವನಿಂಗ್ ಕ್ಲಾಸಸ್ ಎಂದು ಏನು ಮಾಡುತ್ತಿದ್ದಾರೆ. ಅದನ್ನು ಇನ್ನೂ ನೂರಾರು ಸಂಖ್ಯೆಯಲ್ಲಿ ಮಾಡತಕ್ಕಂಥ ರೀತಿಯಲ್ಲಿ ಮಂತ್ರಿವರ್ಯರು ಗಮನವನ್ನು ಕೊಡಬೇಕು. ಇದರಿಂದ ಬಡ ಜನರಿಗೆ ಅನುಕೂಲವಾಗುತ್ತದೆ. ಮತ್ತು ನಿರುದ್ಯೋಗ ನಿವಾರಣೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಇ.ಎಸ್.ಐ. ಬಗ್ಗೆ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಒಂದು ಸೋಷಿಯಲ್ ಸೆಕ್ಯುರಿಟಿ ಸ್ಕೀಮ್ ಎಂದು ಹೇಳುತ್ತಿದ್ದಾರೆ. ನಿಜ. ಅದನ್ನು ಸೋಷಿಯಲ್ ಸೆಕ್ಯುರಿಟಿಯಾಗಿ ಕೊಡುವುದಕ್ಕಾಗಿ ಮಾಡುವಂಥ ಕೆಲಸ. ಆದರೆ ಇದರಲ್ಲಿ ಎಷ್ಟು ದುರುಪಯೋಗವಾಗುತ್ತಿದೆ, ಅಲ್ಲಿನ ಒಂದು ಮ್ಯಾನೇಜ್‌ಮೆಂಟ್ ಏನು ಇದೆ, ಆ ಆಡಳಿತ ವರ್ಗದಲ್ಲಿ ಏನು ದುರುಪಯೋಗವಾಗಿದೆ, ಡಾಕ್ಟರ್‌ಗಳ ಮಟ್ಟದಲ್ಲಿ ಎಷ್ಟು ದುರುಪಯೋಗ ವಾಗಿದೆ, ಸ್ಟೋರ್ಸ್‌ನಲ್ಲಿ ಎಷ್ಟರಮಟ್ಟಿಗೆ ದುರುಪಯೋಗವಾಗುತ್ತಿದೆ ಮತ್ತು ಕಾರ್ಮಿಕರು ಹೋಗಿ ಅಲ್ಲಿ ಉಪಯೋಗಿಸುವುದಕ್ಕೆ ಹೋದಾಗ ಅವರು ಬಹಳ ಆರೋಗ್ಯವಾಗಿದ್ದರೂ ಕೂಡಾ ಅನಾರೋಗ್ಯ ದಿಂದಿದ್ದಾರೆ ಎಂದು ಸರ್ಟಿಫಿಕೇಟನ್ನು ತೆಗೆದುಕೊಂಡು ಬಂದು ಕಾರ್ಖಾನೆಗೆ ಕೊಡಬೇಕು, ಅವರು ಕೊಡುವುದಿಲ್ಲ. ಅವರು ಅದನ್ನು ಪೋಸ್ಟ್ ಮಾಡಬೇಕಾದಂಥ ಅವಶ್ಯಕತೆಯೂ ಇಲ್ಲ. ಏಕೆಂದರೆ ಇ.ಎಸ್.ಐ.ನವರೇ ಸರ್ಟಿಫಿಕೇಟನ್ನು ಕಳುಹಿಸಿಕೊಡುತ್ತಾರೆ. ಆದುದರಿಂದ ಕಾರ್ಮಿಕರು ತಿಂಗಳಾನು ಗಟ್ಟಲೇ ಕೆಲಸವನ್ನು ಮಾಡದೇ ಅರ್ಧ ಸಂಬಳವನ್ನು ಕಾರ್ಖಾನೆಯಲ್ಲಿ ತೆಗೆದುಕೊಂಡು, ಅರ್ಧ ಸಂಬಳವನ್ನು ಇ.ಎಸ್.ಐ ನಲ್ಲಿ ತೆಗೆದುಕೊಂಡು ಬೇರೆ ಕಡೆಗಳಲ್ಲಿ ಕೆಲಸವನ್ನು ಮಾಡಿ ಜೀವನವನ್ನು ಈ ರೀತಿ ಕಾರ್ಮಿಕರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಆದುದರಿಂದ ಇಂಥ ಒಂದು ದುರುಪಯೋಗ ಏನು ನಡೆಯುತ್ತಿದೆ, ಇದನ್ನು ನಿಲ್ಲಿಸುವ ಬಗ್ಗೆ ಒಂದು ತೀವ್ರತರವಾದ ಕಾರ್ಯಕ್ರಮವನ್ನು ಮಂತ್ರಿವರ್ಯರು ತೆಗೆದುಕೊಳ್ಳಬೇಕೆಂದು ಈ ಮೂಲಕ ಹೇಳುತ್ತೇನೆ. ಇ.ಎಸ್.ಐ. ನಲ್ಲಿ ರೆಕಗ್ನೈಸ್ಡ್ ರಿಜಿಸ್ಟರ್ಡ್ ಆರ್ಗನೈಜೇಷನ್ ಎಂದು ಏನು ಇದೆ, ಆರ್ಗನೈಜ್ಡ್ ಸೆಕ್ಟರ್‌ಗಳಲ್ಲಿ, ಅಲ್ಲಿಗೆ ಮಾತ್ರ ಈ ಇ.ಎಸ್.ಐ. ಸೀಮಿತವಾಗಿದೆ. ಆದರೆ ಬೇರೆ ಕಾರ್ಖಾನೆಗಳಲ್ಲಿ ೧೦ ರಿಂದ ೨೦ ಕಾರ್ಮಿಕರು ಎಲ್ಲಿದ್ದಾರೆ ಮತ್ತು ಅದಕ್ಕೂ ಮೇಲ್ಪಟ್ಟು ಏನಿದ್ದಾರ ಅವರಿಗೆ ಇ.ಎಸ್.ಐ. ಅನ್ವಯಿಸುತ್ತದೆ ಎಂದು ಹೇಳುವುದಾದರೆ ಬೆಂಗಳೂರು ನಗರದಲ್ಲಿ ನೋಡುವುದಾದರೆ ಒಂದೊಂದು ಕಾರ್ಖಾನೆಯಲ್ಲಿ ೧೦೦ ರಿಂದ ೨೦೦ ಜನರು ಕೆಲಸ ಮಾಡತಕ್ಕಂಥ ಜಾಗದಲ್ಲಿ ಒಂದು ಸ್ಟಾಟಿಸ್ಟಿಕ್ಸ್‌ನ್ನು, ಇಲ್ಲಿ ಫ್ಯಾಕ್ಟರಿ ಇನ್ಸ್‌ಪೆಕ್ಟರ್ಸ್ ಕೊಡುವಾಗ ಅದರಲ್ಲಿ ಬಹಳ ಕಡಿಮೆ ನಂಬರನ್ನು ಕೊಡುತ್ತಾರೆ. ಅವರು ಕಡಿಮೆ ನಂಬರನ್ನು ಕೊಡುವುದರಿಂದ ಆ ಕಾರ್ಮಿಕರಿಗೆ ಏನು ಇ.ಎಸ್.ಐ. ಬೆನಿಫಿಟ್ ಹೋಗ ಬೇಕೋ ಆ ರೀತಿ ಇ.ಎಸ್.ಐ. ಬೆನಿಫಿಟ್ ಅವರಿಗೆ ಹೋಗುತ್ತಿಲ್ಲ. ಈ ರೀತಿ ಲಕ್ಷಾಂತರ ಜನ ವರ್ಕರ್ಸ್ ಇದ್ದಾರೆ, ಕ್ಯಾಷುಯಲ್ ಎಂದು ಬೇರೆ ಬೇರೆ ಕೆಲಸವನ್ನು ಮಾಡುತ್ತಿದ್ದಾರೆ. ಡೊಮೆಸ್ಟಿಕ್ ವರ್ಕರ್ಸ್ ಸಾಕಷ್ಟು ಇದ್ದಾರೆ ಮತ್ತು ಷಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಆ್ಯಕ್ಟ್ ಪ್ರಕಾರ ಏನು ಕೆಲಸ ಮಾಡುತ್ತಿದ್ದಾರೆ, ಅಲ್ಲಿಯೂ ಕೂಡಾ ಸಾಕಷ್ಟು ಜನರು ಇದ್ದಾರೆ. ಈ ವಿಷಯದ ಕಡೆಗೆ ಸಾಕಷ್ಟು ಗಮನವನ್ನು ಹರಿಸಬೇಕು ಎಂದು ಹೇಳುತ್ತೇನೆ. ಇ.ಎಸ್.ಐ. ಅವರೇ ಆಗಿರಲಿ, ಫ್ಯಾಕ್ಟರಿ ಲೇಬರ್ ಕಮಿಷನರ್ ಈ ಬಗ್ಗೆ ಗಮನವನ್ನು ಹರಿಸಿದರೆ ಯಾರು ತಪ್ಪು ಮಾರ್ಗವನ್ನು ಹಿಡಿಯುತ್ತಾರೆ, ಅವರನ್ನು ಗುರುತಿಸಿದೆ, ಅವರ ಮೇಲೆ ಕ್ರಮವನ್ನು ವಹಿಸದೇ ಲಕ್ಷಾಂತರ ಕಾರ್ಮಿಕರಿಗೆ ಈ ಒಂದು ಇ.ಎಸ್.ಐ. ಬೆನಿಫಿಟ್ ಏನು ಇದೆ, ಆ ಬೆನಿಫಿಟ್‌ನ್ನು ನಿರಾಕರಣೆ ಮಾಡುವಂಥ ರೀತಿಯಲ್ಲಿ ನಮ್ಮ ಒಂದು ಸರ್ಕಾರದ ನೇರ ಅಭಿಪ್ರಾಯವಿಲ್ಲದೇ ನಡೆಯುತ್ತಿದೆ, ಇದನ್ನು ತಾವು ನಿಲ್ಲಿಸಬೇಕು. ಈ ಇ.ಎಸ್.ಐ. ಏನು ಇದೆ, ಇದರಲ್ಲಿ ಹೆಚ್ಚಿನ ಭಾಗದ ಜನಸಂಖ್ಯೆಗೆ ಅನುಕೂಲವಾಗುವ ರೀತಿಯಲ್ಲಿ ತೀವ್ರತರವಾದ ಗಮನವನ್ನು ಹರಿಸಿ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸವನ್ನು ಮಾಡಬೇಕು ಎಂದು ಹೇಳುತ್ತೇನೆ. ಲೇಬರ್ಸ್ ಬಗ್ಗೆ ಅಂತಿಮವಾದ ಪಾಯಿಂಟ್‌ನ್ನು ಹೇಳುತ್ತೇನೆ. ನಮ್ಮ ಕಾರ್ಮಿಕರು ನಮ್ಮಿಂದ ನಿರೀಕ್ಷೆ ಮಾಡುವುದಾದರೂ ಏನು? ಅವರಿಗೆ ಟ್ರೇಡ್ ಯೂನಿಯನ್ ಮೂವ್‌ಮೆಂಟ್ ಎಂದು ಇರುತ್ತದೆ, ಯಾವುದೋ ಒಂದು ಯೂನಿಯನ್ ಮಾಡುವುದು ಅಷ್ಟರ

ಮಟ್ಟಿಗೆ ಯೋಗ್ಯಕರವಾದ ಮಟ್ಟದಲ್ಲಿ ಅದು ಇರುವುದಿಲ್ಲ; ಯಾವ ಹಂತದಲ್ಲಿ ನಾವು ಒಂದು ಅಂತರರಾಷ್ಟ್ರೀಯ ಮಟ್ಟದಲ್ಲಿ, ಐ.ಎಲ್.ಓ. ನಿಂದ ಏನು ತೀರ್ಮಾನಗಳನ್ನು ಮಾಡಿದ್ದೇವೆ, ಆ ಟ್ರೇಡ್ ಯೂನಿಯನ್ ಮೂವ್‌ಮೆಂಟ್ ಬಿಲ್ಡಪ್ ಮಾಡುವುದಕ್ಕೆ ಯಾವ ಸಂದರ್ಭದಲ್ಲಿ ಯಾವ ರೀತಿ ಮಾಡಬೇಕಾಗಿದೆ, ಆ ರೀತಿ ಆರ್ಗನೈಜ್ ಸೆಕ್ಟರ್‌ಗಳಲ್ಲಿ ಕೆಲಸವನ್ನು ಬಿಟ್ಟರೆ ಬೇರೆಕಡೆ ಟ್ರೇಡ್ ಯೂನಿಯನ್‌ನ್ನು ಮಾಡುತ್ತಾರೆ ಎಂದು ಹೇಳಿದರೆ, ಮಾಲೀಕರು ಅವರ ಮೇಲೆ ಶ್ರಮವನ್ನು ಜರುಗಿಸಿ ಪೋಲೀಸರಿಂದ ದಬ್ಬಾಳಿಕೆಯನ್ನು ಮಾಡಿಸಿ ಆ ಕಾರ್ಮಿಕರನ್ನು ಕೆಲಸದಿಂದ ತೆಗೆಯುತಕ್ಕಂಥ ಸಂದರ್ಭಗಳು ಬೆಂಗಳೂರು ನಗರದಲ್ಲಿಯೇ ಸಾಕಷ್ಟು ಇದೆ.

ಯಾವುದೇ ಒಂದು ಕಾರ್ಮಿಕ ಕ್ಷೇತ್ರದಲ್ಲಿ, ಅಲ್ಲಿ ೧೦ ಕಾರ್ಮಿಕರು ಇರಬಹುದು ೧೦೦ ಜನ ಇರಬಹುದು. ಇಂತಹ ಒಂದು ಕಾರ್ಮಿಕ ಕ್ಷೇತ್ರದಲ್ಲಿ ಯಾವುದೇ ಒಂದು ಸಂಘಟನೆ ಮಾಡುವಂತಹ ಕೆಲಸದಲ್ಲಿ ಕಾರ್ಮಿಕರಿಗೆ ಸರ್ಕಾರದ ಕಡೆಯಿಂದ ಸಾಕಷ್ಟು ರಕ್ಷಣೆ ಬರಬೇಕು. ಸರ್ಕಾರ ರಕ್ಷಣೆ ಕೊಡುತ್ತದೆ ಎಂದು ತಿಳುವಳಿಕೆ ಬಂದರೆ, ಪೋಲೀಸರು ಏನು ಮಾಲೀಕರ ಪರವಾಗಿ ದೌರ್ಜನ್ಯ ಮಾಡುತ್ತಾರೆ, ಆ ದೌರ್ಜನ್ಯವನ್ನು ನಿಲ್ಲಿಸಿ ಆಗ ಮಾತ್ರ ಕಾರ್ಮಿಕರ ಒಂದು ಭವಿಷ್ಯ, ಆತನ ಸಂರಕ್ಷಣೆ ಪ್ರತಿಯೊಂದರ ಹಂತದಲ್ಲಿ ಒಳ್ಳೆಯದಾಗುತ್ತದೆ, ಇದನ್ನು ನಾವು ತೀವ್ರವಾಗಿ ಗಮನಿಸಬೇಕಾಗಿ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸೆಕ್ಯೂರಿಟಿ ಆಫ್ ಎಂಪ್ಲಾಯ್‌ಮೆಂಟ್ ಬಗ್ಗೆ ಹೇಳುವಾಗ ಟ್ರೇಡ್ ಯೂನಿಯನ್ ಮೂವ್‌ಮೆಂಟ್ ಎಷ್ಟು ಸುಭದ್ರತೆಯಲ್ಲಿ ಇರುತ್ತದೆ, ಭದ್ರತೆ ಪಡೆಯುತ್ತದೆ, ಆಗ ಮಾತ್ರ ಈ ಸೆಕ್ಯೂರಿಟಿ ಆಫ್ ಎಂಪ್ಲಾಯ್‌ಮೆಂಟ್ ಇರುತ್ತದೆ. ಹಾಗೂ ಇಲ್ಲ ಎಂದರೆ, ೨-೩ ಕಾರ್ಮಿಕರು ಕೆಲಸ ಮಾಡುವಂತಹ ಜಾಗದಲ್ಲಿ ಸೆಕ್ಯೂರಿಟಿ ಆಫ್ ಎಂಪ್ಲಾಯ್‌ಮೆಂಟ್ ಇನ್ನೂ ಸ್ಥಿರವಾಗಿ ಇರುವಂತ, ಸುಭದ್ರವಾಗಿ ಇರುವಂತಹ ರೀತಿಯಲ್ಲಿ ನಮ್ಮ ಕಾನೂನನ್ನು ಜಾರಿ ಮಾಡುವಂತಹ ಕೆಲಸವನ್ನು ಮಾಡಬೇಕು. ಕಾನೂನು ಅಷ್ಟರಮಟ್ಟಿಗೆ ಅನುಕೂಲ ಇಲ್ಲ ಎಂದರೆ ಈ ಕಾನೂನಿನ ಬದಲಾವಣೆಯನ್ನು ತಕ್ಷಣ ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಹಾಗೆಯೇ ಅನ್-ಆರ್ಗನೈಸ್ಡ್ ಸೆಕ್ಟರ್ಸ್‌ನಲ್ಲಿ ವರ್ಕಿಂಗ್ ಕಂಡಿಷನ್ಸ್ ಮತ್ತು ವರ್ಕಿಂಗ್ ಲೀವಿಂಗ್ ಕಂಡಿಷನ್ಸ್ ಬಹಳ ಹೋಪ್‌ಲೆಸ್ ಆಗಿದೆ. ಪರಿಸ್ಥಿತಿ ತುಂಬಾ ಚಿಂತಾಜನಕ ಆಗಿದೆ. ಈ ವಿಷಯದ ಕಡೆ ಸಹ ಮಾನ್ಯ ಮಂತ್ರಿಗಳು ಹೆಚ್ಚು ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಈಗ ವರ್ಕಿಂಗ್ ಕ್ಲಾಸ್ ಕಮ್ಯೂನಿಟಿ ಏನು ಇದೆ. ಅವರ ಒಂದು ಮೂಲಭೂತವಾದ ಹಕ್ಕುಗಳಿಗೆ ಹೋರಾಟ ಮಾಡುತ್ತಿದ್ದಾರೆ ಎನ್ನುವಂತಹ ಕಾಲದಲ್ಲಿ ಈಗಾಗಲೇ ನಾನು ಹೇಳಿದ ಹಾಗೆ ಎಂಪ್ಲಾಯ್ ಕಡೆಯಿಂದ ದೌರ್ಜನ್ಯ ಬರುತ್ತದೆ. ಪೋಲೀಸ್ ಕಡೆಯಿಂದ ದೌರ್ಜನ್ಯ ಬರುತ್ತದೆ ಎಂಬುದು ಮಾತ್ರವಲ್ಲ, ಎಂಪ್ಲಾಯಿಸ್ ಕಡೆಯಿಂದ, ಪೋಲೀಸರ ಸಹಕಾರದಿಂದ, ಮಾಫಿಯಾದಿಂದ ಕೂಡ ಬಹಳ ತೊಂದರೆ ಆಗುತ್ತದೆ. ಮನೆಯೊಳಗೆ ಕೂಡ ಹೋಗಿ ಕಾರ್ಮಿಕರ ಸಂಸಾರ ಹೆಣ್ಣು ಮಕ್ಕಳಿಗೆ ಭಯವನ್ನು ಹುಟ್ಟಿಸುವಂತಹ ರೀತಿಯಲ್ಲಿ ನಡೆದು ಬರುತ್ತಾ ಇರುವ ಒಂದು ಸಹಜವಾದ ಮತ್ತು ಬಹಳ ಸಾಧಾರಣವಾದ ಮಾತು ಆಗಿದೆ. ಆದ್ದರಿಂದ ಇಂತಹ ವಿಷಯಗಳಲ್ಲಿ ಕೂಡ ನಮ್ಮ ಸರ್ಕಾರ ಎಂದಿನವರೆಗೆ ನೇರವಾಗಿ ನಮ್ಮ ಸರ್ಕಾರ ಕಾರ್ಮಿಕರ ಪರವಾಗಿ ಇದೆ. We are partial to the working class. ಎನ್ನುವ ರೀತಿಯಲ್ಲಿ ನ್ಯಾಯಬದ್ಧವಾಗಿ ಒಂದು ಪಾರ್ಷಿಯಾಲಿಟಿಯನ್ನು ವರ್ಕಿಂಗ್ ಕ್ಲಾಸ್ ಕಡೆ ತೋರಿಸುವುದಿಲ್ಲವೋ ಅಲ್ಲಿಯವರೆಗೆ ಆರ್ಗನೈಸ್ಡ್ ಮ್ಯಾನೇಜ್‌ಮೆಂಟ್ ಏನು ಇದೆ, ಇದು ಎಂದೆಂದೂ ಆರ್ಥಿಕವಾಗಿ ಸಾಮಾಜಿಕವಾಗಿ ಒಂದು ಶೋಷಣೆಯನ್ನು ಮಾಡುತ್ತಿರುತ್ತದೆ. ಅವರಿಗೆ ಹೆಚ್ಚಿನ ರಕ್ಷಣೆ ಹೋಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ಮಿನಿಮಮ್ ವೇಜಸ್ ವಿಷಯದಲ್ಲಿ ಹೇಳುತ್ತಿದ್ದೆ. ಮಿನಿಮಮ್ ವೇಜಸ್ ಅನ್ನು ಕೇವಲ ಆರ್ಗನೈಸ್ಡ್ ಸೆಕ್ಟರ್ಸ್‌ನಲ್ಲಿ ಮಾತ್ರ, ಬಹುತೇಕವಾಗಿ ಪ್ರಿಸ್ಕ್ರೈಬ್ ಮಾಡಿದ್ದಾರೆ. ಆದರೆ ಮಿನಿಮಮ್ ವೇಜ್ ಅನ್ನು ಆರ್ಗನೈಸ್ಡ್ ಸೆಕ್ಟರ್‌ನಲ್ಲಿ ಅನುಕೂಲ ಆಗಿದೆ ಅಂದರೆ ಅದಕ್ಕಿಂತ ಹತ್ತರಷ್ಟು ಹೆಚ್ಚು ಅನ್ ಆರ್ಗನೈಸ್ಡ್ ಸೆಕ್ಟರ್‌ನಲ್ಲಿ ಕೆಲಸ ಮಾಡುವಂತಹ ಜನರಿಗೆ ಅವರ ದಿನನಿತ್ಯ ಜೀವನದಲ್ಲಿ ಸಾಮಾಜಿಕವಾಗಿ ಆರ್ಥಿಕವಾಗಿ ನಡೆದುಕೊಂಡು ಹೋಗಬೇಕು. ಅವರ ಒಂದು ಜೀವನ ಪ್ರಗತಿಶೀಲವಾಗಿ ನಡೆಯಬೇಕು. ಗೌರವಯುತವಾದ ಜೀವನವನ್ನು ನಡೆಸುವ ಬಗ್ಗೆ ನಮ್ಮ ಗಮನವನ್ನು ಹರಿಸುವ ಅವಶ್ಯಕತೆ ಇಲ್ಲವೇ ಎನ್ನುವ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗಿ ಬರುತ್ತದೆ. ಆದ್ದರಿಂದ ಮಿನಿಮಮ್ ವೇಜ್ ಏನು ಇದೆ. ಡೊಮೆಸ್ಟಿಕ್ ಸರ್ವೆಂಟ್ ಇರಬಹುದು, ಬೇರೆ ಯಾರೇ ಇರಬಹುದು. ಕ್ಯಾಷುಯಲ್ ವರ್ಕರ್ ಇಲ್ಲದೇ ಇರಬಹುದು. ಆತನ ಮಿನಿಮಮ್ ವೇಜ್ ಅದು ಡೈಲಿ ವೇಜ್ ಆಗಿರಬಹುದು, ವೀಕ್ಲಿ ವೇಜ್ ಆಗಿರಬಹುದು ಅಥವಾ ಮಂತ್ಲಿ ವೇಜ್ ಆಗಿರಬಹುದು ಸೆಕ್ಯೂರಿಟಿ ಆಫ್ ಎಂಪ್ಲಾಯ್‌ಮೆಂಟ್ ಜೊತೆಗೆ ಇದನ್ನು ಕೂಡ ಮಾಡದೇ ಹೋದರೆ ಅವರ ಆರ್ಥಿಕ ಸ್ಥಿತಿ ಪ್ರಗತಿ ಆಗುವುದಕ್ಕೆ ಸಾಧ್ಯ ಇಲ್ಲದ

ಮಾತು, ಆದ್ದರಿಂದ ಈ ಕಡೆಗೆ ಗಮನ ಹರಿಸಬೇಕೆಂದು ನಾನು ಹೇಳಬಯಸುತ್ತೇನೆ. ಇನ್ನು ಬಹಳ ಮುಖ್ಯವಾದ ವಿಷಯ ಅಂದರೆ Workers participation in public and private management. ಈ ವರ್ಕರ್ಸ್ ಪಾರ್ಟಿಸಿಪೇಷನ್ ಬಗ್ಗೆ ಬಹಳ ಕಾಲದಿಂದ ಹೇಳುತ್ತಿದ್ದೇವೆ. ವರ್ಕರ್ಸ್ ಪಾರ್ಟಿಸಿಪೇಷನ್ ಒಂದು ಸ್ಟ್ಯಾಚ್ಯುಟರಿ ಕಂಪಲ್ಷನ್‌ನಲ್ಲಿ ಯಾವುದೋ ಒಂದು ರೀತಿಯಲ್ಲಿ ಸೂಪರ್‌ಫಿಷಿಯಲ್ ಆಗಿ ಮ್ಯಾನೇಜ್‌ಮೆಂಟ್‌ನಲ್ಲಿ ಒಂದು ವರ್ಕರ್‌ಗೆ ರೆಪ್ರೆಸೆಂಟೇಷನ್ ಕೊಡುತ್ತೇವೆಂದರೆ ಸಾಲದು. ವರ್ಕಿಂಗ್ ಕ್ಲಾಸ್ ಪಾರ್ಟಿಸಿಪೇಷನ್ ಅಂದರೆ, ಟಾಪ್ ಮ್ಯಾನೇಜ್‌ಮೆಂಟ್‌ನ ಹಿಡಿದು ಶಾಪ್ ಫ್ಲೋರ್ ಲೆವೆಲ್ ವರೆಗೆ ವರ್ಕಿಂಗ್ ಕ್ಲಾಸ್ ಪಾರ್ಟಿಸಿಪೇಷನ್ ತೀವ್ರತೆಯಿಂದ ಇರುವುದಿಲ್ಲ, ಅಲ್ಲಿಯವರೆಗೆ ಪ್ರಗತಿ ಸಾಧ್ಯ ಇಲ್ಲ ಮತ್ತು ಅಲ್ಲಿಯವರೆಗೆ ಸೆನ್ಸ್ ಆಫ್ ರೆಸ್ಪಾನ್ಸಿಬಿಲಿಟಿಯನ್ನು ಅರಿತುಕೊಳ್ಳುವುದಿಲ್ಲ, ವರ್ಕಿಂಗ್ ಕ್ಲಾಸ್ ಮ್ಯಾನೇಜ್‌ಮೆಂಟ್‌ನವರ ಕಂಟ್ರೋಲ್‌ನಲ್ಲಿ, ಮ್ಯಾನೇಜ್‌ಮೆಂಟ್‌ನವರ ಡೈರೆಕ್ಷನ್‌ನಲ್ಲಿ ಕೆಲಸ ಮಾಡುತ್ತಾರೆ. ಹೇಳಿದಾಗ ಒಂದು ಕೆಲಸ ಮಾಡಿ ಹೊರಟು ಹೋಗುತ್ತಾರೆ. ಮನಸ್ಸು ಬರದಿದ್ದರೆ ಅದನ್ನು ಸಹ ಮಾಡುವುದಿಲ್ಲ. ಆದ್ದರಿಂದ ನಮ್ಮ ಸಮಾಜ ಆರ್ಥಿಕವಾಗಿ ಸಾಮಾಜಿಕವಾಗಿ ಪ್ರಗತಿಶೀಲವಾಗಿ ಬೆಳೆಯಬೇಕಾಗಿದ್ದರೆ. ನಮ್ಮ ಸಮಾಜದ ಆರ್ಥಿಕ ಸ್ಥಿತಿ ಬೆಳೆಯಬೇಕಾಗಿದ್ದರೆ ನಾವು ಈ ಒಂದು ವರ್ಕಿಂಗ್ ಕ್ಲಾಸ್ ಕಮ್ಯೂನಿಟಿ ಏನು ಇದೆ, ಅವರಿಗೆ ಯಾವ ಯಾವ ಹಂತದಲ್ಲಿ ಯಾವ ಒಂದು ಗೌರವವನ್ನು ಕೊಟ್ಟು ಅವರ ಮೇಲೆ ಪೂರ್ಣವಾದ ನಂಬಿಕೆ ಇಟ್ಟು. ಅವರನ್ನು ಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಂಡು, ವಿಶೇಷವಾಗಿ ಅವರ ಸೇವೆಯನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಅವರದ್ದೂ ಸಹ ಜವಾಬ್ದಾರಿ ಇದೆ ಎಂದು ಹೇಳಬೇಕು. ಪ್ರೊಡಕ್ಷನ್ ವಿಷಯದಲ್ಲಿಯಾಗಲೀ, ಮಾರ್ಕೆಟಿಂಗ್ ವಿಷಯದಲ್ಲಿ ಆಗಲಿ ಅಥವಾ ಬೇರೆ ಯಾವುದೇ ಒಂದು ವಿಷಯದಲ್ಲಿ ಆಗಲಿ, ಅವರ ಮೇಲೆ ವಿಶ್ವಾಸ ಇಟ್ಟು ಅವರ ಸೇವೆಯನ್ನು ಉಪಯೋಗಿಸಿಕೊಳ್ಳುವುದಿಲ್ಲ ಅಂದಿನವರೆಗೆ ನಾವು ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ಒಂದು ವರ್ಕಿಂಗ್ ಕ್ಲಾಸ್‌ನವರಿಗೆ ನಾವು ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಆಕ್ಟಿವಿಟೀಸ್‌ನಲ್ಲಿ ಪ್ರೋತ್ಸಾಹ ಕೊಡಬೇಕಾಗಿದೆ. ಯಾರೇ ಒಬ್ಬ ವರ್ಕರ್ ತಾನು ಒಂದು ಕೆಲಸವನ್ನು ಮಾಡಿ ಮುಗಿಸಿದ್ದು ಆದಮೇಲೆ ಆತನಿಗೆ ಎಂಟರ್‌ಟೈನ್‌ಮೆಂಟ್ ಡೈವರ್ಷನ್ ಇರುವುದಿಲ್ಲ, ಆಗ ಆತನಿಗೆ ಬಹಳ ಕಷ್ಟವಾಗುತ್ತದೆ, ಸಮಾಜದಲ್ಲಿ ಆತನಿಗೆ ಸ್ಥಾನಮಾನ ದೊರಕುವಂಥ ರೀತಿಯಲ್ಲಿ ಅದು ಸ್ಪೋರ್ಟ್ಸ್ ಆಗಿರಲಿ, ಕಲ್ಚರಲ್ ಆಕ್ಟಿವಿಟೀಸ್ ಆಗಿರಲಿ. ಯಾವುದಾದರೂ ಒಂದು ಆಕ್ಟಿವಿಟೀಸ್ ಎಂಟರ್‌ಟೈನ್‌ಮೆಂಟ್ ಡೈವರ್ಷನ್ ಪಡೆಯುವಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅದಕ್ಕೆ ನಾವು ಸಹಾಯ ಯಾವಾಗ ಮಾಡುವುದಿಲ್ಲ, ಆಗ ಆತ ಕಡೆಗೆ ಲಿಕ್ಕರ್‌ಶಾಪ್‌ಗೆ ಹೋಗುತ್ತಾನೆ. ಇಲ್ಲವೇ ಗ್ಯಾಂಬ್ಲಿಂಗ್‌ಗೆ ಹೋಗುತ್ತಾನೆ. ಈಗಂತೂ ವೀಡಿಯೋ ಪಾರ್ಲರ್‌ಗೆ ಬಹಳ ದೊಡ್ಡ ಸ್ಥಾನಮಾನವನ್ನು ಕೊಟ್ಟುಬಿಟ್ಟಿದ್ದೇವೆ. ಆತ ಸಂಪಾದಿಸಿದ್ದೆಲ್ಲಾ ಅಲ್ಲಿ ಹೋಗಿ ಹಾಳು ಮಾಡಿಕೊಂಡು ಬರುತ್ತಾನೆ, ಎಲ್ಲ ಕಳೆದುಕೊಂಡ ಮೇಲೆ ಆನ್‌ಸೋಷಿಯಲ್ ಕ್ಯಾರೆಕ್ಟರ್ ಆಗುತ್ತಾನೆ. ಇಂತಹ ಒಂದು ಸೋಷಿಯಲ್ ಮೊಬಿಲಿಟಿ ಆತನಿಗೆ ಇರಬೇಕು. ಸಮಾಜದಲ್ಲಿ ಸರಿಸಮಾನತೆಯ ಸ್ಥಾನಮಾನ, ಗೌರವದ ಸ್ಥಾನಮಾನ ದೊರೆಯಬೇಕಾದರೆ ಆತನ ಕಾರ್ಮಿಕ ಕ್ಷೇತ್ರದಲ್ಲಿ ಏನು ವರ್ಕಿಂಗ್ ಕಂಡೀಷನ್ ನೋಡುತ್ತೇವೆ, ಆಗ ಲೀವಿಂಗ್ ಕಂಡೀಷನ್‌ನಲ್ಲೂ ಕೂಡ ಸರಿಯಾದ ಸ್ಥಾನಮಾನ ಕೊಡುವಂಥ ರೀತಿಯಲ್ಲಿ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಯಾವುದೇ ಕಾರ್ಖಾನೆಯಾಗಿರಲಿ, ಎಂಥದೇ ದೊಡ್ಡ ಕಾರ್ಖಾನೆ ಆಗಿರಲಿ. ಅದು ಸ್ಮಾಲ್‌ಸ್ಕೇಲ್ ಇಂಡಸ್ಟ್ರಿ ಇರಬಹುದು. ಮೀಡಿಯಂ ಇರಬಹುದು, ಲಾರ್ಜ್ ಇರಬಹುದು ಪ್ರೈವೇಟ್ ಇರಬಹುದು, ಪಬ್ಲಿಕ್ ಇರಬಹುದು ಅಲ್ಲಿ ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಆಕ್ಟಿವಿಟೀಸ್‌ಗಾಗಿ ಈ ಬಡ್ಜೆಟ್‌ನಲ್ಲಿ ಒಂದಿಷ್ಟು ಪ್ರಾವಿಜನ್ ಮಾಡಿ ಅದಕ್ಕೆ ನೇರವಾಗಿ ಪ್ರೋತ್ಸಾಹ ಕೊಟ್ಟು, ಅನುಕೂಲ ಮಾಡುವಂಥ ರೀತಿಯಲ್ಲಿ ನಾವು ಕಾನೂನು ಮಾಡಬೇಕು, ಹಾಗೂ ಡೈರೆಕ್ಷನ್ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಕಾರ್ಮಿಕರ ಒಂದು ನೆಗೋಸಿಯೇಷನ್. ಈ ವರ್ಕಿಂಗ್ ಕ್ಲಾಸ್ ಇಂಟರೆಸ್ಟ್ ಏನಿದೆ, ಅದು ಆರ್ಥಿಕ ವಿಷಯವಾಗಿರಲಿ, ತುಟ್ಟಿ ಭತ್ಯದ ವಿಷಯವಾಗಲಿ, ಯಾವುದೇ ಆಗಿರಲಿ. ಅದರ ಬಗ್ಗೆ ಒಂದು ರೆಕಗ್ನೈಸ್ ಯೂನಿಯನ್‌ಗೆ ಅಂದರೆ ಕೆಲವು ಕಡೆಗಳಲ್ಲಿ ಯಾವುದಕ್ಕೆ ಬಹುಮತ ಇದೆ, ಅಂತಹ ಯೂನಿಯನ್‌ಗೆ ಮಾತ್ರ ಒಂದು ಸ್ಥಾನವನ್ನು ಕೊಟ್ಟು ಅವರು ನೆಗೋಷಿಯೇಟ್ ಮಾಡುವ ರೀತಿಯಲ್ಲಿ ಮಾಡುತ್ತಾ ಇದ್ದೇವೆ. ಮೊನ್ನೆ ಕೆಎಸ್‌ಆರ್‌ಟಿಸಿಯಲ್ಲಿ ಆಯಿತು, ಬಿಟಿಎಸ್‌ನಲ್ಲಿ ಆಯಿತು. ಅದೇ ರೀತಿಯಾಗಿ ಪ್ರತಿಯೊಂದು ಕಾರ್ಖಾನೆಯಲ್ಲೂ ಕೂಡ ಯಾವ ಯೂನಿಯನ್ ರೆಕಗ್ನೈಸ್ ಆಗಿದೆ, ಯಾವುದಕ್ಕೂ ಬಹುಮತ ಇದೆ ಆ ಯೂನಿಯನ್‌ನಿಂದ ನೇರವಾಗಿ ಮಾತುಕತೆ ನಡೆಯುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ

ಮಾಡಬೇಕು. ಮತ್ತು ಈ ಮ್ಯಾನೇಜ್‌ಮೆಂಟ್ ಅಂತಹ ಒಂದು ಯೂನಿಯನ್‌ಗೆ ಬ್ಲಾಕ್‌ಲೆಗ್‌ನ್ನೆ ಕ್ರಿಯೇಟ್ ಮಾಡಿ, ರೈವಲ್ ಯೂನಿಯನ್ ಮಾಡಿ ಅವರ ಜೊತೆಯಲ್ಲಿ ಮಾತುಕತೆ ನಡೆಸುವುದಕ್ಕೆ ಸರಿಯಲ್ಲ. ಅದು ಒಳ್ಳೆಯ ಲೇಬಲ್–ಮ್ಯಾನೇಜ್‌ಮೆಂಟ್ ರಿಲೇಷನ್‌ಗೂ ಒಳ್ಳೆಯದಲ್ಲ. ವರ್ಕಿಂಗ್ ಕ್ಲಾಸ್ ಮೂವ್‌ಮೆಂಟ್‌ಗೂ, ವರ್ಕಿಂಗ್ ಕ್ಲಾಸ್ ಪ್ರೊಸೆಸ್‌ಗೂ ಅನುಕೂಲವಲ್ಲ ಎನ್ನುವ ಮಾತನು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಮಾನ್ಯ ಅಧ್ಯಕ್ಷರೆ, ಇನು ಎರಡು ನಿಮಿಷಗಳಲ್ಲಿ ಮುಗಿಸ್ತೇನೆ. ರೆವಿನ್ಯೂ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ಮಾತನ್ನು ಮಾತ್ರ ಹೇಳಬಯಸುತ್ತಾ ಇದ್ದೇನೆ. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ಇದೆ, ಸಾಕಷ್ಟು ಲಂಚಗುಳಿತನ ಇದೆ ಎಂದು ಎಲ್ಲರೂ ಹೇಳುತ್ತಾ ಇದ್ದಾರೆ. ಇವನ್ನು ಮುಕ್ತಾಯ ಮಾಡುವುದಕ್ಕೆ ಸಾಧ್ಯವಿಲ್ಲ ಎಂತಲೂ ನನಗೆ ಕೇಳಿಬರುತ್ತಾ ಇದೆ. ಆದರೆ ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ ಎಂದು ಎಲ್ಲರ ಭಾವನೆ ಇದೆ. ನೀವು ನಮಗೆ ಕೊಟ್ಟ ವರದಿಯಲ್ಲಿರುವ ಫ್ಯಾಕ್ಟ್ ಅಂಡ್ ಫಿಗರ್ಸ್ ಪ್ರಕಾರ ರಿಜಿಸ್ಟ್ರೇಷನ್ ಆಫ್ ಪ್ರಾಪರ್ಟಿ ಅಂದರೆ ಟ್ರಾನ್ಸ್‌ಫರ್ ಆಫ್ ಕನ್ವೆಯನ್ಸ್‌ಡೀಡ್ ಎಂದು ಹೇಳುತ್ತಾರೆ. ಇದರಲ್ಲಿ ೧೨೦ ಕೋಟಿ ರೂಪಾಯಿ ಆದಾಯ ತೋರಿಸುತ್ತಾ ಇದ್ದಾರೆ. ೫ ಕೋಟಿ ರೂಪಾಯಿ ಮೇಲೆ ಅವರ ಖರ್ಚನ್ನು ತೋರಿಸುತ್ತಾ ಇದ್ದಾರೆ. ಸಾಧಾರಣವಾಗಿ ಕೇವಲ ಕಾಮನ್‌ಸೆನ್ಸ್‌ನಿಂದ ಯೋಚನೆ ಮಾಡುವುದಾದರೆ, ಈ ೫ ಕೋಟಿ ರೂಪಾಯಿ ಏನು ಸಂಬಳ ತೆಗೆದುಕೊಳ್ಳುತ್ತಾರೆ, ಸಾಧಾರಣ ಭಾಷೆಯಲ್ಲಿ ಹೇಳುವುದಾದರೆ ಅವರು ಗಿಂಬಳ ಎಷ್ಟು ತೆಗೆದುಕೊಳುತ್ತಾರೆ. ನೀವು ಲೆಕ್ಕ ಹಾಕಿದರೆ ೧೦೦ ಕೋಟಿ ಆದಾಯ ಏನು ಬಂದಿದೆ, ಇದು ಅಂಡರ್ ವ್ಯಾಲ್ಯೂ ಸೇಲ್ಸ್ ರಿಜಿಸ್ಟ್ರೇಷನ್ ಆಗದೇ ಹೋದರೆ ೧೩೦ ಕೋಟಿ ೧೪೦ ಕೋಟಿಯಂತೂ ಖಡಾಖಂಡಿತವಾಗಿ ಆಗಲೇಬೇಕಾಗಿದೆ. ಆ ೧೪೦ ಕೋಟಿ ಬದಲು ೧೦೦ ಕೋಟಿ ಬಂದಿದೆಯೆಂದರೆ, ಉಳಿದ ೪೦ ಕೋಟಿ ರೂಪಾಯಿ ಎಲ್ಲಿ ಹೋಗಿದೆ, ಯಾರ ಬೊಕ್ಕಸಕ್ಕೆ ಹೋಗಿದೆ, ಅಂದರೆ ಆ ಕರಪ್ಟ್ ಸಿಟಿಸನ್ಸ್ ಕೈಯಲ್ಲಿ ಹೋಗಿದೆ, ಜೊತೆಗೆ ಅವರ ಜೊತೆಯಲ್ಲಿ ಶಾಮೀಲಾದ ಕರಪ್ಟ್ ಅಫಿಷಿಯಲ್ ಕೈಯಲ್ಲಿ ಹೋಗಿದೆ. ಅಂದಮೇಲೆ ಇದರ ಆವರೇಜ್ ತೆಗೆದುಕೊಂಡಿದ್ದೇ ಆದರೆ, ಶೇಕಡ ೨೫ರಷ್ಟು ಲಂಚ ತೆಗೆದುಕೊಂಡಿದ್ದಾನೆ, ಆದರೂ ಕೂಡ ಇದ್ದೂ ೬ ಕೋಟಿ ರೂಪಾಯಿ ಆತ ತೆಗೆದುಕೊಂಡಿದ್ದಾನೆ. ಅಂದ ಮೇಲೆ ಒಂದೇ ಒಂದು ಡಿಪಾರ್ಟ್‌ಮೆಂಟ್‌ನಲ್ಲಿ ೬ ಕೋಟಿ ರೂಪಾಯಿ ಲಂಚದ ದೃಷ್ಟಿಯಲ್ಲಿ ಸ್ಟ್ಯಾಟಿಸ್ಟಿಕ್ಸ್, ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ರಿಕಾರ್ಡ್‌ನಲ್ಲಿರುವಂತೆ ತೆಗೆದುಕೊಂಡಿರುವುದು ಅರ್ಥವಾಗುತ್ತದೆ. ಅಂದಮೇಲೆ ನಮ್ಮ ಇಡೀ ರಾಜ್ಯದ ಬಜೆಟ್ ಪ್ರೊವಿಜನ್ ಏನಿದೆ. ಮತ್ತು ಯಾವ ಯಾವ ವಿಭಾಗದಲ್ಲಿ ಎಷ್ಟೆಷ್ಟು ಯಾವ ರೀತಿ ಪೋಲಾಗುತ್ತದೆ, ಯಾರ್ಯಾರು ತಿಂದುಹಾಕುತ್ತಾ ಇದ್ದಾರೆ ಎಂದು ಯೋಚನೆ ಮಾಡಿದ್ದೇ ಆದರೆ ಸಹಸ್ರಾರು ಕೋಟಿ ರೂಪಾಯಿ ಯಾವ ಬಡಪಾಯಿ ಹಿಂದುಳಿದವರಿಗೆ ನಿಮ್ನ ವರ್ಗದವರಿಗೆ, ಕಾರ್ಮಿಕರಿಗೆ ಏನು ಹೋಗಬೇಕಾಗಿದೆ, ಆರ್ಥಿಕವಾಗಿ ಅವರಿಗೆ ಏನು ಸಹಾಯ ಆಗಬೇಕಾಗಿದೆ, ಆ ಸಹಾಯವನ್ನು ಅವರಿಗೆ ಕೊಡದ ರೀತಿಯಲ್ಲಿ ನಾವು ಆಡಳಿತವನ್ನು ನಡೆಸಿಕೊಂಡು ಬರುತ್ತಾ ಇದ್ದೇವೆ. ನಾವು ಯಾವುದನ್ನು ಡಿಸ್ಕರೇಜ್ ಮಾಡಬೇಕು, ಮುಕ್ತಾಯ ಮಾಡಬೇಕು, ಅದಕ್ಕೆ ನಾವು ನಾನಾಕಾರಣಕ್ಕಾಗಿ ಪರೋಕ್ಷವಾಗಿ ಸಹಾಯಕರಾಗಿ ಬೆಂಬಲಿಗರಾಗಿದ್ದೇವೆ ಎಂದು ನಾನು ದುಃಖದಿಂದ ಹೇಳಬಯಸುತ್ತಾ ಇದ್ದೇನೆ,

ಇದನ್ನು ತಡೆಗಟ್ಟುವ ರೀತಿಯಲ್ಲಿ ತಾವು ಕೆಲಸ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ವಿದ್ಯಾಸಂಸ್ಥೆಗಳ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಏನೆಂದರೆ ಸಂಸ್ಕೃತ ಪಾಠಶಾಲೆಗಳಿಗೆ ನಮ್ಮ ಸರ್ಕಾರದಿಂದ ಏನು ಅನುಕೂಲವಾಗುತ್ತಿದೆ ಎಂಬುದನ್ನು ನೋಡಬೇಕಾಗಿದೆ. ಇವತ್ತು ರಾಜ್ಯದಲ್ಲಿ ಮಹಾರಾಜ ಸಂಸ್ಕೃತ ಕಾಲೇಜು, ಸಂಸ್ಕೃತ ಕಾಲೇಜು ಮೇಲುಕೋಟೆ ಈ ಎರಡು ಮಾತ್ರ ಹೆಸರು ಕೊಟ್ಟಿದ್ದಾರೆ. ಇದರ ಜೊತೆಗೆ ರಾಜ್ಯದ ಹಲವಾರು ಕಡೆ, ಹಲವಾರು ಭಾಗಗಳಲ್ಲಿ ಈ ಕಾಲೇಜುಗಳನ್ನು ಸ್ಥಾಪನೆ ಮಾಡುವ ಮೂಲಕ ಪ್ರಗತಿಯನ್ನು ಸಾಧಿಸಿದರೆ, ಮೌಲ್ಯಾಧಾರಿತ ಸಮಾಜ ಬಹಳ ವರ್ಷಗಳ ಹಿಂದೆ ಏನಿತ್ತೋ : ಅದನ್ನು ವಾಪಸ್ಸು ಪಡೆಯಬೇಕಾಗಿದರೆ ಈ ವಿಷಯದಲ್ಲಿ ಸರ್ಕಾರ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಕೆಲವು ದಿನಗಳ ಕೆಳಗೆ ಒಂದು ಸಂಸ್ಥೆಯವರು ನನ್ನ ಬಳಿ ಬಂದು ಸಲಹೆ ಕೊಟ್ಟರು. ನಾವು ಕರ್ನಾಟಕದಲ್ಲಿ ವೈದಿಕ್ ಯೂನಿವರ್ಸಿಟಿ ಪ್ರಾರಂಭ ಮಾಡಬೇಕೆಂದು ಇದ್ದೇವೆ: ನಮ್ಮ ಸಂಸ್ಥೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಟ್ಯಾಂಡಿಂಗ್ ಇದೆ, ೧೨೦ ರಾಷ್ಟ್ರಗಳಲ್ಲಿ ಗೌರವ ಸ್ಥಾನಮಾನ ಇದೆ, ಕರ್ನಾಟಕ ರಾಜ್ಯದಲ್ಲಿ ವೈದಿಕ್ ಯೂನಿವರ್ಸಿಟಿ ಮಾಡಿ, ಸಾವಿರಾರು ಯುವಕರನ್ನು ವೇದ, ಯೋಗ ಮತ್ತು ಧ್ಯಾನ ಈ ವಿಚಾರಗಳಲ್ಲಿ ತಯಾರು ಮಾಡಲು, ಸುತ್ತಮುತ್ತಲಿನ ಪರಿಸರದಲ್ಲಿ ಇನ್ನೂ ಹೆಚ್ಚಿನ ವ್ಯಾಲ್ಯೂಗಳನ್ನು ಅಭಿವೃದ್ಧಿ ಪಡಿಸಲು ಪರಿಣಾಮಕಾರಿಯಾಗುತ್ತದೆಂದು ತಿಳಿಸಿದರು. ಈಗಾಗಲೇ ಅವರು ಹಾಲೆಂಡಿನಲ್ಲಿ ಮಾಡಿದ್ದಾರೆ. ಪ್ರಕೃತಿಗೆ ಸಹಾಯವಾಗುವಂಥ ವಿಷಯದಲ್ಲಿ ಸರ್ಕಾರ ಸಹಾಯ ಮಾಡುವುದಕ್ಕಾಗುತ್ತದೆಂದು ಮಂತ್ರಿಗಳು ತಿಳಿಸಿದರೆ ; ಅವರ ಕಡೆ

ಯಿಂದ ಪ್ರೊಪೋಸಲ್ ಅನ್ನು ಸರ್ಕಾರಕ್ಕೆ ಕಳುಹಿಸಿಕೊಡುವುದಕ್ಕೆ ನಾನು ಹೇಳುತ್ತೇನೆ. ಇನ್ನು ಹೆಚ್. ಆರ್. ಸಿ. ವಿಷಯದಲ್ಲಿ ಬಡಪಾಯಿಗಳನ್ನೇ ನೀವು ನಿಮ್ಮ ಕಷ್ಟ ಏನೆಂದು ಕೇಳಬೇಕು. ಏಕೆಂದರೆ ಎಷ್ಟು ಸಾರಿ ಅರ್ಜಿ ಹಾಕಿದರೂ ಅವರಿಗೆ ಮನೆಗಳು ಸಿಗುವುದಿಲ್ಲ. ಮಧ್ಯಮವರ್ಗದವರಿಗೂ ಅಂತೂ ಸಿಗುವುದೇ ಇಲ್ಲ. ಇವತ್ತು ಮನೆಗಳು ಯಾರಿಗೆ ಸಿಗುತ್ತದೆ ಅಂದರೆ, ಸಾಕಷ್ಟು ಹಣ ಮಾಡುತ್ತಿರುವ ರಾಜಕಾರಣಿಗೆ ಹಾಗೂ ಆತನ ಒಂದು ಪ್ರಭಾವ, ಮತ್ತು ಸಾಕಷ್ಟು ಹಣ ಮಾಡುತ್ತಿರುವಂಥ ಅಧಿಕಾರಿಗಳಿಗೆ ಸಿಗುತ್ತವೆ. ಮೊದಲನೇ ಪ್ರಿಯಾರಿಟಿ ರಾಜ್ಯಸರ್ಕಾರಿ ನೌಕರರಿಗೆ ೨ನೇ ಪ್ರಿಯಾರಿಟಿ ಕೇಂದ್ರ ಸರ್ಕಾರದ ನೌಕರರಿಗೆ ನಂತರ ರಾಜಕೀಯ ಪ್ರಭಾವ ದುಡ್ಡಿನ ಪ್ರಭಾವ ಈ ರೀತಿಯ ಪಾಲಿಸಿ ಇಟ್ಟುಕೊಂಡು ಹೋದರೆ, ಈ ಸಣ್ಣಪುಟ್ಟ ಜನಗಳಿಗೆ ವಸತಿ ಇಲ್ಲದಂಥ ಬಡಪಾಯಿಗಳಿಗೆ ನಾವು ಅನುಕೂಲ ಮಾಡಿಕೊಟ್ಟಂತಾಗುತ್ತದೆಯೋ ? ಈ ಕಾನೂನಿನಿಂದ ಈ ಒಂದು ಪ್ರಿವಿಲೇಜ್ ಸೆಕ್ಷನ್ ಏನಿದೆ, ಇವರಿಗೆ ಅನುಕೂಲವಾಗುತ್ತದೆಯೋ ? ಅದರಲ್ಲಿಯೂ ಮನೆ ಮಾಲೀಕರುಗಳು ಏನಿದ್ದಾರೆ ಅವರುಗಳು ಕೂಡ ಹಳೇ ಮನೆಯ ಮಾಲೀಕರು, ಕೋಟ್ಯಾಧೀಶ್ವರಾಗಿರುವುದಿಲ್ಲ, ಇವತ್ತು ಅವರ ಗತಿ ಏನು ? ಈಕಡೆ ಮನೆ ಮಾಲೀಕನಿಗೂ ಅನುಕೂಲ ಇಲ್ಲ : ಬಡಪಾಯಿ ನಾಗರೀಕನಿಗೂ ಅನುಕೂಲ ಇಲ್ಲ : ಮಧ್ಯದಲ್ಲಿ ಯಾರೋ ಅನುಕೂಲ ಮಾಡಿಕೊಂಡು ಹೋಗುತ್ತಾರೆ. ಇದನ್ನು ತಾವು ದಯವಿಟ್ಟು ನಿಲ್ಲಿಸಬೇಕೆಂದು ಕೇಳಿಕೊಂಡು ತಾವು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ಹೃತ್ಪೂರ್ವಕವಾಗಿ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳ ಗಮನಕ್ಕೆ ಒಂದು ವಿಚಾರ ತರಬೇಕಾಗಿದೆ. ಈಗತಾನೇ ಸದನದ ಕಾರ್ಯಕಲಾಪಗಳ ಸಮಿತಿ ಸಭೆ ಸೇರಿ ತೀರ್ಮಾನ ಮಾಡಿದೆ. ಅಲ್ಲಿ ಏನು ತೀರ್ಮಾನ ಆಗಿದೆ ಎಂದರೆ, ಇವತ್ತು ಈ ಎರಡು ಪ್ರಮುಖ ಬೇಡಿಕೆಗಳ ಮೇಲಿನ ಚರ್ಚೆ ಮುಗಿದು ನಾಳೆ ಬೆಳಿಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಬಹಳ ಮೇಜರ್ ಡಿಮ್ಯಾಂಡ್ ಇದೆ. ಇವತ್ತು ಬೆಳಿಗ್ಗೆ ಕೂಡ ಸಾಕಷ್ಟು ಕಾಲಾವಕಾಶ ಸಿಗಲಿಲ್ಲ. ನಾಳೆ ಬೆಳಿಗ್ಗೆ......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಹಳ ಮುಖ್ಯವಾಗಿ ಲ್ಯಾಂಡ್ ರೀಫಾರ್ಮ್ಸ್, ಲ್ಯಾಂಡ್ ರೆವಿನ್ಯೂ, ಅನಾಥರೈಸ್ಡ್ ಲ್ಯಾಂಡ್‌ರ್ ರೆಗ್ಯುಲರೈಜೇಷನ್, ಡಿಸ್ಟ್ರಿಕ್ಟ್ಸ್ ರಿ ಆರ್ಗನೈಜೇಷನ್ ಹೀಗೆ ಬಹಳ ವಿಚಾರಗಳು ಇವೆ. ಆದ್ದರಿಂದ ನಾಳ ಬೆಳಿಗ್ಗೆ ಚರ್ಚೆಗೆ ಎರಡು ತಾಸು ತಾವು ಅವಕಾಶಕೊಟ್ಟು, ನಂತರ ಮಂತ್ರಿಗಳು ಉತ್ತರ ಹೇಳಲಿ. ಈ ರೀತಿ ಮಾಡುವುದರಿಂದ ಎಲ್ಲರಿಗೂ ಮಾತನಾಡಲು ಅವಕಾಶ ಸಿಗುತ್ತದೆ.

೫–೪೫ ಪಿ.ಎಂ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರು, ಕಂದಾಯ ಇಲಾಖೆ ಇದು ಒಂದು ದೊಡ್ಡ ಇಲಾಖೆ. ನಾವು ಇದರ ಬಗ್ಗೆ ವರ್ಷದಲ್ಲಿ ಒಂದು ಸಾರಿ ಚರ್ಚೆ ಮಾಡುವಂಥಾದ್ದು. ನೆನ್ನೆಯ ದಿವಸ ಮಾನ್ಯ ಸಿಂಧ್ಯ ಅವರು ಒಂದು ಗಂಟೆ ಕಾಲ ಮಾತನಾಡಿದ್ದಾರೆ. ವಿರೋಧಪಕ್ಷದ ನಾಯಕರು ಇಂದು ಒಂದು ಗಂಟೆ ಮಾತನಾಡಿದ್ದಾರೆ. ಈಗ ಹೊಸ ಶಾಸಕರು ಇದ್ದಾರೆ. ಅವರು ತಮ್ಮ ತಮ್ಮ ಜಿಲ್ಲೆಯ ಅಡ್ಮಿನಿಸ್ಟ್ರೇಷನ್ ವಿಚಾರ ಹೇಳಬೇಕಾಗುತ್ತದೆ. ಈ ಒಂದು ದೊಡ್ಡ ಜವಾಬ್ದಾರಿ ಅವರ ಮೇಲಿದೆ. ಇನ್ನು ಕಾರ್ಮಿಕ ಇಲಾಖೆ ಇದೆ, ಅದೊಂದು ಪರದೇಶಿ ಇಲಾಖೆ ಎಂದು ಯಾರೂ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಇನ್ನೂ ಒಂದೆರಡು ಗಂಟೆಗಳ ಕಾಲ ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಕೊಡಬೇಕು. ಬೇರೆ ಇಲಾಖೆಯದ್ದು ಏನಾದರೂ ಸ್ವಲ್ಪ ವ್ಯತ್ಯಾಸವಾದರೂ ಚಿಂತೆ ಇಲ್ಲ. ಇಲ್ಲಿ ಅನೇಕ ಸಮಸ್ಯೆಗಳನ್ನು ಹೇಳತಕ್ಕದ್ದು ಇದೆ. ಈ ಇಲಾಖೆ ಬಹಳ ಕೆಟ್ಟಿದೆ. ಮಾನ್ಯ ಕೆ. ಹೆಚ್. ಪಾಟೀಲ್‌ರವರು ಇರತಕ್ಕಂಥ ಸಂದರ್ಭದಲ್ಲಿ ಸಲಹೆಗಳನ್ನು ವಿವರವಾಗಿ ಕೊಟ್ಟರೆ ಅವರು ಸ್ಟ್ರೀಮ್ ಲೈನ್ ಮಾಡಲಿಕ್ಕೆ ಆಗುತ್ತದೆ. ಆದ್ದರಿಂದ, ಇದರ ಬಗ್ಗೆ ಸಮಯದ ಬಗ್ಗೆ ರಿಸ್ಟ್ರಿಕ್ಷನ್ ಮಾಡಲಿಕ್ಕೆ ಹೋಗಬೇಡಿ ಎಂದು ಹೇಳುತ್ತೇನೆ. ನಾಳೆಗೂ ಇದನ್ನು ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ಇಲಾಖೆ, ಈಗ ೬ ಗಂಟೆಗೆ ಚರ್ಚೆ ಮುಂದುವರಿಸಿ ನಾಳೆ ಬೆಳಿಗ್ಗೆ ಚರ್ಚೆ ಪ್ರಾರಂಭ ಮಾಡಬಹುದು.

ಅಧ್ಯಕ್ಷರು.—ಇವೊತ್ತು ಸ್ವಲ್ಪ ತಡವಾಗಿ ಕುಳಿತುಕೊಂಡು ಚರ್ಚೆ ಮುಗಿಸಬೇಕಾಗುತ್ತದೆ. ಈಗ ಸಾವಕಾಶವಾಗಿ ಕುಳಿತುಕೊಂಡು ಚರ್ಚೆ ಮುಗಿಸೋಣ, ನಾಳೆ ಸಾವಕಾಶವಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಇವೊತ್ತು ೮ ಗಂಟೆಯವರೆಗೂ ಕುಳಿತುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ತಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಈಗ ಸಭೆಯನ್ನು ೬ ಗಂಟೆಗೆ ಮುಂದುವರಿಸಿ, ನಾಳೆ ಬೆಳಿಗ್ಗೆ ೯ ಗಂಟೆಗೆ ಕುಳಿತುಕೊಳ್ಳೋಣ.

ಅಧ್ಯಕ್ಷರು.—ಈಗ ನನ್ನ ಕೈಕಟ್ಟಿ ಹೋಗಿದೆ, ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನ ಏನಿದೆ, ಅದು ನಮ್ಮ ಮೇಲೆ ಬಿದ್ದಿರತಕ್ಕಂಥಾದ್ದು ಇದೆ. ನಾನು ಅದನ್ನು ಸದನಕ್ಕೆ ತಿಳಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಈಗ ೬ ಗಂಟೆಗೆ ಸಭೆಯನ್ನು ದಯಮಾಡಿ ಮುಗಿಸಿ ಬೆಳಿಗ್ಗೆ ೯ ಗಂಟೆಗೆ ಸೇರಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೆ, ನಾವು ಬೆಳಿಗ್ಗೆ ೧೧ ಗಂಟೆಗೆ ಬಂದಿದ್ದೇವೆ. ಬಹುತೇಕ ಸದಸ್ಯರು ಮನೆಗೆ ಹೋಗಿಲ್ಲ. ಇಲ್ಲಿರತಕ್ಕ ಹೋಟಲಿನಲ್ಲಿ ಎರಡು ಮೂರು ದಿವಸ ತಿಂದರೆ ನಾವು ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಆದ್ದರಿಂದ, ನಾವು ಇನ್ನೂ ಹಸಿದುಕೊಂಡಿದ್ದೇವೆ, ನಮ್ಮ ಕಷ್ಟ ತಮಗೆ ಹೇಳಿಕೊಳ್ಳದೆ ಬೇರೆ ಯಾರಲ್ಲಿ ಹೇಳಿಕೊಳ್ಳಬೇಕು ?

ಅಧ್ಯಕ್ಷರು.—ಸಧ್ಯ ಈಗ ಮನೋರಮಾ ಮಧ್ವರಾಜ್ ಅವರು ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಇಲ್ಲಿ ಪ್ರಮುಖವಾಗಿ ತಿಂಡಿ ವ್ಯವಸ್ಥೆ ಸರಿಯಿಲ್ಲ. ನಾವು ಕೆಲವರು ಆದಷ್ಟೂ ಸಭೆಯಲ್ಲಿಯೇ ಇರಬೇಕು ಎನ್ನುವ ಕಲ್ಪನೆ ಇಟ್ಟುಕೊಂಡಿದ್ದೇವೆ, ಇಲ್ಲಿ ತಿಂಡಿ ಸರಿಯಿಲ್ಲ, ಇಲ್ಲಿ ತಾವು ಒಂದು ವಡೆ ತಿಂದು ನೋಡಿದರೆ ಗೊತ್ತಾಗುತ್ತದೆ, ಇಲ್ಲಿ ಕೊಡತಕ್ಕ ಹುಳಿಅನ್ನ. ಮೊಸರನ್ನ ಸರಿಯಿಲ್ಲ, ಆಯುರ್ವೇದ ಆಸ್ಪತ್ರೆಯಲ್ಲಿ ಹೊಟ್ಟೆ ನೋವು ಬಂದರೆ, ಬೇಧಿ ಬಂದರೆ ಕೊಡತಕ್ಕ ಔಷಧಿ ಇದ್ದಹಾಗೆ ಇದೆ. ನಮ್ಮ ಆರೋಗ್ಯ ಸಚಿವರು ಬೇವಿನಸೊಪ್ಪು ತಿನ್ನಿ, ಮಾವಿನಸೊಪ್ಪು ತಿನ್ನಿ ಎಂದು ಹೇಳಿದರು, ಇದೇ ರೀತಿ ಆದರೆ, ಇರುವ ವಯಸ್ಸಿನಲ್ಲಿ ವರ್ಷಕ್ಕೆ ಆರು ತಿಂಗಳು ಕಡಿಮೆಯಾಗುತ್ತದೆ. ಆದ್ದರಿಂದ, ಒಳ್ಳೆಯ ಚಿತ್ರಾನ್ನ, ಹುಳಿಅನ್ನ, ಮೊಸರನ್ನ ಸಿಕ್ಕುವಂತೆ ತಾವು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಪಾಟೀಲರು ಇದ್ದಾರೆ, ಅವರ ಮುಜರಾಯಿ ಡಿಪಾರ್ಟ್‌ಮೆಂಟಿಗೆ ಹೇಳೋಣ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಹಿಂದೆ ಚನ್ನಬಸಪ್ಪನವರು ಕಾಮಗಾರಿ ಸಚಿವರಾಗಿದ್ದಾಗ ವಿಶೇಷವಾಗಿ ತಿಂಡಿ ವ್ಯವಸ್ಥೆಯನ್ನು ಸರ್ಕಾರದ ಸಹಾಯಧನ ಕೊಟ್ಟು ಮಾಡಿಸುತ್ತಿದ್ದರು.

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೆ, ಎರಡೂ ಕಡೆಯ ಸದಸ್ಯರು ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ, ಸಮಯವನ್ನು ನಿಗದಿ ಮಾಡುವುದು ಬೇಡ. ನಾವು ಏಳೂವರೆ ಗಂಟೆಯವರೆಗೂ ಕುಳಿತುಕೊಳ್ಳೋಣ. ಅಷ್ಟರವರೆಗೆ ಎಷ್ಟು ಜನರು ಮಾತನಾಡುತ್ತಾರೋ ಮಾತನಾಡಲಿ, ಉಳಿದವರು ಎರಡು ಮೂರು ಜನರು ಇದ್ದರೆ, ಅವರು ನಾಳೆ ಮಾತನಾಡಲಿ, ಅನಂತರ ನಾನು ಉತ್ತರ ಕೊಡುತ್ತೇನೆ.

ಶ್ರೀ ಎಂ. ಮುನಿಸ್ವಾಮಿ.—ಅಧ್ಯಕ್ಷರೆ, ನಾನು ನಾಳೆ ಮಾತನಾಡುತ್ತೇನೆ. ನನಗೆ ನಾಳೆ ಬೆಳಿಗ್ಗೆ ಅವಕಾಶ ಕೊಡಿ.

ಶ್ರೀ ಕೆ. ಹೆಚ್. ಪಾಟೀಲ್.—ಇವತ್ತು ಎಷ್ಟು ಜನ ಮಾತನಾಡುತ್ತಾರೋ ಅಷ್ಟು ಮಂದಿ ಮಾತನಾಡಲಿ.

ಅಧ್ಯಕ್ಷರು.—ನಾಳೆ ನಾನ್-ಅಫಿಷಿಯಲ್ ಡೇ ಇದೆ. ಆದರಲ್ಲಿ ಬೇಕಾದರೆ ೨ ಗಂಟೆ ಇದಕ್ಕೆ ಉಪಯೋಗಿಸಿಕೊಳ್ಳಬಹುದು ಎಂದು ಹೇಳಿದರೆ ಆಗಬಹುದು.

ಶ್ರೀ ವಾಟಾಳ್ ನಾಗರಾಜ್.—ನಾಳೆ ರಜಾ ಕೊಡುವುದು ಒಳ್ಳೆಯದು. ವಿಧಾನ ಪರಿಷತ್ತಿನ ಚುನಾವಣೆಗಳು ನಡೆಯುತ್ತಿದೆ.

ಅಧ್ಯಕ್ಷರು.—ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾಳೆ ಸಭೆ ನಡೆಸಬೇಕೆಂದು ತೀರ್ಮಾನಕ್ಕೆ ಬರಲಾಗಿದೆ. ಇಂದು ಸಭೆ ಎಷ್ಟು ಹೊತ್ತು ಸಭೆ ನಡೆಸಲು ಸಾಧ್ಯವೋ ಅಷ್ಟು ಹೊತ್ತು ಮಾನ್ಯ ಸದಸ್ಯರುಗಳು ಮಾತನಾಡಲಿ ಆದರೆ ಸಮಯದ ಮೇಲೆ ಕಣ್ಣು ಇಟ್ಟು ಮಾತನಾಡಬೇಕು ನಿಮಗೆ ಎಷ್ಟು ಸಮಯ ನಿಗದಿಯಾಗಿರುತ್ತದೆ ಅಷ್ಟು ಸಮಯದಲ್ಲಿ ಮುಗಿಸಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೆಲವೇ ರೆಗ್ಯುಲರ್ ಸ್ಟೂಡೆಂಟ್ಸ್ ಇದ್ದಾರೆ. ಅವರನ್ನು ಕಳೆದುಕೊಳ್ಳಬೇಡಿ ಎಂದು ನಾನು ತಮಗೆ ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್, ಶಿವರಾಮೇಗೌಡ.—ತಾವು ಕ್ಯಾಂಟೀನ್ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಅದರ ಬಗ್ಗೆ ಗಮನ ಹರಿಸಬೇಕೆಂದು ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಎಂ. ಸಿ. ಕನ್ನೂರ್ (ಶಿಗ್ಗಾಂವ್).—ಮಾನ್ಯ ಅಧ್ಯಕ್ಷರೇ. ಸನ್ಮಾನ್ಯ ಕಂದಾಯ ಸಚಿವರು ಕಂದಾಯ ಇಲಾಖೆಯ ಬಗ್ಗೆ ಮಂಡಿಸಿದ ಬೇಡಿಕೆಯನ್ನು ಸ್ವಾಗತಿಸುತ್ತಾ ಎರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಕರ್ನಾಟಕ ರಾಜ್ಯ ಸರಕಾರದಲ್ಲಿ ಕಂದಾಯ ಇಲಾಖೆಯು ಬಹಳ ಪ್ರಭಾವಿಯಾಗಿ ಕೆಲಸ ಮಾಡತಕ್ಕಂತಹ ಒಂದು ಇಲಾಖೆ. ಈ ಕಂದಾಯ ಇಲಾಖೆಯಲ್ಲಿ ಬರುವ ಭೂ ಸುಧಾರಣಾ ಕಾನೂನು, ಭೂ ಸ್ವಾಧೀನ ಕಾಯಿದೆ ಮತ್ತು ಪ್ರಾಗ್ಮೆಂಟೇಷನ್ ಆಕ್ಟ್ ಹಾಗೂ ಇನ್ನೂ ಇತರ ಕೆಲವು ಕಾನೂನುಗಳ ಬಗ್ಗೆ ಮಾತನಾಡುವುದು ಅತಿ ಅವಶ್ಯ ಇದೆ. ಭೂ ಸುಧಾರಣಾ ಕಾನೂನಿನ ಅನ್ವಯ ಅನೇಕ ಜನರಿಗೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಒಂದು ಕ್ರಾಂತಿಯನ್ನೇ ಮಾಡಿ ಅನೇಕ ಜನರಿಗೆ ಉಳುವವನೇ ಭೂ ಒಡೆಯನೆಂದು ಹೇಳಿ ಜಮೀನುಗಳ ಒಡೆತನದ ಹಕ್ಕನ್ನು ಪಡೆಯತಕ್ಕಂತಹ ಒಂದು ವ್ಯವಸ್ಥೆಯಾಗಿದೆ. ತದ ನಂತರ ಇವತ್ತಿನ ದಿವಸ ಅನೇಕ ಕೇಸುಗಳು ಕೂಡ ಈ ಭೂ ಸುಧಾರಣಾ ಕಾನೂನಿನ ಅಡಿಯಲ್ಲಿ ಫಾರಂ ನಂ ೧೧ರ ಅಡಿಯಲ್ಲಿ ಭೂ ಹಿಡುವಳಿ ಮಿಕ್ಕಿರತಕ್ಕಂತಹವರೂ ಕೂಡ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಆದರೆ ಹೆಚ್ಚುವರಿ ಜಮೀನು ಇರತಕ್ಕಂತಹ ಕುಟುಂಬಗಳು ಈ ರಾಜ್ಯದಲ್ಲಿ ಎಷ್ಟಿವೆ ಎಂಬ ತೀರ್ಮಾನಕ್ಕೆ ನಾವು ಇನ್ನೂ ಬಂದಿಲ್ಲ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಮತ್ತು ಅನೇಕ ಜನರು ಭೂ ನ್ಯಾಯ ಮಂಡಲಿಯ ತೀರ್ಪಿನ ವಿರುದ್ಧ ಹೈಕೋರ್ಟಿಗೆ ಅರ್ಜಿಗಳನ್ನು ಸಲ್ಲಿಸಿದ್ದಾರೆ ಹೈಕೋರ್ಟಿನಲ್ಲಿ ಸುಮಾರು ೧೦–೧೫ ವರ್ಷಗಳಿಂದ ಇತ್ಯರ್ಥವಾಗದೇ ಬಾಕಿ ಇರುವಂತಹ ಅನೇಕ ಪ್ರಕರಣಗಳನ್ನು ನಾವು ನೋಡಿದ್ದೇವೆ. ಎಷ್ಟು ಜಮೀನುಗಳು ಇವೊತ್ತು ಹಿಡುವಳಿಗಿಂತ ಜಾಸ್ತಿ ಇವೆ, ಆ ಜಮೀನುಗಳನ್ನು ಹೆಚ್ಚುವರಿ ಜಮೀನುಗಳೆಂದು ಘೋಷಣೆಮಾಡಿ ಭೂ ರಹಿತರಿಗೆ ಹಂಚತಕ್ಕಂತಹ ಒಂದು ವ್ಯವಸ್ಥೆ ಮಾಡುವುದು ಅತಿ ಅವಶ್ಯ ಇದೆ. ಆದ್ದರಿಂದ ಸುಮಾರು ೧೦–೧೫ ವರ್ಷಗಳಿಂದ ಶ್ರೇಷ್ಠ ನ್ಯಾಯಾಲಯಗಳಲ್ಲಿ ಚಾಲ್ತಿಯಲ್ಲಿರುವಂತಹ ಪ್ರಕರಣಗಳನ್ನು ತೀವ್ರವಾಗಿ ಮುಗಿಸತಕ್ಕಂತಹ ಒಂದು ವ್ಯವಸ್ಥೆಯನ್ನು ನಮ್ಮ ಸರಕಾರ ಮಾಡಬೇಕೆಂಬ ಸಲಹೆಯನ್ನು ಮಾಡುತ್ತೇನೆ. ಇನ್ನು ಭೂ ಸ್ವಾಧೀನ ಕಾಯಿದೆಯಲ್ಲಿ ಅನೇಕ ಜಮೀನುಗಳನ್ನು ಜನತಾ ಪ್ಲಾಟುಗಳ ಸಲುವಾಗಿ ಮತ್ತು ನೀರಾವರಿ ಯೋಜನೆಗಳ ಸಲುವಾಗಿ ಸ್ವಾಧೀನ ಮಾಡತಕ್ಕಂತಹ ಕಾನೂನನ್ನು ಮಾಡಿಕೊಂಡಿದ್ದೇವೆ. ಆದರೆ ಈ ಭೂ ಸ್ವಾಧೀನ ಪ್ರಕರಣಗಳಲ್ಲಿ ನನ್ನ ಒಂದು ವಕಾಲತ್ತನಲ್ಲಿ ಆದ ನನ್ನ ಅನುಭವದ ಪ್ರಕಾರ ಹೇಳಬೇಕಾಗಿದೆ. ಕೋಟ್ಯಾಂತರ ರೂಪಾಯಿಗಳ ಲುಕ್ಸಾನನ್ನು ನಮ್ಮ ಸರಕಾರ ಈಬಗ್ಗೆ ಅನುಭವಿಸುತ್ತಿದೆ, ೧೯೫೮–೬೦ರಲ್ಲಿ ಭೂ ಸ್ವಾಧೀನ ಪಡಿಸಿಕೊಂಡ ಜಮೀನುಗಳ ಬಗ್ಗೆ ಸಂಬಂಧಿಸಿದಂತಹ ಅಧಿಕಾರಿಗಳು ಲ್ಯಾಂಡ್ ಆಕ್ವಿಸಿಷನ್ ಕಾನೂನು ಪ್ರಕಾರ ಅವಾರ್ಡ್‌ಗಳನ್ನು ಪಾಸ್ ಮಾಡಿರುವುದಿಲ್ಲ. ಅದರ ಜೊತೆಗೆ ೨೦–೨೫ ವರ್ಷಗಳಿಂದ ಎಷ್ಟೋ ಜನರಿಗೆ ಪರಿಹಾರವನ್ನು ಕೊಟ್ಟಿರುವುದಿಲ್ಲ. ಇಂತಹಪ್ರಕರಣಗಳನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಇವತ್ತು ಕೆಲವು ಜನರು ಕೋರ್ಟ್‌ಗಳಿಗೆ ಹೋಗಿ ತಮ್ಮ ಭೂಸ್ವಾಧೀನ ಕೇಸುಗಳಲ್ಲಿ ಜಡ್ಜ್‌ಮೆಂಟ್ ಡಿಕ್ರಿಗಳನ್ನು ಮಾಡಿಸಿಕೊಂಡಿದ್ದಾರೆ. ಇವತ್ತು ಕೇಂದ್ರ ಸರ್ಕಾರದ ಈ ಭೂಸ್ವಾಧೀನ ಕಾನೂನಿನ ತಿದ್ದುಪಡಿಯ ಪ್ರಕಾರ ನಾವು ಕೊಡತಕ್ಕ ಪರಿಹಾರಧನವನ್ನು ಹೋಲಿಸಿ ನೋಡಿದರೆ ಖಂಡಿತವಾಗಿ ಯಾವುದೇ ಒಬ್ಬ ಮಾರ್ವಾಡಿಯೂ ಕೂಡ ಅಷ್ಟು ಬಡ್ಡಿಯನ್ನು ಕೊಡಲಿಕ್ಕೆ ಸಾಧ್ಯವಿಲ್ಲ, ಅಷ್ಟೊಂದು ಹಣವನ್ನು ನಾವು ಸರ್ಕಾರದಿಂದ ಕೊಡುತ್ತಿದ್ದೇವೆ ಎಂಬ ವಿಚಾರವನ್ನು ತಾವು ಮುಖ್ಯವಾಗಿ ಯೋಚನೆ ಮಾಡಬೇಕಾಗಿದೆ. ಇವತ್ತು ಒಂದು ಎಕರೆಗೆ ಕೋರ್ಟ್‌ನವರು ೫ ಸಾವಿರ ಪರಿಹಾರ ಧನವನ್ನು ನಿಗದಿ ಪಡಿಸಿದರೆ ಅದಕ್ಕೆ ಸುಮಾರು ೩೦ ಪರ್ಸೆಂಟ್ ಪರಿಹಾರವನ್ನು ತರುವಾಯ ೧೫ ಪರ್ಸೆಂಟ್ ಬಡ್ಡಿಯನ್ನು ಕೊಡಬೇಕಾಗುತ್ತದೆ, ೧೨ ಪರ್ಸೆಂಟ್ ಅಡಿಷನಲ್ ಮಾರ್ಕೆಟ್ ವ್ಯಾಲ್ಯೂ ಎಂದು ಕೊಡಬೇಕಾಗುತ್ತದೆ. ಒಂದು ರೆಕಾರ್ಡ್‌ಗೆ ೫ ಸಾವಿರ ರೂಪಾಯಿ ಮಂಜೂರಾಗಿದ್ದರೆ, ಒಟ್ಟು ಪರಿಹಾರಧನ ಕನಿಷ್ಟ ೫೦ ಸಾವಿರ ರೂಪಾಯಿಗಳವರೆಗೂ ಕೊಡಬೇಕಾದ ಸಂದರ್ಭ ಇದೆ. ಆದ್ದರಿಂದ ಈ ಕಾನೂನು ಅಡಿಯಲ್ಲಿ ನನ್ನ ಸಲಹೆ ಏನೆಂದರೆ, ಎಷ್ಟು ಪ್ರಕರಣಗಳು ಕೋರ್ಟ್‌ನಲ್ಲಿ ಚಾಲ್ತಿಯಲ್ಲಿವೆ, ಅವೆಲ್ಲವನ್ನೂ ಕೂಡ ಲೋಕ ಅದಾಲತ್‌ಗೆ ರೆಫರ್ ಮಾಡಬೇಕು. ಮೋಟಾರ್ ವೆಹಿಕಲ್ಸ್ ಆ್ಯಕ್ಸಿಡೆಂಟ್ ಕೇಸುಗಳಲ್ಲೂ ಕೂಡ ರೆಫರ್ ಮಾಡತಕ್ಕ ಸಂದರ್ಭ ಇದೆ. ಆದ್ದರಿಂದ ಸರ್ಕಾರದವರೂ ಕೂಡ ಈ ದಿಸೆಯಲ್ಲಿ ಒಂದು

ಧೈರ್ಯವನ್ನು ತಾಳಿ ಲೋಕ ಅದಾಲತ್‌ಗೆ ಒಪ್ಪಿಸಿ ಪ್ರೈವೇಟ್ ನೆಗೋಸಿಯೇಷನ್ ಮೇಲೆ ರೈತರು ಮತ್ತು ಸರ್ಕಾರ ಹೊಂದಾಣಿಕೆಯನ್ನು ಮಾಡಿಕೊಂಡು ಮುಗಿಸುವುದಾದರೆ ಅನೇಕ ಕೋಟಿ ರೂಪಾಯಿಗಳ ಲಾಭ ಈ ಸರ್ಕಾರಕ್ಕೆ ಆಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಹೇಳಬಯಸುತ್ತೇನೆ.

ಇನ್ನು ಈ ಭೂ ಕಂದಾಯದ ವಿಷಯದಲ್ಲಿ ಹೇಳುವುದಾದರೆ, ಅನೇಕ ವರ್ಷಗಳ ಹಿಂದೆ ೧ ರೂ. ನಿಂದ ೩ ರೂ. ವರೆಗೆ ಭೂ ಕಂದಾಯವನ್ನು ಎಲ್ಲಾ ಜಮೀನುಗಳ ಮೇಲೆ ನಿಗದಿ ಮಾಡಿದ್ದರು. 'ತರೀ ಮತ್ತು ಖುಷ್ಕಿ' ಜಮೀನುಗಳ ಕ್ಲಾಸಿಫಿಕೇಷನ್ ಮೇಲೆ ಮಾಡಿದ್ದು. ಇದು ಬಹಳ ವರ್ಷಗಳ ಹಿಂದೆ ಮಾಡಿರತಕ್ಕದ್ದು. ಇದನ್ನು ತಾವು ಈಗ ಪುನರ್ ವಿಮರ್ಶೆ ಮಾಡಬೇಕಾಗಿದೆ. ಏಕೆಂದರೆ ಕೆಲವು ಒಳ್ಳೆಯ ಜಮೀನುಗಳಿಗೆ ಕಡಿಮೆ ಅಸೆಸ್‌ಮೆಂಟ್ ಆಗಿದೆ, ಉತ್ತಮವಲ್ಲದ ಜಮೀನುಗಳಿಗೆ ಹೆಚ್ಚಿನ ಒಂದು ಅಸೆಸ್‌ಮೆಂಟ್ ಆಗಿದೆ. ಆದ್ದರಿಂದ ಇದನ್ನು ಪುನರ್‌ಪರಿಶೀಲಿಸಿ ಹೊಸದಾಗಿ ಭೂ ಕಂದಾಯವನ್ನು ಆಯಾಯ ಜಮೀನುಗಳ ಮೇಲೆ ವರ್ಗೀಕರಣ ಮಾಡಿ ಹಾಕಬೇಕೆಂದು ನಾನು ಹೇಳಬಯಸುತ್ತೇನೆ. ಇನ್ನು ತುಂಡು ಜಮೀನು ಕಾಯಿದೆ ಮೇರೆಗೆ ಹೇಳಬೇಕೆಂದರೆ, ಇವತ್ತು ಕಾನೂನು ಅಡಿಯಲ್ಲಿ ಯಾವುದೇ ಒಂದು ತುಂಡು ಜಮೀನುಗಳನ್ನೂ ನಾವು ಕೊಂಡುಕೊಳ್ಳುವುದಕ್ಕೆ ಅವಕಾಶ ಇಲ್ಲ. ಆದರೆ ಹಳ್ಳಿಗಳಲ್ಲಿ ಆ ತುಂಡು ಜಮೀನಿನ ಪಕ್ಕದಲ್ಲಿರುವವರೂ ಕೂಡ ತೆಗೆದುಕೊಳ್ಳದೇ ಇರುವಾಗ ಅಫಿಡವಿಟ್‌ನ್ನು ಹಾಕಿ ಆ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ ಎಂದು ಕೆಲವು ಪತ್ರಗಳು ನೊಂದಣಿ ಆಗುತ್ತಿವೆ. ಆದ್ದರಿಂದ ಇದರ ಬಗ್ಗೆ ಕಾನೂನು ಸ್ಪಷ್ಟವಾಗಿ ಇರಬೇಕಾದ್ದು ಒಳ್ಳೆಯದು. ಈ ತುಂಡು ಜಮೀನು ಕಾಯಿದೆಯನ್ನು ತೆಗೆದರೂ ಕೂಡ ಕೆಲವು ಸಂದರ್ಭಗಳಲ್ಲಿ ನೀರಾವರಿ ತರಿ ಜಮೀನು ೧.೧೦ ಎಕರೆ, ಖುಷ್ಕಿ ಜಮೀನು ೨.೨೮ ಎಕರೆ ಇದ್ದರೆ ಅದು ತುಂಡು ಭೂಮಿ ಎಂದು ಆಗುವುದಿಲ್ಲವೆಂದೇ ಈಗಿನ ಕಾನೂನಿನಲ್ಲಿದೆ. ಇದನ್ನು ತೆಗೆದುಹಾಕಿದರೆ ಅಲ್ಲಿ ಕೆಲವು ಜಮೀನುಗಳು creation of fragmentation ಆಗತಕ್ಕ ಸಂದರ್ಭ ಬಂದು ಜಾಯಿಂಟ್ ಫ್ಯಾಮಿಲಿಯಲ್ಲಿರತಕ್ಕ ಕೆಲವು ಕುಟುಂಬಗಳಿಗೂ ಕೂಡ ತೊಂದರೆಯಾಗತಕ್ಕ ಸಂದರ್ಭ ಇದೆ. ಈ ದೃಷ್ಟಿಯಿಂದ lands which are already fragmented they can be purchased and creation of fragmentation can be prevented. ಈ ದಿಸೆಯಲ್ಲಿ ಈ ಕಾನೂನನ್ನು ಮಾರ್ಪಾಡು ಮಾಡತಕ್ಕದ್ದು ಒಳ್ಳೆಯದೆಂದು ಹೇಳಬಯಸುತ್ತೇನೆ.

ಇನ್ನು ವೃದ್ಧಾಪ್ಯ ವೇತನ, ವಿಧವಾ ವೇತನ, ಹಸಿರು ಕಾರ್ಡು, ವರಮಾನ ಸರ್ಟಿಫಿಕೇಟ್, ಇವೆಲ್ಲ ಇವತ್ತು ಕಂದಾಯ ಇಲಾಖೆಯಲ್ಲಿ ಬಹಳ ಪ್ರಮುಖವಾದ ವಿಷಯಗಳು. ಇವೆಲ್ಲವನ್ನೂ ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ರೆವಿನ್ಯೂ ಇನ್ಸ್‌ಪೆಕ್ಟರುಗಳು, ತಹಶೀಲ್ದಾರರು ಕೊಡತಕ್ಕ ಈ ಸಂದರ್ಭದಲ್ಲಿ ನಾವು ಸಾಕಷ್ಟು ಲಂಚಾವತಾರವನ್ನು ನೋಡುತ್ತಿದ್ದೇವೆ. ಈ ಒಂದು ವಿಷಯದಲ್ಲಿ ದೃಢವಾದ ನಿಲುವು ತಾಳಿ ಅಲ್ಲಿ ಉತ್ತಮವಾದ ಆಡಳಿತ ನಡೆಯತಕ್ಕ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿದೆ, ಅನೇಕ ಪ್ರಸಂಗಗಳಲ್ಲಿ ಗ್ರಾಮ ಲೆಕ್ಕಿಗರು ನಾವು ಹೋದಾಗ ಅವರ ಸಿಗುವುದಿಲ್ಲ, ಜೊತೆಗೆ ಅವರು ಹಣ ಕೊಡದೆ ಯಾವ ಒಂದು ಸರ್ಟಿಫಿಕೇಟ್ ಕೂಡ ಕೊಡದ ಸ್ಥಿತಿಯಲ್ಲಿದ್ದಾರೆ, ಆದ್ದರಿಂದ ಅವರು ಉತ್ತಮವಾದ ಕೆಲಸ ಮಾಡುವಂತೆ ಅವರ ಮೇಲೆ ನಿಗಾ ಇಡುವುದು ಅತಿ ಅವಶ್ಯಕವಿದೆ ಎಂದು ಹೇಳಬಯಸುತ್ತೇನೆ. ಇನ್ನು ಕೆಲವು ಜಮೀನುಗಳನ್ನು ಅನೇಕ ರೈತರು ಅನಧಿಕೃತವಾಗಿ ಸಾಗು ಮಾಡುತ್ತಾ ಬಂದಿದ್ದಾರೆ. ಅಂಥ ಜಮೀನುಗಳನ್ನು ಸಕ್ರಮಗೊಳಿಸಿ ಅವರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಕಾನೂನು ತಿದ್ದುಪಡಿ ಮಾಡುವುದು ಅವಶ್ಯಕ ಇದೆ. ಇತ್ತೀಚೆಗೆ ಕೆಲವೊಂದು ಪ್ರಕರಣಗಳಲ್ಲಿ ಅನಧಿಕೃತವಾಗಿ ಇದ್ದಂಥ ಜಮೀನುಗಳನ್ನು ಸಕ್ರಮಗೊಳಿಸುತ್ತೇವೆಂದು ಹೇಳಿದ ಕೂಡಲೇ ೫–೬ ತಿಂಗಳ ಹಿಂದೆ ಹಳ್ಳಿ ಕಡೆ ಹೊಸದಾಗಿ ಅರಣ್ಯ ಪ್ರದೇಶಗಳನ್ನು ಅನೇಕ ರೈತರು ಅತಿಕ್ರಮಣ ಮಾಡಿ ಸಾಗು ಮಾಡತಕ್ಕ ಪ್ರಸಂಗಳನ್ನು ನಾವು ನೋಡುತ್ತಿದ್ದೇವೆ ಆದುದರಿಂದ ಅದಕ್ಕೆ ಒಂದು ಕಟ್ಟುನಿಟ್ಟಿನ ಅವಧಿಯನ್ನು ನಿಗದಿಪಡಿಸಿ ಆ ಪ್ರದೇಶದಲ್ಲಿ ಅವರು ವಾಸಿಸುತ್ತಿದ್ದಾರೋ ಇಲ್ಲವೋ, ಅವರಿಗೆ ಜಮೀನು ಬೇರೆ ಇದೆಯೋ ಇಲ್ಲವೋ ಎಂಬುದನ್ನು ನೋಡಿಕೊಂಡು ಸಕ್ರಮಗೊಳಿಸಿದರೆ ಒಳ್ಳೆಯದಾಗುತ್ತದೆಂದು ಹೇಳಬಯಸುತ್ತೇನೆ. ನಮ್ಮ ಸರ್ಕಾರೀ ಅರಣ್ಯ ಪ್ರದೇಶಗಳು ಹೋಗದಂತೆ ನಾವು ನೋಡಬೇಕಾಗಿದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಇನ್ನು ಕೆಲವೊಂದು ಬೇಚರಾಕ್ ಗ್ರಾಮಗಳು ನಮ್ಮ ಮತದಲ್ಲಿ ಕ್ಷೇತ್ರದಲ್ಲಿದೆ. ನಮ್ಮ ಸವಳೂರು ಕ್ಷೇತ್ರದಲ್ಲಿ ಮಾರುತಿಪುರ ಎಂಬ ಗ್ರಾಮ ಯಲಂಗಿ ಗ್ರಾಮದಲ್ಲಿ ಬರುತ್ತದೆ. ಜಿಲ್ಲಾಧಿಕಾರಿಗಳ ಮುಖಾಂತರ ಅರ್ಜಿ ಕಳುಹಿಸಿದ್ದೇವೆ. ಇಂಥ ಬೇಚರಾಕ್ ಗ್ರಾಮಗಳನ್ನು ಕಂದಾಯ ಗ್ರಾಮ ಎಂದು ಘೋಷಿಸಿದರೆ ಬಹಳ ಅನುಕೂಲ

ವಾಗುತ್ತದೆ. ಅದರ ಜೊತೆಗೆ ಬಂಕಾಪುರ ಎಂಬುದು ನನ್ನ ಕ್ಷೇತ್ರದಲ್ಲಿರತಕ್ಕ ಗ್ರಾಮ. ಅಂಕದಕಣ, ಶಹಬಜಾರ್, ಕೊಟ್ಟಿಗೇರಿ ಈ ಮೂರು ಹಳ್ಳಿಗಳನ್ನು ಒಂದೇ ಮಾಡಿ ಬಂಕಾಪುರ ಎಂದು ಕಂದಾಯ ಗ್ರಾಮವಾಗಿ ಘೋಷಣೆ ಮಾಡಿ ರೆವಿನ್ಯೂ ಹುಕುಂ ಅನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ಹಕ್ಕಿನ ಪತ್ರದಲ್ಲಿ ಭೂಸುಧಾರಣ ಕಾನೂನು ಪ್ರಕಾರ ಇರಬೇಕಾದ ಎಂಟ್ರಿಗಳು ಇಲ್ಲದೆ ಪೋಕಳ ಎಂಟ್ರಿಗಳು ಸಾಕಷ್ಟು ಇವೆ. ಇಡೀ ರಾಜ್ಯದಲ್ಲಿ ಪೋಕಳ ಎಂಟ್ರಿಗಳನ್ನು ಕಡಿಮೆ ಮಾಡುವುದಕ್ಕೆ ಕಾನೂನು ಚೌಕಟ್ಟಿನಲ್ಲಿ ಯಾವುದೇ ಆಧಾರಗಳು ಇರುವುದಿಲ್ಲ. ಪೋಕಳ ಎಂಟ್ರಿ ಇದ್ದವರು ಜಮೀನು ಸಾಗು ಮಾಡಿರುವುದಿಲ್ಲ. ಭೂಸುಧಾರಣ ಕಾನೂನಿನ ಸೆಕ್ಷನ್ ೪೮ (ಎ) ಪ್ರಕಾರ ಅವರು ಭೂನ್ಯಾಯ ಮಂಡಲಿಗಳಿಗೆ ಫಾರಂ ನಂ ೭ ರಲ್ಲಿ ಹಕ್ಕನ್ನು ಪಡೆಯುವುದಕ್ಕೆ ಅರ್ಜಿ ಕಳುಹಿಸಿರುವುದಿಲ್ಲ. ಆ ಕಾರಣ ಪೋಕಳ ಎಂಟ್ರಿ ಇರುವುದನ್ನು ಸರ್ಕಾರ ನೋಡಿ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಯಾವ ಜಮೀನುಗಳು ಮಾಲೀಕರ ಕಕ್ಷೆಯಲ್ಲಿ ಇರುವುವೋ ಅವು, ಮತ್ತು ಅನಧಿಕೃತವಾಗಿ ಯಾವ ಪೋಕಳ ಎಂಟ್ರಿಯಾಗಿರುವುವೋ ಅವನ್ನು ತೆಗೆಯತಕ್ಕ ಒಂದು ಕಾನೂನನ್ನು ಮಾಡಿಕೊಡಬೇಕಾಗಿ ಮಾನ್ಯ ಸಚಿವರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಜಿಲ್ಲೆಗಳನ್ನು ರೀ-ಆರ್ಗನೈಸೇಷನ್ ಮಾಡತಕ್ಕ ಸಂದರ್ಭ ಇದೆ. ಅಂಥ ಪ್ರಸಂಗದಲ್ಲಿ ನಮ್ಮ ಧಾರವಾಡ ಜಿಲ್ಲೆಯಲ್ಲಿ ಹಾವೇರಿ ಬಹಳ ಪ್ರಮುಖ ಸ್ಥಳ ಅದನ್ನು. ಹುಂಡೇಕರ್ ಸಮಿತಿಯವರು ಜಿಲ್ಲೆಯಾಗುವುದಕ್ಕೆ ಉತ್ತಮವಾದ ಸ್ಥಳವಾಗಿದೆ ಎಂದು ಈಗಾಗಲೇ ಶಿಫಾರಸ್ಸು ಮಾಡಿದ್ದಾರೆ. ಆದುದರಿಂದ ಜಿಲ್ಲಾ ವಿಂಗಡಣೆ ಮಾಡತಕ್ಕ ಪ್ರಸಂಗದಲ್ಲಿ ಈ ಹಾವೇರಿಯನ್ನು ಜಿಲ್ಲಾ ಕೇಂದ್ರವಾಗಿ ಮಾರ್ಪಾಡು ಮಾಡಬೇಕೆಂದು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಪ್ರೊ॥ ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ).—

ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಇಲ್ಲಿಯವರೆಗೆ ಹಲವಾರು ಜನ ಸ್ನೇಹಿತರು ಮಾತನಾಡಿದ್ದಾರೆ. ಈ ಇಲಾಖೆಯನ್ನು ಮಾತೃ ಇಲಾಖೆ, ಮಾತೃ ಸಂಸ್ಥೆ ಎಂಬ ಪದಗಳಿಂದ ವರ್ಣಿಸುವುದಕ್ಕೆ ಮಾನ್ಯ ಸದಸ್ಯರು ಪ್ರಯತ್ನಪಡುತ್ತಿದ್ದರು. ನಾನು ಬೇಡಿಕೆ ಸಂಖ್ಯೆ ೫೦ ಅನ್ನು ಪೂರ್ಣವಾಗಿ ವಿರೋಧ ಮಾಡುವುದಕ್ಕೆ ಕಾರಣ ಇದೇ ಆಗಿದೆ. ನನ್ನ ಮೊದಲನೇ ಒತ್ತಾಯ ಈ ಇಲಾಖೆಯ ಹೆಸರು ಬದಲಾಗಬೇಕು. ಕಂದಾಯ ಮಂತ್ರಿಗಳ ಹೆಸರನ್ನೂ ಸಹ ಬದಲಾಯಿಸಬೇಕು. ಭೂ ಕಂದಾಯ ಈ ದೇಶದಲ್ಲಿ ಉಳಿದಿರುವುದು ಬ್ರಿಟೀಷರ ಒಂದು ಪಳೆಯುಳಿಕೆಯಾಗಿ ಭೂ ಕಂದಾಯವನ್ನು ಸಂಸ್ಥೀಕರಣ ಮಾಡಿದರು ಬ್ರಿಟಿಷರು. ಅದನ್ನು ಮಾಡುವುದಕ್ಕೆ ಹಿಂದೆ ಇದ್ದ ಉದ್ದೇಶ ಅವರ ಪ್ರಭುತ್ವವನ್ನು ನಮ್ಮ ಜನಗಳ ತಲೆಯ ಮೇಲೆ ಮತ್ತಿ ಹಿಡಿಯುವ ಒಂದು ಏಕೈಕ ಉದ್ದೇಶ. ಈ ಹೆಸರನ್ನು ಬದಲಾಯಿಸದೇ ಹೋದರೆ ಕೇವಲ ಬ್ರಿಟೀಷರು ನಮ್ಮ ದೇಶ ಬಿಟ್ಟು ಆಚೆ ಹೋದರು. ಅವರ ಪರವಾಗಿ ಕಂದಾಯ ಮಂತ್ರಿಗಳನ್ನು ನಮ್ಮ ತಲೆ ಮೇಲೆ ಬಿಟ್ಟಿದ್ದಾರೆ ಎಂಬ ಅರ್ಥ ಬರುತ್ತದೆ. ತಾವು ಇಂಗ್ಲೆಂಡಿಗೆ ಹೋಗಿ ನೋಡಬೇಕು. ಭೂ ಕಂದಾಯ ಪದ್ಧತಿ ಅಲ್ಲಿ ಉಂಟಾ ಎಂದು ನೋಡಬೇಕು. ಬ್ರಿಟೀಷರ ಸಾಮ್ರಾಜ್ಯ ಶಾಹಿ, ವಸಾಹತುಶಾಹಿ ಪಳೆಯುಳಿಕೆಯನ್ನು ನಾವು ಉಳಿಸಿಕೊಂಡು ಹೋಗುತ್ತಿದ್ದೇವೆ. ಯಾವುದೇ ದೃಷ್ಟಿಯಿಂದ ಭೂ ಕಂದಾಯ ಇರಬಾರದು. ಭೂ ಕಂದಾಯ ರದ್ದಾಗಬೇಕು. ಇದರ ಜೊತೆಗೆ ಅದನ್ನು ವಸೂಲಿ ಮಾಡುವುದಕ್ಕೆ ಇಟ್ಟುಕೊಂಡಿರತಕ್ಕ ಒಂದು ವಿಚಿತ್ರ ಅಧಿಕಾರಿಗಳಾದ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಸೀಲ್ದಾರ, ಈಗ ಅವರಿಗೊಬ್ಬ ಮರಿ, ತಲಾಟಿ, ಈ ಒಂದು ಪೀಳಿಗೆ ಭೂ ಕಂದಾಯದ ಜೊತೆಗೇ ರದ್ದಾಗಬೇಕು. ಅದಕ್ಕೆ ನಾನು ಕಾರಣಗಳನ್ನು ಹೇಳುತ್ತೇನೆ. ಏತಕ್ಕೆ ಇಂಗ್ಲೆಂಡಿನಲ್ಲಿ ಭೂ ಕಂದಾಯ ಇಲ್ಲ ಎಂದು ಅವರು ನಮಗಿಂತ ವಿವೇಕಿಗಳು, ಭೂಮಿ ಒಂದು ಉತ್ಪಾದನಾ ಸಾಧನ Land is a means of production. ಅದಕ್ಕೆ ಪ್ರತಿ ವರ್ಷ ಯಾರೂ ತೆರಿಗೆ ಹಾಕುವುದಿಲ್ಲ, ಯಾವುದೇ ವಿವೇಕ ಇರುವ ದೇಶ ನಮ್ಮಲ್ಲಿ ವ್ಯವಸಾಯ ಕ್ಷೇತ್ರ ಬಿಟ್ಟು ಬೇರೆ ಕ್ಷೇತ್ರದಲ್ಲಿ ತಾವೇ ಯೋಚನೆ ಮಾಡಿ, Whether we are taxing the means of production every year ? No. ಏತಕ್ಕೆ ಈ ಆಲೋಚನೆ ಮಾಡದೆ ಭೂ ಕಂದಾಯವನ್ನು ಮುಂದುವರೆಸುತ್ತಿದ್ದೀರಿ ? ಆಯಿತು. ನಾವು ಸ್ವಾತಂತ್ರ್ಯ ಬಂದಾಗಿನಿಂದ ಇದನ್ನು ಒತ್ತಾಯ ಮಾಡುತ್ತಲೇ ಬಂದೆವು. ಈ ಸದನದಲ್ಲೂ ಕೂಡ ಹಲವಾರು ಸಾರಿ ಚರ್ಚೆಯಾಗಿದೆ. ೧೯೩೭ ನೇ ಇಸವಿಯಿಂದ ಭೂ ಕಂದಾಯ ಬ್ರಿಟೀಷರ ಪಳೆಯುಳಿಕೆ, ಇದು ರದ್ದಾಗಬೇಕು ಎಂದು ಚರ್ಚೆಯಾಗಿದೆ. ಆದರೂ ಮಾಡಲಿಲ್ಲ. ೧೯೮೦ ರಲ್ಲಿ ನಾವು ಚಳುವಳಿ ಪ್ರಾರಂಭ ಮಾಡಿದ ಮೇಲೆ ಯಾವುದೋ ಒಂದು ಸರ್ಕಾರ ೧೦ ಎಕರೆಗಿಂತ ಕೆಳಗಿರುವ ಖುಷ್ಕಿ ಭೂಮಿಗೆ ಭೂ ಕಂದಾಯ ರದ್ದು ಎಂದು ಹೇಳಿತು. ಏನು ಕಾರಣ ? ೧೦ ಎಕರೆಗಿಂತ ಕೆಳಗಿರುವುದಕ್ಕೆ ಮಾತ್ರ ರದ್ದು

ಮಾಡಿ ಮುಂದುವರಿಸುವುದಕ್ಕೆ ಏತಕ್ಕಿಲ್ಲ ? ಇದಕ್ಕೆ ಏನಾದರೂ ಒಂದು ವೈಜ್ಞಾನಿಕ ತಳಹದಿ ಇರಬೇಕಲ್ಲ ರದ್ದು ಮಾಡುವುದಕ್ಕೆ ಅಥವಾ ಜಾರಿಗೆ ತರುವುದಕ್ಕೆ ? ಯಾವುದೇ ವೈಜ್ಞಾನಿಕವಾಗಿ ವಿಚಾರ ಮಾಡದೆ ನಾವು ಕೆಲಸ ಮಾಡುತ್ತಿದ್ದೇವೆ. ಈ ಕೂಡಲೇ ಉತ್ಪಾದನಾ ಸಾಧನವಾದಂಥ ಭೂಮಿಯ ಮೇಲೆ ಹಾಕಿರುವ ಕಂದಾಯವನ್ನು ಸರ್ಕಾರ ರದ್ದು ಮಾಡಬೇಕು ಇಲ್ಲವೇ ಈ ಸರ್ಕಾರ ನಡೆಸುತ್ತಾ ಇರುವವರು ಬ್ರಿಟೀಷರ ದತ್ತು ಪುತ್ರರು ಎಂದು ನಾವು ಕರೆಯಬೇಕಾಗುತ್ತದೆ. ಇನ್ನೊಂದು ಕಾರಣ ಇದೆ. ಹೋಗಲಿ. ಸೈದ್ಧಾಂತಿಕವಾಗಿ ರದ್ದುಮಾಡುವುದಕ್ಕೆ ನಿಮಗೆ ಇಷ್ಟ ಇಲ್ಲ ಎಂದರೆ ಭೂ ಕಂದಾಯ ಎಷ್ಟು ವಸೂಲು ಮಾಡುತ್ತೇವೆಂದು ಹೇಳಿದ್ದೀರಿ ಅದಕ್ಕಿಂತ ವಸೂಲಿ ಮಾಡುವುದಕ್ಕೆ ೭ ಕೋಟಿ ರೂಪಾಯಿ ಜಾಸ್ತಿ ಖರ್ಚು ಮಾಡುತ್ತಿದ್ದೀರಿ.

ತಮ್ಮ ಆಯವ್ಯಯದಲ್ಲಿ ೧೬ ಕೋಟಿ ರೂಪಾಯಿಗಳನ್ನು ಭೂಕಂದಾಯವನ್ನು ವಸೂಲು ಮಾಡುವಂತಹ ಆಸೆಯನ್ನು ಇಟ್ಟುಕೊಂಡಿದ್ದೀರಿ. ಆದರೆ ಹಿಂದೆ ಯಾವ ವರ್ಷದಲ್ಲೂ ನೀವು ಮಾಡಲಿಲ್ಲ. ೧೬ ಕೋಟಿ ರೂಪಾಯಿಗಳ ಭೂಕಂದಾಯವನ್ನು ಈ ಹಿಂದೆ ಇದ್ದಂತಹವರು ವಸೂಲು ಮಾಡುತ್ತೇವೆಂದು ಆಸೆ ಇಟ್ಟುಕೊಂಡಿದ್ದರು, ಆದರೆ ಅವರು ಪ್ರತಿವರ್ಷ ೪ ಕೋಟಿ ರೂಪಾಯಿಗಳನ್ನೋ ಅಥವಾ ೫ ಕೋಟಿ ರೂಪಾಯಿಗಳನ್ನೋ ವಸೂಲಿ ಮಾಡಿರಬೇಕು. ಆದರೆ ವಸೂಲಿ ಖರ್ಚು ೨೩ ಕೋಟಿ ರೂಪಾಯಿಗಳು ಈ ಸಾರಿಯ ಆಯವ್ಯಯದಲ್ಲಿ ವಸೂಲು ಮಾಡುತ್ತೇವೆಂದು ಹೇಳುವುದು ೧೬ ಕೋಟಿ ರೂಪಾಯಿಗಳ ಭೂ ಕಂದಾಯ ವಸೂಲಿ ವೆಚ್ಚ ೨೩ ಕೋಟಿ ರೂಪಾಯಿಗಳು. ಇದನ್ನು ಯಾವುದೇ ವಿವೇಕ ಇರತಕ್ಕ ಸರ್ಕಾರ ಮಾಡುವಂತಹ ಕೆಲಸ ಅಲ್ಲ. ಇಂತಹ ಅವಿವೇಕದ ಕೆಲಸ ನಮ್ಮ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ೪ ವರ್ಷಗಳ ಹಿಂದೆ ನಡೆಯುತ್ತಿತ್ತು. ೧೬ ಕೋಟಿ ರೂಪಾಯಿಗಳ ಭೂ ಕಂದಾಯವನ್ನು ವಸೂಲು ಮಾಡುವುದಕ್ಕೆ ಆಂಧ್ರಪ್ರದೇಶದ ಸರ್ಕಾರ ೨೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿತ್ತು. ಇದು ಗೊತ್ತಾದ ಕೂಡಲೇ ಆಂಧ್ರಪ್ರದೇಶದ ಸರ್ಕಾರ ೪ ವರ್ಷಗಳ ಹಿಂದೆಯೇ ಭೂ ಕಂದಾಯವನ್ನು ರದ್ದು ಮಾಡಿತು. ಅಂತಹ ಒಂದು ಕೆಲಸವನ್ನು ದಯಮಾಡಿ ನೀವು ಕಂದಾಯ ಮಂತ್ರಿಗಳಾಗಿ ಈಗಲಾದರೂ ಮಾಡಬೇಕು. ವೈಚಾರಿಕವಾಗಿ ರದ್ದು ಮಾಡುವುದಕ್ಕೆ ಇಷ್ಟವಿಲ್ಲದಿದ್ದರೂ atleast for practical reasons, abolish land revenue and save Rs. 7 Crores. ಇದನ್ನು ಹೇಳುವುದಕ್ಕೆ ಇಷ್ಟ ಇರಲಿಲ್ಲ. ಆದರೆ ಇವತ್ತು ಮಧ್ಯಾಹ್ನ ಹಿರಿಯ ಸಮಾಜವಾದಿಗಳಲ್ಲೊಬ್ಬರಾದ ಅನಂತಕೃಷ್ಣರವರು ಮಾತನಾಡುತ್ತಿದ್ದರು. ನನಗೆ ಅನುಮಾನ ಇತ್ತು. ಇದು ಸಮಾಜವಾದಿ ರಾಷ್ಟ್ರ ಹೌದೋ ಅಥವಾ ಇಲ್ಲವೋ ಅಂತ. ಆದರೆ ಅವರ ಮಾತನ್ನು ಕೇಳಿದ ಮೇಲೆ ಜ್ಞಾಪಕಕ್ಕೆ ಬಂತು. ೧೯೭೫ರಲ್ಲಿ ನಾವು ಅವಸರ ಅವಸರವಾಗಿ ತುರ್ತು ಪರಿಸ್ಥಿತಿ ಇದ್ದಾಗ ಸಮಾಜವಾದಿ ಗಣರಾಜ್ಯವಾದವು. ನೀವು ಸಮಾಜವಾದದ ಬಗ್ಗೆ ಮಾತನಾಡುವುದಾದರೆ, ನೀವು ಸಮಾಜವಾದಿಗಳು ಅಂತ ಹೇಳಿಕೊಳ್ಳುವುದಾದರೆ, ಮೊದಲು ಈ ವಸಾಹತುಶಾಹಿ ಪಳೆಯುಳಿಕೆ ಏನು ಇದೆ ಅದನ್ನು ಕಿತ್ತು ಬಿಸಾಡಬೇಕು. ಭೂ ಕಂದಾಯ ರದ್ದು ಮಾಡಬೇಕು. ಆದರ ಜೊತೆಗೆ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಮತ್ತು ತಹಸೀಲ್ದಾರ್–ಬ್ರಿಟಿಷರ ದತ್ತು ಪುತ್ರರ ರೀತಿಯಲ್ಲಿ ಇದ್ದಾರೆ. ನಾವು ಸಂವಿಧಾನವನ್ನೇ ಮರೆತು ಈ ಹುದ್ದೆಗಳನ್ನು ಮುಂದುವರಿಸಿದ್ದೇವೆ. ಆರ್ಟಿಕಲ್ ೫೦ ಭಾರತದ ಸಂವಿಧಾನ ತೆಗೆದು ನೋಡಿರಿ. ಅಲ್ಲಿ ಏನು ಹೇಳಿದ್ದೇವೆ :—

"Separation of judiciary from the Executive"

ಎಂದು ಮಾತನಾಡಿದ್ದೇವೆ. ೧೯೪೯ ನವೆಂಬರ್ ೨೬ರಂದು ನಮ್ಮ ಸಂವಿಧಾನವನ್ನು ಒಪ್ಪಿದ್ದೇವೆ. ಆದರೆ ನಾವು ಆಲೋಚನೆ ಮಾಡದೆ, ಈ ವಿಚಿತ್ರವಾದ ಅಧಿಕಾರ ಇರುವ ಈ ಅಧಿಕಾರಿಗಳನ್ನು ಮುಂದುವರಿಸಿಕೊಂಡು ಬರುತ್ತಿದ್ದೇವೆ. The so called Executive Magistrates ಇಂತಹ ಎಗ್ಸಿಕ್ಯೂಟೀವ್ ಮ್ಯಾಜಿಸ್ಟ್ರೇಟ್ ಬೇರೆ ಯಾವುದೇ ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿಲ್ಲ. ನಮ್ಮದು ಪ್ರಜಾಪ್ರಭುತ್ವ ದೇಶ. ನಮ್ಮದು ಗಣರಾಜ್ಯ ಎನ್ನುವುದಾದರೆ, ಕನಿಷ್ಟ ಕರ್ನಾಟಕದಲ್ಲಿ ತಾವು ಮಾಡಬೇಕಾದದ್ದು separation of judiciary from the Executive. Abolish the post of the Deputy Commissioner, Abolish the Post of Asst. Commissioner, Abolish the post of the Tashildar and of course when once you abolish the land revenue, the tiny minious like Talathi will also become unnecessary. ಈಗ ಆ ಕಾಲ ಕರ್ನಾಟಕದಲ್ಲಿ ಬಂದಿದೆ. ನಿಮಗೊಂದು ಒಳ್ಳೆಯ ಅವಕಾಶ ಸಿಕ್ಕಿದೆ. ಏಕೆಂದರೆ ಪಟ್ಟಾ ಪುಸ್ತಕವನ್ನು ಹಂಚುತ್ತೇವೆಂದು ಹೇಳಿದ್ದೀರಿ. ಈ ಪಟ್ಟಾ ಪುಸ್ತಕವನ್ನು ಹಂಚಿದ ಮೇಲೆ ತಲಾಟಿ ಬೇಕಾಗಿಲ್ಲ. ತಹಸೀಲ್ದಾರನೂ

ಬೇಕಾಗಿಲ್ಲ. ಉಪ ವಿಭಾಗಾಧಿಕಾರಿನೂ ಬೇಕಾಗಿಲ್ಲ. ಜಿಲ್ಲಾಧಿಕಾರಿನೂ ಬೇಕಾಗಿಲ್ಲ. ನಿಮ್ಮ ಇಲಾಖೆಗೆ ಈ ಹೆಸರೂ ಬೇಕಾಗಿಲ್ಲ. ಈ ಹೆಸರನ್ನು ಬದಲಾಯಿಸಬೇಕು. ಭೂಮಿ ಇಲಾಖೆ ಎಂದು ಕರೆಯಿರಿ ಬೇಕಾದರೆ. ಕಂದಾಯ ಇಲಾಖೆ ಎಂದು ಮಾತ್ರ ಕರೆಯಬೇಡಿ. ನೀವು ಮಿನಿಸ್ಟರ್. ನೀವು ಇದನ್ನು ಮಾಡದಿದ್ದರೆ, ನೀವು ಕೃಷ್ಣಗೌಡರೋ ಅಥವಾ ಲಾರ್ಡ್ ಕಿಚನರ್ ಕೊ ಎಂಬ ಅನುಮಾನ ನಮಗೆ ಬರುತ್ತದೆ. ಆ ಕಾರಣ ಇದನ್ನು ಈ ಕರ್ನಾಟಕ ಸರ್ಕಾರ ಮೊದಲು ಮಾಡಬೇಕು. ಕಂದಾಯ ಇಲಾಖೆಯ ಹೆಸರನ್ನು ಬದಲಾವಣೆ ಮಾಡಬೇಕು. ಭೂ-ಕಂದಾಯ ರದ್ದಾಗಬೇಕು. ಈ ವಿಚಿತ್ರ ಅಧಿಕಾರಿಗಳು who are exercising both executive and judicial powers. This peculiar tribe of Officers should be abolished. ಇದು ಮೊದಲು ಮಾಡಬೇಕು. ಇದರ ಜೊತೆಗೆ ಮತ್ತೊಂದು ತಮ್ಮ ಡಿಮ್ಯಾಂಡ್ ಎಂದರೆ ೫೧ನೇ ನಂಬರ್‌ನ ಡಿಮ್ಯಾಂಡ್. ಸ್ಟ್ಯಾಂಪ್ಸ್ ಮತ್ತು ನೋಂದಣಿ.

೬-೧೫ ಪಿ. ಎಂ.

ನಾವು ರೈತರು ಏನು ಹೇಳುತ್ತೇವೆ ಆ ಬದಲಾವಣೆಗಳನ್ನು ಮಾಡದೇ ಹೋದರೆ, ನಾವು ಇದನ್ನು ಸಂಪೂರ್ಣ ವಿರೋಧ ಮಾಡಬೇಕಾಗುತ್ತದೆ. ನಮ್ಮ ಸಮಾಜವಾದಿ ಗೆಳೆಯರು ಸ್ಟ್ಯಾಂಪ್ ಶುಲ್ಕದ ಬಗ್ಗೆ ಮಾತನಾಡಿದರು. ಸ್ಟ್ಯಾಂಪ್ ಶುಲ್ಕ ನಗರದಲ್ಲಿ ಯಾವ ರೀತಿ ನಿಗದಿ ಮಾಡಿದ್ದೀರಿ, ಅದೇ ಹಳ್ಳಿಗಳಲ್ಲಿ ಯಾವ ರೀತಿ ನಿಗದಿ ಮಾಡಿದ್ದೀರಿ ಎಂಬುದನ್ನು ನೋಡಬೇಕು. ಈ ತಾರತಮ್ಯ ನೀತಿಯನ್ನು ಯಾವತ್ತು ನಿಲ್ಲಿಸುತ್ತೀರೆಂಬುದನ್ನು ಹೇಳಬೇಕು. ಮತ್ತೆ ಭೂಮಿ ಮೇಲೆ ತೆರಿಗೆ ಹಾಕಲೇಬೇಕು ಮತ್ತು ಅದು ಮುಖ್ಯವಾದ ಆದಾಯ ಎಂದಾದರೆ because basically it is a means of production and means of production should not be taxed. ನಿಮಗೆ ಕಂದಾಯ ಬೇಕು ಎಂದರೆ, ಏತಕ್ಕೆ ಈ ರೀತಿ ತಾರತಮ್ಯವನ್ನು ಮಾಡುತ್ತಿದ್ದೀರಿ. ನಗರದಲ್ಲಿ ಇರುವವರಿಗೆ, ಹಾಗೂ ಗ್ರಾಮದಲ್ಲಿ ಇರುವವರಿಗೆ, ಈ ಸ್ಟ್ಯಾಂಪ್ ಶುಲ್ಕದಲ್ಲಿ ಇರತಕ್ಕ ತಾರತಮ್ಯವನ್ನು ತೆಗೆದುಹಾಕಬೇಕು. ನಗರದಲ್ಲಿ ೪ ಲಕ್ಷ ರೂಪಾಯಿಯ ಒಂದು ಬಸ್ಸನ್ನು ಹಸ್ತಾಂತರ ಮಾಡಬೇಕಾದರೆ ಎಷ್ಟು ತೆರಿಗೆಯನ್ನು ಕೊಡುತ್ತಾರೆ ? ಅದೇ ನಾನು ಹತ್ತು ಸಾವಿರ ರೂಪಾಯಿ ಬೆಲೆಯ ಒಂದು ಎಕರೆ ಹೊಲವನ್ನು ಹಸ್ತಾಂತರ ಮಾಡಬೇಕಾದರೆ ೧೩೦೦ ರೂಪಾಯಿ ಸ್ಟ್ಯಾಂಪ್ ಶುಲ್ಕ ಕೊಡಬೇಕು. ಈ ರೀತಿಯ ತಾರತಮ್ಯವನ್ನು ಕೂಡಲೇ ತೆಗೆದು ಹಾಕಬೇಕು. ಪ್ರಾಪರ್ಟಿ ಟ್ಯಾಕ್ಸ್ ಹಾಕುವುದಕ್ಕೆ ವೈಜ್ಞಾನಿಕವಾಗಿ ಆಲೋಚನೆ ಮಾಡಿ ಹೊಸ ವಿಧಾನವನ್ನು ತಾವು ರೂಪಿಸಬೇಕು. ಈ ರೀತಿ ತಾರತಮ್ಯವನ್ನು ಹೋಗಲಾಡಿಸದಿದ್ದರೆ ನೀವು ರೈತರ ವಿರೋಧಿ ಎಂಬ ಹೆಸರನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಇದನ್ನು ಬದಲಾವಣೆ ಮಾಡಿರಿ. ಇದೇ ಸದಸ್ಯರು ನೋಂದಣಿ ವಿಚಾರ ಮಾತನಾಡುತ್ತಿದ್ದರು. ಇದರಿಂದ ನೂರು ಕೋಟಿ ರೂಪಾಯಿ ಬರುತ್ತದೆಂದು ಶ್ರೀ ಅನಂತಕೃಷ್ಣರವರು ಹೇಳಿ, ಇದಕ್ಕೆ ೬ ಕೋಟಿ ರೂಪಾಯಿ ಖರ್ಚಾಗುತ್ತದೆಂದು ಹೇಳಿದರು. ನೋಂದಣಿ ಮಾಡುವ ಸಿಬ್ಬಂದಿಗೆ ಸಂಬಳದ ಜೊತೆಗೆ ಗಿಂಬಳ ಇದೆ. ಅದು ನಷ್ಟವಾಗುತ್ತಿದೆಯೆಂದು ಹೇಳಿದರು, ಆದರೆ ನಮ್ಮ ಸ್ನೇಹಿತರು ಅದಕ್ಕೆ ಪರಿಹಾರ ಸೂಚಿಸಲಿಲ್ಲ. ಇದನ್ನು ಅನುಭವಿಸುವವರು ನಾವು. ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋದರೆ ಇದನ್ನು ಅನುಭವಿಸುವವರು ನಾವು. ದಯಮಾಡಿ ಈ ಸಬ್ ರಿಜಿಸ್ಟ್ರಾರಿಂದ ಆಗತಕ್ಕ ಕಿರುಕುಳದಿಂದ ನಮ್ಮನ್ನು ತಪ್ಪಿಸಬೇಕೆಂಬ ಆಸೆ ತಮಗೆ ಇದ್ದರೆ ನಾವು ಒಂದು ಸಲಹೆಯನ್ನು ಮಾಡುತ್ತೇನೆ. ವ್ಯಾಲ್ಯೂಯೇಷನ್ ರಿಜಿಸ್ಟರ್ಸ್ ರದ್ದು ಮಾಡಿ ಏಕೆಂದರೆ it gives the Sub-Registrars a vast area of discretion. ಆ ಡಿಸ್‌ಕ್ರೀಷನ್ ಏನು ಇದೆ ಅದನ್ನು ತೆಗೆದುಹಾಕಬೇಕು. ನಾನು ಸಲಹೆ ಮಾಡುತ್ತಿರುವುದೇನೆಂದರೆ, ತರಿ ಭೂಮಿಗೆ ಒಂದು ಫ್ಲಾಟ್‌ರೇಟ್, ಸ್ಟ್ಯಾಂಪ್ ಶುಲ್ಕ ಖುಷ್ಕಿ ಭೂಮಿಗೆ ಒಂದು ಫ್ಲಾಟ್‌ರೇಟ್ ಹಾಗೂ ಬಾಗಾಯಿತ್‌ಗೆ ಒಂದು ಫ್ಲಾಟ ರೇಟ್ ಮಾಡಿ ನೋಡೋಣ. ಸಬ್‌ರಿಜಿಸ್ಟ್ರಾರ್‌ರವರು ಆಗ ಯಾರಲ್ಲಿ ಲಂಚ ಕೇಳುತ್ತಾರೆ. ಕೇಳಿದಾಗ ಅವರಿಗೆ ಲಂಚ ಸಿಕ್ಕುತ್ತದೆಯೋ, ಕಪಾಳಕ್ಕೆ ಮೋಕ್ಷ ಸಿಗುತ್ತದೆಯೋ ಎಂಬುದನ್ನು ನಾವು ನೋಡಿಕೊಳ್ಳುತ್ತೇವೆ. ಇಷ್ಟು ಕೆಲಸ ನೀವು ಮಾಡಿ ಈ ಸಣ್ಣ ಸಣ್ಣ ಸುಧಾರಣೆಗಳನ್ನು ನೀವು ಮಾಡಿ. ಮಾನ್ಯ ಸಭಾಧ್ಯಕ್ಷರು, ನನ್ನನ್ನು ನೀವು ವಿರೋಧ ಪಕ್ಷದವರು ಚಹಕ್ಕೆ ಬರಲಿಲ್ಲವೆಂದು ಹೇಳಿದಾಗ ನಾನು ಅವರಿಗೆ ನನ್ನನ್ನು ವಿರೋಧಪಕ್ಷದವನೆಂದು ಕರೆಯಬೇಡಿ. ನಾನು ಕರ್ನಾಟಕದ ಜನತೆಯ ಪರವಾಗಿ ಕೆಲಸ ಮಾಡತಕ್ಕವನು, ನಾನು ವಿರೋಧಪಕ್ಷದವನಲ್ಲವೆಂದು ಹೇಳಿದೆ. ಆ ಒಂದು ಸ್ಪಿರಿಟ್‌ನಲ್ಲಿ I am giving that suggestion. Kindly fix a flat rate of for stamp fee for irrigated land, a flat rate for dry land.

and a flat rate for garden land, ಆಗ ಈ ಒಂದು ಭ್ರಷ್ಟಾಚಾರವನ್ನು ನಾವು ಒಂದೇ ಸಲ ನಿರ್ಮೂಲನ ಮಾಡಬಹುದು. ಈ ಕೆಲಸವನ್ನು ತಾವು ದಯವಿಟ್ಟು ಮಾಡಿ.

ಶ್ರೀ ಬಿ. ಪುಟ್ಟಸ್ವಾಮಿ ಗೌಡ.—ನಿಮ್ಮಿಂದ ಒಂದು ಸ್ಪಷ್ಟೀಕರಣವನ್ನು ನಿರೀಕ್ಷಣೆ ಮಾಡುತ್ತೇನೆ. ನೀವು ಭೂ ಕಂದಾಯವನ್ನು ರದ್ದು ಮಾಡಬೇಕೆಂದು ಹೇಳಿದಿರಿ. ಭೂಮಿ ಉತ್ಪಾದನೆ ಮಾಡತಕ್ಕ ಒಂದು ಮೂಲ. ಇದರ ಮೇಲೆ ನಾಗರೀಕ ಸರ್ಕಾರ ತೆರಿಗೆ ವಿಧಿಸುವುದು ಸಾಧುವಲ್ಲ ಎಂದು ತಾವು ಹೇಳಿದಿರಿ. ಭೂ ಕಂದಾಯದಿಂದ ಸರ್ಕಾರಕ್ಕೆ ಉತ್ಪತ್ತಿ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ವಿದೇಶದಲ್ಲಿರುವ ಒಂದು ವ್ಯವಸ್ಥೆಯ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಭೂಮಿ ಮೇಲೆ ಹಕ್ಕು ಬರಬೇಕಾದರೆ ಪ್ರಾಪರ್ಟಿ ರೈಟ್ ಬರಬೇಕಾದರೆ. ತೆರಿಗೆ ಇಲ್ಲದಿದ್ದರೆ ಈ ಪ್ರಾಪರ್ಟಿ ರೈಟ್ ಸಾಮಾನ್ಯವಾಗಿ ಬರುವುದಿಲ್ಲವೆಂಬುದು ನನ್ನ ಅನಿಸಿಕೆಯಾಗಿದೆ. ಅದಕ್ಕೆ ಏನಾದರೂ ವಿವರಣೆಯನ್ನು ತಾವು ಕೊಡುತ್ತೀರಾ ?

ಪ್ರೊ. ಎಂ. ಡಿ. ನಂಜುಂಡಸ್ವಾಮಿ:—ನಾನು ಒಬ್ಬ ರೈತ ಆದರೂ ನನ್ನ ಹತ್ತಿರ ಒಂದು ಕಾರು ಇದೆ. ಅದಕ್ಕೆ ರಿಜಿಸ್ಟ್ರೇಷನ್ ಬುಕ್ ಅಂತ ಇದೆ. ನಮ್ಮ ಕಂದಾಯ ಮಂತ್ರಿಗಳು ಆಗಲೇ ಪ್ರಕಟಣೆ ಮಾಡಿದ್ದಾರೆ. ಪಟ್ಟಾ ಪುಸ್ತಕಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಪಟ್ಟಾ ಪುಸ್ತಕಗನ್ನು ಹಿಂದಿನ ಸರ್ಕಾರ ಕೂಡ ಅಚ್ಚು ಹಾಕಿಸಿದ್ದರು. ಚುನಾವಣೆಯ ಆಶ್ವಾಸನೆಯನ್ನು ಕೂಡ ಕೊಟ್ಟಿದ್ದರು. ಆ ಆಶ್ವಾಸನೆ ಪ್ರಕಾರ ಅದನ್ನು ಜಾರಿಗೆ ತರಲಿಲ್ಲ. ಅವರು ಈ ಪಟ್ಟಾ ಪುಸ್ತಕವನ್ನು ಯಾರಿಗೆ ಕೊಟ್ಟರೆಂದರೆ ನಮ್ಮ ಸಂಘದ ಅಧ್ಯಕ್ಷರಿಗೆ ಮಾತ್ರ ನನಗೆ ಕೊಟ್ಟರು. ರೈತರಿಗೆ ಕೊಡಲಿಲ್ಲ. ನನಗೆ ಕೊಟ್ಟ ಪುಸ್ತಕವನ್ನು ನನ್ನ ಮನೆಯಲ್ಲಿ ಇಟ್ಟಿದ್ದೇನೆ. ಶ್ರೀ ವಸಂತರಾವ್ ಪಾಟೀಲ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಮಹಾರಾಷ್ಟ್ರಕ್ಕೆ ಹೋಗಿ ಏನು ಪಟ್ಟಾ ಪುಸ್ತಕಗಳು ಅಲ್ಲಿ ಇಟ್ಟಿದ್ದಾರೆ ಅದನ್ನು ನೋಡಿಕೊಂಡು ಬಂದು ಇಲ್ಲಿ ಸಹ ಮಾಡುತ್ತೇವೆಂದು ಹೇಳಿದ್ದರು. ಅಂತಹ ಪುಸ್ತಕಗಳನ್ನು ಇವರು ಕೊಟ್ಟಮೇಲೆ ನಮ್ಮ ಭೂಮಿಗೆ ಹಕ್ಕು ಆದರಲ್ಲಿ ಇರುತ್ತದೆ.

ಆ ಹಕ್ಕು ಪಟ್ಟಾ ಪುಸ್ತಕದಲ್ಲಿ ಇರುತ್ತದೆ. ಮತ್ತೆ ತಲಾಟಿ ಹತ್ತಿರ ನಾವು ಹೋಗಬೇಕಾಗಿಲ್ಲ. ಯಾರ ಹತ್ತಿರ ಕೂಡ ನಾವು ಹೋಗಬೇಕಾಗಿಲ್ಲ. ಆರ್ ಆರ್ ಫೈವ್ ಅಂಡ್ ಸಿಕ್ಸ್ ಬೇಕಾಗಿಲ್ಲ. ಯಾವುದೂ ಬೇಕಾಗಿಲ್ಲ. ಆ ರೀತಿ ಅದು ತಯಾರಾಗಿದೆ. ನಮಗೆ ಎರಡನ್ನು ಕೊಟ್ಟಿದ್ದಾರೆ. ತಮ್ಮಲ್ಲಿ ಪ್ರತಿ ಇಲ್ಲದೇ ಇದ್ದರೆ ಅದನ್ನು ನಾನು ತಂದು ತಮಗೆ ತೋರಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಅದನ್ನು ತಯಾರು ಮಾಡಲಿಕ್ಕೆ ಈಗಾಗಲೇ ಹೇಳಿದ್ದೇನೆ. ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಆ ಪಟ್ಟಾ ಪುಸ್ತಕಗಳನ್ನು ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ವಸಂತರಾವ್ ಪಾಟೀಲರು ಬರುವುದಕ್ಕಿಂತ ಮುಂಚೆ ಅಲ್ಲಿ ಯಾವ ರೀತಿ ಪಟ್ಟಾ ಮಾಡಿದ್ದಾರೆ ಎಂದು ನೋಡಿಕೊಂಡು ಬರಲು ನಮ್ಮ ಅಧಿಕಾರಿಗಳನ್ನು ಮಹಾರಾಷ್ಟ್ರಕ್ಕೆ ಕಳುಹಿಸಿದ್ದರು ಅದರಲ್ಲಿ ಏನು ಸಿಸ್ಟಮ್ ಇತ್ತು, ಅದು ಚೆನ್ನಾಗಿತ್ತು. ಅನಂತರ ವಸಂತರಾವ್ ಪಾಟೀಲರು ಬಂದಮೇಲೆ ಅದು ಮುಂದುವರಿಯಲಿಲ್ಲ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಯಾರು ಏನು ಕೆಲಸ ಮಾಡಿದ್ದರೂ ಅದು ಒಳ್ಳೆಯ ಕೆಲಸ. ಆದರೆ ಅದು ಜಾರಿಗೆ ಬಂದಿಲ್ಲವಲ್ಲ. ಮತ್ತೆ ಒಂದೆ ಒಂದು ವಿಷಯ, ಈ ಬಗರ್ ಹುಕ್ಕುಮ್ ಸಾಗುವಳಿ ಬಗ್ಗೆ ಬಹಳ ಸ್ನೇಹಿತರು ಮಾತನಾಡಿದರು ಹಿಂದಿನ ಸರ್ಕಾರ ಕೂಡ ಬಗರ್ ಹುಕುಮ ಸಾಗುವಳಿ ಮಾಡುವವರಿಗೆ ಅದನ್ನು ಸಕ್ರಮಗೊಳಿಸುತ್ತೇವೆ ಎಂದು ಹೇಳಿತ್ತು. ಆದರೆ ಕಟಾಫ್ ಡೇಟ ಬಗ್ಗೆ ಮಾತನಾಡುತ್ತಿದ್ದರು. ಈಗ ಸರ್ಕಾರ ಕೂಡಾ ಕಟಾಫ್ ಡೇಟ್ ಬಗ್ಗೆ ಮಾತನಾಡುತ್ತಾ ಇದ್ಯೇ ಅದಕ್ಕಿಂತಲೂ ದೊಡ್ಡ ಅವಿವೇಕತನ ಬೇರೆ ಯಾವುದೂ ಇಲ್ಲ. ನಿಮಗೆ ಕಟಾಫ್ ಡೇಟ ಮಾತನಾಡುವ ಹಕ್ಕಿಲ್ಲ. Unless a cut-off date for poverty is fixed you have no right to fix the cut-off date for illegal cultivation. First fix the cut-off date for poverty, then fix the cut off date for illegal cultivation. ಅವರಿಗೆ ಏನು ವ್ಯವಸ್ಥೆ ಮಾಡಿದ್ದೀರಿ ಕಟಾಫ್ ಡೇಟ್ ಫಿಕ್ಸ್ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? directive principles of State policy ಪ್ರಕಾರ ತಾವು ಬೇರೆ ವ್ಯವಸ್ಥೆ ಮಾಡಿದ್ದೀರಾ ? ಇಲ್ಲಾ ಅಲ್ಲಾ ? ಈ ಸರ್ಕಾರಕ್ಕೆ ಬಂದವರರ ಏನು ತಿಳಿಯುತ್ತಾರೆ ? ಈ ದೇಶ ಆ ಕುರ್ಚಿಯಲ್ಲಿ ಕೂತವರಿಗೆ ಮಾತ್ರ ಎಂದು, ಈ ದೇಶದಲ್ಲಿ ಯಾರು ಯಾರು ಹುಟ್ಟುತ್ತಾರೆ ಅವರಿಗೆ ಜೀವನದ ಹಕ್ಕಿದೆ. ನಾಳೆ ಹುಟ್ಟುವವರಿಗೂ ಜೀವನದ ಹಕ್ಕು ಇದೆ.

He has a right to live in this country. You have no right to tell him not to do anything. ಎಲ್ಲಿ ಹೋಗಬೇಕು ಅವನು ? ಆತ್ಮಹತ್ಯೆ ಮಾಡಿಕೊಳ್ಳಬೇಕೆ ? ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಾನು ಯಾರಿಗೆ ಹೇಳುತ್ತೇನೆಂದರೆ, ಕಟಾಫ್ ಡೇಟ್ ಫಿಕ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರಲ್ಲಾ ಅವರು ಆತ್ಮಹತ್ಯೆ ಮಾಡಿಕೊಳ್ಳಬೇಕು ಏಕೆಂದರೆ ಅವರ ಕರ್ತವ್ಯವನ್ನು ಅವರು ಪಾಲಿಸಿಲ್ಲ. ಸಂವಿಧಾನದಲ್ಲಿರುವ ಕರ್ತವ್ಯವನ್ನು ಅವರು ಪಾಲಿಸಿಲ್ಲ ಆ ಕಾರಣದಿಂದ ದಯವಿಟ್ಟು ಕಟಾಫ್ ಡೇಟ್ ಮಾತನಾಡಬೇಡಿ. ನಾನು ನಾಳೆ ಬಗರ್‌ಹುಕುಮ್ ಮಾಡುವವನೇ ನನಗೆ ಈ ಸರ್ಕಾರ ಬೇರೆ ವ್ಯವಸ್ಥೆ ಮಾಡಿಲ್ಲ ಎಂದಾಗ ನಾನು ನಾಳೆದಿನ ಬಗರ್‌ಹುಕುಮ್ ಮಾಡುವವನೇ ಏಕೆಂದರೆ ನಿಮಗೆ ಎಷ್ಟು ಹಕ್ಕು ಈ ದೇಶದಲ್ಲಿ ಬದುಕುವುದಕ್ಕೆ ಇದೆಯೋ, ಅಷ್ಟೇ ಹಕ್ಕು ನನಗೂ ಇದೆ. ಆ ಕಾರಣದಿಂದ ಈ ಕಟಾಫ್ ಡೇಟ್ ಬಗ್ಗೆ ಮಾತನಾಡಬೇಡಿ. When you fix the cut-off date for poverty then you get the moral right and also the legal right to talk about the cut off date for illegal cultivation. ದಯವಿಟ್ಟು ಅಲ್ಲಿಯವರೆಗೆ ಮೌನವಾಗಿರಬೇಕು. ಯಾರು ಯಾರು ಬಗರ್‌ಹುಕುಮ್ ಮಾಡಿದ್ದಾರೆ, ಅವರಿಗೆ ಯಾವುದೇ ಶರತ್ತು ಇಲ್ಲದೇ ನೀವು ಸಕ್ರಮಗೊಳಿಸಬೇಕು ಇಷ್ಟೇ ನಮಸ್ಕಾರ.

† ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು).—ಮಾನ್ಯ ಉಪಾಧ್ಯಕ್ಷರೇ ಮಾನ್ಯ ಸದಸ್ಯರನೇಕರು ಎಲ್ಲ ವಿಚಾರಗಳನ್ನು ಹೇಳಿದ್ದು ನಾನು ಅವನ್ನು ಪುನರುಚ್ಚಾರ ಮಾಡಬೇಕಾಗಿಲ್ಲ ಕಂದಾಯ ಇಲಾಖೆ ಎಂದರೆ ಅದು ರೈತರ ಇಲಾಖೆ, ಭೂಮಿ ಇಲಾಖೆ ಎನ್ನುವುದು ಸಾಮಾನ್ಯ ತಿಳುವಳಿಕೆ. ಇವತ್ತು ಈ ಭೂಮಿ ತುಂಡುತುಂಡಾಗಿದ್ದು ಬ್ರಿಟಿಷ್ ಅಧಿಕಾರಿಗಳು ಆಗ ಸರ್ವೇ ಮಾಡಿ ಇಟ್ಟಿದ್ದ ಕಲ್ಲುಗಳು ಕಿತ್ತುಹೋಗಿವೆ, ಇವತ್ತು ಹಳ್ಳಿಗಳಲ್ಲಿ ಯಾವುದೇ ಜಗಳ ಪ್ರಾರಂಭವಾಗುವುದು ಈ ಕಲ್ಲುಗಳು ಇಲ್ಲದ್ದಕ್ಕೆ ಮಾತ್ರ. ಇವತ್ತು ಹಳ್ಳಿಗಾಡಿನ ಬಹುತೇಕ ಕ್ರಿಮಿನಲ್ ಹಾಗೂ ಸಿವಿಲ್ ಕೇಸುಗಳು ಈ ಭೂಮಿಗೆ ಸಂಬಂಧಪಟ್ಟ ಕೇಸುಗಳಾಗಿವೆ.

ಶ್ರೀ ರಮಾನಾಥ ರೈ — ಸಮಾಜವಾದಿ ರಾಷ್ಟ್ರಗಳ ಪ್ರಕಾರ ಎಲ್ಲಾ ಜಮೀನೂ ಸರ್ಕಾರಕ್ಕೆ ಹೋದರೆ ಯಾವುದೇ ಜಗಳ ಇರುವುದಿಲ್ಲ, ಆಗ ಎಲ್ಲಾ ಜಗಳಗಳು ಮುಕ್ತಾಯವಾಗುತ್ತವೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಜಗಳ ಕಡಿಮೆಯಾಗಬೇಕಾದರೆ, ಮಾನ್ಯ ಮಂತ್ರಿಗಳು ಇನ್ನೊಮ್ಮೆ ಸರ್ವೆ ಮಾಡಿಸಬೇಕು ೨ ಕೋಟಿ ಎಕರೆ ಭೂಮಿಯನ್ನು ಒಮ್ಮೆಲೇ ಸರ್ವೆ ಮಾಡಿಸುವುದಕ್ಕಾಗುವುದಿಲ್ಲವೆಂದು ಹೇಳಬಹುದು ಈ ಒಂದು ಕೆಲಸಕ್ಕೆ ರಿಟೈರ್ಡ್ ಸರ್ವೇಯರುಗಳನ್ನು ನೇಮಕ ಮಾಡಿ ಸರ್ವೆ ಮಾಡಿಸಿ ಅದಕ್ಕೆ ತಗಲುವಂಥ ಖರ್ಚನ್ನು ನಮ್ಮ ರೈತರ ಮೇಲೆ ಹಾಕಿ ಎಕರೆಗೆ ೪ ರೂಪಾಯಿ ೮ ರೂಪಾಯಿ ಬಂದರೆ ಕೊಡುವುದಕ್ಕೆ ತಯಾರಿದ್ದೇವೆ. ಇದನ್ನು ಕಂದಾಯದ ಜೊತೆಯಲ್ಲಿ ವಸೂಲು ಮಾಡಿದರೆ, ಕೊಡುತ್ತಾರೆ. ಈ ಸರ್ವೆ ಕೆಲಸ ಮಾಡಿಸದೇ ಹೋದರೆ, ದಿನ ಬೆಳಗಾದರೆ. ಪೋಲಿಸಿನವರಿಗೆ ವಕೀಲರಿಗೆ ಹಣಕೊಟ್ಟು ರೈತರು ಹಾಳಾಗಿ ಹೋಗುತ್ತಾರೆ. ಅದಕ್ಕಾಗಿ ಭೂಮಿಯನ್ನು ಸರ್ವೆ ಮಾಡಿಸಿ, ಹದ್ದುಗಳನ್ನು ಗುರುತು ಮಾಡಿದರೆ ಅನುಕೂಲವಾಗುತ್ತದೆ. ಮತ್ತೆ ಹೊಲಗಳಿಗೆ ಹೋಗುವಂಥ ದಾರಿಗಳು ಮುಚ್ಚಿಹೋಗಿವೆ: ಸಾಮಾನ್ಯವಾಗಿ ಎಲ್ಲ ಕಡೆ ದಾರಿಗಳನ್ನು ರೈತರು ಅತಿಕ್ರಮಣ ಮಾಡಿದ್ದಾರೆ. ಇವತ್ತು ಹೊಲಗಳಿಗೆ ಹೋಗಬೇಕಾದರೆ, ದಾರಿ ಇಲ್ಲದಂತಾಗಿದೆ. ಹೊಸದಾಗಿ ಸರ್ವೆಮಾಡಿಸಿದ ನಂತರ ದಾರಿಗಳನ್ನು ಗುರುತು ಮಾಡಿ: ಎ.ಪಿ.ಎಂ.ಸಿ.ನಲ್ಲಿ ರೈತರಿಂದ ಕಲೆಕ್ಟ್ ಮಾಡಿದ ಫಂಡ್ ಕೋಟ್ಯಾಂತರ ರೂಪಾಯಿಗಳು ಇದೆ. ಈ ಹಣದಿಂದ ರಸ್ತೆಗಳನ್ನು ನಿರ್ಮಾಣ ಮಾಡಬೇಕೆಂದು ಸಲಹೆ ಮಾಡುತ್ತೇನೆ. ರೈತರು ತಲೆಮೇಲೆ ಶೇಂಗಾ, ಜೋಳ ಹೊತ್ತುಕೊಂಡು ಬರುವುದನ್ನು ತಪ್ಪಿಸುವುದಕ್ಕೆ ಅನುಕೂಲವಾಗುತ್ತದೆ. ಈ ಫಂಡ್‌ನಿಂದ ರೈತರಿಗೆ ರಸ್ತೆಗಳನ್ನು ಮಾಡಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ ಮತ್ತೆ ರೈತರಿಗೆ ಪಟ್ಟಾಪುಸ್ತಕಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ನಾನು ಸಲಹೆ ಮಾಡುವುದೇನೆಂದರೆ, ಪಟ್ಟಾಪುಸ್ತಕ ಎಂದು ಕರೆಯುವ ಬದಲು ಕುಟುಂಬ ವಿವರಣ ಪುಸ್ತಕ ಎಂದು ಹೆಸರುಕೊಟ್ಟು ಅದರಲ್ಲಿ ರೈತನ ಆಸ್ತಿ, ಜಮೀನು, ಜನನ ಮರಣ, ಸಾಲದ ವಿವರಗಳನ್ನು ಕೊಟ್ಟರೆ ಒಳ್ಳೆಯದು ರೈತನಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳು ಅದರಲ್ಲಿರಬೇಕು. ಹೀಗೆ ಮಾಡದೇ ಇದ್ದರೆ ತುಂಬಾ ಅನಾಹುತವಾಗುತ್ತದೆ. ಮೊನ್ನೆ ಹತ್ತಿಕಾಳು ಬೀಜ ಸಿಗಲಿಲ್ಲ, ಆಗ ಸರ್ಕಾರದವರು ಒಂದು ನಿಯಮ ಮಾಡಿದರು: ನೀವು ಉತ್ತರ ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಉತ್ತರ ಕೇಳಿದರೆ ನೀವು ನೀರಾವರಿ ಟ್ಯಾಕ್ಸ್ ಕಟ್ಟಿಲ್ಲ ಕೊಡುವುದಿಲ್ಲವೆಂದು ಹೇಳಿದರು. ಇದರಿಂದ ಬಹಳ ಅನಾಹುತ ಆಯಿತು. ರೈತರಿಗೆ ಹತ್ತಿಬೀಜ ಸಿಗಲಿಲ್ಲ. ಅದಕ್ಕಾಗಿ ರೈತನಿಗೆ ಬೇಕಾದ ಅವಶ್ಯಕ ಮಾಹಿತಿ ಇರುವಂಥ ಎಲ್ಲ ವಿಚಾರಗಳನ್ನು ನಮೂದಿಸಿ ಕೊಟ್ಟರೆ ಇದರಿಂದ ಅನುಕೂಲವಾಗುತ್ತದೆ. ಇನ್ನು ತುಂಡು ಜಮೀನಿನ ವಿಚಾರ ಹೇಳುವುದಾದರೆ, ಇದರಿಂದ ಬಹಳ ತೊಂದರೆಯಾಗಿದೆ. ಇದನ್ನು ರದ್ದು

ಮಾಡಿದರೆ, ಜನಗಳಿಗೆ ಅನುಕೂಲವಾಗುತ್ತದೆ. ಯಾರು ಯಾರು ೮–೧೦ ಗುಂಟೆ ಜಮೀನು ಇಟ್ಟುಕೊಂಡಿದ್ದಾರೆ: ಅವರು ಅದನ್ನು ಮಾರಾಟ ಮಾಡಿ ಬೇರೆ ಉದ್ಯೋಗ ಮಾಡಿಕೊಳ್ಳುವುದಕ್ಕೂ ಆಗುತ್ತಿಲ್ಲ. ಕಾನೂನು ಪ್ರಕಾರ ಈ ತುಂಡು ಭೂಮಿಯನ್ನು ಅವರ ಅಜುಬಾಜಿನವರಿಗೆ ಇಲ್ಲವೇ ಅಣ್ಣತಮ್ಮನಿಗೆ ಕೊಡಬೇಕು. ಇದನ್ನು ತಪ್ಪಿಸಲು ಮಲೆನಾಡು ಜಿಲ್ಲೆಗಳಲ್ಲಿ ಆದರೂ ಈ ಕಾನೂನು ರದ್ದು ಮಾಡಿದರೆ ಬಹಳ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಇನ್ನು ಕೃಷಿ ಕಾರ್ಮಿಕರ ಬಗ್ಗೆ ಮಾನ್ಯ ಸಿಂಧ್ಯರವರು ಮಾತನಾಡುತ್ತಾ ರಾಜ್ಯದಲ್ಲಿ ೨೬ ಲಕ್ಷ ಕಾರ್ಮಿಕರು ಇದ್ದಾರೆಂದು ಇವರ ಬಗ್ಗೆ ಸರ್ಕಾರ ಚಿಂತನ ಮಾಡಬೇಕೆಂದು ಹೇಳಿದರು. ಮುಖ್ಯವಾಗಿ ಸರ್ಕಾರ ಇವರ ಬಗ್ಗೆ ಚಿಂತನೆ ಮಾಡಬೇಕು ಏಕೆಂದರೆ ರೈತನ ಹೊಟ್ಟೆಯಲ್ಲಿ ಕೃಷಿ ಕಾರ್ಮಿಕರಿದ್ದಾರೆ.

ಈಗ ಉದಾಹರಣೆಗೆ ಹೇಳಬೇಕೆಂದರೆ, ಸಕ್ಕರೆ ಕಾರ್ಖಾನೆಗಳು ಚೆನ್ನಾಗಿ ನಡೆದು, ಕಬ್ಬಿಗೆ ಒಂದು ನಾಲ್ಕು ರೂಪಾಯಿ ಹೆಚ್ಚು ಬೆಲೆ ಸಿಕ್ಕಿತು ಎಂದರೆ ಆಗ ಒಂದು ದಿವಸಕ್ಕೆ ಒಬ್ಬ ಕೃಷಿ ಕಾರ್ಮಿಕನಿಗೆ ೨೦ ರೂಪಾಯಿ ಕೂಲಿ ಕೊಡುತ್ತೇವೆ. ಆದರೆ ಇದೇ ವರ್ಷ ಹತ್ತಿ ದರ ಐದುನೂರು ರೂಪಾಯಿ ಒಂದು ಕ್ವಿಂಟಾಲ್‌ಗೆ ಇಳಿದಾಗ ಎಂಟು ರೂಪಾಯಿಗೆ ಕೆಲಸಕ್ಕೆ ಬೇಕಾದರೆ ಬನ್ನಿ, ಬೇಡ ಎಂದರೆ ಬಿಡಿ ಎಂದು ಹೇಳುತ್ತಾರೆ. ಯಾರು ೨೦ ರೂಪಾಯಿ ಕೊಡುವುದಕ್ಕೆ ಖುಷಿಯಿಂದ ಇದ್ದಾರೋ, ಅದೇ ರೈತ ಎಂಟು ರೂಪಾಯಿ, ಆರು ರೂಪಾಯಿಗೆ ಬೇಕಾದರೆ ಬನ್ನಿ, ಬೇಡಾಂದ್ರೆ ಬಿಡಿ ಎಂದು ಹೇಳುವುದಕ್ಕೆ ಕಾರಣ ಈ ಬೆಲೆಯ ನೀತಿ ಮತ್ತು ಕೂಲಿಯ ನೀತಿ ಎರಡೂ ಕಾರಣವಾಗಿದೆ. ಈ ಬೆಲೆಯ ನೀತಿ ಮತ್ತು ಕೂಲಿಯ ನೀತಿ ಎರಡೂ ಕೂಡಿ ಹೋಗಬೇಕು, ಎಂಬುದನ್ನು ಮರೆಯಬಾರದು. ಕೇವಲ ಕೂಲಿಯ ನೀತಿಯನ್ನು ಹೆಚ್ಚಿಸಿ ಬೆಲೆಯ ನೀತಿ ಸರಿ ಮಾಡಲಿಲ್ಲವೆಂದರೆ ಬಹುತೇಕ ರೈತರು ಬದುಕುವುದಿಲ್ಲ. ಅಥವಾ ಪ್ರತ್ಯೇಕವಾಗಿ ಈ ಕೃಷಿ ಕಾರ್ಮಿಕರನ್ನು ಕಾನೂನು ಮುಖಾಂತರ ಬದುಕಿಸುತ್ತೇವೆ ಎಂದು ೨೦ ರೂಪಾಯಿ ಕೂಲಿ, ೩೦ ರೂಪಾಯಿ ಕೂಲಿ ಕೊಡುತ್ತೇವೆ ಎಂದರೆ ಆಗುವುದಿಲ್ಲ. ರೈತರಿಗೆ ಯೋಗ್ಯ ಬೆಲೆ ಕೊಟ್ಟರೆ ಅವರೂ ಹೆಚ್ಚಿನ ಕೂಲಿ ಕೊಡುತ್ತಾರೆ. ವ್ಯಾಪಾರಿಗಳು ಎಷ್ಟು ಮೋಸ ಮಾಡುತ್ತಿದ್ದಾರೆ ? ಅದನ್ನು ತಡೆದು ರೈತನ ರಕ್ಷಣೆಗೆ ಬಂದರೆ ಬಹುತೇಕ ಹೆಚ್ಚಿನ ಕೂಲಿ ಕೊಡಲಿಕ್ಕೆ ರೈತರಾದ ನಾವು ಹಿಂದೆ ಮುಂದೆ ನೋಡುವವರಲ್ಲ. ಆದಕಾರಣ ಬೆಲೆ ನೀತಿಯನ್ನು ಸರಿಪಡಿಸಲು ಮಾನ್ಯ ಕೃಷಿ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಬೇಕಾದರೆ ಚರ್ಚೆ ಮಾಡೋಣ. ಮಾನ್ಯ ಕಂದಾಯ ಮಂತ್ರಿಗಳೂ ಇದರ ಬಗ್ಗೆ ಯೋಚನೆ ಮಾಡಲಿ, ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಈ ನಾಲ್ಕು ಸಲಹೆಗಳನ್ನು ತಾವು ಅವಲೋಕಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಶಿವಾನಂದ ಹೇಮಪ್ಪ ಕೌಜಲಗಿ (ಬೈಲಹೊಂಗಲ).—ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಇವತ್ತಿನ ದಿವಸ ಮಾನ್ಯ ಕಂದಾಯ ಮಂತ್ರಿಗಳು ಈ ಕಂದಾಯ ಇಲಾಖೆಯ ಬೇಡಿಕೆಗಳನ್ನು ಏನು ಸದನದ ಮುಂದಿಟ್ಟಿದ್ದಾರೆ, ಅದನ್ನು ನಾನು ವಿರೋಧಿಸುತ್ತಾ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವೆಲ್ಲಾ ಶ್ರೀ ಕೆ. ಎಚ್. ಪಾಟೀಲರ ಬೇಡಿಕೆಗಳು ಇವೆ: ಅದನ್ನೂ ವಿರೋಧಿಸುತ್ತೀರಾ ?

ಶ್ರೀ ಶಿವಾನಂದ ಎಚ್. ಕೌಜಲಗಿ.—50 ಪರ್ಸೆಂಟ್ ಬೆಂಬಲಿಸುತ್ತೇನೆ. ಹಿರಿಯ ಸದಸ್ಯರು ಅನೇಕರು ಈಗಾಗಲೇ ಮಾತನಾಡಿದ್ದಾರೆ. ನಾನು ಕೆಲವು ಸಲಹೆಗಳನ್ನು ಮಾತ್ರ ಈ ಸಭೆಯ ಮುಂದಿಡುತ್ತಿದ್ದೇನೆ. ೧೯೫೬ನೇ ಇಸವಿಯಲ್ಲಿ ನಮ್ಮ ಕರ್ನಾಟಕ ರಾಜ್ಯವಾದರೂ ಇವತ್ತಿನದಿವಸ ಈ ಧಾರ್ಮಿಕ ದತ್ತಿಯಲ್ಲಿ ಐದು ಭಾಗಗಳಲ್ಲಿ ಬೇರೆ ಬೇರೆ ಕಾಯಿದೆಗಳು ಇದ್ದರೂ, ಅವುಗಳನ್ನು ಕ್ರೋಢಿಕರಿಸಿ ಒಂದೇ ಕಾಯಿದೆ ಮಾಡುವುದಕ್ಕೆ ಆಗಿಲ್ಲವೆಂಬುದನ್ನು ಹೇಳಿ, ಇದರ ಕಡೆಗೆ ತಮ್ಮ ಗಮನ ಸೆಳೆಯ ಬಯಸುತ್ತೇನೆ. ಇವತ್ತಿನ ದಿವಸ ತಾವು ಈ ಧಾರ್ಮಿಕ ದತ್ತಿ ಕಾಯಿದೆಗಳನ್ನು ನೋಡಬಹುದು. ಇವತ್ತಿನವರೆಗೂ ನಮ್ಮ ಉತ್ತರ ಕರ್ನಾಟಕದಲ್ಲಿ Bombay Pudlic Trusts Act ಇದೆ. ಹಳೆ ಮೈಸೂರಿನಲ್ಲಿ Mysore Religious and Charitaible Institutions ಎನ್ನುವ ಕಾಯಿದೆ ಇದೆ, ಹೈದರಾಬಾದ್ ಕರ್ನಾಟಕದಲ್ಲಿ Hyderabad Endowment and Regulations Aet 1949 ಅಂತ ಇದೆ. ಹಾಗೂ ಕೊಡಗಿನಲ್ಲಿ Coorg Temple Fund Management Act 1956 ಎಂದು ಇದೆ. ಈ ಪ್ರಕಾರ ಐದು ಕಾಯಿದೆಗಳು ಇದ್ದು ಇಲ್ಲಿಯ ವರೆಗೂ ಒಂದೇ ಕಾಯಿದೆಯನ್ನು ತಂದಿಲ್ಲ. ಆದಕಾರಣ, ಬೇಗನೆ ಒಂದೇ ಕಾಯಿದೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಇವತ್ತಿನ ದಿವಸ ರಿಪೇರಿ ಮತ್ತು ಜೀರ್ಣೋದ್ಧಾರಕ್ಕೆ ಪ್ರಸ್ತುತ ಸಾಲಿನಲ್ಲಿ ೧೫೦ ಲಕ್ಷ ರೂಪಾಯಿಗಳನ್ನು ಧಾರ್ಮಿಕ ದತ್ತಿ ಸಂಸ್ಥೆಗಳಿಗೆ ಒದಗಿಸಲಾಗಿತ್ತು. ಇದರ ಬಗ್ಗೆ ಒಂದು ಕೋಟಿ ಮಾತ್ರ ಬಿಡುಗಡೆ ಆಯಿತು. ಉಳಿದ ೫೦ ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್

ಮಾಡಿದರು, ದಯಮಾಡಿ ಜೀರ್ಣೋದ್ಧಾರದಂಥ ಒಳ್ಳೆಯ ಕೆಲಸಕ್ಕೆ ಹೀಗೆ ಮಾಡಬಾರದಾಗಿತ್ತು ಎಂದು ಹೇಳುತ್ತೇನೆ. ೧೯೮೮-೮೯ನೇ ಸಾಲಿನಲ್ಲಿ ಸಹಿತ ಒಂದೂವರೆ ಕೋಟಿ ಬಜೆಟ್‌ನಲ್ಲಿ ಇತ್ತು. ಆಗ ಶ್ರೀಮಾನ್ ಬೊಮ್ಮಾಯಿಯವರ ಸರ್ಕಾರ ಇತ್ತು. ಆಗಲೂ ೭೫ ಲಕ್ಷ ಲ್ಯಾಪ್ಸ್ ಮಾಡಿದರು. ಆದಕಾರಣ, ದಯಮಾಡಿ ಕಲ್ಯಾಣ ಮಂಟಪ, ಗುಡಿ ಜೀರ್ಣೋದ್ಧಾರಕ್ಕೆ ಅಂತಹ ಒಳ್ಳೆಯ ಕೆಲಸಗಳಿಗೆ ಈ ಹಣ ಏನು ಬಜೆಟ್‌ನಲ್ಲಿ ಒದಗಿಸಲಾಗಿದೆ. ಹೀಗೆ ಒದಗಿಸಲಾದ ಹಣವನ್ನು ಇನ್ನು ಮುಂದೆಯಾದರೂ ದಯಮಾಡಿ ಲ್ಯಾಪ್ಸ್ ಮಾಡದೆ, ಬಜೆಟ್‌ನಲ್ಲಿ ಒದಗಿಸಿದ್ದನ್ನು ಪೂರ್ತಿಯಾಗಿ ಉಪಯೋಗಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇದು ಏಕೆ ಲ್ಯಾಪ್ಸ್ ಆಗುತ್ತಗೆ ಎಂದು ಹೇಳಿದರೆ, ೩೧ನೇ ಮಾರ್ಚ್‌ಗೆ ಈ ಹಣ ಬಿಡುಗಡೆ ಆಗುತ್ತದೆ. ದಯಮಾಡಿ ಇದನ್ನು ಮಾಡಬಾರದು. ಒಮ್ಮೆ ಫೈನಾನ್ಸ್‌ಗೆ ಅಪ್ರೂವಲ್ ಕೊಟ್ಟನಂತರ, ಈ ಬಜೆಟ್‌ನಲ್ಲಿ ಈ ಇಲಾಖೆಗೆ ಒಂದೂವರೆ ಕೋಟಿ ಕೊಟ್ಟನಂತರ ಮತ್ತೊಮ್ಮೆ ಫೈನಾನ್ಸ್‌ಗೆ ಹೋಗುವ ಜರೂರು ಇಲ್ಲ.

ನಾವು ಇವತ್ತಿನ ದಿವಸ ಈ ಕೆಲಸಕ್ಕೆ ದೀಡ್ ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಈ ದೀಡ್ ಕೋಟಿ ರೂಪಾಯಿ ಕೊಟ್ಟ ನಂತರ, ಇದನ್ನು ಖರ್ಚು ಮಾಡುವುದಕ್ಕೆ ಕಂದಾಯ ಇಲಾಖೆಯವರಿಗೆ ಅಧಿಕಾರ ಇದೆ. ಇದಕ್ಕಿಂತ ಹೆಚ್ಚು ಖರ್ಚು ಮಾಡಬೇಕಾದರೆ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಬೇಕು. ಅವರು ಏನು ಮಾಡಬೇಕಾದರೂ ೨೮ನೇ ಮಾರ್ಚಿಯಲ್ಲಿ ಫೈನಾನ್ಸ್ ಡಿಪಾರ್ಟ್‌ಮೆಂಟ್ ಸಕ್ರಟರಿ ಹತ್ತಿರ ಫೈಲ್ ತರಿಸಿಕೊಳ್ಳುತ್ತಾರೆ. ಅವರು ಏನು ಮಾಡುತ್ತಾರೆ, ಅದನ್ನು ಕಟ್ ಮಾಡುತ್ತಾರೆ. ಎಕಾನಮಿ ಮೇಜರ್ ಎಂದು ಹೇಳುತ್ತಾರೆ. ಆದ ಕಾರಣ ದಯಮಾಡಿ ಈ ಬಜೆಟ್‌ನಲ್ಲಿ ಇರತಕ್ಕ ಹಣವನ್ನು ಖರ್ಚು ಮಾಡಬೇಕು. ಜೊತೆಗೆ ಇಟ್ಟಂಥ ಹಣ ಬಹಳ ಕಡಿಮೆ ಇದೆ. ನಿಜವಾಗಿಯೂ ಇದಕ್ಕೆ ೧೦ ಕೋಟಿ ರೂಪಾಯಿ ಕೊಡಬೇಕಾಗಿತ್ತು. ಇದು ಬಹಳ ಒಳ್ಳೆಯದು. ಯಾವುದೆ ಮನೆಯ ಮುಂದೆ ಯಾವುದೇ ಗುಡಿಗುಂಡಾರ ಇಲ್ಲದೆ ಲಗ್ನ ಮಾಡುವುದು ಸಾಧ್ಯವಿಲ್ಲ. ಇದು ತಮಗೂ ಗೊತ್ತಿದೆ. ಇದನ್ನು ಮಾಡುವುದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇದಕ್ಕೆ ಹಣವನ್ನು ಕ್ರೋಢೀಕರಿಸಿ ೧೦ ಕೋಟಿ ಕೊಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ವಕ್ಫ್ ಬೋರ್ಡ್‌ಗೆ ಇಟ್ಟಂಥ ಹಣವನ್ನು ಯಾರು ಖರ್ಚು ಮಾಡುವುದಿಲ್ಲ. ೧೯೮೮-೮೯, ೧೯೮೯-೯೦ರಲ್ಲಿ ನೋಡಿದರೆ, ಯಾವುದೇ ಹಣವನ್ನು ಖರ್ಚು ಮಾಡಿಲ್ಲ. ಇವುಗಳ ಜೀರ್ಣೋದ್ಧಾರಕ್ಕೆ ಹಣ ಕೊಡುವಾಗ ತಾರತಮ್ಯ ಮಾಡಬಾರದು ಎಂದು ಹೇಳುತ್ತೇನೆ. ಈ ಕೆಲಸ ತಮ್ಮ ಕಾಲದಲ್ಲಿ ಆಗಲೀ ಎಂದು ಕಳಕಳಿಯಿಂದ ಹೇಳುತ್ತಿದ್ದೇನೆ. ಮತ್ತೆ ಶ್ರೀಮಾನ್ ನಂಜುಂಡಸ್ವಾಮಿಯವರು ಮಾತನಾಡುವಾಗ ತಹಶೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಡೆಪ್ಯುಟಿ ಕಮೀಷನರ್ ಹುದ್ದೆಗಳು ಹೋಗಬೇಕೆಂದು ಹೇಳಿದರು. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಸ್ವಾತಂತ್ರ್ಯ ಬಂದನಂತರ, ಇವತ್ತಿನವರೆಗೂ ಬಾವುಟ ಹಾರಿಸುವುದನ್ನು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಅವರು ಮಾಡುತ್ತಾರೆ, ಸರ್ಕಾರ ಬಂತು, ಸ್ವಾತಂತ್ರ್ಯ ಬಂತು, ಆದರೆ ಫ್ಲಾಗ್ ಹಾರಿಸುವುದನ್ನು ಮಾತ್ರ ಅಧಿಕಾರಿಗಳೇ ಮಾಡುತ್ತಾರೆ. ಇದನ್ನು ತಪ್ಪಿಸಿ, ತಾಲ್ಲೂಕು ಮಟ್ಟದಲ್ಲಿ ಶಾಸಕರು ಮಾಡುವಂಥ ಪದ್ಧತಿಯನ್ನು ಜಾರಿಗೆ ತರಬೇಕು. ಜಿಲ್ಲಾ ಮಟ್ಟದಲ್ಲಿ ಮಂತ್ರಿಗಳು ಈ ಕೆಲಸ ಮಾಡುತ್ತಾರೆ. ಆದ್ದರಿಂದ ತಾಲ್ಲೂಕ್ ಮಟ್ಟದಲ್ಲಿ ಶಾಸಕರು ಈ ಕೆಲಸ ಮಾಡುವಂತಹ ಪದ್ಧತಿ ತಮ್ಮ ಕಾಲದಲ್ಲಿ ಜಾರಿಗೆ ಬರಲಿ ಎಂದು ಹೇಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.— ಇದು ಫ್ಲಾಗ್‌ಗೆ ಸಂಬಂಧಪಟ್ಟಂತಹ ವಿಚಾರ. ಇದು ಸೆಂಟ್ರಲ್ ಗವರ್ನಮೆಂಟ್ ಪಾಲಿಸಿ.

ಶ್ರೀ ಎಸ್. ಹೆಚ್. ಕೌಜಲಗಿ.—ತಮ್ಮ ಕೈಲಿ ಇದ್ದರೆ ತಾವು ಮಾಡಿ. ಇಲ್ಲದೆ ಹೋದರೆ ತಾವು ಕೇಂದ್ರ ಸರ್ಕಾರಕ್ಕೆ ರೆಕಮೆಂಡ್ ಮಾಡಿ. ಮತ್ತೆ ಇವೊತ್ತಿನ ದಿವಸ ಯಾವುದೇ ಒಂದು ಅಕ್ವಿಜಿಷನ್ ಆಗಬೇಕಾದರೆ As per Sections 128 and 129, of the Land Acquisition Act, if there is any dispute, the Appeal lies to the Assistant Commissioner as per Section 136 sub-clause (2). Earlier, as per Section 136 sub-clause (3) Deputy Commissioner was the Revisional Authority. Now, as per the decision of the Karnataka Appellate Tribunal, the Revision does not lie. ಹೀಗಾಗಿ ಪ್ರತಿಯೊಂದೂ ಕೇಸ್ ಹೈಕೋರ್ಟ್‌ಗೆ ಬರಬೇಕಾಗಿದೆ. ಆದ ಕಾರಣ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಏನು ಸೆಕ್ಷನ್ ೧೩೬ ಇದೆ, ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್ ಸೆಕ್ಷನ್ ೨. ಇದರಲ್ಲಿ, the decision of the State Government" shall be final" Here "shall be final" should be deleted and

"Revision lie to the Deputy Commissioner." should be incorporated. Earlier, "the Deputy Commissioner may on his own motion or application of the party may call and examine any records made under Section 127 and 129 and pass such orders as may be deemed fit provided that no orders have been passed except after hearing the party who would be adversely affected by such orders." This provision was there. ಇವತ್ತು ಹತ್ತು ಪಟ್ಟು ಜಾಸ್ತಿಯಾಗಿದೆ. ಇವತ್ತಿನ ದಿವಸ ಇವು ಜಿಲ್ಲಾ ಮಟ್ಟದಲ್ಲಿ ಮುಗಿಯುವ ಬದಲು, ಬೆಂಗಳೂರಿಗೆ ಬರತಕ್ಕಂಥ ಪ್ರಶ್ನೆ ಇದೆ. ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್ ತೀರ್ಮಾನದ ಪ್ರಕಾರ ಮೊದಲು ಇತ್ತು. ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್‌ನವರು, ರಿವಿಷನ್ ಮಾಡುವುದಕ್ಕೆ ಡೆಪ್ಯುಟಿ ಕಮೀಷನರ್ ಅವರಿಗೆ ಪವರ್ಸ್ ಇಲ್ಲ, ಆದ ಕಾರಣ ಇವತ್ತು ಎಲ್ಲರೂ ಬೆಂಗಳೂರಿಗೆ ಬರುವುದಕ್ಕೆ ಹತ್ತಿದ್ದಾರೆ, ಆದ್ದರಿಂದ ಇದಕ್ಕೆ ಅಮೆಂಡ್‌ಮೆಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಇವತ್ತಿನ ದಿವಸ ಯಾರಾದರೂ ಜಮೀನು ಪರ್ಚೇಸ್ ಮಾಡಬೇಕೆಂದರೆ ಅವರಿಗೆ ೧೨ ಸಾವಿರಕ್ಕಿಂತ ಹೆಚ್ಚು ಇನ್‌ಕಮ್ ಇದ್ದರೆ ಅವರು ಪರ್ಚೇಸ್ ಮಾಡುವುದಕ್ಕೆ ಬರುವುದಿಲ್ಲ. ಲ್ಯಾಂಡ್ ರೆವಿನ್ಯೂ ಆಕ್ಟ್ ಸೆಕ್ಷನ್ ೭೯ (ಎ) ಕೆಳಗೆ ಹೀಗಿದೆ.— "An average annual income of not less than Rs 12,000 from such source during the period of five years preceding such date" ಈ ಆಕ್ಟ್ ೧೯೭೪ರಲ್ಲಿ ಜಾರಿಗೆ ಬಂತು. ಇವತ್ತು ನಾವು ೧೯೯೦ನೇ ಇಸವಿಯಲ್ಲಿ ಇದ್ದೇವೆ. ಇವತ್ತು ೧೨ ಸಾವಿರ ರೂಪಾಯಿಗೆ ಎಷ್ಟು ಬೆಲೆ ಆಗುತ್ತದೆ ಎಂಬುದು ತಮಗೆ ಗೊತ್ತಿದೆ. ೭೪ನೇ ಇಸವಿಯಲ್ಲಿ ೧೨ ಸಾವಿರ ವ್ಯಾಲ್ಯುಯೇಷನ್ ಇದ್ದುದು ಇಂದು ಎರಡು ಲಕ್ಷಕ್ಕೂ ಮೀರುತ್ತದೆ. ಆದ ಕಾರಣ ನನ್ನ ವೈಯಕ್ತಿಕ ಅಭಿಪ್ರಾಯ ಏನೆಂದರೆ, ಈ ಸೆಕ್ಷನ್ ತೆಗೆಯಬೇಕು. ಏತಕ್ಕೆ ತೆಗೆಯಬೇಕೆಂದು ತಾವು ಕೇಳಬಹುದು. ಯಾರಾದರೂ ಒಬ್ಬ ಆಫೀಸರ್ ರಿಟೈರ್ ಆಗುತ್ತಾನೆ. ರಿಟೈರ್ ಆಗಿ ಹೋದ ನಂತರ ಅಗ್ರಿಕಲ್ಚರ್ ಮಾಡಬೇಕು, ಏನಾದರೂ ಸೋರ್ಸ್ ಆಫ್ ಇನ್‌ಕಮ್ ಮಾಡಬೇಕೆನ್ನುತ್ತಾನೆ. ಸೋರ್ಸ್ ಆಫ್ ಇನ್‌ಕಮ್ ಮಾಡಬೇಕೆಂದರೆ ಈ ಸೆಕ್ಷನ್ "since you are not an agriculturist You are not perimitted to Purchase" ಸೆಕ್ಷನ್ ೮೦ರ ಕೆಳಗೆ ಆತನಿಗೆ ಲ್ಯಾಂಡ್ ಪರ್ಚೇಸ್ ಮಾಡುವುದಕ್ಕೆ ಆಸಿಸ್ಟೆಂಟ್ ಕಮೀಷನರ್ ಪರ್ಮಿಷನ್ ಕೊಡುವುದಿಲ್ಲ since, He is not an agriculturist in terms of Section 80. ಹೀಗಾಗಿ ಒಬ್ಬ ತಂದೆ ತನ್ನ ಮಗಳಿಗೆ ಹೊಲ ಕೊಡಬೇಕೆಂದರೂ ಆ ಮಗಳಿಗೆ ಸಹಿತ she is not an agriculturist ಎಂಬ ಕಾರಣದಿಂದ ಈ ಸೆಕ್ಷನ್ ಕೆಳಗಡೆ ಬರುವುದಿಲ್ಲ. ಇದು ಬಹಳ ಅವ್ಯವಸ್ಥೆ ಆಗಿದೆ. ಎಷ್ಟೋ ಜನ ಈಗಾಗಲೇ ಪರ್ಚೇಸ್ ಮಾಡಿದ್ದಾರೆ. ಇದರ ಬಗ್ಗೆ ತಾವು ಒಂದು ಸ್ಟೇಟ್‌ಮೆಂಟ್ ಕೊಟ್ಟಿರಿ. ಇಂತಹ ಪರ್ಚೇಸ್ ಎಷ್ಟಾಗಿದೆ ಎಂದು ನಾನು ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದಿರಿ. ತಾವು ಹೀಗೆ ಹೇಳಿದ ಕೂಡಲೇ ೭೪ನೇ ಇಸವಿಯಿಂದ ಇಲ್ಲಿಯವರೆಗೆ ಈ ತರಹ ಪರ್ಚೇಸ್ ಎಷ್ಟಾಗಿದೆ, ಎಲ್ಲರಿಗೂ ನೋಟೀಸ್ ಕೊಡುವುದಕ್ಕೆ ಶುರು ಮಾಡಿಬಿಟ್ಟರು ತಾವು ರೆವಿನ್ಯೂ ಅಧಿಕಾರಿಗೆ ರೊಕ್ಕ ಮಾಡುವುದಕ್ಕೆ ಹಾದಿ ಮಾಡಿಕೊಟ್ಟು ಬಿಟ್ರಿ. ತಾವು ಚಲೋ ಉದ್ದೇಶದಿಂದ ಕೊಟ್ರಿ. ಆದರೆ ಆ ಉದ್ದೇಶ ಇವತ್ತಿನ ದಿವಸ ರೆವಿನ್ಯೂ ಆಫೀಸರ್ಸ್ ಏನು ಮಾಡಿದ್ದಾರೆ ಎಂದರೆ, ತಲಾಟಿ ಕರೆಯುವುದು, ೧೯೭೪ನೇ ಇಸವಿಯಿಂದ ಇವತ್ತಿನತನಕ ಎಷ್ಟು ಜಮೀನು ಖರೀದಿ ಆಗಿದೆ ಅವರಿಗೆ ನೋಟೀಸ್ ಕೊಡಿರಿ ಎನ್ನುವುದು ಆಗಿದೆ. ತಾಲ್ಲೂಕು ಕಚೇರಿ ಒಳಗೆ ಬಹಳ ಕೂ, ಆಗಿದೆ. ಇದು ಈಗ ಒಂದು ತರಹ ಬಿಸಿನೆಸ್ ಆಗಿ ಬಿಟ್ಟಿದೆ. ಆದ ಕಾರಣ ದಯವಿಟ್ಟು ಯಾವ ಪ್ರಕಾರವಾಗಿ ಹಿಂದಕ್ಕೆ if the fragmentation land has been purchased ಮಾಡಿದರು, ಆ ಪ್ರಕಾರ ಯಾವುದೇ ಕಾಲಕ್ಕೆ ಪರ್ಚೇಸ್ ಆಗಿದ್ದರೂ ಅದನ್ನು ರೆಗ್ಯುಲರೈಸ್ ಮಾಡಬೇಕು ಅಥವಾ compoundability ತರಹ ಗೌರ್ನ್‌ಮೆಂಟ್‌ಗೆ ರೊಕ್ಕ ಬರುವ ತರಹ ಮಾಡಬೇಕೆಂದು ಹೇಳುತ್ತೇನೆ. ಈ ಅಮೆಂಡ್‌ಮೆಂಟ್ ಇವತ್ತು ಪ್ರತಿಯೊಬ್ಬರ ಕಡೆಗೂ ಇದೆ. ಅದರ ವರ್ಡಿಂಗ್ಸ್ ಹೀಗಿದೆ.

"Every acquisition of land otherwise, other than by way of inheritance or contravention of the section shall be

"Null and Void" "shall be null and void" ನಂತರ ಅವರೂ ಏನೂ ಮಾಡುವುದಿಲ್ಲ. ಕರ್ನಾಟಕ ಸರಕಾರ ಎಂದು ಹೇಳುತ್ತಾರೆ. ಅದನ್ನು ತಾವು ಈ ಆಕ್ಟ್ ಪ್ರಕಾರ ರೆಗ್ಯುಲರೈಸ್ ಮಾಡುವುದಕ್ಕೆ ಪರ್ಮಿಷನ್ ಕೊಡಿರಿ. ರೆಗ್ಯುಲರೈಸ್ ಮಾಡಬಹುದು.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಈ ಸದನದ ಮುಖಾಂತರ ಎಲ್ಲ ಜನರಿಗೆ ತಿಳಿಸುತ್ತೇನೆ. ಒಂದು ವೇಳೆ ಏನಾದರೂ ಈ ರೀತಿ ನೋಟೀಸ್ ಕೊಟ್ಟರೆ, ಜನರು ರೊಕ್ಕ ಕೊಟ್ಟರೂ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಬರುವುದಿಲ್ಲ. ಮತ್ತಷ್ಟು ಈ ನೋಟೀಸ್‌ನಿಂದ ಅವನ ಹೊಲ ರದ್ದಾಗುತ್ತದೆ. ಅದಕ್ಕಾಗಿ ಏತಕ್ಕೆ ರೊಕ್ಕ ಕೊಡುತ್ತೀರಿ? ಕೊಡಬೇಡಿ. ರೊಕ್ಕನಾದರೂ ಉಳಿಯುತ್ತದೆ. ಹಣ ಹಾಗೆ ಇಟ್ಟುಕೊಂಡು ಸುಮ್ಮನೆ ಕೂಡಲಿ.

ಶ್ರೀ ಎಸ್. ಹೆಚ್. ಕೌಜಲಗಿ.—ಈ ಕಾನೂನನ್ನು ರಿಟ್ರಾಸ್ಪೆಕ್ಟೀವ್ ಆಗಿ ಎಫೆಕ್ಟ್ ಇಟ್ಟು ಅದನ್ನು ಅಮೆಂಡ್‌ಮೆಂಟ್ ಮಾಡಿ, ರೆಗ್ಯುಲರೈಸ್ ಮಾಡಿ. ಯಾರು ಪರ್ಚೇಸ್ ಮಾಡಿದ್ದರೂ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ತಾವು ಲಾ ಸೆಕ್ರೆಟರಿಯವರನ್ನು ಕೇಳಿಕೊಂಡು, ಯಾವುದಾದರೂ ಕಾಯಿದೆ ಮಾಡಿರಿ ಎಂದು ಹೇಳುತ್ತೇನೆ.

ಇನ್ನು ಮುಂದೆ ಫ್ರಾಗ್‌ಮೆಂಟೇಷನ್. If the lands are fragment, ಅದನ್ನು ಅಡ್‌ಜಾಯಿನ್ನಿಂಗ್ ಓನರ್ ಪರ್ಚೇಸ್ ಮಾಡಬೇಕೆಂದು ಇದೆ. ಅವನು ಒಂದು ಸಾವಿರ ಎರಡು ಸಾವಿರಕ್ಕಿಂತ ಹೆಚ್ಚು ಹೋಗುವುದಕ್ಕೆ ಬಿಡುವುದಿಲ್ಲ. ಆದ ಕಾರಣ if the land is already a fragmentation land ಅದನ್ನು ಯಾರು ಬೇಕಾದರೂ ಪರ್ಚೇಸ್ ಮಾಡಬಹುದೆಂದು ಅಮೆಂಡ್ ಮಾಡಿರಿ. ಒಂದು ಎಕರೆ ಹೊಲ ಇರುತ್ತದೆ. ಅವನ್ನು ಬಾಜೂದವನೇ ತೆಗೆದುಕೊಳ್ಳಬೇಕೆಂದ ಕೂಡಲೇ, ನಮ್ಮನ್ನು ಬಿಟ್ಟು ಯಾರಿಗೂ ಕೊಡುವುದಿಲ್ಲ ಎಂದು ತಿಳಿದುಕೊಂಡು ಬೆಲೆ ಕಡಿಮೆ ಮಾಡುತ್ತಾನೆ. "Consolidation of Fragmentation of Holding Act" ಇದೆಯಲ್ಲ ಇದರಿಂದ ಬಹಳ ತೊಂದರೆ ಆಗುತ್ತಿರುವುದರಿಂದ, ಇಂತಹ ಜಮೀನುಗಳನ್ನು ಯಾರು ಬೇಕಾದರೂ ಖರೀದಿ ಮಾಡಬಹುದೆಂದು ತಿದ್ದುಪಡಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ತಹಸೀಲ್ದಾರ್ ಬಗ್ಗೆ ತಮಗೆ ಗೊತ್ತಿರಬಹುದು. ಅವರು ತಾಲ್ಲೂಕಿನಲ್ಲಿ ಒಬ್ಬ ಮಹತ್ವದ ಅಧಿಕಾರಿ. ತಾಲ್ಲೂಕಿನಲ್ಲಿ ಅವನು ಮಹತ್ವದ ಅಧಿಕಾರಿ ಇದ್ದರೂ ಸಹ he has been treated as Class-II Officer. ಆದರೆ ಅವನು ಒಂದು ಮೀಟಿಂಗ್ ಪ್ರಿಸೈಡ್ ಮಾಡಿದಾಗ, ಸಹಾಯಕ ಕಾರ್ಯಕಾರಿ ಅಭಿಯಂತರರು ಕ್ಲಾಸ್‌ಒನ್ ಆಫೀಸರ್, ಮೆಡಿಕಲ್ ಆಫೀಸರ್, ಕ್ಲಾಸ್ ಒನ್ ಆಫೀಸರ್, ಅಸಿಸ್ಟೆಂಟ್ ಎಜುಕೇಷನಲ್ ಆಫೀಸರ್, ಕ್ಲಾಸ್ ಒನ್ ಆಫೀಸರ್ ತಾಲ್ಲೂಕ್ ಆಫೀಸರ್ಸ್ ಎಲ್ಲಾ ಕ್ಲಾಸ್ ಒನ್ ಆಫೀಸರ್ಸ್. ಆದರೆ ತಹಸೀಲ್ದಾರ್ ಕ್ಲಾಸ್ II ಆಫೀಸರ್. ಆದರೆ ಇದು ಯಾರ ಗಮನಕ್ಕೂ ಬಂದಿಲ್ಲ. ತಮ್ಮ ಕಾಲಕ್ಕೆ ಇದನ್ನು ಬದಲಾವಣೆ ಮಾಡಿ. ಇದರಿಂದ ಫೈನಾನ್ಸ್ ಬರ್ಡನ್ ಬೀಳುವುದಿಲ್ಲ. Tahsildars must also be treated as Class-I Officers. ಎಂದು ತಾವು ಅಮೆಂಡ್‌ಮೆಂಟ್ ತರಬೇಕು. ಕ್ಲಾಸ್ ಒನ್ ಆಫೀಸರ್ಸ್ ಮೀಟಿಂಗ್ ಅನ್ನು ಕ್ಲಾಸ್ ೨ ಆಫೀಸರ್ ತೆಗೆದುಕೊಳ್ಳಬಾರದು. ಅದು ಸರಿ ಅನಿಸುವುದಿಲ್ಲ. ಅದನ್ನು ಅಮೆಂಡ್‌ಮೆಂಟ್ ಮಾಡಬೇಕು. ತಹಸೀಲ್ದಾರ್ ಬಹಳ ಮುಖ್ಯವಾದ ಅಧಿಕಾರಿಯೆಂದು ತಾವು ಪರಿಗಣಿಸಬೇಕು.

೬—೪೫ ಪಿ. ಎಂ.

ಇವತ್ತಿನ ದಿವಸ ತಹಶೀಲ್ದಾರ್‌ರವರು ಹೇಗೋ ಹಾಗೆ ಈ ವಿಲೇಜ್ ಅಕೌಂಟೆಂಟ್ ಸಹ ನಮಗೆ ಬಹಳ ಮಹತ್ವದವರು ಇದ್ದಾರೆ. ಅವನು ಸದಾ ನಮ್ಮ ಜೊತೆ ಇರಬೇಕಾಗುತ್ತದೆ. ಅವನನ್ನು ನಾವು ಏನಪ್ಪ ನೀನು ಹಳ್ಳಿಯಲ್ಲಿ ವಾಸ ಮಾಡು ಎಂದು ಕೇಳಿದರೆ, ಅವನು ಹೇಳುತ್ತಾನೆ ನೋಡಿ ಸಾರ್ ನಮಗೆ ಹಳ್ಳಿಯಲ್ಲಿ ಸರಿಯಾದ ಸೌಕರ್ಯ ಇಲ್ಲ, ಅಂದರೆ ನಮಗೆ ಇರುವುದಕ್ಕೆ ಕ್ವಾಟ್ರಸ್ ಇಲ್ಲ ಆಫೀಸ್ ಇಲ್ಲ ಎಂದು ಹೇಳುತ್ತಾನೆ. ಆದ್ದರಿಂದ ಮಾನ್ಯ ಸಚಿವರು ವಿಲೇಜ್ ಅಕೌಂಟ್‌ಟ್‌ಗೆ ಹಳ್ಳಿಯಲ್ಲಿ ವಾಸ ಮಾಡಲು ಕ್ವಾರ್ಟಸ್ ಮತ್ತು ಅವನಿಗೆ ಒಂದು ಆಫೀಸ್‌ನ್ನು ಹಂತ ಹಂತವಾಗಿ ಮಾಡಿಕೊಡುವ ಸಲುವಾಗಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಈ ವಿಲೇಜ್ ಅಕೌಂಟೆಂಟ್ ತಹಶೀಲ್ದಾರ್‌ರಿಂದ ಹಿಡಿದು ಮಂತ್ರಿಗಳವರೆಗೆ ಸರಬರಾಜು ಮಾಡುತ್ತಾನೆ. ಮತ್ತೆ ಈ ವಿಲೇಜ್ ಅಕೌಂಟೆಂಟ್ ಯಾವುದಾದರೂ ಎಲೆಕ್ಷನ್ಸ್ ಆದರೆ ಅವನೇ ಮಾಡಬೇಕು. ಮತ್ತೆ ತಹಶೀಲ್ದಾರ್ ಮನೆಗಳಿಗೆ ಸರಬರಾಜು ಮಾಡಬೇಕು ಅಂತಹ ಒಬ್ಬ ಮನುಷ್ಯನಿಗೆ ಮನೆ ಕಟ್ಟಿ ಕೊಡುವಂತೆ ಇಲ್ಲ ಎಂದು ಆದರೆ ಇದು ಬಹಳ ತಪ್ಪಾಗುತ್ತದೆ ಎಂದು ನಾನು ಹೇಳುತ್ತಾ ಅವನಿಗೆ ತಾವು ಮೊದಲು ಮನೆ ಕಟ್ಟಿಕೊಡಲು ಕಾರ್ಯಕ್ರಮ ಕೈಗೊಳ್ಳಬೇಕಾಗುತ್ತದೆ. ಇನ್ನು ವಿಧಾನ ಸೌಧದಲ್ಲಿ ಸೆಕ್ರೆಟರಿ ಮತ್ತು ಡೆಪ್ಯುಟಿ ಸೆಕ್ರೆಟರಿಗಳು ಏನಿದ್ದಾರೆ, ಅವರು ತಮ್ಮ ಸೆಕ್ಷನ್ ಆಫೀಸರ್ಸ್ ಕಡೆ ಇರುವಂತಹ ಫೈಲ್‌ಗಳನ್ನು ೧೫ ದಿವಸಕ್ಕೆ ಒಂದು ಸಾರಿಯಾದರೂ ಚೆಕ್ ಮಾಡುವಂತಹ ವ್ಯವಸ್ಥೆ ಆಗಬೇಕು. ಕೆಲವು ಸಲ

ತಿಂಗಳು ೬ ತಿಂಗಳುಗಳವರೆಗೆ ಫೈಲ್‌ಗಳು ಹಾಗೆಯೇ ಬಿದ್ದಿರುತ್ತವೆ. ನಾವು ಅವರನ್ನು ಹೆಚ್ಚು ಒತ್ತಾಯ ಮಾಡಿದರೆ ಅವರು ಸಿಕ್ಕಾಪಟ್ಟೆ ಕ್ವಯರೀಸ್ ಹಾಕಿ ಕಳುಹಿಸಿ ಬಿಡುತ್ತಾರೆ. ಅವರು ಬಹಳ ಸುಲಭವಾಗಿ ಕ್ವಯರೀಸ್ ಹಾಕಿ ಕಳುಹಿಸುತ್ತಾರೆ, ನಾನು ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ತಹಶೀಲ್ದಾರ್ ಆಫೀಸ್ ಅನ್ನು ೧೯೦೪ ರಲ್ಲಿ ಕಟ್ಟಿಸಿದ್ದು. ಅಲ್ಲಿ ಯೂರಿನಲ್ಸ್ ಇಲ್ಲ. ಅದರ ಸಲುವಾಗಿ ನಮ್ಮ ತಾಲ್ಲೂಕಿನಲ್ಲಿ ತಾಲ್ಲೂಕು ವಿಸಿಟಿಂಗ್ ಹಾಲ್ ಕಟ್ಟಲು ಸರ್ಕಾರ ೧೯೮೭ನೇ ಇಸವಿಯಲ್ಲಿ ಹಣ ಮಂಜೂರು ಮಾಡಿತ್ತು. ಆದರೆ ಆ ವಿಸಿಟಿಂಗ್ ಹಾಲ್ ಅನ್ನು ೧೯೮೭ ರಿಂದ ೧೯೯೦ರವರೆಗೂ ಕಟ್ಟಲು ಹಾಗಲಿಲ್ಲ. ಆ ಹಣ ಲ್ಯಾಪ್ಸ್ ಆಗುವಂತಹ ಪರಿಸ್ಥಿತಿ ಬಂದಿತ್ತು. ಅದಕ್ಕೆ ನಾವು ಒಂದು ಪ್ರೊಪೋಜಲ್ ಮಾಡಿ ಈ ಬಜೆಟ್‌ನಲ್ಲಿರತಕ್ಕಂಥ ಹಣವನ್ನು ಕಟ್ಟಡದ ರಿಪೇರಿ ಮಾಡಲು ಉಪಯೋಗಿಸಿ ಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಒಂದು ಪ್ರೊಪೋಜಲ್‌ನ್ನು ಎಗ್ಸಿಕ್ಯೂಟೀವ್ ಇಂಜಿನೀಯರ್ ಮುಖಾಂತರ ಸರ್ಕಾರಕ್ಕೆ ಕಳುಹಿಸಿ ಕೊಟ್ಟೆವು. ಆದರೆ ಇಲ್ಲಿ ಎಷ್ಟು ಕ್ವಯರೀಸ್ ಹಾಕಿದರು ಎಂದರೆ ಅದು ಆ ದೇವರಿಗೆ ಗೊತ್ತಾಗಬೇಕು. ಅಷ್ಟು ಕ್ವಯರೀಸ್ ಹಾಕಿದ್ದಾರೆ. ಇಲ್ಲಿಯವರೆಗೆ ತಹಶೀಲ್ದಾರ್ ಆಫೀಸ್‌ನಲ್ಲಿ ಯೂರಿನಲ್ಸ್ ಕಟ್ಟುವುದಕ್ಕೆ ಆಗಲಿಲ್ಲ. ತಹಶೀಲ್ದಾರ್ ಆಫೀಸ್‌ಗೆ ನಾವು ವಿಸಿಟಿಂಗ್‌ಗೆ ಹೋದಾಗ ಎಲ್ಲಿ ನಾವು ಯೂರಿನಲ್ಸ್‌ಗೆ ಹೋಗಬೇಕೆಂದು ಆತನನ್ನು ಕೇಳಿದರೆ ಆತ ಹೇಳುತ್ತಾನೆ ಅಲ್ಲಿ ಗೋಡೆಗೆ ಹೋಗಿ ಎಂದು ಹೇಳುತ್ತಾನೆ. ಇಂತಹ ಒಂದು ಪ್ರಸಂಗ ನಮಗೆ ಬಂದಿದೆ. ಆ ನಿಮ್ಮ ಡೆಪ್ಯುಟಿ ಸೆಕ್ರೆಟರಿ ಮತ್ತು ಸೆಕ್ರೆಟರಿಯಿಂದ ನಮಗೆ ಅಲ್ಲಿ ಯೂರಿನಲ್ಸ್ ವ್ಯವಸ್ಥೆ ಮಾಡಲಿಕ್ಕೆ ಆಗಲಿಲ್ಲ. ಹಣ ಲ್ಯಾಪ್ಸ್ ಆಗುತ್ತಿದೆ. ಇದು ಸೆಕ್ರೆಟರಿ ಮತ್ತು ಡೆಪ್ಯುಟಿ ಸೆಕ್ರೆಟರಿಯವರ ತಪ್ಪಿನಿಂದ ಆದದ್ದು. ಅವರನ್ನು ನಾವು ಏನಾದರೂ ಕೇಳಿದರೆ ಪ್ರತಿಯೊಂದಕ್ಕೂ ಫೈನಾನ್ಸ್‌ಗೆ ಹೋಗಬೇಕು ಎಂದು ಹೇಳುತ್ತಾರೆ. ನಾನು ಹೇಳಿದೆ, ಆತನಿಗೆ ನೋಡಪ್ಪ ನಿನ್ನ ಕೈಯಲ್ಲಿ ಎಷ್ಟು ಕೆಲಸ ಆಗುತ್ತದೆಯೋ ಅಷ್ಟು ಕೆಲಸ ಮಾಡು, ಆದರೆ ಈ ತರಹ ಕ್ವಯರೀಸ್ ಹಾಕಬೇಡ - ನೀನೇನು ಒಂದು ಹೊಲ ಮತ್ತು ಗದ್ದೆ ಜಮೀನಿಗೆ ಗ್ರ್ಯಾಂಟ್ ಮಾಡುವುದಿಲ್ಲ ಎಂದು ಹೇಳಿದೆ. ಅದಕ್ಕೆ ನಾನು ಹೇಳುವುದೇನೆಂದರೆ, ಸ್ವಲ್ಪ ಅವರಿಗೆ ಡಿಸ್‌ಕ್ರಿಶನರಿ ಪವರ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಪ್ರಾಕ್ಟಿಕಲ್ ಆಗಿ ಇರುವಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಜಮೀನು ಮತ್ತು ಗೌಡಗಾರಿಕೆ ಜಮೀನು ಹಾಗೂ ತೋಟ ಮತ್ತು ತಳವಾರ ಜಮೀನುಗಳನ್ನು ಮಾರಾಟ ಮಾಡುವಂತೆ ಇಲ್ಲ. ತಮಗೆ ಗೊತ್ತಿದೆ. ಆತನ ಮನೆಯಲ್ಲಿ ಮಗಳ ಲಗ್ನ ಇರುತ್ತದೆ, ಹಣ ಬೇಕಾಗುತ್ತದೆ ಆಗ ಜಮೀನು ಮಾರಾಟ ಮಾಡುವಂತೆ ಇಲ್ಲ. ಆಗ ಈ ಒಂದು ಕಾಯ್ದೆ ಅಡ್ಡ ಬರುತ್ತದೆ ಆದ್ದರಿಂದ ಮಾನ್ಯ ಮಂತ್ರಿಗಳು ಇಂತಹದ್ದಕ್ಕೆ ಹಣ ರೀಗ್ರ್ಯಾಂಟ್ ಮಾಡಿ ಕೊಡುವಂತಹ ಕೆಲಸ ಮಾಡಬೇಕು. ಇನ್ನು ಲ್ಯಾಂಡ್ ರೀಫಾರಮ್ಸ್ ಆಕ್ಟ್ ಬಂದ ಕೂಡಲೇ ಕರಣಿಕರ ಹೆಸರಿನಲ್ಲದ್ದ ಜಮೀನುಗಳು ಎಲ್ಲಾ ಕರ್ನಾಟಕ ಸರ್ಕಾರದ ಜಮೀನುಗಳು ಎಂದು ಮಾಡಿದರು. ಇರ್ರೆಸ್ಪೆಕ್ಟೀವ್ ವಿತ್‌ಔಟ್ ಗೀವಿಂಗ್ ನೋಟೀಸಸ್ ಅನ್ನು ಸಹ ಕೊಡದೆ ಸೆಕ್ಷನ್ ೪೮ರ ಕೆಳಗೆ ನೋಟೀಸ್ ಸಹ ಕೊಡದೆ ಲ್ಯಾಂಡ್ ರೆಸ್ಟ್ ಇನ್ ಗೌರ್ನಮೆಂಟ್ ಎಂದು ಮಾಡಿದ ಕೂಡಲೇ ಅದು ಅಪ್ಪನ ಹೆಸರಿನಲ್ಲಿ ಇರಲಿ ಮಗಳ ಹೆಸರಿನಲ್ಲಿ ಇರಲಿ ತಂಗಿ ಹೆಸರಿನಲ್ಲಿ ಇರಲಿ ಬೇಕಾದವರ ಹೆಸರಿನಲ್ಲಿ ಇರಲಿ ಆ ಒಂದು ಕಾಲಂನಲ್ಲಿ ಯಾವುದೋ ಒಂದು ಹೆಸರು ಇದ್ದರೆ ಸಾಕು, ಅದನ್ನು ಕರ್ನಾಟಕ ಸರ್ಕಾರ ಎಂದು ಮಾಡಿದರು. ಆ ರೀತಿ ಮಾಡಿದ ಕೂಡಲೆ ಕೆಲವು ಮಂದಿ ಕರ್ನಾಟಕ ಸರ್ಕಾರ ಎಂದು ಇವೆ, ಅದಕ್ಕೆ ಲ್ಯಾಂಡ್ ಟ್ರಿಬ್ಯುನಲ್ ಮುಂದೆ ಒಂದು ಅಪ್ಲಿಕೇಷನ್ ಕೊಟ್ಟು ನಮ್ಮ ಹೆಸರು ಕರ್ನಾಟಕ ಸರ್ಕಾರದಲ್ಲಿ ಇದೆ, ಅದಕ್ಕೆ ನಮ್ಮ ಹಕ್ಕಿಗೆ ಬಾಧೆ ಬಾರದೆ ಇರುವ ಹಾಗೆ ಮಾಡಬೇಕೆಂದು ಅಪ್ಲಿಕೇಷನ್ ಕೊಟ್ಟರು. ಆಗ ಲ್ಯಾಂಡ್ ಟ್ರಿಬ್ಯುನಲ್‌ನವರು ಏನು ಮಾಡಿದರು ಎಂದರೆ "since the applicant is the owner of the land and is in possession of the land, the application is rejected". ಎಂದು ಹೇಳಿದರು. ಅಪ್ಲಿಕೇಷನ್ ರಿಜೆಕ್ಟ್ ಎಂದು ಹೇಳಿದರು ಆದ್ದರಿಂದ ಅವರಿಗೆ ಬ್ಯಾಂಕಿನಲ್ಲಿ ಸಾಲ ಸಿಗುವಂತೆ ಇಲ್ಲ. ಇದು ಗೌರ್ನಮೆಂಟ್ ಆಫ್ ಕರ್ನಾಟಕ ಎಂದು ಇದೆ, ನಾವೇನಾದರು ಮಾಡಿದರೆ ನಮ್ಮ ನೌಕರಿ ಹೋಗುತ್ತದೆ ಅಲ್ಲಿ ಐ.ಎ.ಎಸ್ ಆಫೀಸ್ ಡಿ.ಸಿ. ಇದ್ದಾರೆ ನಾವೇನು ಮಾಡುವುದಿಲ್ಲವೆಂದು ಹೇಳಿದರು. ಹೀಗಾಗಿ ಕರ್ನಾಟಕ ಸರ್ಕಾರ ಎನ್ನುವುದು ಇವತ್ತು ಉಳಿಯುವುದಕ್ಕೆ ಹತ್ತಿದೆ ಬೋಗಸ್ ಕರ್ನಾಟಕ ಸರ್ಕಾರ ಇದ್ದದ್ದು ಅಳಿಯುವುದಕ್ಕೆ ಹತ್ತಿದೆ ಇನ್ನು ಕೆಲವು......

ಶ್ರೀ ಕೆ. ಎಚ್. ಪಾಟೀಲ್ ;— ಯಾರೇ ಜಮೀನು ತೆಗೆದುಕೊಂಡರೂ ಸಹ ರಿವಿಜನ್ ಸರ್ವೆ ನಂಬರ್ ಎಂದು ಇರುತ್ತದೆ. ಮತ್ತೆ ಸರ್ಕಾರಿ ರಿವಿಜನ್ ಸರ್ವೆ ನಂಬರ್ಸ್ ಎಂದು ಇರುತ್ತದೆ. ನಮ್ಮ ನಂಜುಂಡಸ್ವಾಮಿಯವರ ಚಳುವಳಿ ಪ್ರಕಾರ ಅವರು ಇದನ್ನು ಒಪ್ಪುವುದಿಲ್ಲ. ಆ ಒಂದು ಪದ್ಧತಿ ಏನು ಇದೆ ಸರ್ಕಾರಿ ರಿವಿಜನ್ ಸರ್ವೆ ನಂಬರ್ಸ್ ಎಂದು ಪ್ರತಿಯೊಂದರಲ್ಲೂ ಇರುತ್ತದೆ.

ಶ್ರೀ ಎಸ್. ಎಚ್. ಕೌಜಲಗಿ :— ಮತ್ತೆ ಕೆಲವರು ಅಪ್ಲಿಕೇಷನ್ ಅನ್ನು 48ರ ಸೆಕ್ಷನ್ ಕೆಳಗೆ ಕೊಡದೆ ಇರುವವರು ಇದ್ದಾರೆ. ಕೆಲವರು ಕೊಟ್ಟಿದ್ದಾರೆ. ಆದರೆ ಯಾರು ಕರ್ನಾಟಕ ಸರ್ಕಾರ ಎಂದು ಇದ್ದು ಪೊಜಿಷನ್‌ಲ್ಲಿ ಇರುತ್ತಾರೋ ಅವರಿಗೆ ತಾವು ಒಂದು ಡೈರೆಕ್ಷನ್ ಕೊಟ್ಟು ನಿಜವಾಗಿ ಯಾರಿದ್ದಾರೆ, ಅವರ ಎಂಟ್ರೀಸ್ ಸರಿ ಮಾಡಬೇಕೆಂದು ನಾನು ಹೇಳುತ್ತೇನೆ.
ಇವತ್ತು ಬೈಲಹೊಂಗಲ ತಾಲ್ಲೂಕಿನ ಗ್ರಾಮದಲ್ಲಿ ಏನಾಗಿದೆ ಎಂದರೆ,

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ನೀವು ಅಧ್ಯಕ್ಷರನ್ನು ಉದ್ದೇಶಿಸಿ ಹೇಳುತ್ತೀರೋ? ಮಂತ್ರಿಯವರನ್ನು ಉದ್ದೇಶಿಸಿ ಹೇಳುತ್ತಿದ್ದೀರೋ ?

ಶ್ರೀ ಎಸ್. ಹೆಚ್. ಕೌಜಲಗಿ.—ಚಚಡಿ ಗ್ರಾಮದಲ್ಲಿ 3 ಸಾವಿರ ಎಕರೆ ಜಮೀನು ಎಲ್ಲಾ ಈ ಪ್ರಕಾರ ಆಗಿದೆ. ಕರೆಕ್ಷನ್ ಮಾಡುವುದಕ್ಕಾಗುವುದಿಲ್ಲ. ಅವರು ಬ್ಯಾಂಕುಗಳಲ್ಲಿ ಸಾಲ ತೆಗೆಯುವುದಕ್ಕೆ ಆಗುವುದಿಲ್ಲ. ಆದ ಕಾರಣ ದಯಮಾಡಿ ಚಚಡಿ ಗ್ರಾಮದಲ್ಲಿ ಏನು ಅನ್ಯಾಯ ಆಗಿದೆಯೋ ಅದನ್ನು ಸರಿಪಡಿಸಬೇಕು. ತಮ್ಮ ಆಫೀಸರ್‌ಗಳನ್ನು ಅಲ್ಲಿಗೆ ಕಳುಹಿಸಿರಿ. ಡೆಪ್ಯೂಟಿ ಸೆಕ್ರೆಟರಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟು ತನಿಖೆ ಮಾಡಿಸಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಹೇಳುತ್ತಾ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ದಯಾನಂದ ರಾವ್. (ಗಾಂಧೀನಗರ).—ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಇವತ್ತಿನ ದಿವಸ ಮಾನ್ಯ ಕಂದಾಯ ಮಂತ್ರಿಗಳು ಕಂದಾಯ ಖಾತೆ ಹಾಗೂ ಕಾರ್ಮಿಕ ಖಾತೆಯ ಬೇಡಿಕೆಗಳನ್ನು ಸದನದಲ್ಲಿ ಏನು ಮಂಡಿಸಿದ್ದಾರೆ ಅದನ್ನು ನಾನು ಈ ಬೇಡಿಕೆಗಳನ್ನು ಸ್ವಾಗತಿಸುತ್ತಾ ನನ್ನ ಕ್ಷೇತ್ರದ ಕೆಲವು ವಿಷಯಗಳ ಬಗ್ಗೆ ಮಾತನಾಡಲಿಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಹಕ್ಕು ಪತ್ರಗಳ ಬಗ್ಗೆ. ೧೯೭೦ನೇ ಇಸವಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನಿವೇಶನವನ್ನು ಸರ್ಕಾರದವರು ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ 'ಸ್ವತಂತ್ರ ನಗರ' 'ಗೋಪಾಲಪುರ' 'ದಯಾನಂದ ನಗರ' ಈ ಸ್ಥಳಗಳಲ್ಲಿ ಸುಮಾರು ೨ ಸಾವಿರ ನಿವೇಶನಗಳಿವೆ. ಇಲ್ಲಿರುವವರು ೧೯೭೦ನೇ ಇಸವಿಯಿಂದ ಕಂದಾಯವನ್ನು ಕೊಟ್ಟಿದ್ದಾರೆ ಮತ್ತು ಖರ್ಚೂ ಸಹ ಇವರಲ್ಲಿ ಇದೆ. ಆದರೆ ಈ ಬಡ ಜನರಿಗೆ ಇವತ್ತಿನವರೆಗೂ ಹಕ್ಕು ಪತ್ರಗಳನ್ನು ಸರ್ಕಾರದವರು ಮಂಜೂರು ಮಾಡಿಲ್ಲ. ಈ ಬಗ್ಗೆ ನಾನು ಮಂತ್ರಿಗಳ ಗಮನಕ್ಕೆ ತಮ್ಮ ಮೂಲಕ ತಿಳಿಸುವುದೇನೆಂದರೆ, ಆದಷ್ಟು ಬೇಗ ಈ ಬಡವರಿಗೆ ಹಕ್ಕು ಪತ್ರ ಪಡೆಯಲ್ಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಮತ್ತು ಎರಡನೆಯದಾಗಿ ಈ ರೆವಿನ್ಯೂ ಆಫೀಸರ್ಸ್ ಏನಿದ್ದಾರೆ ಇವರ ಬಗ್ಗೆ ಮಾತನಾಡುವುದಾದರೆ. ನನ್ನ ಕ್ಷೇತ್ರದಲ್ಲಿ ಒಂದು ದೊಡ್ಡ ಭ್ರಷ್ಟಾಚಾರವೇ ನಡೆಯುತ್ತಿದೆ. ಇದರ ಬಗ್ಗೆ ಈಗಾಗಲೇ ಎಷ್ಟೋ ಪತ್ರಗಳನ್ನು ಹಕ್ಕು ಪತ್ರಗಳನ್ನು ಕೊಡಬೇಕೆಂಬ ಬಗ್ಗೆ ಅಧಿಕಾರಿಗಳಿಗೆ ಬರೆದಿದ್ದೇನೆ. ನನ್ನ ಕ್ಷೇತ್ರದ ಜನರು ನನ್ನಲ್ಲಿ ಬಂದು ಕೇಳಿಕೊಂಡಾಗ ಆ ಅಧಿಕಾರಿಗಳನ್ನು ಭೇಟಿ ಮಾಡಿ ಎಂದು ಅವರಿಗೆ ತಿಳಿಸಿದ್ದೆ. ಅವರು ಅಧಿಕಾರಿಗಳನ್ನು ಕಾಣುವುದಕ್ಕೆ ಹೋದಾಗ ಅಧಿಕಾರಿಗಳು ಅವರುಗಳ ಹತ್ತಿರ ದುಡ್ಡನ್ನು ಸಹಾ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮವನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳಬೇಕಾಗಿದೆ. ಮತ್ತೊಂದು ವಿಷಯವೇನೆಂದರೆ, ಹೋದ ಸರ್ಕಾರದಲ್ಲಿ ಹಿಂದೆ ಒಂದು ಮನೆಗೆ ೧೦೦ ರೂಪಾಯಿಗಳ ಕಂದಾಯ ಏನಿತ್ತು ಅದನ್ನು ೧೦೦೦ ರೂಪಾಯಿಗಳಷ್ಟು ಹೆಚ್ಚು ಮಾಡಿದ್ದಾರೆ. ಈ ರೀತಿ ಹೆಚ್ಚುವರಿ ಕಂದಾಯ ಮಾಡಿರುವುದರಿಂದ ನಮ್ಮ ಗಾಂಧೀನಗರ ಕ್ಷೇತ್ರದಿಂದ ಸುಮಾರು ೩೦ ಲಕ್ಷ ರೂಪಾಯಿಯಷ್ಟು ಆದಾಯ ಇವತ್ತು ಕಂದಾಯ ಇಲಾಖೆಗೆ ಸೇರಬೇಕಾಗಿದೆ. ಆದರೆ, ಇದನ್ನು ಕೊಡಲಾರದಂಥವರು ಕೋರ್ಟಿನ ಮೊರೆ ಹೊಕ್ಕಿದ್ದಾರೆ. ಆದುದರಿಂದ ಇದನ್ನು ಯಾವುದೇ ರೀತಿಯ ಒಂದು ಟ್ರಿಬ್ಯೂನಲ್ ಅನ್ನು ಮಾಡಿ ಅದರ ಮೂಲಕ ಪರಿಶೀಲನೆ ಮಾಡಿಸಿ, ಈ ದುಡ್ಡು ಸರಕಾರಕ್ಕೆ ಸೇರುವ ಹಾಗೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಭ್ರಷ್ಟಾಚಾರದ ಬಗ್ಗೆ ಹೇಳುವುದಾದರೆ....

ಶ್ರೀ ಕೆ. ಹೆಚ್. ಪಾಟೀಲ್.—ತಾವುಗಳು ಯಾವ ಟ್ಯಾಕ್ಸ್ ಬಗ್ಗೆ ಹೇಳುತ್ತಿದ್ದೀರಿ ?

ಶ್ರೀ ಆರ್. ದಯಾನಂದ ರಾವ್.—ಬಿಲ್ಡಿಂಗ್ ಟ್ಯಾಕ್ಸ್ ಬಗ್ಗೆ.

ಶ್ರೀ ಕೆ. ಹೆಚ್. ಪಾಟೀಲ್.—ಅದು ನಮಗೆ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಸಿಟಿಯೊಳಗಿರತಕ್ಕಂಥ ರೆವಿನ್ಯೂ ಲ್ಯಾಂಡ್ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಆರ್. ದಯಾನಂದ ರಾವ್.—ಇನ್ನು ಭ್ರಷ್ಟಾಚಾರದ ಬಗ್ಗೆ ಹೇಳುವುದಾದರೆ, ಈಗಾಗಲೇ ನಮ್ಮ ಸದನದ ಮಾನ್ಯ ಸದಸ್ಯರುಗಳು ಭ್ರಷ್ಟಾಚಾರದ ಬಗ್ಗೆ ಮಾತನಾಡಿದ್ದರೂ ಕೂಡ ಭ್ರಷ್ಟಾಚಾರ ಒಂದಿಷ್ಟೂ ನಿಂತಿಲ್ಲ ಎಂದು ಹೇಳಬೇಕಾಗುತ್ತದೆ. ಒಬ್ಬ ಸೀನಿಯರ್ ಸಬ್‌ರಿಜಿಸ್ಟ್ರಾರ್ ಜಯನಗರದಲ್ಲಿ

ದ್ದವರನ್ನು ನಮ್ಮ ಕ್ಷೇತ್ರಕ್ಕೆ ತಾವುಗಳು ವರ್ಗಾವಣೆ ಮಾಡಿದ್ದೀರಿ, ಜಯನಗರದ ಶಾಸಕರು ಆ ಅಧಿಕಾರಿಯ ಮೇಲೆ ಭ್ರಷ್ಟಾಚಾರದ ಚಾರ್ಜ್‌ಸ್ ಇವೆ ಎಂದು ಪತ್ರ ಬರೆದಿದ್ದರೂ ಕೂಡ ಅದೇ ವ್ಯಕ್ತಿಯನ್ನು ಈಗ ಗಾಂಧಿನಗರ ಕ್ಷೇತ್ರಕ್ಕೆ ಪೋಸ್ಟ್ ಮಾಡಿದ್ದೀರಿ. ಆ ಅಧಿಕಾರಿಯ ಹೆಸರು ಮುದ್ದಗಂಗಯ್ಯ. ಅದೇ ವ್ಯಕ್ತಿ ಇಲ್ಲಿಯೂ ಸಹ ತನ್ನ ಪ್ರವೃತ್ತಿಯನ್ನು ಬಿಟ್ಟ ಹಾಗೆ ಕಾಣುವುದಿಲ್ಲ. ನಮ್ಮ ಕ್ಷೇತ್ರದ ಜನರು ಬಂದು ಆ ಅಧಿಕಾರಿಯು ವಹಿವಾಟು ಮಾಡುತ್ತಿರುವುದರ ಬಗ್ಗೆ ದೂರು ಹೇಳುತ್ತಿದ್ದಾರೆ, ಆದುದರಿಂದ ಇಂಥ ಭ್ರಷ್ಟ ಅಧಿಕಾರಿಯ ಬಗ್ಗೆ ತಾವುಗಳು ಸೂಕ್ತ ಕ್ರಮವನ್ನು ತೆಗೆದುಕೊಂಡು, ಅವನ ಮನೆಯನ್ನು ಕೂಡ ಜಫ್ತಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ಗಳಲ್ಲಿಯೂ ಕೂಡ ಬಹಳ ಅವ್ಯವಸ್ಥೆ ಇದೆ. ಅಲ್ಲಿ ಭ್ರಷ್ಟಾಚಾರವೂ ನಡೆಯುತ್ತಾ ಇದೆ. ಸುಮಾರು ಐದು ವರ್ಷಗಳಿಂದ ನಮ್ಮ ಕ್ಷೇತ್ರದಲ್ಲಿ ಯಾರಿಗೂ ಒಂದೂ ಉದ್ಯೋಗ ಸಹ ದೊರಕಿಲ್ಲ. ಇದರ ಬಗ್ಗೆ ಕೂಡ ಮಾನ್ಯ ಸಚಿವರು ಸೂಕ್ತ ಕ್ರಮವನ್ನು ತೆಗೆದುಕೊಂಡು ಹೆಚ್ಚು ಉದ್ಯೋಗವನ್ನು ಉದ್ಯೋಗವಿನಿಮಯ ಕೇಂದ್ರದ ಮೂಲಕ ಸಾರ್ವಜನಿಕರಿಗೆ ದೊರಕಿಸಿಕೊಡುವಲ್ಲಿ ಪರಿಶೀಲಿಸಬೇಕೆಂದು ಕೇಳಿ ಕೊಂಡು, ನನಗೆ ಮಾತನಾಡಲು ಅವಕಾಶವನ್ನು ಮಾಡಿ ಕೊಟ್ಟ ಅಧ್ಯಕ್ಷರಿಗೆ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಉಪಾಧ್ಯಕ್ಷರೇ, ನಾನು ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ. ಕೆಲವು ಸಲಹೆಗಳನ್ನು ಮಾತ್ರ ಸಚಿವರಿಗೆ ತಿಳಿಸಬೇಕೆಂದಿದ್ದೇನೆ. ಪ್ರಚಲಿತ ವ್ಯವಸ್ಥೆಯಲ್ಲಿ ಖಾತೆ ಬದಲಾವಣೆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ತಾತ ಮುತ್ತಾತರ ಕಾಲದಿಂದಲೂ ಒಂದೇ ಹೆಸರಿನಲ್ಲಿ ಖಾತೆ ಇದೆ. ಅದಕ್ಕೆ ನನ್ನ ಸಲಹೆ ಏನೆಂದರೆ, ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ಸ್‌ಗೆ ಒಂದು ಜವಾಬ್ದಾರಿಯನ್ನು ಗೊತ್ತು ಮಾಡಿ ಅದನ್ನು ಅಪ್-ಟು-ಡೇಟ್ ಇಡುವಂತೆ ವ್ಯವಸ್ಥೆ ಮಾಡಬೇಕು. ಅವರು ಹಾಗೆ ಮಾಡಿಸದಿದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹೀಗೆ ಇರುವುದರಿಂದಾಗಿ ಸಹಸ್ರಾರು ರೂಪಾಯಿಗಳ ಲಂಚದ ವ್ಯವಹಾರ ನಡೆಯುತ್ತಾ ಇದೆ. ೨೦–೩೦ ರೂಪಾಯಿಗಳ ಲಂಚವಾದರೆ ಕೊಡಬಹುದು. ಇದು ಅಷ್ಟರಲ್ಲಿ ಇರದೆ ಸಾವಿರಾರು ಗಟ್ಟಲೆ ಇದೆ. ಇದರ ಬಗ್ಗೆ ತೀವ್ರವಾದಂಥ ಗಮನವನ್ನು ಹರಿಸಬೇಕು. ಈಗ ಪಹಣಿ ಪರಿಸ್ಥಿತಿ ಏನಾಗಿದೆ ಎಂದರೆ ಬೆಳಿಗ್ಗೆ ಒಬ್ಬರ ಹೆಸರು, ಮಧ್ಯಾಹ್ನ ಇನ್ನೊಬ್ಬರ ಹೆಸರು ಸಾಯಂಕಾಲ ಮಗದೊಬ್ಬರು ಹೆಸರು ಬದಲಾಗುತ್ತಾ ಇರುತ್ತದೆ. ಹೀಗೆ ಒಂದೇ ದಿವಸದಲ್ಲಿ ೩–೪ ಜನರ ಹೆಸರನ್ನು ಬೇಕಾದವರೂ ಅಧಿಕಾರಿಗಳು ಬದಲಾವಣೆ ಮಾಡಿ ಕೊಡುತ್ತಾರೆ. ಪಹಣಿಯನ್ನು ಏನು ನೀಡುತ್ತಾರೆ, ಅದಕ್ಕೆ ಯಾವುದೇ ಒಂದು ಬೆಲೆ ಇಲ್ಲದಿರತಕ್ಕಂಥ ಪರಿಸ್ಥಿತಿಯು ಇಂದು ಉಂಟಾಗಿದೆ.

ಈ ಪಹಣಿ ಬದಲಾವಣೆ ಆಗದೇ ಇರುವಂಥ ಏರ್ಪಾಡು ಮಾಡಿ ಅದಕ್ಕೆ ಜಿಲ್ಲಾ ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಏನಾದರೂ ನಡೆದಿರುವುದು ಕಂಡುಬಂದರೆ ಸಂಬಂಧಪಟ್ಟವರ ಮೇಲೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ನೀಡುತ್ತೇನೆ. ಮತ್ತು ಪಾಸ್ ಪುಸ್ತಕದ ಬಗ್ಗೆ ಮಾನ್ಯ ಬಾಬಾಗೌಡರು ಹೇಳಿದ್ದಾರೆ. ಇದರಲ್ಲಿ ಹಿಂದಿನ ಸರ್ಕಾರದವರಾದ ನಾವು ಫೇಲ್ ಆಗಿದ್ದೇವೆ. ತಕ್ಷಣ ಇದನ್ನು ತಕ್ಷಣದಲ್ಲಿ ಜಾರಿಯಲ್ಲಿ ಕೊಡುವುದಕ್ಕೆ ಯೋಚನೆ ಮಾಡಬೇಕು. ಆಮೇಲೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ೧೨ ಸಾವಿರ ರೂ. ಆದಾಯದ ಮಿತಿ ಇದ್ದವರು ಭೂಮಿಯನ್ನು ಕೊಳ್ಳುವಂತಿಲ್ಲವೆಂದು ಇದೆ ದಯವಿಟ್ಟು ಈ ಮಿತಿಯನ್ನು ತೆಗೆದುಹಾಕಿ. ಈಗ ಸಾಕಷ್ಟು ಬದಲಾವಣೆ ಆಗಿದೆ. ಆದ್ದರಿಂದ ಈ ಮಿತಿಯನ್ನು ತೆಗೆಯುವಂತಹ ಕೆಲಸ ಮಾಡಬೇಕು. ಆಮೇಲೆ ಅಕ್ವಿಜಿಷನ್ ಬಗ್ಗೆ ಹೇಳಬೇಕಾಗಿದೆ. ಸಬ್‌ರಿಜಿಸ್ಟ್ರಾರ್ ಲೆಕ್ಕದ ಪ್ರಕಾರವೇ ಎಕರೆಗೆ ಇಷ್ಟು ಎಂದು ನಿಗದಿಪಡಿಸುತ್ತಾರೆ. ಅದು ಯಾವುದೂ ವಾಸ್ತವಿಕ ಲೆಕ್ಕಗಳಿಂದ ಕೂಡಿಲ್ಲ ಇದರಿಂದ ಏನಾಗುತ್ತದೆ ಎಂದರೆ ರೈತ ಶತಶತಮಾನಗಳಿಂದ ಹೊಂದಿದ್ದ ಭೂಮಿಯನ್ನು ಕಳೆದುಕೊಳ್ಳುತ್ತಾನೆ ಜೊತೆಗೆ ಭೂಮಿಗೂ ವ್ಯವಸಾಯಗಾರನಿಗೂ ಇದ್ದ ಬಾಂಧವ್ಯ ಹೊರಟು ಹೋಗುತ್ತದೆ. ತಾವು ರೈತರಾಗಿರುವ ಕಾರಣ ಇದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ತಾವು ಲಿಬರಲಾಗಿ ಕಾಂಪನ್‌ಸೇಷನ್ ಫಿಕ್ಸ್ ಮಾಡಬೇಕು. ಓಬಿರಾಯನ ಕಾಲದ್ದು ಈಗಿರುವುದು. ಈ ರೈತರಿಗೂ ಮತ್ತು ಭೂಮಿಗೂ ಇರುವ ಬಾಂಧವ್ಯದ ವಿಷಯದಲ್ಲಿ ನೀವು ಬೆಲೆ ಕಟ್ಟುವುದಕ್ಕೆ ಹೋಗಬೇಡಿ. ಉದಾರವಾದ ನೀತಿಯನ್ನನುಸರಿಸಬೇಕು ಮತ್ತು ಈಗಿರುವ ಗೈಡ್‌ಲೈನ್ಸನ್ನು ಬದಲಾಯಿಸಬೇಕೆಂದು ಸೂಚನೆ ಕೊಡುತ್ತೇನೆ.

ಮತ್ತೆ ಲ್ಯಾಂಡ್ ರಿಫಾರ್ಮ್ಸ್ ವಯಲೇಷನ್ಸ್ ಆಗಿರುವುದರ ಹೇಳಬೇಕಾದರೆ, ಬೆಂಗಳೂರು ಸುತ್ತಮುತ್ತ ಬೇಕಾದಷ್ಟು ಆಗಿದೆ. ಬೆಂಗಳೂರು ಸುತ್ತಮುತ್ತಲಿನ ತಾಲ್ಲೂಕುಗಳ ಭೂಮಾಲೀಕರಿಗೆ ಯಾವ ಕಾನೂನೂ ಇಲ್ಲ. ಈಗಿನ ರೂಲ್ ಆಫ್ ಲಾ ಎಲ್ಲರಿಗೂ ಅನ್ವಯ ಆಗಬೇಕು. ಬೆಂಗಳೂರು

ಸುತ್ತಮುತ್ತಲಿನ ಎರಡು ಮೂರು ತಾಲ್ಲೂಕುಗಳು ಏನಿವೆ ಇವರ ಬಗ್ಗೆಯೇ ನೀವು ಒಂದು ಸರ್ವೆ ಮಾಡಿಸಬೇಕು. ಕಾನೂನು ಪ್ರಕಾರ ಈ ಬಗ್ಗೆ ಕ್ರಮ ತೆಗೆದುಕೊಂಡರೆ ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿಗಳ ಆದಾಯ ಬರುತ್ತದೆ ದೊಡ್ಡ ದೊಡ್ಡವರ ಹೆಸರುಗಳೆಲ್ಲ ನಿಮಗೆ ಸಿಗುತ್ತವೆ. ಅವರುಗಳು ಯಾರು ಎಂಬುದು ನಿಮಗೂ ಗೊತ್ತಿದೆ. ಇದು ನಿಮಗೊಂದು ತತ್ವಪರೀಕ್ಷೆ ಯಾರ್ಯಾರು ಈ ಕಾನೂನನ್ನು ವಯಲೇಟ್ ಮಾಡಿದ್ದಾರೋ ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ವಿಲೇಜ್ ಅಕೌಂಟೆಂಟ್ಸ್ ಎಂದು ಯಾರಿದ್ದಾರೆ, ಅವರನ್ನು ಎಲ್ಲಿ ಹಿಡಿಯಬೇಕೋ ಗೊತ್ತಿಲ್ಲ. ನಮ್ಮ ಸಂದರ್ಭಕ್ಕೆ ಸರಿಯಾಗಿ ಸಿಗುವುದಿಲ್ಲ, ಊರಿನಲ್ಲಿ ಸಿಗುವುದಿಲ್ಲ, ಆಫೀಸಿನಲ್ಲಿ ಸಿಗುವುದಿಲ್ಲ. ಅವರು ಸಿಗುವುದೇ ಸಂಜೆ ಬಾರ್ ಅಥವಾ ಹೆಂಡದ ಅಂಗಡಿಗಳಲ್ಲಿ ಸಿಗುತ್ತಾರೆ. ಎಲ್ಲ ರೀತಿಯ ಕಡತ ಅವರ ಬಳಿಯೇ ಇರುತ್ತವೆ. ಮನೆಗಳನ್ನು ಕೆಲವು ಕಡೆ ಕಟ್ಟಿಕೊಟ್ಟಿದ್ದರೂ ಅಲ್ಲಿ ಅವರು ಸಿಗುವುದಿಲ್ಲ. ಅವರು ಮುಖ್ಯ ಸ್ಥಳದಲ್ಲಿಲ್ಲದಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ನೀವು ಹೇಳಿದರೆ ರೈತರಿಗೆ ಬಹಳ ಸಹಾಯವಾಗುತ್ತದೆ. ಅದೇ ರೀತಿ ರೆವಿನ್ಯೂ ಇನ್ಸ್‌ಪೆಕ್ಟರ್ ಕೂಡ. ಮುಖ್ಯ ಸ್ಥಳಗಳಲ್ಲಿ ಶೇಕಡ ೯೯ ರಷ್ಟು ಇರುವುದಿಲ್ಲ. ಇದನ್ನು ತಾವು ತೀವ್ರವಾಗಿ ಗಮನಿಸಬೇಕು. ಎಂದು ಹೇಳುತ್ತಾ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಸಿ. ಸಿದ್ಧನಗೌಡರ್ (ಕಲಘಟಗಿ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಂದಾಯ ಹಾಗೂ ಕಾರ್ಮಿಕ ಸಚಿವರು ಏನು ಒಂದು ಆಯವ್ಯಯವನ್ನು ಮಂಡಿಸಿದ್ದಾರೆ ನಾನು ಇದನ್ನು ವಿರೋಧ ಮಾಡುತ್ತಾ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ನಮ್ಮ ಹಿರಿಯರು ಮತ್ತು ನಮ್ಮ ಗೆಳೆಯರು ಮಾತನಾಡಿದ್ದಾರೆ, ಈ ಕಂದಾಯ ಮತ್ತು ಕಾರ್ಮಿಕ ಇಲಾಖೆಯಲ್ಲಿ ಕೆಲವೊಂದು ಕಾನೂನುಗಳು ಬದಲಾವಣೆ ಆಗಬೇಕು ಎಂದು ಹೇಳಿ ಅನೇಕ ಜನ ಸದಸ್ಯರು ಹೇಳಿದ್ದಾರೆ. ಆದರೆ ಒಂದು ಸಂತೋಷ ವೆಂದರೆ ಈ ಹಿಂದೆ ಕೂಡಾ ನಮ್ಮ ಜಿಲ್ಲೆಯವರೇ ಕಂದಾಯ ಸಚಿವರಾಗಿದ್ದರು ಸನ್ಮಾನ್ಯ ಕೆ. ಹೆಚ್. ಪಾಟೀಲರು ಕೂಡಾ ಕಂದಾಯ ಮತ್ತು ಕಾರ್ಮಿಕ ಇಲಾಖೆಯನ್ನು ತೆಗೆದುಕೊಂಡಿರುವುದನ್ನು ನೋಡಿ ನಿಜವಾಗಿಯೂ ನನಗೆ ಬಹಳ ಸಂತೋಷವಾಗಿದೆ. ಇದು ಧಾರವಾಡದವರ ಸುದೈವ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದರೆ ಅವರು ಬಹಳ ಅನುಭವವನ್ನು ಹೊಂದಿರುವವರು ಸಹಕಾರಿ ಕ್ಷೇತ್ರದಲ್ಲಿ ನಮ್ಮ ಜಿಲ್ಲೆಯಲ್ಲಿ ಒಳ್ಳೆಯ ಕೆಲಸವನ್ನು ಮಾಡಿ ಅನೇಕ ಒಂದು ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ಮುಂದೆ ಬಂದಿದ್ದಾರೆ. ಆದಕ್ಕೆ ಅವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ ಈ ಒಂದು ಬೇಡಿಕೆಯನ್ನು ಮಂಡನೆ ಮಾಡಬೇಕಾದರೆ, ಇದಕ್ಕೆ ಸಂಬಂಧಪಟ್ಟಂತೆ ಕೇವಲ ನಾಲ್ಕು ಪೇಜ್‌ಗಳ ವರದಿಯನ್ನು ಕೊಟ್ಟಿದ್ದಾರೆ. ನಾನು ನೋಡಿದೆ, ಇದರಲ್ಲಿ ಹೊಸದು ಯಾವುದಾದರೂ ಇದೆಯೋ ಎಂದು? ಏಕೆಂದರೆ ಅಧಿಕಾರಿಗಳು, ಏನಾದರೂ ಹೇಳಿದರೆ ಬಹುಶಃ ಕೆ. ಹೆಚ್. ಪಾಟೀಲರು ನೂರಕ್ಕೆ ನೂರು ಒಪ್ಪುವುದಿಲ್ಲ. ಅವರ ಒಂದು ಸ್ವಂತ ಶೈಲಿಯನ್ನು ಉಪಯೋಗ ಮಾಡುತ್ತಿದ್ದರು. ಹಾಗೂ ಇದರಲ್ಲಿ ಯಾವುದಾದರು ಒಂದು ಆ್ಯಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡಬೇಕು ಎಂದು ಹೇಳುತ್ತಿದ್ದರು. ಆದರೆ ಇಂಥದ್ದು ಇದರಲ್ಲಿ ಬಂದಿಲ್ಲ. ಈಗಾಗಲೇ ಅನೇಕ ಸದಸ್ಯರುಗಳು ಕೂಡಾ ಕೆಲವೊಂದು ಕಾನೂನು ತಿದ್ದುಪಡಿಗಳನ್ನು ತರಬೇಕು ಎಂದು ಹೇಳಿದ್ದಾರೆ. ಲ್ಯಾಂಡ್ ರೆವಿನ್ಯೂ ಬಗ್ಗೆ ಹೇಳಿದರು. ಎಷ್ಟು ಜನ ರೈತರು ಜಮೀನನ್ನು ಕಳೆದುಕೊಂಡಿದ್ದಾರೆ, ಆ ಭೂಮಾಲೀಕರಿಗೆ ದುಡ್ಡು ಬಂದಿಲ್ಲ. ಅದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕು. ಮತ್ತು ಹಿಂದಿನ ಸರ್ಕಾರದವರು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಲ್ಯಾಂಡ್ ಟ್ರಿಬ್ಯೂನಲ್‌ನ್ನು ಮಾಡಿದ್ದರು, ಅದನ್ನು ತಾವು ತೆಗೆದಿದ್ದೀರಿ; ಈಗ ಹೊಸ ವ್ಯವಸ್ಥೆಯನ್ನು ತಾವು ಏನಾದರೂ ಮಾಡುತ್ತೀರಾ ಎಂದು ನಾನು ಕೇಳುತ್ತೇನೆ. ರೆವಿನ್ಯೂ ಲ್ಯಾಂಡ್‌ನಲ್ಲಿ ಕೆಲವೊಂದು ಅಕ್ರಮ ಮಾಡಿದರೆ ಸಕ್ರಮ ಮಾಡಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ನಾವು ಹೇಳಬೇಕು. ಇದಲ್ಲದೇ ಸಬ್‌ರಿಜಿಸ್ಟ್ರಾರ್ ಕಛೇರಿಯ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರುಗಳು ಹೇಳಿದರು. ನಾನು ಭ್ರಷ್ಟಾಚಾರದ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸಾಧ್ಯವಾದಷ್ಟು ಇದನ್ನು ತಡೆಗಟ್ಟಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಏಕೆಂದರೆ ತಮ್ಮ ಇಲಾಖೆಯು ಬಹಳ ದೊಡ್ಡದು. ಜಿಲ್ಲಾಧಿಕಾರಿಗಳ ಕಛೇರಿಗೆ ಹೋದರೆ ಬಹುತೇಕ ಜಿಲ್ಲೆಯಲ್ಲಿರತಕ್ಕಂಥ ಎಲ್ಲಾ ಅಧಿಕಾರ ಕೂಡಾ ಅವರಲ್ಲಿರುತ್ತದೆ. ಆದರೆ ಡಿ. ಸಿ. ಅವರು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ಗ್ರಾಮಮಟ್ಟಕ್ಕೆ ಹೋದರೆ ಏನಾದರೂ ಒಂದು ಗೊತ್ತಾಗುತ್ತದೆ. ಆದರೆ ಒಬ್ಬರೂ ಸಹ ಯಾವ ತಾಲ್ಲೂಕಿಗೂ ಹೋಗುವುದಿಲ್ಲ. ತಹಶೀಲ್ದಾರ್ ಕೂಡಾ ಹೋಗುವುದಿಲ್ಲ ಅಲ್ಲಿ ಇಲ್ಲಿ ಕುಳಿತುಕೊಂಡು ಅವರು ಪಹಣಿ ಲೆಕ್ಕ ಬರೆಯುವಾಗ ರೈತರು ಜೋಳವನ್ನು ಹಾಕಿದ್ದರೆ ಇವರು ಮೆಣಸಿನಕಾಯಿ ಬೆಳೆದಿದ್ದಾರೆ ಎಂದು ಬರೆದುಕೊಳ್ಳುತ್ತಾರೆ. ಅಕಸ್ಮಾತ್ ಟ್ಯಾಕ್ಸ್ ಬಂದರೆ

ಜೋಳವನ್ನು ಬೆಳೆಯದಿದ್ದರೂ ಕೂಡಾ ಮೆಣಸಿನಕಾಯಿ ಬೆಳೆದಿದ್ದೀರಿ ಟ್ಯಾಕ್ಸ್ ಕಟ್ಟಬೇಕು ಎಂದು ಹೇಳುತ್ತಾರೆ. ಆ ರೀತಿಯ ಒಂದು ಪರಿಸ್ಥಿತಿ ಬರದಿರಬೇಕಾದರೆ ಸ್ವತಃ ತಹಶೀಲ್ದಾರ್ ಆಗಲೀ ಅಥವಾ ಬೇರೆ ಅಧಿಕಾರಿಗಳು ಆಗಲೀ ಹೋಗಿ ಏನು ಬೆಳೆದಿದ್ದಾರೆಂಬುದನ್ನು ತಿಳಿದುಕೊಳ್ಳಬೇಕು ಎಂದು ಹೇಳುತ್ತೇನೆ. ಪ್ಯಾಡಿ ಸ್ಕೀಮ್‌ನಲ್ಲಿ ನಮ್ಮ ಕಲಘಟಗಿ ತಾಲ್ಲೂಕಿನಲ್ಲಿ ಈ ಸಲ ಇನ್‌ಸೂರೆನ್ಸ್ ಬೆನಿಫಿಟ್ ಸಿಗಲಿಲ್ಲ. ಕಾರಣವೇನೆಂದು ಹೇಳಿದರೆ ಈ ರೆವಿನ್ಯೂ ಇಲಾಖೆ ಅಧಿಕಾರಿಗಳು ಮಾಡಿದ ತಪ್ಪಿಗೆ ಆ ರೈತರಿಗೆ ಕಾಂಪೆನ್‌ಸೇಷನ್ ಸಿಗತಕ್ಕಂಥದ್ದು ಸಿಕ್ಕಲಿಲ್ಲ ಇದರ ಬಗ್ಗೆ ತಾವು ಹೆಚ್ಚಿನ ಗಮನವನ್ನು ವಹಿಸಬೇಕು ಎಂದು ಕೇಳಿಕೊಳ್ಳುತ್ತೇನೆ ಇನ್ನು ನಾಡಕಛೇರಿಯನ್ನು ನಮ್ಮ ಸರ್ಕಾರ ಮಾಡಿರಬಹುದು. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಆದರಿಂದ ಏನೂ ಉಪಯೋಗವಾಗಿಲ್ಲ. ಉದಾಹರಣೆಗೆ ಸಿರಗುಪ್ಪಿ ಎಂದು ನಮ್ಮಲ್ಲಿ ಒಂದು ಸರ್ಕಲ್ ಇದ್ದರೆ, ಬ್ಯಾಡಗಿಯಿಂದ ಅಲ್ಲಿಗೆ ಹೋಗಬೇಕು. ಸುಮಾರು ೩೦ ಕಿಲೋಮೀಟರ್ ಆಗುತ್ತದೆ. ಇದು ಸರ್ವೇ ಸಾಧಾರಣವಾಗಿ ರಾಜ್ಯದ ತುಂಬಾ ಆಗಿದೆ. ಈ ನಾಡ ಕಛೇರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೀರಿ. ಅಧಿಕಾರವೆಂದರೆ ಸಾಮಾನ್ಯ ಜನರಿಗೆ ಒಂದು ಜನತಾ ಮನೆಯ ಸಂಬಂಧವಾಗಿ ಇರಬಹುದು, ಅವರು ಅದರ ಬಗ್ಗೆ ವಿಚಾರಿಸುವುದಕ್ಕೆ ಅಲ್ಲಿಗೆ ಹೋಗಬೇಕು. ಇದನ್ನು ಬಂದ್ ಮಾಡಿಸಬೇಕು ಎಂದು ನನ್ನ ಅಭಿಪ್ರಾಯ. ಅದನ್ನು ನಮ್ಮ ಸರ್ಕಾರವೇ ಮಾಡಿರಲಿ. ಅದು ಪ್ರಾಕ್ಟಿಕಲ್ ಆಗಿ ಸರಿ ಇಲ್ಲ. ಅದರ ಬಗ್ಗೆ ಹೊಸದು ಏನಾದರು ಒಂದನ್ನು ತಾವು ವಿಚಾರ ಮಾಡಬೇಕು. ಇದಲ್ಲದೇ ಈಗಾಗಲೇ ಕೆಲವು ಗ್ರಾಮಾಂತರ ಸಹಾಯಕರು ಎಂದು ಇರುತ್ತಿದ್ದರು. ಹಿಂದೆ ಅವರನ್ನು ವಾಲೀಕಾರ ಎಂದು ಹೇಳುತ್ತಿದ್ದರು. ಅವರಿಗೆ ನೂರು ರೂಪಾಯಿ ಸಂಬಳವನ್ನು ಕೊಡುತ್ತಿದ್ದರು. ಅದು ಕೂಡಾ ಸರಿಯಾಗಿ ಸರ್ಕಾರ ಕೊಡಲಿಲ್ಲ. ಅದನ್ನು ಹೆಚ್ಚಿಗೆ ಮಾಡಲಿಕ್ಕೆ ಬಂದರೆ ನೋಡಿ, ಅದನ್ನು ಮಾಡಬೇಕು. ಇನ್ನು ತುಂಡು ಜಮೀನು ಮಾರಾಟದ ಬಗ್ಗೆ ಅನೇಕ ಜನ ಸ್ನೇಹಿತರು ಹೇಳಿದ್ದಾರೆ.

ರೈತ ಜಮೀನನ್ನು ತೆಗೆದುಕೊಂಡರೆ ಪುನಃ ಸಿಗುವುದಿಲ್ಲ. ಮಾರಾಟ ಮಾಡಲಿಕ್ಕೆ ಪರವಾನಗಿ ಕೊಡುವುದು ಬೇಡ ಎಂಬುದು ನನ್ನ ವೈಯುಕ್ತಿಕವಾದ ಅಭಿಪ್ರಾಯ. ಮತ್ತೆ ರೈತರಿಗೆ ಪರಿಹಾರ ಕೊಡುತ್ತೀರಿ. ಮನೆ ಸುಟ್ಟರೆ, ಮನೆ ಬಿದ್ದರೆ, ಅಲ್ಲಿ ಯಾರಾದರೂ ಸತ್ತರೆ ಮುನ್ನೂರು ನಾನ್ನೂರು ರೂಪಾಯಿ ಪರಿಹಾರ ಎಂದು ಕೊಡುತ್ತೀರಿ. ಅದನ್ನು ಜಾಸ್ತಿ ಮಾಡಿ, ಏಕೆ ಅಂದರೆ ಬೇರೆ ಇನ್‌ಶ್ಯೂರೆನ್ಸ್ ಅನ್ನು ಒಬ್ಬ ವ್ಯಾಪಾರಸ್ಥ, ಅಥವಾ ಲಾರಿ ಮಾಲೀಕ ಇನ್‌ಶ್ಯೂರೆನ್ಸ್ ಮಾಡಿಲ್ಲದೇ ಇದ್ದರೂ ಮಾಡಿದ್ದೇವೆ ಎಂದು ತೆಗೆದುಕೊಳ್ಳುವವರು ಸಾಕಷ್ಟು ಇದ್ದಾರೆ. ಇವೊತ್ತು ಬಡ ಕಾರ್ಮಿಕರು, ರೈತರು ಅವರಿಗೆ ಹೆಚ್ಚಿನ ಒಂದು ಸಹಾಯವನ್ನು ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಧಾರವಾಡ ಜಿಲ್ಲೆ ಒಂದು ಬಹಳ ದೊಡ್ಡ ಜಿಲ್ಲೆ. ತಾವು ಕೂಡ ಅನೇಕ ವರ್ಷದಿಂದ ಒಂದು ಆಸೆಯನ್ನು ಇಟ್ಟಿದ್ದೀರಿ. ಆ ಆಸೆ ನಿರಾಸೆ ಆಗಬಾರದು. ಧಾರವಾಡ ಜಿಲ್ಲೆ ಒಡೆದು ಗದಗ್ ಡಿಸ್ಟ್ರಿಕ್ಟ್ ಆಗುತ್ತದೆ. ಏನೋ, ನನಗೆ ಬಹಳ ಸಂತೋಷ. ತಾವು ಕಂದಾಯ ಮಂತ್ರಿಯಾಗಿದ್ದೀರಿ. ತಮ್ಮ ಒಂದು ಅಧಿಕಾರದಲ್ಲಿ ಧಾರವಾಡ ಜಿಲ್ಲೆ ಇಬ್ಭಾಗ ಆಗಿ ಮೂರು ಜಿಲ್ಲೆಗಳಾಗಿ ಹಾವೇರಿ ಮಾಡಿ, ಗದಗ್ ಮಾಡಿ ಬಹಳ ಸಂತೋಷ. ಕೆಲವು ತಾಲ್ಲೂಕ್‌ಗಳು ಬಾರ್ಡರ್ ಪ್ರದೇಶದಲ್ಲಿರುವುದರಿಂದ ಗಲಾಟೆ ಅಥವಾ ಬೇರೆ ರೀತಿಯ ತೊಂದರೆ ಇದೆ. ಅದರ ಬಗ್ಗೆ ಡಿಸೆಂಟ್ರಲೈಜೇಷನ್ ಆಫ್ ತಾಲ್ಲೂಕ್ ಮಾಡುವುದರ ಕಡೆ ತಾವು ವಿಚಾರ ಮಾಡಬೇಕು. ಅದೂ ಅಲ್ಲದೆ ಲೇಬರ್ ಕೂಡ ತಮ್ಮ ಕಡೆಗ ಇದೆ. ಅನೇಕ ಜನ ನಿರುದ್ಯೋಗಿ ಯುವಕರು ಇದ್ದಾರೆ ಆಯೊಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಎಂದು ಇದೆ. ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಆಗುವ ಹಾಗೆ ಮಾಡಿ ಅವರಿಗೆ ತರಬೇತಿ ಕೊಡುವ ವ್ಯವಸ್ಥೆ ಮಾಡಿ. ಟೆಕ್ನಿಕಲ್ ಬಗ್ಗೆ ಅಥವಾ ಇನ್ನು ಬೇರೆ ಏನಾದರೂ ರೀತಿಯ ಟ್ರೈನಿಂಗ್ ವ್ಯವಸ್ಥೆ ಮಾಡಿ, ನಿರುದ್ಯೋಗಿ ಯುವಕರಿಗೆ ಅವಕಾಶ ಮಾಡಿಕೊಡಿ, ಈ ತರಬೇತಿ ಕೇಂದ್ರದಲ್ಲಿ ಅವರಿಗೆ ಹೆಚ್ಚಿನ ಅವಕಾಶವನ್ನು ಕೊಡಬೇಕು. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಈಗಾಗಲೇ ಹೇಳಿದ ಹಾಗೆ ಹಿಂದೆ ಯಾರು ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿರುತ್ತಾರೆ. ಅವರಿಗೆ ಕೊಡುವುದಿಲ್ಲ. ಹೊಸದಾಗಿ ಯಾರು ರಿಜಿಸ್ಟರ್ ಮಾಡಿಸಿರುತ್ತಾರೆ. ತಮಗೆ ಬೇಕಾದವರಿಗೆ ಕೊಡುತ್ತಾರೆ. ಇದರ ಬಗ್ಗೆ ಕಂಪ್ಲೇಂಟ್ಸ್ ಇದೆ. ಇದರ ಬಗ್ಗೆ ಗಮನ ಕೊಡುವುದು ಸೂಕ್ತ ಎಂದು ಹೇಳುತ್ತೇನೆ. ಇ.ಎಸ್.ಐ. ಆಸ್ಪತ್ರೆ ಹುಬ್ಬಳಿಯಲ್ಲಿದ್ದರೂ ಸಹ ಮತ್ತು ಸರ್ಕಾರ ದುಡ್ಡು ಖರ್ಚು ಮಾಡಿದರೂ ಸಹ, ಅಲ್ಲಿ ಮೆಡಿಸಿನ್ಸ್ ಇಲ್ಲ. ಡಾಕ್ಟರ್ಸ್ ಇಲ್ಲ. ಇದರ ಬಗ್ಗೆ ಹೆಚ್ಚಿನ ಗಮನ ತೆಗೆದುಕೊಳ್ಳಬೇಕು. ಇನ್ನು ಕಾರ್ಮಿಕರ ಬಗ್ಗೆ ಮಾನ್ಯ ಸಿಂಧ್ಯಾರವರ, ಹಾಗೂ ಇನ್ನೂ ಅನೇಕ ಮಾನ್ಯಸದಸ್ಯರು ಮಾತನಾಡಿದ್ದಾರೆ. ನಮ್ಮ ಕಡೆಯಲ್ಲಿ ಮೂರು ಗಾಲಿ ಸೈಕಲ್‌ಗಳನ್ನು ಹೊಡೆಯುತ್ತಾರೆ. ಅವರು ಸಹ ಕಾರ್ಮಿಕರು. ಆಟೋ ಹೊಡೆಯುತ್ತಾರೆ, ಅವರೂ

ಕಾರ್ಮಿಕರು. ಅವರ ಜೀವನ ಬಹಳ ಕಷ್ಟದಿಂದ ಕೂಡಿದೆ. ಅವರಿಗೆ ಏನಾದರೂ ವ್ಯವಸ್ಥೆ ಮಾಡಿ ಇಲ್ಲವೇ ಅವರಿಗೆ ಬಡ್ಡಿರಹಿತ ಸಾಲ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಮೂರು ಜನರನ್ನು ಕುಳ್ಳಿರಿಸಿಕೊಂಡು ಸೈಕಲ್ ಹೊಡೆಯುತ್ತಾರೆ. ಅವರು ಹಮಾಲರು ಇರಬಹುದು. ಉದಾಹರಣೆಗೆ ಬೆಂಗಳೂರಿನಲ್ಲಿ ರಾತ್ರಿ ಆನಂದರಾವ್ ಸರ್ಕಲ್ ಹತ್ತಿರ ಇಡ್ಲಿ ವಡೆ ಮಾರಿ ಜೀವನ ಮಾಡುವವರು ಇದ್ದಾರೆ. ಅವರು ಕಾರ್ಪೊರೇಷನ್, ಪೋಲೀಸರು ಕೆ.ಇ.ಬಿ. ಇವರೆಲ್ಲರಿಗೂ ಮಾಮೂಲು ಕೊಡಬೇಕು. ದೊಡ್ಡವರ ಕಡೆಯಿಂದ ಹೊಡೆದುಕೊಂಡರೆ ಪರವಾಗಿಲ್ಲ. ಅದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಆದರೆ ಸಣ್ಣ ಕಾರ್ಮಿಕರು ದುಡಿದು ತಿನ್ನುತ್ತಾರೆ. ಅಂತಹವರಿಗೆ ಸೂಕ್ತ ವ್ಯವಸ್ಥೆ ಮಾಡಬೇಕು. ಇನ್ನೂ ಅನೇಕ ಸಲಹೆಗಳನ್ನು ಕೊಡುವುದು ಇದ್ದರೂ ಸಹ ನನಗೆ ಸನ್ಮಾನ್ಯ ಉಪಾಧ್ಯಕ್ಷಿಣಿಯವರು ಅವಕಾಶ ಕೊಡಲಿಲ್ಲ. ಈಗ ಕೊಟ್ಟ ಸಲಹೆಗಳನ್ನು ಜಾರಿಗೆ ತರಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅನುಮತಿ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI J. S. SRIDHAR (Nippani).—Hon'ble Speaker, before speaking on the Labour Ministry demands I would like to make a few remarks on what Prof. Nanjundaswamy has said. According to me the posts of Deputy Commissioner, Divisional Commissioner, Assistant Commissioner and Tahsildar should be abolished immediately because they are the porverted residual of the English tradition and we talk very much about social reform and other things. If we want to establish that, then, these posts which are definitely anti-ryots, anti-workers and definitely they are representing privileged classes, these posts should be abolished immediately.

About the Labour demands, I would like to say especially about the Minimum Wages Act. The enforcement of the Minimum Wages Act is very poor in our State. This is the only law which extend to all the sectors, organised, unorganised, formal, informal. It represents all the sectors and if the Minimum Wages Act is not enforced properly then workers of many sectors will not get any benefit. Therefore, I request that the Minimum Wages Act should be implemented properly. Because many employments are not yet covered under this Act. If I give the list, it includes oil mills automobile engineering workshops, local authorities. The list has not been revised since a decade. Further, there is the need to fix minimum wages for the employees working in chemical industries, tile industries, cement industries, food processing industries and agro-based industries. The second is, in respect of many employments which have been covered and notifications have also been published fixing the minimum wage. They have become out-dated and therefore for Beedi industry, for example from 1982, no revision has been made though there are 4 to 5 lakhs of beedi workers in Karnataka State. No revision has been made from 1982 and the Minimum Wages Advisory Board. I think, it does not work. For many years, it has done nothing. Therefore, the Minimum Wages Advisory Board should be reconstituted. The Minimum Wages fixed and the revision during the past 3 years or so, are not satisfactory, The latest rate of minimum wages, not to speak of others, are much less. Then, the norms of poverty

fixed by the planning, that is the Minimum Wages fixed are below the poverty line. Then, there has been gross inequalities in the Minimum Wages fixed for the employments in different employments. When we call it Minimum wage, it should not be discriminating in many industries. High in one industry and very low in other industry. This type of discrimination should not be there. Again, whenever the Minimum Wage is fixed as it is not enforced, especially in the unorganised sector. In fact, names of many employees are not shown in the register if it all it is maintained by the employer. The Minimum Wages though not paid to the employees, are falsely shown as having paid by making false entries in the wage payment register. In the Engineering Industries, regular employees are shown as on contract to evade liability under the Act. In the private hospitals or Nursing Homes, Minimum Wages are not paid. I quote one example of Belgaum Club. President of the Club is the Divisional Commissioner and the Secretary is the Superintendent of Police. But in that Belgaum Club, the Minimum Wage is not given to the employees of the Club. Notification issued by the Government is always defective. Therefore employers gets the operation of the Act stayed by the High Court. Therefore, notification should be very clear. The Minimum Wage Advisory Board does not function for months and years together. The story of enforcement of other labour laws both State and Central is one and the same.

About Labour Court also, I will talk only about Hubli Labour Court. In this Court 4000 cases are pending. No disposal of single case for the last three years. Recently an additional charge is given for the Gulbarga Labour Court also. The Judge is not working properly for the Hubli Labour Court and he is given additional charge of Gulbarga Labour Court. I will quote an instance. Workers of urban Bank, Nippani have filed a case 17 years ago and still no judgement is given. Therefore, I demand that an additional court at Belgaum should be established immediately to solve this problem. Not only this, delay in reference of the cases to the Labour Court but also causes delay in publishing the award. Publishing award, in fact, there should not be any delay. The Labour Commissioner has to publish it in the notice board and it takes months together to publish it in the notice board. Therefore, I request the Hon. Minister to instruct the Labour Commissioner to publish it immediately. Thereby workers will get justice; otherwise workers will not get justice.

7-15 P. M.

In other States labour courts has to give judgement within a period of 6 months. Beyond that, the Labour Court cannot give any

judgement. In Karnataka cases are pending for years together. Therefore, we can fix some stipulated time for giving judgement say 6 months or a year Then, the other suggestion is to avoid delay. If additional powers are given to Deputy Labour Commissioner, Assistant Labour Commissioner under the Industrial Disputes Act, Bonus Act, Shops and Commercial Establishments Act as given under the Cigarretes and Beedi (Conditions of Employment) Act 1986, the delay will be avoided. If any worker in the beedi industry is terminated he can appeal to the Deputy Labour Commissioner, who can give a judgement and ask the employer to reinstate that worker immediately. But in other industries the worker has to go to the labour court. If the Deputy Labour Commissionre or the Assistant Labour Commissioner is made the appellate authority and if he is empowered to give judgement, then the burden of the labour court will be lessened and the terminated worker gets justice immediately. Therefore, I request the Government to certify the Deputy Labour Commissioner and the Assistant Labour Commissioner as the Appellate Authority under the Industrial Disputes Act, Bonus Act, Minimum Wages Act and other connected Acts. Under the Minimum Wages Act he has to file a case seeking permission from the Secretary of the Labour Department for getting permission to prosecute an employer. It takes one year to get permission. If one Union wants to prosecute an employer, that Union has to seek permission from the Government. A Union of workers at Belgaum has given application about 6 months back for prosecuting the employer at Belgaum, but no permission has been given so far. If Deputy Labour Commissioner or Assistant Labour Commissioner is authorised as Appellate authority it can go a long way in solving these problems. Again, I would like to make another suggestion. Most of the workers i. e., more than 50% of the workers are in organised sector. Most of them work in Beedi industry, they work as domestic servants or self-employment seekers. There are many laws which protect the interests, but enforcement of these laws is very poor no security is given them There are so many Acts such as Contract Labour Act, Migration Labour Act etc., which come to the rescue of labourers, but they are not implemented properly and no benefit is given to to them. In every State there is a Mapadi Board for workers for their welfare. This is existing in APMCs, Railway Station, Bus Stand, (for Coolies) as no existing law is applicable to them. In our State these coolies and other workers do not get P.F., Gratuity etc., and as such I request that a Mapadi Board is established in our State also to protect the interest of these workers.

The employment of Women is very poor in Karnataka and those who get employment they get very little benefits. Therefore, it is requested that special lady labour officers should be appointed to protect the interests of women workers.

The condition of Beedi workers is very sad today because of the shortage of Tenduli Leaves. About one lakh workers have already lost their jobs and another one lakh will lose their jobs in a short period of time. Therefore, I request the Government to come to their rescue immediately.

There is mass termination of workers of sugar factories. This is happening especially in new sugar fa tories. They are not even implementing the Second Wage Board recommendations. In Halarid Sugar factory there is a nominated body existing since 3 months. They have terminated 600 workers. Therefore, I request the Government to take immediate action about that. Then, there is one Report on unorganised self employed women called 'Shramashakti'. I request that this report be implemented immediately. Lostlv I request the Government to establish a labour Appellate Court at Belgaum immediately. With these few words I thank the Chair for having given me this opportunity to speak and concluded my speech. Thank you.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಮಾನ್ಯ ಕಂದಾಯ ಸಚಿವರಾದ ಕೆ. ಹೆಚ್. ಪಾಟೀಲ್‌ರವರು ಈ ಸದನದಲ್ಲಿ ಬಹಳ ಹಿರಿಯರು. ೧೯೬೭ರಲ್ಲಿ ನಮ್ಮ ಜೊತೆಗೆ ವಿರೋಧಪಕ್ಷದಲ್ಲಿದ್ದಂತಹವರು, ಒಳ್ಳೆಯ ಮೇಧಾವಿಗಳು. ಆಗ ಬಹಳ ಉಗ್ರವಾಗಿ ಈ ಸಭೆಯಲ್ಲಿ ದೊಡ್ಡ ಹೋರಾಟವನ್ನು ನಿಜಲಿಂಗಪ್ಪನವರ ಮೇಲೆ ನಡೆಸಿದಂಥ ದಿವಸಗಳು ಅಂದರೆ ೧೯೬೭ರಲ್ಲಿ ಅದು ಒಂದು ಸುವರ್ಣಯುಗದ ದಿನಗಳು ಎಂದು ಅಂದುಕೊಂಡಿದ್ದೇನೆ. ಒಂದು ಸಾರಿ ನಾನು ಅವರು ಮಹಾಜನ್ ಕಮಿಷನ್ ವರದಿಯ ಬಗ್ಗೆ ಮಾತನಾಡುವಾಗ ನಾವಿಬ್ಬರೂ ಸೇರಿ ನಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟುಬಿಡೋಣ ಎನ್ನುವ ನಿರ್ಧಾರಕ್ಕೆ ೧೯೬೭ರಲ್ಲಿ ಬಂದಿದ್ದೆವು. ಅವರು ಒಳ್ಳೆಯ ತತ್ವ ನಿಷ್ಠೆಯಿಂದ ವಿರೋಧ ಪಕ್ಷದಲ್ಲಿದ್ದು ಕೆಲಸ ಮಾಡಿದಂಥವರು ಇವೊತ್ತು ಕಂದಾಯ ಇಲಾಖೆ ಬಹಳ ಜವಾಬ್ದಾರಿಯುತವಾದಂಥ ಇಲಾಖೆ. ಅನೇಕ ಇಲಾಖೆಗಳನ್ನು ಈ ಕಂದಾಯ ಇಲಾಖೆ ಜೊತೆಯಲ್ಲಿ ಸೇರಿಸಿದ್ದಾರೆ. ಈ ಜಿಲ್ಲಾ ಮತ್ತು ತಾಲ್ಲೂಕು ವಿಂಗಡಣೆ ಬಗ್ಗೆ ಕೆಲವು ವಿಚಾರಗಳನ್ನು ಅವರ ಗಮನಕ್ಕೆ ತರಬೇಕಾಗಿದೆ. ಇದಕ್ಕೆ ಮೂರು ಸಮಿತಿಗಳು ನೇಮಕ ಆದವು. ಒಂದು ವಾಸುದೇವರಾವ್ ಸಮಿತಿ, ಎರಡು ಹುಂಡೇಕರ್ ಸಮಿತಿ, ಮೂರನೆಯದು ಗದ್ದೀಗೌಡ್ರ ಸಮಿತಿ, ಕೊನೆಯದಾಗಿ ಗದ್ದೀಗೌಡ್ರ ಸಮಿತಿ. ಸಾಧುವಾದ ವರದಿಯನ್ನು ಕೊಟ್ಟಿದೆ ಆ ಬಗ್ಗೆ ಪ್ರಾಮಾಣಿಕವಾಗಿ ಹೇಳುವುದಾದರೆ, ನಮ್ಮ ಚಾಮರಾಜನಗರ ತಾಲ್ಲೂಕನ್ನು ಕೂಡ, ಜಿಲ್ಲೆ ಎಂದು ಮಾಡಿದ್ದಾರೆ. ಅದು ನಿಜಕ್ಕೂ ಸ್ವಾಗತ ಮಾಡತಕ್ಕಂತಹ ವಿಚಾರ ಆಗಿದೆ. ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಈ ಜಿಲ್ಲೆಗಳನ್ನು ವಿಂಗಡಣೆ ಮಾಡುವ ಬಗ್ಗೆ ಏನು ವರದಿಯನ್ನು ಕೊಟ್ಟಿದ್ದಾರೆ. ಇದನ್ನು ತರಾತುರಿಯಿಂದ ವರದಿಯನ್ನು ಒಪ್ಪಿಕೊಂಡು ಈ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಏನು ಮಾಡಬೇಕೆಂದು ವರದಿಯನ್ನು ಕೊಟ್ಟಿದ್ದಾರೆ ಅದನ್ನು ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳು ಏನೇನು ವ್ಯವಸ್ಥೆಗಳು ಬೇಕಾಗಿದೆ ಅದನ್ನು ಬಹಳ ಪ್ರಾಮಾಣಿಕವಾಗಿ ತಮ್ಮ ಕಾಲದಲ್ಲಿಯೇ ತಾವು ಕಂದಾಯ ಸಚಿವರಾಗಿರುವಾಗಲೇ ಮಾಡಿಕೊಂಡು ಈ ಕೆಲಸ ಆಗಿಹೋಗಲಿ ಎಂದು ಹೇಳುತ್ತಿದ್ದೇನೆ. ನಮ್ಮ ಈ ಗಡಿ ತಾಲ್ಲೂಕಿಗೆ ಒಂದು ಜಿಲ್ಲೆ ಸಿಕ್ಕಿದ್ದು ಅತ್ಯಂತ ಸಂತೋಷ; ಮತ್ತು ಇದು ಸ್ವಾಗತ ಮಾಡತಕ್ಕ ವಿಷಯ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಆ ದೃಷ್ಟಿಯಿಂದ ಯಾವ ಒಂದು ತಾಲ್ಲೂಕನ್ನು ಜಿಲ್ಲೆ ಮಾಡಬೇಕೆಂದು ಆ ವರದಿಯಲ್ಲಿ ಕೊಟ್ಟಿದ್ದಾರೆ, ಆ ತಾಲ್ಲೂಕುಗಳ ಅಭಿವೃದ್ಧಿ ಬಗ್ಗೆ ಆ ತಾಲ್ಲೂಕಿನ ಬೆಳವಣಿಗೆಯ ಬಗ್ಗೆ ತಾವು ತೀವ್ರ ಗಮನ ಹರಿಸಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ಇನ್ನು ಗಡಿನಾಡಿನ ಬಗ್ಗೆ, ಕನ್ನಡದ ಬಗ್ಗೆ, ಕರ್ನಾಟಕದ ಗಡಿ ಬಗ್ಗೆ ತಮಗೆ ಅಪಾರವಾದಂಥ ಗೌರವ ಇದೆ. ಕರ್ನಾಟಕ ಏಕೀಕರಣದ ಬಗ್ಗೆ ತಮಗೆ ವಿಶಾಲವಾದ ಮನೋಭಾವ ಇದೆ. ಈ ಒಂದು ಜಿಲ್ಲಾ ವಿಂಗಡಣೆಯ ವರದಿಯನ್ನು ನಮಗೆ ಒದಗಿಸಬೇಕು. ಆ ವರದಿಯಲ್ಲಿ ಅನೇಕ ವಿಚಾರಗಳು ಇವೆ.

ಅದರ ಬಗ್ಗೆ ತಮಗೆ ಅನೇಕ ಸಲಹೆಗಳನ್ನು ನಾನು ಕೊಡಬೇಕೆಂದು ವಿಚಾರ ಮಾಡಿದ್ದೇನೆ. ಆದ್ದರಿಂದ ದಯಮಾಡಿ ಈ ಸಭೆ ಮುಗಿಯುವುದರೊಳಗೆ ಆ ವರದಿಯ ಪ್ರತಿಗಳನ್ನು ಒದಗಿಸಿದರೆ ನಮಗೆ ಅನೇಕ ವಿಚಾರಗಳನ್ನು ಹೇಳಲಿಕ್ಕೆ ಅವಕಾಶವಾಗುತ್ತದೆ.

ಉಪಾಧ್ಯಕ್ಷರು. :—ಈಗ ಏಳೂವರೆ ಗಂಟೆ ಆಗಿದೆ. ಮಾನ್ಯ ಸದಸ್ಯರು ನಾಳೆ ದಿವಸ ತಮ್ಮ ಭಾಷಣ ಮುಂದುವರಿಸಬಹುದು.

ಶ್ರೀ ಪಾಟೀಲ್ ನಾಗರಾಜ್ :—ಆಗಬಹುದು.

MADAM DEPUTY SPEAKER.—I have got one announcement to make

ANNOUNCEMENT

The Business Advisory Committee at its meeting held today (on 21-6-1990) have decided to transact the following business as detailed below-

25-6-1990

After question Hour discussion under Rule 68 on Phone tapping ($2\frac{1}{2}$ hours discussion)

Thereafter discussion and voting on demand for grants Nos. 23, 26, 30, 55, and 56,

26-6-1990.

Discussion and Voting on demands for grants Nos. 6, 8, 9, 10, 49, and 54.

27-6-1990 and 28-6-1990.

Discussion and voting on demand for grants Nos. 35, 36, 45, 46 and 47.

29-6-1990.

Non-official Business

2nd, 3rd and 5th July 1990.